UNIVERSAL
LIBRARY
OU_202250
UNIVERSAL
LIBRARY

# ಸ್ಥಿತಪ್ರಜ್ಞ ದರ್ಶನ

ಆಚಾರ್ಯ ವಿನೋಬಾ

ಅನುವಾದಕರು

ಗಾಲಿ ರಾಮಚಂದ್ರರಾಯರು

ಗಾಂಧೀ ಸಾಹಿತ್ಯ ಸಂಘ

ಮಲ್ಲೇಶ್ವರಂ — ಬೆಂಗಳೂರು

ಬೆಲೆ ೨ ರೂ.

ಮೊದಲು ಮುದ್ರಣ ೧೯೪೮

ಪ್ರಕಾಶಕರು :

**ಗಾಂಧೀ ಸಾಹಿತ್ಯ ಸಂಘ**

**ಮಲ್ಲೇಶ್ವರಂ : : ಬೆಂಗಳೂರು**

ಮುದ್ರಕರು :

**ದಿ ಈಸ್ಟರ್ನ್ ಪ್ರೆಸ್**

೧೧-ಎ, ಜಯಚಾಮರಾಜೇಂದ್ರ ರಸ್ತೆ

ಬೆಂಗಳೂರು ನಗರ

# ನಿವೇದನ

೧೯೪೪ರಲ್ಲಿ ಶಿವಣಿ ಸೆರೆಮನೆಯಲ್ಲಿ ಚಿಕ್ಕದೊಂದು ಗುಂಪಿನಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳ ಬಗ್ಗೆ ಮಾಡಿದ ಉಪನ್ಯಾಸಗಳು ಇವು. ಈಗ ದಿನವೂ ಸಂಜೆಗೆ ನಾನಿರುವ ಬಳಿ ಗಂಡಸರು ಹೆಂಗಸರು, ಸತ್ಯಾಗ್ರಹಿಗಳು, ಈ ಲಕ್ಷಣಗಳನ್ನು ಭಕ್ತಿಪೂರ್ವಕವಾಗಿ ಪ್ರಾರ್ಥನೆಯಲ್ಲಿ ಹೇಳುತ್ತಾರೆ. ಅವರಿಗಾಗಿ ಈ ಲಕ್ಷಣಗಳನ್ನು ಪುಸ್ತಕವಾಗಿ ಪ್ರಕಟಿಸಬೇಕೆಂದು ಇಲ್ಲಿಯವರು ಒತ್ತಾಯ ಮಾಡಿದರು. ಹಾಗೆ ಮಾಡುವಾಗ ಶಾಸ್ತ್ರಸಂತೋಷಕ್ಕಾಗಿ ಎಷ್ಟು ಬೇಕೋ ಅಷ್ಟು ತಿದ್ದಿದೇನೆ.

ಸ್ಥಿತಪ್ರಜ್ಞನ ಲಕ್ಷಣಗಳಲ್ಲಿ ಒಂದು ಸಮಗ್ರ ದರ್ಶನವೇ ಅಡಕವಾಗಿದೆ. ಅದನ್ನು ವಿವರಿಸಿ ತೋರಿಸುವುದು ಈ ಪ್ರಯತ್ನ. ಇದರಲ್ಲಿ ಎಷ್ಟೋ ಭಾಗ ಮೊದಲನೇ ಬಾರಿ ಓದಿದಾಗ ಮನಸ್ಸಿನ ಮೇಲೆ ಕದಾಚಿತ್ ಮೂಡಲಿಕ್ಕಿಲ್ಲ. ಹಲವು ಬಾರಿ ಓದಿ ಚಿಂತನೆ ಮಾಡಿದರೆ, ಎಷ್ಟು ತಿಳಿಯುತ್ತದೋ ಅಷ್ಟು ಪ್ರಯೋಗ ಮಾಡುತ್ತಾ ಬಂದರೆ, ಮೆಲ್ಲ ಮೆಲ್ಲನೆ ಅನುಭವದಿಂದ ಎಲ್ಲವೂ ಹೊಮ್ಮೀತು.

ಮೂವತ್ತು ವರ್ಷದ ನಿದಿಧ್ಯಾಸದಿಂದ ಸ್ಥಿರವಾದ ಅರ್ಥವನ್ನು ಇಲ್ಲಿ ವಿವರಿಸಲಾಗಿದೆ. ಅದರಲ್ಲಿ ಅಲ್ಲಲ್ಲಿ ಹೆಚ್ಚು ಕಡಿಮೆ ಇದ್ದೀತು. ಎಲ್ಲವನ್ನೂ ಈಶ್ವರನಿಗೆ ಸಮರ್ಪಿಸಿ ಮುಕ್ತನಾಗುವುದೇ ಅದಕ್ಕೆ ಉಪಾಯ. ನನ್ನ ಮನಸ್ಸಿನಲ್ಲಂತೂ ಈ ಪ್ರಕಾಶನ ಅದಕ್ಕಾಗಿಯೇ.

ಪರಂ-ಧಾಮ, ಪವನಾರ್

ತಾ. ೧೩-೮-೪೬

ವಿನೋಬಾ

## ಆಚಾರ್ಯ ವಿನೋಬಾ
### : ಇತರ ಗ್ರಂಥಗಳು :

ಜೀವನ ದೃಷ್ಟಿ

ಗೀತಾಯಿ

ವಿಚಾರ ಪೋಥೀ

ಅಭಂಗ ವ್ರತ

ಈಶೋಪನಿಷತ್

ಸಂತಾಚಾ ಪ್ರಸಾದ

### ಕನ್ನಡದಲ್ಲಿ

ಸ್ವರಾಜ್ಯ ಶಾಸ್ತ್ರ

ವಿನೋಬಾ ವಿಚಾರಲಹರಿ

ಗೀತಾ ಪ್ರವಚನ

## ಸಿದ್ಧವನಹಳ್ಳಿ ಕೃಷ್ಣಶರ್ಮರ
### ಪುಸ್ತಕಗಳು

| | |
|---|---|
| ವರ್ಧಾಯಾತ್ರೆ | ೩ನೆ ಆವೃತ್ತಿ |
| ಪರ್ಣಕುಟಿ | ೪ನೆ ಆವೃತ್ತಿ |
| ದೀಪಮಾಲೆ | ೩ನೆ ಆವೃತ್ತಿ |
| ಗಾಂಧೀ ಸಾಹಿತ್ಯ | ೨ನೆ ಆವೃತ್ತಿ |
| ಕನ್ನಡದ ಕಿಡಿಗಳು | ೨ನೆ ಆವೃತ್ತಿ |
| ಕನ್ನಡ ಸಮಸ್ಯೆ | ೨ನೆ ಆವೃತ್ತಿ |

ಇತ್ಯಾದಿ.

ವಿಚಾರ ಸಾಹಿತ್ಯ — ಬಳೇಪೇಟೆ — ಬೆಂಗಳೂರು

# ಸ್ಥಿತಪ್ರಜ್ಞ ದರ್ಶನ

## ೧ ನೆಯ ವ್ಯಾಖ್ಯಾನ

### ೧

### ೧. ಗೀತೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳ ವಿಶೇಷ ಸ್ಥಾನ

ಸ್ಥಿತಪ್ರಜ್ಞನ ಲಕ್ಷಣಗಳು ಗೀತೆಯ ಅತಿಶಯ ಪ್ರಸಿದ್ಧ ವಿಭಾಗವು. ಅತ್ಯಂತ ಪ್ರಾಚೀನ ಕಾಲದಿಂದ ಇಂದಿನವರೆಗೆ ಇಷ್ಟೊಂದು ಪ್ರಸಿದ್ಧಿ ಗೀತೆಯ ಯಾವ ವಿಭಾಗಕ್ಕೂ ಪ್ರಾಯಃ ದೊರೆತಿರಲಾರದು. ಇದಕ್ಕೆ ಕಾರಣವುಂಟು. ಸ್ಥಿತಪ್ರಜ್ಞನು ಗೀತೆಯ ಆದರ್ಶ ಪುರುಷನು. ಆ ಶಬ್ದವೂ ಗೀತೆಯ ಸ್ವತಂತ್ರ ಶಬ್ದ. ಗೀತೆಗಿಂತ ಮೊದಲಿನ ಗ್ರಂಥಗಳಲ್ಲಿ ಅದು ದೊರೆವುದಿಲ್ಲ. ಗೀತೆಯ ತರುವಾಯ ಹುಟ್ಟಿದ ಗ್ರಂಥಗಳಲ್ಲಿ ಬೇಕಾದಷ್ಟು ದೊರೆಯುತ್ತದೆ. ಸ್ಥಿತಪ್ರಜ್ಞನಂತೆ ಗೀತೆಯಲ್ಲಿ ಆದರ್ಶಪುರುಷರ ಬೇರೆ ವರ್ಣನೆಗಳೂ ಇವೆ. ಕರ್ಮಯೋಗಿ, ಜೀವನ್ಮುಕ್ತ, ಯೋಗಾರೂಢ, ಭಗವದ್-ಭಕ್ತ, ಗುಣಾತೀತ, ಜ್ಞಾನನಿಷ್ಠ, ಮೊದಲಾದ ಅನೇಕ ಹೆಸರುಗಳಿಂದ ಅನೇಕ ಆದರ್ಶ ಚಿತ್ರಗಳು ಬೇರೆ ಬೇರೆ ಸ್ಥಳಗಳಲ್ಲಿ ಬಂದಿವೆ. ಆದರೆ ಆ ಆದರ್ಶಗಳನ್ನು ಇತರರೂ ವರ್ಣಿಸಿದ್ದಾರೆ. ಆ ಆದರ್ಶಗಳನ್ನು ಗೀತೆ ಭಿನ್ನಭಿನ್ನ ಸಾಧನೆಗಳನ್ನು ಹೇಳುವಾಗ ತದನುಷಂಗವಾಗಿ ಉಲ್ಲೇಖಿಸಿದೆ. ಆ ಆದರ್ಶಪುರುಷರು ಸ್ಥಿತಪ್ರಜ್ಞನಿಂದ ಭಿನ್ನ ಪುರುಷರಲ್ಲ. ಅವರು ಸ್ಥಿತಪ್ರಜ್ಞನ ಬೇರೆ ಸ್ವರೂಪಗಳು. ಅವರೆಲ್ಲರ ವರ್ಣನೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳನ್ನು ಗೀತೆ ಪ್ರಾಯಃ ಎಲ್ಲಿಯಾದರೂ ಸೇರಿಸಿಯೇ ಇರುತ್ತದೆ. ಉದಾ: ಐದನೆಯ ಅಧ್ಯಾಯದಲ್ಲಿ ಸಂನ್ಯಾಸಿಯ ಅಥವಾ ಯೋಗಿಪುರುಷನ ವರ್ಣನೆಯಲ್ಲಿ 'ಸ್ಥಿರ-ಬುದ್ಧಿ' ಎಂಬ ಶಬ್ದ ಬಂದಿದೆ. ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತರ ಲಕ್ಷಣಗಳ ಸಮಾಪ್ತಿಯನ್ನು "ಸ್ಥಿರಮತಿಃ" ಎಂಬ ಶಬ್ದದಿಂದ ಮಾಡಲಾಗಿದೆ. ಬುದ್ಧಿ ಸ್ಥಿರವಾದ ಹೊರತು ಯಾವ ಆದರ್ಶವೂ

ಪೂರ್ಣವಾಗದು. ಆದುದರಿಂದ ಈ ಪ್ರಕರಣಕ್ಕೆ ಇಷ್ಟೊಂದು ಮಹತ್ವ ಉಂಟಾಗಿದೆ. ಜೀವನ್ಮುಕ್ತಿಯ ಸಿದ್ಧಿಗೋಸುಗ ಪ್ರಮಾಣವನ್ನು ಹೇಳುವಾಗ, ಭಾಷ್ಯಕಾರರು ಸ್ಥಿತಪ್ರಜ್ಞನ ಲಕ್ಷಣಗಳನ್ನು ಮುಂದಿರಿಸಿದ್ದಾರೆ. ಸಾಧಕನ ದೃಷ್ಟಿಯಿಂದ, ಇಷ್ಟೊಂದು ವಿವರಪೂರ್ವಕವಾಗಿ ಮಾಡಿದ ಅಂತಿಮ ಆದರ್ಶದ, ಧ್ಯೇಯಮೂರ್ತಿಯ ವಿವೇಚನೆ ಇದೊಂದೇ.

## ೨. ಪೂರ್ವಭೂಮಿಕೆ: ಸಾಂಖ್ಯಬುದ್ಧಿ, ಯೋಗಬುದ್ಧಿ

ಸ್ಥಿತಪ್ರಜ್ಞನ ಲಕ್ಷಣಗಳನ್ನು ತಿಳಿಯಲು ತತ್ಪೂರ್ವದ ಭೂಮಿಕೆಯನ್ನು ಅರಿತುಕೊಳ್ಳುವುದು ಉಪಯುಕ್ತ. ಈ ಪ್ರಕರಣವು ಗೀತೆಯ ಎರಡನೆಯ ಅಧ್ಯಾಯದ ಕೊನೆಯಲ್ಲಿ ಬಂದಿದೆ. ಇದಕ್ಕೆ ಮೊದಲು ವಿವೇಚನದ ಎರಡು ವಿಭಾಗಗಳು ಬಂದಿವೆ. (೧) ಸಾಂಖ್ಯ–ಬುದ್ಧಿ ಎಂದರೆ ಆತ್ಮಜ್ಞಾನ ಅಥವಾ ಬ್ರಹ್ಮವಿದ್ಯೆಯ ಶಾಸ್ತ್ರ. (೨) ಯೋಗ ಬುದ್ಧಿ ಎಂದರೆ ಆತ್ಮಜ್ಞಾನಕ್ಕೆ ಅನುಸಾರವಾದ ಜೀವನದ ಕಲೆ. ಶಾಸ್ತ್ರವೂ ಕಲೆಯೂ ಕೂಡಿ ಬ್ರಹ್ಮವಿದ್ಯೆ ಪರಿಪೂರ್ಣವಾಗುವುದು. ಯಾವ ವಿದ್ಯೆಯಾದರೂ ಹೀಗೆಯೇ. ಉದಾ: ಸಂಗೀತವಿದ್ಯೆ. ಸಂಗೀತವಿದ್ಯೆಯ ಶಾಸ್ತ್ರವನ್ನು ಕಲಿತುದಾಯ್ತು, ಆದರೆ ಕಂಠದಿಂದ ಹೊರಡಿಸುವ ಕಲೆ ಸಾಧ್ಯವಾಗದಿದ್ದರೆ ಆ ಸಂಗೀತದಿಂದ ಫಲವೇನು? ಇದರ ವಿರುದ್ಧವಾಗಿ, ಕಂಠದಲ್ಲಿ ಕಲೆಯೇನೋ ಇದೆ, ಆದರೆ ಶಾಸ್ತ್ರಜ್ಞಾನವಿಲ್ಲ; ಹೀಗಾದರೆ ಪ್ರಗತಿಯೆಲ್ಲಿ? ಆಧ್ಯಾತ್ಮ ವಿದ್ಯೆಯದು ಎಂದರೆ ಮನುಷ್ಯನ ಜೀವನದ್ದು ಇದೇ ಸ್ಥಿತಿ. ಮನುಷ್ಯನ ತತ್ತ್ವಜ್ಞಾನ ಆತನ ಬುದ್ಧಿಯಲ್ಲಿ ಗುಪ್ತವಾಗಿ ಇರುತ್ತದೆ. ಪ್ರಕಟವಾಗುವುದು, ಅದರ ಆಚರಣೆ. ಆತನ ಆಚರಣದಿಂದಲೇ ಜಗತ್ತಿಗೂ ಆತನಿಗೂ ಆತನ ತತ್ತ್ವಜ್ಞಾನದ ಆಳತೆ ಗೊತ್ತಾಗುವುದು. ಆಚರಣೆ ಜ್ಞಾನಗಳಲ್ಲಿ ಅಂತರವಿರಬಹುದು. ಆದರೆ ವಿರೋಧ ಇರಲೇ ಕೂಡದು. ಈ ಅಂತರವನ್ನೂ ಒಂದೇ ಸವನೆ ತಗ್ಗಿಸುತ್ತ ಇರಬೇಕು. ಈ ಕಾರ್ಯ ಯೋಗಬುದ್ಧಿಯದು. ತುಲಸೀದಾಸರು ಸಂತರಲ್ಲಿ ಒಂದು ತ್ರಿವೇಣಿಯ ಕಲ್ಪನೆಯನ್ನು ಮಾಡಿದ್ದಾರೆ. ಭಕ್ತಿಗೆ ಗಂಗೆಯ, ಕರ್ಮಯೋಗಕ್ಕೆ ಯಮುನೆಯ ಉಪಮೆಯನ್ನಿತ್ತು ಬ್ರಹ್ಮವಿದ್ಯೆಗೆ ಅವರು ಗುಪ್ತ ಸರಸ್ವತಿಯ ಸ್ಥಾನವನ್ನಿತ್ತಿದಾರೆ. ಬ್ರಹ್ಮವಿದ್ಯೆ ಸ್ವರೂಪತಃ ಅಪ್ರಕಟ

ವಾಗಿಯೆ ಉಳಿವುದೆಂದು ಆ ಉಪಮೆಯಲ್ಲಿ ಸೂಚಿತವಾಗಿದೆ. ಅದನ್ನು ಪ್ರಕಟಗೊಳಿಸುವುದು ಯೋಗಬುದ್ಧಿ. ಸಾಧಕನಿಗೆ ಪ್ರತ್ಯಕ್ಷ ಮಾರ್ಗವನ್ನು ತೋರಿಸುವುದು ಯೋಗಬುದ್ಧಿ. ಸಾಂಖ್ಯಬುದ್ಧಿ ಯೋಗಬುದ್ಧಿಗೆ ತಳಹದಿಯಂತೆ. ತಳಹದಿಯಿಲ್ಲದೆ ಮನೆ ಆಗದು, ಮನೆಯಿಲ್ಲದಿದ್ದರೆ ತಳಹದಿ ಬೇಕಿಲ್ಲ. ಬೆಂಕಿಯ ಕಡ್ಡಿಯಲ್ಲಿ ಬೆಂಕಿ ಅವ್ಯಕ್ತ ಸ್ವರೂಪದಲ್ಲಿ ಇರುತ್ತದೆ. ಕಡ್ಡಿಯನ್ನು ಗೀಚಿದರೆ ಅದು ಪ್ರಕಟವಾಗುತ್ತದೆ. ಅವ್ಯಕ್ತ ವಿದ್ಯುತ್ತಿನ ಕಾರ್ಯ ಸೂಕ್ಷ್ಮಬುದ್ಧಿಗಷ್ಟೇ ಗೊತ್ತಾಗುತ್ತದೆ. ಅದೇ ವ್ಯಕ್ತವಾಯ್ತೆಂದರೆ ಅದರ ಸಾಮರ್ಥ್ಯವನ್ನು ಯಾರಾದರೂ ಅರಿಯಬಹುದು. ಸಾಂಖ್ಯಬುದ್ಧಿ, ಯೋಗಬುದ್ಧಿಗಳ ಸಂಬಂಧ ಹೀಗೆ ಇವೆ.

## ೩. ಯೋಗಬುದ್ಧಿಯ ಕೊನೆಯ ಮೆಟ್ಟಿಲು ಸ್ಥಿರಸಮಾಧಿ-ಎಂದರೆ ಸ್ಥಿತಪ್ರಜ್ಞತೆಯೆ

ಯೋಗಬುದ್ಧಿಯ ಮೊದಲನೆಯ ಮೆಟ್ಟಿಲು ಕರ್ತವ್ಯನಿಶ್ಚಯ. ಕರ್ತವ್ಯ ನಿಶ್ಚಯವಾದ ಹೊರತು ಸಾಧನೆಯು ಆರಂಭವೇ ಆಗದು. ನಿಶ್ಚಯದ ಅನಂತರ ಏಕಾಗ್ರತೆ, ಎಂದರೆ ಸಾಧನೆಯ ತನ್ಮಯತೆ. ಫಲದ ಕಡೆಗೆ ಲಕ್ಷ್ಯಗೊಡದೆ ಸಾಧನೆಯಲ್ಲಿ ಮಗ್ನವಾಗಿರುವ ವೃತ್ತಿ; ಸಾಧನೈಕ ಶರಣತೆ ಅಥವಾ ಸಾಧನನಿಷ್ಠೆ—ಇದು ಎರಡನೆಯ ಮೆಟ್ಟಿಲು. ಅದರ ಮುಂದಿನ ಮೆಟ್ಟಿಲೆಂದರೆ ಚಿತ್ತದ ನಿರ್ವಿಕಾರ ಸ್ಥಿತಿ ಅಥವಾ ಸಮತೆ, ಎಂದರೆ ಸಮಾಧಿ. ಇದೇ ಅಚಲವಾದರೆ, ಸ್ಥಿರವಾದರೆ, ಎಂತಹ ಪ್ರಸಂಗದಲ್ಲಿಯೂ ಹೊಯ್ದಾಡದೆ ಉಳಿದರೆ, ಸ್ಥಿತಪ್ರಜ್ಞಾವಸ್ಥೆ ಪ್ರಾಪ್ತವಾಗುತ್ತದೆ. ವಿಕಾರಗಳ, ವಿಚಾರಗಳ, ಕಿಂಬಹುನಾ, ವೇದವಚನಗಳ ಅಧಿಕಾರ ಯಾರ ಮೇಲೆ ಉಳಿದಿಲ್ಲವೋ, ಯಾರ ಸಮಾಧಿ ಅಚಲವಾಗಿರುವುದೋ, ಸ್ಥಿರವಾಗಿರುವುದೋ ಅವನು ಸ್ಥಿತಪ್ರಜ್ಞ. ಹೀಗೆ ಯೋಗಬುದ್ಧಿಯ ಈ ನಾಲ್ಕು ಮೆಟ್ಟಿಲುಗಳುಂಟು : (೧) ಸಾಧನ ನಿಶ್ಚಯ (೨) ಫಲ ನಿರಪೇಕ್ಷ ಏಕಾಗ್ರತೆ, (೩) ಸಮತೆ ಅಥವಾ ಸಮಾಧಿ (೪) ಸ್ಥಿರಸಮಾಧಿ: ಅಖಂಡ, ನಿಶ್ಚಲ, ಸಹಜ ಆದುದು. ಅದುವೆ ಸ್ಥಿತಪ್ರಜ್ಞಾವಸ್ಥೆ.

## ೪. ತದ್-ವಿಷಯಕ ಜಿಜ್ಞಾಸೆ

ಯೋಗಬುದ್ಧಿಯ ಅಂತಿಮ ಪರಿಪಾಕ ಸ್ಥಿರಸಮಾಧಿ, ಸ್ಥಿತ

ಪ್ರಜ್ಞತೆ ಎಂದು ಭಗವಂತನು ಮಾಡಿದ ವಿವೇಚನೆಯಿಂದ ಅರ್ಜುನನು ಪ್ರಶ್ನೆ ಬೀಜವನ್ನು ಪಡೆದ. ಆ ಶಬ್ದಗಳನ್ನು ಗಟ್ಟಿಯಾಗಿ ಹಿಡಿದು ಸಮಾಧಿಯಲ್ಲಿ ಸ್ಥಿರನಾದ ಈ ಸ್ಥಿತ-ಪ್ರಜ್ಞ ಹೇಗೆ ಇರುವನೆಂಬುದನ್ನು ತಿಳಿಯಲು ಅರ್ಜುನನು ಪ್ರಶ್ನಿಸಿದನು.

ಶ್ಲೋ|| ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ|
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ ||

ಇಂಥ ಸ್ಥಿತ–ಪ್ರಜ್ಞನ ಲಕ್ಷಣವೇನು? ಅವನು ಮಾತಾಡುವನೆಂತು, ಇರುವನೆಂತು, ನಡೆವನೆಂತು ಎಂಬುದೆಲ್ಲವನ್ನು ಹೇಳೆಂದು ಆತನು ಕೇಳಿದನು. ಆತನಿಗೆ ಹೇಳಿದ ಉತ್ತರದಲ್ಲಿ ಭಗವಂತನು ಸ್ಥಿತಪ್ರಜ್ಞನ ಲಕ್ಷಣಗಳನ್ನು ವಿವರಿಸಿದನು. ಈ ಲಕ್ಷಣಗಳೇ ನಮ್ಮ ಚರ್ಚೆಯ ವಿಷಯ.

೨

## ೫. ಸಮಾಧಿ ಇಬ್ಬಗೆ: ವ್ಯಕ್ತಿಪರ, ಸ್ಥಿತಿಪರ

ಭಗವಂತನ ವಿವೇಚನೆಯನ್ನು ನೋಡುವ ಮೊದಲು 'ಸಮಾಧಿ' ಶಬ್ದವನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಏಕೆಂದರೆ, ಆ ಶಬ್ದ ಬಲು ಗೊಂದಲ ಹುಟ್ಟಿಸುತ್ತದೆ. ಸಮಾಧಿಯೆಂದರೆ ಧ್ಯಾನಸಮಾಧಿಯೆಂದು ಸಾಮಾನ್ಯವಾಗಿ ತಿಳಿಯುತ್ತಾರೆ ಯಾರಾದರೂ ಒಬ್ಬ ಸಮಾಧಿಯಲ್ಲಿದ್ದಾನೆ ಎಂದರೆ ಅವನು ಯಾವುದರ ಚಿಂತನೆ ಮಾಡುತ್ತಿದ್ದಾನೋ ಅದನ್ನುಳಿದು ಬೇರೆ ಯಾವುದರ ಸಂವೇದನೆಯೂ ಅವನಿಗೆ ಇಲ್ಲ ಎಂಬ ಅರ್ಥವಾದರೆ ಸಮಾಧಿಸ್ಥ ಪುರುಷ ಮಾತಾಡುವನೆಂತು, ನಡೆವನೆಂತು ಎಂಬೀ ಅರ್ಜುನನ ಪ್ರಶ್ನೆಯೆ ಹಾರಿ ಹೋಗುತ್ತದೆ! ಈ ತೊಂದರೆ ಲಕ್ಷ್ಯದಲ್ಲಿ ಬಂದುದರಿಂದ ಕೆಲವು ಟೀಕಾಕಾರರು ಸ್ಥಿತಪ್ರಜ್ಞನ ಸಮಾಧಿಯಲ್ಲಿ ಎರಡು ವಿಭಾಗಗಳನ್ನು ಕಲ್ಪಿಸಿದ್ದಾರೆ. (೧) ಸ್ಥಿತಪ್ರಜ್ಞನು ಸಮಾಧಿಯಲ್ಲಿ ಇರುವಾಗ ಹೇಗೆ ವರ್ತಿಸುತ್ತಾನೆ; (೨) ಸಮಾಧಿಯಲ್ಲಿ ಇರದಾಗ ಹೇಗೆ ವರ್ತಿಸುತ್ತಾನೆ- ಹೀಗೆ ಇಬ್ಬಗೆಯ ವಿವೇಚನೆಯನ್ನು ಅವರು ಮಾಡಿದ್ದಾರೆ. ಈ ವಿವೇಚನೆ ಕಲ್ಪಕವಾಗಿದೆ. ಆದರೆ ಅದರಲ್ಲಿ ವಿಚಾರ ದೋಷವಿದೆ. ಗೀತೆಯಲ್ಲಿ ಈ ಸ್ಥಳದಲ್ಲಿಯ ಸಮಾಧಿ ಬೇರೆ ಬಗೆಯದು ಎಂಬುದರ ಅರಿವು ಅವರಿಗಿಲ್ಲ.

ಏರುವ ಇಳಿವ ಸಮಾಧಿ ಧ್ಯಾನಸಮಾಧಿ. ಸ್ಥಿತಪ್ರಜ್ಞನ ಸಮಾಧಿ ಬೇರೆ. ಅದು ಜ್ಞಾನ, ಸಮಾಧಿ. ಅದು ಏರುವುದಿಲ್ಲ, ಇಳಿವುದಿಲ್ಲ. “ನೈನಾಂ ಪ್ರಾಪ್ಯ ವಿಮುಹ್ಯತಿ” ಎಂದು ಅದು ವರ್ಣಿಸಲ್ಪಟ್ಟಿದೆ. ಅದು ಸ್ಥಿತಿ; ವೃತ್ತಿಯಲ್ಲ. ಧ್ಯಾನಸಮಾಧಿ ವೃತ್ತಿ. ನಾಲ್ಕು ನಾಲ್ಕು ದಿನ ಅದು ಉಳಿದರೂ ಇಳಿವ ಅಪೇಕ್ಷೆ ಇರುತ್ತದೆ. ಹಾಗೆ ಈ ಸಮಾಧಿ ಅಲ್ಲ.

## ೬. ಸ್ಥಿತಪ್ರಜ್ಞನ ಸಮಾಧಿ ವೃತ್ತಿಯಲ್ಲ

ಸ್ಥಿತಪ್ರಜ್ಞನ ಸಮಾಧಿ ವೃತ್ತಿಯಲ್ಲ. ಅದು ನಿವೃತ್ತಿ. ನಿವೃತ್ತಿ ಶಬ್ದಕ್ಕೆ ನಮ್ಮ ಜನರು ಹೆದರುತ್ತಾರೆ. ನಿವೃತ್ತಿ ಎಂದರೆ ಸ್ವಸ್ಥವಾಗಿ ಕುಳಿತಿರುವುದು ಎನ್ನುತ್ತಾರೆ. ಆದರೆ ಅದು ನಿಜವಲ್ಲ. ಸ್ವಸ್ಥವಾಗಿ ಕುಳ್ಳಿರುವುದಾದರೂ ಒಂದು ವೃತ್ತಿಯೇ. ಇದರ ಅರ್ಥ ಅವನು ಧ್ಯಾನ ಮಾಡುವುದಿಲ್ಲವೆಂದಲ್ಲ. ಊಾಪ್ರವಾದರೂ ಸೇವಾಕಾರ್ಯದ ಚಿಂತನೆ ಮಾಡಲು, ಇಲ್ಲವೆ ಕೆಲಸವಿಲ್ಲದಾಗ, ಸ್ವಲ್ಪ ಕಾಲವನ್ನು ಅವನು ಧ್ಯಾನ ಮುಂತಾದುದರಲ್ಲಿ ಕಳೆಯಬಹುದು. ಆದರೆ ಅದು ಅವನ ಲಕ್ಷಣವಲ್ಲ. ಸ್ಥಿರಬುದ್ಧಿ ಅವನ ಲಕ್ಷಣ. ಕರ್ಮಯೋಗದಂತೆ ಧ್ಯಾನವೂ ಒಂದು ಉಪಯುಕ್ತ ಸಾಧನ; ಆದರೆ ಕರ್ಮಯೋಗದಂತೆಯೆ ಧ್ಯಾನವೂ ಸ್ಥಿತಪ್ರಜ್ಞನ ಸ್ಥಿತಿಯಲ್ಲ.

## ೭. ಈ ವಿಷಯದಲ್ಲಿ ಗೀತೆ–ಯೋಗ ಸೂತ್ರಗಳ ಏಕವಾಕ್ಯತೆ

ಪತಂಜಲಿಯ ಶಾಸ್ತ್ರದಿಂದ ಸಮಾಧಿ ಶಬ್ದಕ್ಕೆ ಧ್ಯಾನಸಮಾಧಿ ಎಂಬ ಅರ್ಥ ರೂಢವಾಗಿದೆ. ಆದರೆ ಧ್ಯಾನಸಮಾಧಿಯನ್ನು ಪತಂಜಲಿಯೂ ಕೊನೆಯ ಸ್ಥಿತಿಯಾಗಿ ತಿಳಿದಿಲ್ಲ. ಪತಂಜಲಿಯ ಸೂತ್ರಗಳು ಒಂದು ಸುವ್ಯವಸ್ಥಿತವಾದ ಅನುಭವದ ಶಾಸ್ತ್ರವಾಗಿವೆ. ಅದರ ೧೯೫ ಸೂತ್ರಗಳಲ್ಲಿ ಮೊದಲಿನ ಮೂರು ಸೂತ್ರಗಳು ಸಾರಭೂತವಾಗಿವೆ. ಬ್ರಹ್ಮಸೂತ್ರಗಳಲ್ಲಿ ಚತುಃಸೂತ್ರಿ ಹೇಗೋ ಹಾಗೆ ಯೋಗಸೂತ್ರಗಳಲ್ಲಿ ಇದು ತ್ರಿಸೂತ್ರಿಯಾಗಿದೆ. (೧) ಅಥ ಯೋಗಾನುಶಾಸನಂ (೨) ಯೋಗಶ್ ಚಿತ್ತವೃತ್ತಿನಿರೋಧಃ (೩) ತದಾ ದ್ರಷ್ಟುಃ ಸ್ವರೂಪೇಽವಸ್ಥಾನಂ—ಈ ಮೂರು ಸೂತ್ರಗಳಲ್ಲಿ ಎಲ್ಲ ಶಾಸ್ತ್ರವೂ ಸ್ವಲ್ಪದರಲ್ಲಿ ಮುಗಿದಿದೆ. ಆದರೆ ಈ ತ್ರಿಸೂತ್ರಿಯಲ್ಲಿ ಸಮಾಧಿಯ ಹೆಸರೇ ಇಲ್ಲ. ಪ್ರಾಪ್ತವ್ಯವು ಯೋಗ, ಚಿತ್ತವೃತ್ತಿನಿರೋಧ ಎಂದು ಅದರ ವ್ಯಾಖ್ಯೆ. ಸಮಾಧಿ ಎಂದರೆ ಧ್ಯಾನಸಮಾಧಿ. ಇದೂ

ಒಂದು ವೃತ್ತಿಯಾಗಿದ್ದು, ವೃತ್ತಿ ನಿರೋಧ ರೂಪವಾದ ಯೋಗದ ಪ್ರಾಪ್ತಿಗೆ ಶಿರೋಮಣಿ ಸಾಧನವೆಂದು ಅದನ್ನು ಪತಂಜಲಿ ಯೋಜಿಸಿದಾನೆ. "ಶ್ರದ್ಧಾ-ವೀರ್ಯ-ಸ್ಮೃತಿ-ಸಮಾಧಿ-ಪ್ರಜ್ಞಾ-ಪೂರ್ವಕಃ" ಇದು ಯೋಗವನ್ನು ನಿಲು ಕಲು ನಿಚ್ಚಣಿಕೆ. ಆರಂಭದಲ್ಲಿ ಶ್ರದ್ಧೆ, ಅದರಿಂದ ಮುಂದೆ ವೀರ್ಯ ಎಂದರೆ ಉತ್ಸಾಹ, ತತ್ಪೂರ್ವಕ ಸ್ಮೃತಿ ಎಂದರೆ ಆತ್ಮಸ್ಮರಣ, ತತ್-ಪರಿಪಾಕವು ತನ್ಮಯತಾ ರೂಪವಾದ ಧ್ಯಾನಸಮಾಧಿ, ಅದರಿಂದ ಪ್ರಜ್ಞೆ: ಅದು ಸ್ಥಿರವಾಯ್ತೆಂದರೆ ಯೋಗ ಈ ಮೆಟ್ಟಲುಗಳಿಂದ ಯೋಗವು ಲಭಿಸುತ್ತ ದೆಂದು ಆತನು ಸ್ಪಷ್ಟವಾಗಿ ಹೇಳಿದಾನೆ. ಯೋಗದ ಪ್ರಾಪ್ತಿಗೋಸುಗ ಸಮಾಧಿಯ ತರುವಾಯ ಪ್ರಜ್ಞೆಯನ್ನು ಹೇಳಿದಾನೆ. ಈ ಪ್ರಜ್ಞಾ ಶಬ್ದ ವನ್ನು ಪತಂಜಲಿ ಗೀತೆಯಿಂದಲೆ ತೆಗೆದುಕೊಂಡಿದಾನೆ. ಅರ್ಜುನನ ಪ್ರಶ್ನೆಯ ಹಿಂದಿನ ಶ್ಲೋಕದಲ್ಲಿ, ಸಮಾಧಿಯಲ್ಲಿ ಬುದ್ಧಿ ಅಚಲವಾದರೆ ನಿನಗೆ ಯೋಗ ಲಭಿಸುತ್ತದೆಂದು ಭಗವಂತನು ಹೇಳಿದಾನೆ. ಯೋಗವೆ ಪತಂಜಲಿಯ ಕೊನೆಯ ಶಬ್ದ; ಅದರ ಸಾಧನೆ ಪ್ರಜ್ಞೆಯೆಂದು ಆತ ಹೇಳಿದಾನೆ. ಪ್ರಜ್ಞಾ ಲಬ್ಧಿಯ ಸಾಧನವು ಸಮಾಧಿಯೆಂದು ಸೂಚಿಸಲಾಗಿದೆ. ಸಮಾಧಿಯು ಧ್ಯಾನಸ್ವರೂಪವು ಹೋಗಿ ಅದಕ್ಕೆ ವಾಡಿಕೆಯ ಸಹಜ ಸ್ಥಿತಿಯ ಸ್ವರೂಪ ಬರುತ್ತದೆ. ಇದು ಪ್ರಜ್ಞೆ. ಪತಂಜಲಿಯ ಸೂತ್ರಗಳ, ಗೀತೆಯ ವಿವೇಚನೆಯ ಸಮನ್ವಯ ಹೀಗೆ.

೩

## ೮. 'ಸ್ಥಿತ' ಪ್ರಜ್ಞೆಯಲ್ಲಿ ಕಂಪ, ವಕ್ರತೆಗಳು ಇರುವುದಿಲ್ಲ

ಸ್ಥಿತಪ್ರಜ್ಞನ ಕಲ್ಪನೆಯಲ್ಲಿ ಬುದ್ಧಿವಾದ ಪರಾಕಾಷ್ಠೆಗೆ ಮುಟ್ಟಿದೆ. ಸ್ವಚ್ಛಬುದ್ಧಿ ಶೋಧನದ ಸಾಧನವೆಂದು ತಿಳಿಯಲ್ಪಟ್ಟಿದೆ. ರಾಗ ದ್ವೇಷಾದಿ ವಿಕಾರಗಳಿಂದ ಅಲಿಪ್ತವಾದ ಬುದ್ಧಿ ಜ್ಞಾನದ ನಿಜವಾದ ಸಾಧನವಾಗಬಲ್ಲುದು. ಇಂತಹದೊಂದು ಮಾತು ನನ್ನ ಬುದ್ಧಿಗೆ ಸಮ್ಮತ ವಾಗದೆಂದು ನಾವು ಹೇಳುತ್ತೇವೆ. ಗೀತೆ ಹೇಳುತ್ತದೆ: ನನ್ನ ಬುದ್ಧಿಗೆ ಎನ್ನಬೇಡ; ನನ್ನ ಎಂಬ ವಿಶೇಷಣವನ್ನು ಬಿಟ್ಟು ಕೇವಲ ಚೊಕ್ಕ ಬುದ್ಧಿ ಏನೆನ್ನುವುದೋ ನೋಡು. 'ನನ್ನ' ತನದಲ್ಲಿ ಅಹಂಕಾರವಿದೆ, ವಿಕಾರವಿದೆ.

ಸಂಸ್ಕಾರಗಳ ದಾಸ್ಯವಿದೆ, ಪರಿಸ್ಥಿತಿಯ ಬಂಧನವಿದೆ. ನೀನು 'ಮದ್-ಬುದ್ಧಿವಾದಿ'ಯೋ ಬುದ್ಧಿವಾದಿಯೋ? ಬುದ್ಧಿ ವಿಕಾರರಹಿತವಾದರೆ, ಎಲ್ಲ ಉಪಾಧಿಗಳಿಂದ ಬೇರೆಯಾದರೆ, ಅದು ಸ್ಥಿತವಾಗುತ್ತದೆ. ಸ್ಥಿತವಾಗುವುದು ಎಂದರೆ ಸಮನಾಗಿ ನೀಟಾಗಿ ನಿಲ್ಲುವುದು. ಆಗ ಅದು ಹೊಯ್ದಾಡುವುದಿಲ್ಲ. ಅದರಲ್ಲಿ ಕಂಪ ಉಳಿವುದಿಲ್ಲ. "ಸೋಽವಿಕಂಪೇನ ಯೋಗೇನ ಯುಜ್ಯತೇ" ಅಂಥವನಿಗೆ ನಿಷ್ಕಂಪಯೋಗ ಲಭಿಸುತ್ತದೆ ಎಂದು ಮುಂದೆ ಹತ್ತನೆಯ ಅಧ್ಯಾಯದಲ್ಲಿ ಹೇಳಿದುದರ ಅರ್ಥ ಇದೇ. ಬುದ್ಧಿಗೆ ಸ್ವಲ್ಪವಾದರೂ ಕಂಪ ಅಥವಾ ಹೊಯ್ದಾಟ, ಮಿಜಿಮಿಜಿ, ಮೀನ ಮೇಷ, ಹೆದರಿಕೆ, ಅನಿಶ್ಚಯ ಇರಕೂಡದು. ಹೀಗಾದರೇನೆ ಆ ಬುದ್ಧಿಯಿಂದ ಉಪಯೋಗ; ಹೀಗಾದರೇನೇ ಅದನ್ನು ಬುದ್ಧಿ ಎನ್ನಬಹುದು. 'ಸ್ಥಿತ' ಶಬ್ದಕ್ಕೆ ಇನ್ನೊಂದು ಅರ್ಥ 'ಸರಳ'. ಬುದ್ಧಿ ಅತ್ಯಂತ ಸರಳವಿರಬೇಕು. ಸ್ವಲ್ಪವೂ ಕೊಂಕು ಇರಕೂಡದು. ಸಣ್ಣ ನೂಲು ನೂಲುವಾಗ ರಾಟೆಯ ಕದರಿಗೆ ಸ್ವಲ್ಪವಾದರೂ ಕೊಂಕು ಇದ್ದರೆ ಅದು ನಡೆಯದು, ಅತ್ಯಂತ ಸರಳವಾಗಿದ್ದರೇನೆ ಅದರಿಂದ ಕೆಲಸವಾಗುತ್ತದೆ. ಬುದ್ಧಿಯೂ ಅಷ್ಟೆ. ರಾಟೆಯ ಸರಳವಾದ ಕದರು ಸ್ಥಿತ-ಪ್ರಜ್ಞನ ಬುದ್ಧಿಗೆ ಉತ್ಕೃಷ್ಟವಾದ ಉಪಮೆ. ಸರಳವಾದ ಕದರಿಗೆ ಇಂಗ್ಲಿಷ್ ಭಾಷೆಯಲ್ಲಿ ಟ್ರೂ ಎನ್ನುತ್ತಾರೆ. ಈ ಶಬ್ದದಲ್ಲಿ ಬಹಳ ಅರ್ಥವಿದೆ. ಕಿಂಚಿತ್ತಾದರೂ ವಕ್ರತೆ ಇಲ್ಲದ ಕದರೇ ಟ್ರೂ, ಎಂದರೆ ನಿರ್ದೋಷವಾದುದು. ಅದರಂತೆ ಬುದ್ಧಿ ಟ್ರೂ, ಎಂದರೆ ನಿರ್ದೋಷವಾಗಿರಬೇಕು.

## ೯. ಕಂಪ, ವಕ್ರತೆಗಳ ಅಧಿಕ ವಿಶ್ಲೇಷಣ

ಕಂಪ, ವಕ್ರತೆ ಈ ದೋಷಗಳ ಪೃಥಕ್-ಕರಣವನ್ನು ಸ್ವಲ್ಪ ಮಾಡುವ. ವಸ್ತುತಃ ಇವೆರಡೂ ಕೂಡಿ ಒಂದೇ ದೋಷ. ರಾಟೆಯ ಕದರಿನಿಂದ ಇದು ಲಕ್ಷ್ಯದಲ್ಲಿ ಬರುತ್ತದೆ. ಕೊಂಕಾದ ಕದರೇ ನಡುಗುವುದು. ಹೀಗೆಯೆ ಬುದ್ಧಿ-ಸರಲಬುದ್ಧಿ-ಎಂದೂ ನಡುಗದು. ಈ ರೀತಿ ಕಂಪ, ವಕ್ರತೆಗಳು ಏಕರೂಪವಾಗಿದ್ದರೂ ವಿಚಾರಕ್ಕೋಸುಗ ಅವುಗಳ ಬೇರೆ ಬೇರೆ ಅರ್ಥವನ್ನು ಗಮನಿಸಬೇಕು. ಸೂಕ್ಷ್ಮವಾಗಿ ನೋಡಿದರೆ, ಕಂಪವು ಮುಖ್ಯತಃ ಬುದ್ಧಿಯ ದೋಷವೆಂದೂ ವಕ್ರತೆ ಮನದ ದೋಷವೆಂದೂ ಗೊತ್ತಾಗುತ್ತದೆ.

ಮನವೂ ಒಂದು ಬಗೆಯಾಗಿ ಬುದ್ಧಿಯ ಭಾಗವೇ. ಆದರೂ ವಿಚಾರಕ್ಕಾಗಿ ಅದನ್ನು ಬುದ್ಧಿಯಿಂದ ಬೇರೆ ಮಾಡಲಾಗುತ್ತದೆ. ಚಿಕ್ಕ ಮಗುವಿನ ಮನವು ಬಹು ಸರಳ. ಆದುದರಿಂದ ಅದು ಅತಿಶಯ ವೇಗದಿಂದ ಜ್ಞಾನವನ್ನು ಗ್ರಹಿಸಬಲ್ಲುದು. ಆದುದರಿಂದ, ಜ್ಞಾನದೃಷ್ಟಿಯಿಂದ ಋಜುತೆಯೆ ಎಲ್ಲಕ್ಕಿಂತ ಮಹತ್ತ್ವದ ಗುಣವೆಂದು ತಿಳಿಯಬೇಕು. ಋಜುತೆಯಿಲ್ಲದೆ ನಿಶ್ಚಿತವೂ ನಿಷ್ಕಂಪವೂ ಆದ ಜ್ಞಾನ ದೊರೆಯದು. ‘ಅರ್ಜುನ’ ಶಬ್ದದ ಅರ್ಥವೂ ಮೂಲತಃ ಋಜುಬುದ್ಧಿಯವನು ಎಂಬುದೇ.

## ೧೦. ಬುದ್ಧಿ, ಪ್ರಜ್ಞೆಗಳಲ್ಲಿಯ ಭೇದ

ಗೀತೆಯ ಪ್ರಜ್ಞಾಶಬ್ದ ವಿಶೇಷ ಅರ್ಥದ ದ್ಯೋತಕವಾಗಿದೆ. ಬುದ್ಧಿ ಶಬ್ದವು ಸಾಮಾನ್ಯ. ಬುದ್ಧಿ ಮನುಷ್ಯನ ಮನೋವಿಕಾರಗಳಂತೆ ಪಲ್ಲಟಿಸುತ್ತದೆ. ಮನುಷ್ಯನ ಮಾನಸಿಕ ಕಲ್ಪನೆಗಳ ಬಣ್ಣಗಳು ಅವನ ಬುದ್ಧಿಗೆ ಅಂಟುತ್ತವೆ. ಈ ಬಣ್ಣ ಬಳಿದ ಬುದ್ಧಿ ನಿರ್ದೋಷವಾದ ನಿರ್ಣಯವನ್ನು ಹೇಳುವ ಕೆಲಸವನ್ನು ಮಾಡಲಾರದು. ಮಾನಸಿಕ ಕಲ್ಪನೆಗಳ, ವಿಕಾರಗಳ, ಸೇರಿಕೆ ಬೇಸರಿಕೆಗಳ, ವೃತ್ತಿಗಳ ಬಣ್ಣಗಳು ಸೋಂಕದ ಬುದ್ಧಿ, ನಿರ್ಮಲ ಜ್ಞಾನದ ಕಾರ್ಯವನ್ನು ಮಾಡುವ ಬುದ್ಧಿ, ಪ್ರಜ್ಞೆ. ಪ್ರಜ್ಞೆ ತಟಸ್ಥವಾಗಿರುತ್ತದೆ. ನಿಜವಾದ ವಸ್ತುಸ್ವರೂಪವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದು ನಿರ್ಣಯವನ್ನು ಕೊಡುತ್ತದೆ. ಬುದ್ಧಿಗೆ ಬಣ್ಣಗಳು ಸೋಂಕುವುವೆಂದರೆ ಒಂದೇ ಬುದ್ಧಿ ಅನೇಕ ಬುದ್ಧಿಗಳಾಗುತ್ತದೆ. ದಯೆಯ ಬಣ್ಣ ಸೋಂಕಿದರೆ ದಯಾಬುದ್ಧಿ ; ದ್ವೇಷದ ಬಣ್ಣ ಸೋಂಕಿದರೆ ದ್ವೇಷಬುದ್ಧಿ. ಹೀಗೆ ಅನೇಕ ಬುದ್ಧಿಗಳು ಮನುಷ್ಯನನ್ನು ಎಲ್ಲ ಕಡೆಯಿಂದಲೂ ಎಳೆದಾಡುವವು. ಪೀಡಿಸುವ, ವ್ಯಾಕುಲಗೊಳಿಸುವ, ದುರ್ಬಲವಾಗಿಸುವ ಕಾರ್ಯವನ್ನು ಮಾತ್ರ ಮಾಡುತ್ತವೆ. ಇಂಥ ಸಾವಿರಾರು ಬುದ್ಧಿಗಳಾದರೂ ಮಾರ್ಗದರ್ಶನದಲ್ಲಿ ಹುಲ್ಲುಕಡ್ಡಿಯಷ್ಟು ಕೆಲಸಕ್ಕೆ ಬಾರವು. ಶುದ್ಧ ಬುದ್ಧಿ, ಎಂದರೆ ಪ್ರಜ್ಞೆ, ಸರಿಯಾದ ನಿರ್ಣಯವನ್ನು ಕೊಡುತ್ತದೆ. ಏಕೆಂದರೆ, ಅದಕ್ಕೆ ಸ್ವಂತ ಬಣ್ಣವಿಲ್ಲ. ಅದು ಥರ್ಮಾಮೀಟರಿನಂತೆ. ಥರ್ಮಾಮೀಟರಿಗೆ ಜ್ವರ ಇರುವುದಿಲ್ಲ. ಅಂತೆಯೇ ಅದು ಬೇರೆಯವರ ಜ್ವರವನ್ನು ಅಳೆಯಲು ಸಮರ್ಥವಾಗಿರುತ್ತದೆ.

## ೧೧ ಶರೀರಶಕ್ತಿಗಿಂತ ಬುದ್ಧಿಶಕ್ತಿ ಹೆಚ್ಚಿನದು

ಬುದ್ಧಿ ಒಬ್ಬನಲ್ಲಿ ಕಡಿಮೆಯಿರಬಹುದು, ಇನ್ನೊಬ್ಬನಲ್ಲಿ ಹೆಚ್ಚಿರಬಹುದು. ಅದಕ್ಕೆ ಮಹತ್ತ್ವವಿಲ್ಲ. ಮಹತ್ತ್ವವಿರುವುದು ಸ್ವಚ್ಛ ಬುದ್ಧಿಗೆ. ಬೆಂಕಿಯ ಒಂದು ಸಣ್ಣ ಕಿಡಿಯೂ ಕಾರ್ಯಕಾರಿಯಾಗಬಲ್ಲುದು. ಅದು ಅರಳೆಯ ರಾಶಿಯನ್ನು ಸುಡಬಹುದು. ಒಡ್ಡಲಿ ಎಷ್ಟು ದೊಡ್ಡದಾಗಿದ್ದರೇನು? ಬುದ್ಧಿ ಕಡಿಮೆ ಅಥವಾ ಹೆಚ್ಚು ಎಂಬುದು ಮಹತ್ತ್ವದ ಮಾತಲ್ಲ. ನಿಶ್ಚಲಬುದ್ಧಿಯ ಒಂದು ಸಣ್ಣ ಕಿಡಿ, ಒಂದು ಸಣ್ಣ ಜ್ಯೋತಿ ಇದ್ದರೂ ಸಾಕು. ಬುದ್ಧಿಯ ಶಕ್ತಿಯ ರಹಸ್ಯ ಇದೇ. ಶರೀರದ ಶಕ್ತಿಯ ಮಾತು ಹಾಗಲ್ಲ. ಬಲಹೀನನು ಈ ಜನ್ಮದಲ್ಲಿ ಬಲಭೀಮನಾಗಬಲ್ಲನೆಂಬುದು ಸಂಶಯಾಸ್ಪದ. ಅಲ್ಪಬುದ್ಧಿಯ ಮನುಷ್ಯನಿಗೆ ರಾಷ್ಟ್ರದ ಕಾರ್ಯಭಾರವನ್ನು ವಹಿಸುವುದು ಸಾಧ್ಯವಾಗಲಿಕ್ಕಿಲ್ಲ. ಆದರೆ ಅತ್ಯಂತ ಅಲ್ಪಬುದ್ಧಿಯ, ಅಶಿಕ್ಷಿತ ಮನುಷ್ಯನೂ ಈ ಜನ್ಮದಲ್ಲಿ ಸ್ಥಿತಪ್ರಜ್ಞನಾಗಬಲ್ಲ; ನಿಃಸಂಶಯವಾಗಿ ಅವನಿಗೆ ಬಂಡಿ ಭಾರದ ಬುದ್ಧಿಯ ಅವಶ್ಯಕತೆ ಇಲ್ಲ. ಪ್ರಜ್ಞೆಯ ಒಂದೇ ಕಿಡಿ ಸಾಕು. ಹೆಚ್ಚಿನ ಬುದ್ಧಿ ಜಗತ್ತಿನ ಕಾರ್ಯಭಾರವನ್ನು ಬೇಕಾದಷ್ಟು ಮಾಡಲಿ, ತ್ರಿಭುವನವನ್ನು ಸುಟ್ಟು ಬೂದಿಮಾಡುವ ಸಾಮರ್ಥ್ಯ ಮಾತ್ರ ಪ್ರಜ್ಞೆಯ ಕಿಡಿಗೇ ಇದೆ.

# ೨ ನೆಯ ವ್ಯಾಖ್ಯಾನ

## ೧

## ೧೨. ಸಮಾಧಿಯ ವಿವೇಚನೆ ಇನ್ನಷ್ಟು

ಅರ್ಜುನನ ಪ್ರಶ್ನೆಯನ್ನು ನೋಡಿದೆವು. ಪ್ರಜ್ಞೆ ಎಂದರೆ ಸಾಮಾನ್ಯ ಬುದ್ಧಿ ಅಲ್ಲ. ಯಾವುದರ ಒಲವು ಕೇವಲ ನಿರ್ಣಯದತ್ತ ಇರುವುದೋ ಆ ಬುದ್ಧಿ. ಈ ಪ್ರಜ್ಞೆ 'ಸ್ಥಿತ' ಎಂದರೆ ನೀಟಾಗಿ ನಿಂತುದು ಇರಬೇಕು. ನೀಟಾಗಿ ನಿಂತುದೆಂದರೆ ನಿಶ್ಚಿತವಾದುದು, ಸರಳವಾದುದು.

'ಸಮಾಧಿ' ಎಂದರೆ ಧ್ಯಾನ ಸಮಾಧಿ ಅಲ್ಲವೆಂಬುದನ್ನೂ ನಾವು ಕಂಡೆವು. ಸಮಾಧಿ ಶಬ್ದದ ವಿವೇಚನೆಯನ್ನು ಇನ್ನಷ್ಟು ಮಾಡುವುದು ಉಪಯುಕ್ತ. ಸಮಾಧಿ ಶಬ್ದದಲ್ಲಿ 'ಸಮ್' ಮತ್ತು 'ಆ' ಈ ಎರಡು ಉಪಸರ್ಗಗಳೂ 'ಧಾ'ಧಾತುವೂ ಇವೆ. 'ಸಮಾಧಾನ' ಶಬ್ದದ ವ್ಯುತ್ಪತ್ತಿಯೂ ಇದೇ. ಚಿತ್ತದ ಸಮಾಧಾನ ಸ್ಥಿತಿಯೆಂದರೆ ಸಮಾಧಿ. ಸಮಾಧಾನ ಎಂದರೆ ಸಮ-ತುಲನ. ತಕ್ಕಡಿಯ ಎರಡೂ ಪರಡಿ (ತಟ್ಟೆ)ಗಳು ಸರಿಯಾಗಿ ಸಮನಾಗಿದ್ದರೆ ತಕ್ಕಡಿ ಸಮತೋಲವಾಗಿದೆ, ತಕ್ಕಡಿ ಸಮಾಧಾನವಾಗಿದೆ ಎನ್ನಬೇಕು. ತಕ್ಕಡಿಯ ದಂಡಿಗೆಯಂತೆ ಚಿತ್ತದ ಸ್ಥಿತಿ ಸಮತೋಲ, ಅಚಲ, ಶಾಂತ ಆಗಿದ್ದರೆ ಅವರ ಸಮಾಧಾನವಾಯ್ತು. ಈ ಸಮಾಧಿ ಯಾವಾಗಲೂ ಸ್ಥಿರವಾಗಿ ಇರುತ್ತದೆ ಅದು ಎಂದೂ ಭಂಗ ಹೊಂದುವುದಿಲ್ಲ. ಈ ಸ್ಥಿತಿಗೆ ಸ್ವಲ್ಪವೂ ಗಾಳಿಯಿಲ್ಲ-ದಲ್ಲಿ ನಿಶ್ಚಲವಾಗಿ ನಿಂತಿರುವ ದೀಪದ ಉಪಮೆ ಆರನೆಯ ಅಧ್ಯಾಯದಲ್ಲಿ ಕೊಡಲ್ಪಟ್ಟದೆ. ಇದಕ್ಕೇ ದೀಪ ನಿರ್ವಾಣವೆಂದು ಹೆಸರು. 'ದೀಪನಿರ್ವಾಣ' ಎಂಬುದರ ಅರ್ಥವನ್ನು 'ದೀವಿಗೆ ನಿಶ್ಚಲವಾಗಿ ಒಂದೇಸಮನೆ ಉರಿಯುತ್ತಿರುವುದು' ಎಂದು ಮಾಡಬೇಕು. 'ದೀವಿಗೆ ನಂದುವುದು' ಎಂದು ಮಾಡುವುದು ಸರಿಯಲ್ಲ. ನಂದಿದ ಬಳಿಕ ಇರುವ ಶಾಂತಿ ಶರೀರವಿರುವಾಗ ಲಭಿಸಲಾರದು. ಸಮಾಧಿಯೆಂದರೆ ಇಲ್ಲಿಯೆ ಅನುಭವಕ್ಕೆ ಬರುವ, ಎಂದೂ ಚಲಿಸದ, ಚಿತ್ತದ ಶಾಂತಸ್ಥಿತಿ. ಹೀಗೆ ಅರ್ಜುನನ ಪ್ರಶ್ನೆಯ ಉತ್ತರ ಈ ಪ್ರಶ್ನೆಯಲ್ಲಿಯ ಸಮಾಧಿ ಶಬ್ದವಲ್ಲಿಯೆ ಸೂಚಿಸಲ್ಪಡುತ್ತದೆ. ಅದನ್ನೆ ಈಗ ಭಗವಂತನು ಒಂದು ಶ್ಲೋಕದಲ್ಲಿ ವ್ಯಾಖ್ಯೆಮಾಡಿ ಹೇಳುತ್ತಿದಾನೆ.

## ೧೩. ಸ್ಥಿತ-ಪ್ರಜ್ಞನ ಸಮಾಧಿಯು ನಿಷೇಧಕ, ವಿಧಾಯಕ ಕೂಡಿ ಪೂರ್ಣ ವ್ಯಾಖ್ಯೆ

**ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ |**
**ಆತ್ಮನ್ಯೇ ವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ ತದೋಚ್ಯತೇ ||**

ಇಲ್ಲಿ ಸಮಾಧಿಯು ಶಾಸ್ತ್ರೀಯ ವ್ಯಾಖ್ಯೆ ಮಾಡಲ್ಪಡುತ್ತದೆ. 'ಉಚ್ಯತೇ' ಶಬ್ದ ವ್ಯಾಖ್ಯೆಯ ದ್ಯೋತಕವೆಂದು ತಿಳಿಯಬೇಕು. ಈ ಶ್ಲೋಕದಲ್ಲಿನ ವ್ಯಾಖ್ಯೆ ಸಮರ್ಪಕವೂ ಸಂಪೂರ್ಣವೂ ಆಗಿದೆ. ಎಂದರೆ

ಅದು ನಿಷೇಧಕ ಮತ್ತು ವಿಧಾಯಕ–ಎರಡೂ ಬಗೆಯ ಸ್ವರೂಪದ್ದಾಗಿದೆ. ಹೀಗೆ ಇಬ್ಬಗೆಯದಾಗಿದ್ದರೇನೇ ವಾಖ್ಯೆ ಪೂರ್ಣವಾಗುವುದು. ಉದಾ: 'ಅಹಿಂಸಾ' ಶಬ್ದ – 'ಹಿಂಸೆ ಮಾಡಬಾರದು' ಎಂದು ಅದರ ನಿಷೇಧಕ ಅರ್ಥ; 'ಪ್ರೇಮ ಮಾಡಬೇಕು' ಎಂದು ವಿಧಾಯಕ ಅರ್ಥ. ಹೀಗೆ ಎರಡೂ ಕೂಡಿ ಅಹಿಂಸೆಯು ಪೂರ್ಣ ವ್ಯಾಖ್ಯೆಯಾಗುತ್ತದೆ. "**ಪ್ರಜಹಾತಿ ಯದಾ ಕಾಮಾನ್**" ಇದು ನಿಷೇಧಕ ಲಕ್ಷಣ; "**ಆತ್ಮನ್ಯೇವಾತ್ಮನಾ ತುಷ್ಟಃ**" ಇದು ಅದರ ವಿಧಾಯಕ ಸ್ವರೂಪ. ಈ ಉಭಯವಿಧ ಲಕ್ಷಣವು ವಿಶಿಷ್ಟವಾದ, ಸೂಕ್ಷ್ಮವಾದ ಭಾಷೆಯಲ್ಲಿ ಮಾಡಲ್ಪಟ್ಟಿದೆ.

## ೧೪. ನಿಷೇಧಕವ್ಯಾಖ್ಯೆ–ನಿಃಶೇಷ ಕಾಮನಾತ್ಯಾಗ

"ಮನದೊಳಗಿನ ಎಲ್ಲ ಕಾಮನೆಗಳನ್ನು ತೊರೆವುದು" ಎಂಬ ನಿಷೇಧಾತ್ಮಕಲಕ್ಷಣ ಇಲ್ಲಿ ಹೇಳಲ್ಪಟ್ಟಿದೆ. ಮನವು ಕಾಮನೆಗಳಿಂದ ಉಂಟಾಗಿದೆ. ಅಂತಹ ಮನವೇ ಬೇಡ ಎಂದು ಇದರ ಅರ್ಥ. ಅಕಸ್ಮಾತ್ತಾಗಿ ಒಬ್ಬ ಜ್ಯೋತಿಷಿಯ ದೃಷ್ಟಿಗೆ ನನ್ನ ಕೈ ಕಾಣಬಂದಿತು. "ನಿಮ್ಮ ಕೈಯ ಮೇಲೆ ಹೃದಯದ ರೇಖೆಯೆ ಕಾಣಿಸುವುದಿಲ್ಲ" ಎಂದ ಆತ. ನಾನೆಂದೆ, "ಹಾಗಿದ್ದರೆ ದೇವರೇ ದಯೆಮಾಡಿದ." ನನ್ನ ದೃಷ್ಟಿಯಿಂದ, ಮನುಷ್ಯನಿಗೆ ಬುದ್ಧಿ ಇರಬೇಕು, ಮನವು ಇಲ್ಲದಿರುವುದೇ ಒಳಿತು. ಅದು ಬುದ್ಧಿಯಲ್ಲಿ ಬೆರೆತುಹೋಗಿರಬೇಕು. ಮನವೆಂದರೆ ಸಂಕಲ್ಪ–ವಿಕಲ್ಪಗಳು. ಮನವೆಂದರೆ ಕಾಮನೆಗಳ ಮೂಟೆ. ಸಂಕಲ್ಪ-ವಿಕಲ್ಪಗಳಾಗಲಿ ಕಾಮನೆಗಳಾಗಲಿ ಬುದ್ಧಿಯ ಅನುರೋಧದಿಂದ ನಡೆದಂತಹವು ಆಗಿರಬೇಕು. ಮನ–ಬುದ್ಧಿಗಳಲ್ಲಿ ವಿರೋಧ ಬೇಡ, ಎಳೆದಾಟವೂ ಬೇಡ. ಬುದ್ಧಿ ಹೇಳಬೇಕು, ಮನ ಮಾಡಬೇಕು. ನಿರ್ಣಯದ ಕೆಲಸ ಬುದ್ಧಿಯದು. ಬುದ್ಧಿ ಕಾಯದೆಗಳನು ರಚಿಸುವ ಖಾತೆ. ಮನವು ಕಾಯದೆಗಳನ್ನು ವ್ಯವಹರಿಸುವ ಖಾತೆ. ಬುದ್ಧಿಯ ಕ್ಷೇತ್ರದಲ್ಲಿ ಅದು ಸರ್ವಥಾ ಕೈಹಾಕಕೂಡದು. ಅವರವರ ಕೆಲಸವನ್ನು ಅವರವರೇ ಮಾಡಬೇಕು. ಉಂಡೆ ಸಿಹಿಯಾಗಿದೆಯೊ ಕಹಿಯಾಗಿದೆಯೊ, ತಿನ್ನಲು ಯೋಗ್ಯವಾಗಿದೆಯೊ ಅಯೋಗ್ಯವಾಗಿದೆಯೊ, ಇಷ್ಟನ್ನೆ ನಾಲಗೆ ನೋಡಿಕೊಳ್ಳಬೇಕು. ಎಷ್ಟು ಉಂಡೆ ತಿನ್ನಬೇಕು ಎಂಬುದನ್ನು ನಿರ್ಣಯಿಸುವ ಕೆಲಸ ಅದರದಲ್ಲ. ಸುಮ್ಮನೆ ತಾನು ಅದನ್ನು ಮಾಡಲು ಎಳಸಬಾರದು. ಅದ

ರಂತೆಯೆ ಮನವು ಬುದ್ಧಿಯನ್ನು ಅನುಸರಿಸುತ್ತಿರಬೇಕು. ಮೆಲ್ಲಮೆಲ್ಲನೆ ಬುದ್ಧಿಯಲ್ಲಿ ಲೀನವಾಗಬೇಕು. ಮನವೆಂಬ ಕಾಮನೆಗಳ ಮೂಟೆಯಿಂದ ಚಿಂದಿಗಳನ್ನು ಒಂದೊಂದಾಗಿ ತೆಗೆದೊಗೆದರೆ ಆ ಮೂಟೆ ಹೋಗಿಬಿಡುತ್ತದೆ. ಹೀಗಾದರೆ ಮನವು ಅಳಿದಂತಾಯ್ತು.. ಬುದ್ಧಿಯೊಡನೆ ಬೆರೆತಂತಾಯ್ತು. ಜೀರ್ಣಿಸಿ ಕರಗಿ, ಬುದ್ಧಿಯೊಡನೆ ಏಕರೂಪವಾದಂತಾಯ್ತು. ಇದು ನಿಜವಾದ ಮನೋನಾಶ. ಮನೋನಾಶವೆಂದರೆ ಮನದ ಶಕ್ತಿಯ ನಾಶವಲ್ಲ; ಮನವು ಬುದ್ಧಿಯನ್ನು ಅನುಸರಿಸುವುದು, ಬುದ್ಧಿಯ ನಿರ್ಣಯವನ್ನು ಕಿಮಕ್ಕೆನ್ನದೆ ಆಚರಿಸುವುದು. ಮನದ ಈ ಆಚರಣ ಶಕ್ತಿಯನ್ನು ನಾಶಗೊಳಿಸುವುದು ಅಗತ್ಯವಲ್ಲ; ಅದನ್ನು ಸ್ಥಿರಗೊಳಿಸಬೇಕು. ಆದರೆ ಮನದಲ್ಲಿಯ ಕಾಮನೆಗಳನ್ನು ಮಾತ್ರ ಸಮೂಲವಾಗಿ ನಾಶಗೊಳಿಸಬೇಕು. ಈ ಬಗೆಯಾಗಿ ಮನದೊಳಗಿನ ಎಲ್ಲ ಕಾಮನೆಗಳನ್ನೂ ಸಂಪೂರ್ಣವಾಗಿ ತ್ಯಜಿಸುವುದು ಸ್ಥಿತಪ್ರಜ್ಞನ ವ್ಯಾಖ್ಯೆಯ ನಿಷೇಧಾತ್ಮಕವಾದ ಅಂಗ.

## ೧೫. ವಿಧಾಯಕ ವ್ಯಾಖ್ಯೆ : ಆತ್ಮ-ದರ್ಶನ

ಇನ್ನು ವ್ಯಾಖ್ಯೆಯ ವಿಧಾಯಕ ಅಂಗವನ್ನು ಕುರಿತು ವಿಚಾರಿಸುವ. ‘ಆತ್ಮನ್ಯೇವಾತ್ಮನಾ ತುಷ್ಟಃ’ ಇದು ವಿಧಾಯಕ ಲಕ್ಷಣ. ಸ್ಥಿತಃಪ್ರಜ್ಞನು ಆತ್ಮನಲ್ಲಿಯೆ ಸಂತುಷ್ಟ. ಹೊರಗಿನ ನೋಟಗಳಿಗಿಂತ ಒಳಗಿನ ದೃಶ್ಯದಿಂದೆಯೆ ಆತನು ತೃಪ್ತ. ವಸ್ತುತಃ ಹೊರಗಿನ ದೃಶ್ಯಕ್ಕಿಂತ ಒಳಗಿನ ದರ್ಶನವೇ, ಹೆಚ್ಚು ಸುಂದರ, ಭವ್ಯ. ಕವಿ ತನ್ನ ಕಾವ್ಯದಲ್ಲಿ ಒಂದು ದೃಶ್ಯವನ್ನು ವರ್ಣಿಸುತ್ತಾನೆ. ಆ ದೃಶ್ಯಕ್ಕಿಂತಲೂ ಅದರ ವರ್ಣನೆ ಹೆಚ್ಚು ಮಧುರವಾಗಿರುತ್ತದೆ. ಏಕೆಂದರೆ, ಅವನ ಧ್ಯೇಯಮಯವಾದ ಅಂತರಂಗವು ಬಾಹ್ಯ ಸೃಷ್ಟಿಗಿಂತ ರಮಣೀಯವಾದುದು. ಆ ರಮಣೀಯ ಆತ್ಮದರ್ಶನ ಈ ವಿಧಾಯಕ ಲಕ್ಷಣದಲ್ಲಿ ಸೂಚಿತವಾಗಿದೆ. ಈ ಎರಡೂ ಲಕ್ಷಣಗಳು ಕೂಡಿ ಸ್ಥಿತ-ಪ್ರಜ್ಞನ ಸಂಪೂರ್ಣ ದರ್ಶನವಾಗುತ್ತದೆ. ಆತನು ಕಾಮನೆಗಳನ್ನು ತ್ಯಜಿಸುತ್ತಾನೆ. ಆತನ ಸಂತೋಷದ ನೆಲೆ ಆತನ ಒಳಗೇ ಇರುತ್ತದೆ. ಕಾಮನೆಗಳಲ್ಲಿ ಆನಂದವಿಲ್ಲವೆಂಬುದು ಆತನ ಚಿತ್ತದಲ್ಲಿ ಕೆತ್ತಿರುತ್ತದೆ. ನಿಜವಾಗಿಯೂ ಕಾಮನೆಗಳಲ್ಲಿ ಆನಂದವಾಗಲಿ ಸಮಾಧಾನವಾಗಲಿ ಇದ್ದೀತೆ ಎಂಬುದು ವಿಚಾರಯೋಗ್ಯ ಪ್ರಶ್ನೆ. ಕಾಮನೆಗಳಿಂದ ಶಾಂತಿ, ಶೀತ

ಲತೆ, ಸಮಾಧಾನ ದೊರೆವುದೆಂಬುದು ಅನುಭವಸಿದ್ಧವಲ್ಲ. ಇಷ್ಟೇ ಅಲ್ಲ, ಕಾಮನೆಯಿಂದ ಮನಕ್ಕೆ ಯಾವಾಗಲೂ ತಳಮಳವೇ. ತಳಮಳಿಕೆಯಿಂದ ಮನುಷ್ಯನ ಸಮಾಧಾನ ಅಳಿಯುತ್ತದೆ. ತಳಮಳಿಕೆ ಬೆಂಕಿ ಹಚ್ಚುತ್ತದೆ. ಆದುದರಿಂದ ಕಾಮನೆ ಹೋದೊಡನೆ ಶೀತಲತೆ ಕಡಮೆಯಾಗಬಹುದೆಂಬ ಹೆದರಿಕೆಗೆ ಸ್ವಲ್ಪವೂ ಕಾರಣವಿಲ್ಲ. ಕಾಮನೆಯಲ್ಲಿ ಸಮಾಧಾನವುಂಟೆಂದು ಭಾಸವಾಗುತ್ತದೆ. ಅದು ಕೇವಲ ಭಾಸವೇ. ಆನಂದ ಕಾಮನೆಯ ತೃಪ್ತಿಯಲ್ಲಿ ಎಂದರೆ ಅದರ ಅಭಾವದಲ್ಲಿ ಇರುತ್ತದೆ. ಕಾಮನೆಯ ಪೂರ್ತಿ ಯೆಂದರೆ ಒಂದು ಬಗೆಯಾಗಿ ಅದು ಶಮನ ಹೊಂದುವುದು, ಇಲ್ಲದಂತಾಗು ವುದು. ಆನಂದದ ಸ್ಥಾನ ಕಾಮನೆಯಲ್ಲ; ಕಾಮನೆಯಿಂದ ಮುಕ್ತಿ ಹೊಂದಿರುವಿಕೆ. ವಿಚಾರ ಮಾಡಿದರೆ ಈ ಮಾತು ಗೊತ್ತಾಗುತ್ತದೆ. ಆದುದರಿಂದ ಇಲ್ಲಿ ಕಾಮನೆಗಳ ಸಂಪೂರ್ಣ ತ್ಯಾಗ, ಆತ್ಮದಲ್ಲಿಯೆ ಎಂದರೆ ತನ್ನ ಸ್ವರೂಪದಲ್ಲಿಯೆ ಆನಂದ ಎಂಬ ಇಬ್ಬಗೆಯ ಲಕ್ಷಣ ಹೇಳಲ್ಪಟ್ಟಿದೆ.

## ೧೬. ಆತ್ಮದರ್ಶನ ಕಾಮನಾತ್ಯಾಗಗಳು ಪರಸ್ಪರ ಕಾರ್ಯ ಕಾರಣಗಳು

ಇಲ್ಲಿ ಹೇಳಿರುವ ಇಬ್ಬಗೆಯ ಲಕ್ಷಣ ವಿಧಾಯಕವೂ ನಿಷೇಧಕವೂ ಆಗಿದೆ. ಇಷ್ಟೇ ಅಲ್ಲ. ಅದರಲ್ಲಿ ಇನ್ನೊಂದು ಬಗೆಯ ಇಬ್ಬಗೆಯ ಅರ್ಥ ಅಡಕವಾಗಿದೆ. ಇದರಲ್ಲಿ ಮೊದಲನೆಯದು ಪ್ರಾರಂಭಿಕ ಸ್ವರೂಪದ್ದು. ಎರಡನೆಯದು ಪ್ರಗತ ಸ್ವರೂಪದ್ದು ಎನ್ನಬಹುದು. ಮೊದಲು ಎಲ್ಲ ಕಾಮನೆಗಳನ್ನು ಬಿಡುವುದು ಸಾಧನರೂಪ. ಎರಡನೆಯ ಲಕ್ಷಣ ಕಾಮನಾ ತ್ಯಾಗದಿಂದ ಪ್ರಾಪ್ತವಾದ ಸ್ಥಿತಿಯ ದ್ಯೋತಕ. ಹೀಗೆ ಮೊದಲಿನ ಸಾಧನ ರೂಪ ಪ್ರಾಥಮಿಕ, ಎರಡನೆಯ ಅದರ ಫಲಿತರೂಪ ಪ್ರಗತ. "ಬಾಹ್ಯ ಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ ಸುಖಂ" ಬಾಹ್ಯ ವಿಷಯಗಳಿಂದ ಚಿತ್ತ ಬೇರೆಯಾದರೆ ಒಳಗೆ ಎಂತಹ ಆನಂದ ತುಂಬಿದೆ ಎಂಬುದರ ಕಲ್ಪನೆಯಾಗುತ್ತದೆ. ಈ ವಾಕ್ಯದಲ್ಲಿ ಗೀತೆ ಈ ಕ್ರಮವನ್ನು ಸೂಚಿಸಿದೆ. ಆದರೆ ಸ್ಥಿತ-ಪ್ರಜ್ಞನ ಲಕ್ಷಣದಲ್ಲಿಯೆ ಮುಂದೆ, ಆತ್ಮದರ್ಶನ ಆಗುತ್ತ ಹೋದಂತೆ ಕಾಮನೆಯ ರಸ ಒಣಗುತ್ತ ಹೋಗುತ್ತದೆಂದೂ ಹೇಳಿದೆ.

ಎಂದರೆ ಆತ್ಮದರ್ಶನವು ಸಾಧನ, ಕಾಮನಾನಾಶವು ಅದರ ಫಲ ಎಂದು ಅರ್ಥವಾಗುತ್ತದೆ. ಈ ದೃಷ್ಟಿಯಿಂದ "ಆತ್ಮನ್ಯೇವಾತ್ಮನಾ ತುಷ್ಟಃ" ಎಂಬುದು ಮೂಲಭೂತ ಲಕ್ಷಣವೆಂದು ತಿಳಿಯಬಹುದು. ಆತ್ಮತೃಪ್ತಿ ಕಾಣಿಸುವುದಿಲ್ಲ, ಕಾಮನೆಗಳ ತ್ಯಾಗ ಕಾಣಿಸುತ್ತದೆ. ಮನುಷ್ಯನಲ್ಲಿ ಕಾಮನೆಗಳು ಕಾಣಿಸುವುದಿಲ್ಲ, ಇದು ಅದರ ಪ್ರಕಟ ಲಕ್ಷಣ. ಇದು ಆತ್ಮ ಸಂತೋಷದ್ದೂ ಚಿಹ್ನೆ, ಪರಿಣಾಮ ಆಗಿದೆ. ಆದುದರಿಂದ ಅದನ್ನು ಫಲಸ್ವರೂಪವೆಂದು ಹೇಳಬಹುದು. ಆದರೆ ಆತ್ಮದರ್ಶನ ಮೊದಲೊ ಅಥವಾ ಕಾಮನಾತ್ಯಾಗ ಮೊದಲೋ ಎಂದು ವಾದ ಹೂಡುವುದರಲ್ಲಿ ಅರ್ಥವಿಲ್ಲ. ಬೀಜ ಮೊದಲೋ ಅಥವಾ ಗಿಡ ಮೊದಲೋ ಎಂಬ ವಾದದಂತೆಯೆ ಆತ್ಮದರ್ಶನ ಕಾಮನಾತ್ಯಾಗಗಳು ಪರಸ್ಪರ ಕಾರ್ಯಕಾರಣಗಳಾಗಿವೆ.

೨

## ೧೭. ಕಾಮನಾತ್ಯಾಗದ ನಾಲ್ಕು ಪ್ರಕ್ರಿಯೆಗಳು

ಇಲ್ಲಿ ಎಲ್ಲ ಕಾಮನೆಗಳ ನಿಃಶೇಷ ತ್ಯಾಗವನ್ನು ಹೇಳಿದಾರೆ. ಕಾಮನೆ ಒಂದು ಮುಳ್ಳಿನಂತೆ ಎಣಿಸಲ್ಪಟ್ಟಿದೆ. ಮುಳ್ಳು ಬಂಗಾರದ್ದಿದ್ದರೂ ಚುಚ್ಚದೆ ಬಿಟ್ಟೀತೆ? ಚೂರಿ ಬಂಗಾರದ್ದಿದ್ದರೂ ಜೀವ ತೆಗೆದುಕೊಳ್ಳುತ್ತದೆ. ಆದುದರಿಂದ ಎಲ್ಲ ಕಾಮನೆಗಳನ್ನೂ, ಒಂದೂ ಉಳಿಯದಂತೆ, ತೆಗೆದೊಗೆಯಬೇಕು, ಹೊರದೂಡಬೇಕು ಎಂದು ಗೀತೆಯ ಸಿದ್ಧಾಂತ. ಆದರೆ ಕೆಲವು ಕಾಮನೆಗಳನ್ನು ಇರಗೊಡಲು ಗೀತೆಯ ಅಡ್ಡಿಯಿಲ್ಲವೆಂದು ಗೀತೆಯ ಆಧಾರದಿಂದಲೇ ಹೇಳುವುದುಂಟು. "ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ" ಎಂಬೀ ವಚನವನ್ನು ಪ್ರಮಾಣವಾಗಿ ತೋರಿಸುವುದುಂಟು. ಆದುದರಿಂದ, ಈ ಪ್ರಶ್ನೆಯನ್ನು ಸರಿಯಾಗಿ ವಿಚಾರಿಸಬೇಕಾಗಿದೆ. ಈ ಎರಡು ವಚನಗಳಲ್ಲಿ ನಿಜವಾಗಿಯೂ ವಿರೋಧವೇ ಇಲ್ಲ. ಒಂದು ವಾಕ್ಯದಲ್ಲಿ ನಾವು ಎಲ್ಲಿಗೆ ಬಂದು ನಿಲ್ಲಬೇಕೋ ಆ ಸ್ಥಳದ ನಿರ್ದೇಶವಿದೆ. ಕಾಮನೆಗಳ ನಾಶವನ್ನು ಹೇಗೆ ಮಾಡಬೇಕೆಂಬುದನ್ನು ಎರಡನೆಯ ವಾಕ್ಯ ಸೂಚಿಸುತ್ತದೆ. ಸಾಧಾರಣವಾಗಿ ಕಾಮನಾನಾಶದ ಪ್ರಕ್ರಿಯೆಯಲ್ಲಿ ನಾಲ್ಕು ಪ್ರಕಾರಗಳುಂಟು: (೧) ವ್ಯಾಪಕ ಪ್ರಕ್ರಿಯೆ (೨) ಏಕಾಗ್ರ ಪ್ರಕ್ರಿಯೆ (೩) ಸೂಕ್ಷ್ಮ ಪ್ರಕ್ರಿಯೆ (೪) ವಿಶುದ್ಧ ಪ್ರಕ್ರಿಯೆ.

## ೧೮. ಕರ್ಮಯೋಗದ ವ್ಯಾಪಕ ಪ್ರಕ್ರಿಯೆ

(೧) ವ್ಯಾಪಕ ಪ್ರಕ್ರಿಯೆ: ಕಾಮನೆ ವ್ಯಕ್ತಿಗತವಾಗಿ ಇರುತ್ತದೆ. ಅದಕ್ಕೆ ಸಾಮಾಜಿಕ ಸ್ವರೂಪವನ್ನು ಕೊಡುವುದು ಕರ್ಮಯೋಗದಲ್ಲಿಯ ಕಾಮನಾ ನಾಶದ ಒಂದು ಯುಕ್ತಿ. ಹಳ್ಳಿಯಲ್ಲಿರುವ ಒಬ್ಬ ಗೃಹಸ್ಥ ತನ್ನ ಮಗನಿಗೆ ಶಿಕ್ಷಣವನ್ನು ಕೊಡಬೇಕಾಗಿದೆ ಎಂದು ತಿಳಿಯಿರಿ. ಆತನು ಊರಲ್ಲಿ ಒಂದು ಶಾಲೆಯನ್ನೇ ತೆರೆಯಲು ನಿಶ್ಚಯಿಸಬೇಕು. ತನ್ನ ಸ್ವಂತ ಹುಡುಗನ ಶಿಕ್ಷಣದೊಡನೆ ಉಳಿದ ಹುಡುಗರ ಶಿಕ್ಷಣದ ಅನುಕೂಲತೆಯನ್ನು ಮಾಡ ಬೇಕು. ಹೀಗೆ ಅವನು ತನ್ನ ಕಾಮನೆಗೆ ಸಾಮಾಜಿಕ ರೂಪವನ್ನು ಕೊಡ ಬೇಕು. ಹಳೆಯ ಭಾಷೆಯಲ್ಲಿ ಬೇರೊಂದು ಉದಾಹರಣೆಯನ್ನು ಹೇಳು ತ್ತೇನೆ. ಮಾಂಸವನ್ನು ತಿನ್ನಲು ಒಬ್ಬನಿಗೆ ಇಚ್ಛೆ. ಮಾಂಸದ ಬಯಕೆ ಯಾಗಿದ್ದರೆ ನೀನು ಯಜ್ಞ ಮಾಡೆಂದು ಅವನಿಗೆ ಹೇಳಲಾಯಿತು. ಯಜ್ಞ ಮಾಡಿ ಇತರರಿಗೆ ನೀಡಿ ತಾನೂ ಯಜ್ಞಶಿಷ್ಟವನ್ನು ಭುಜಿಸಬಹುದು. ಮನೆಯಲ್ಲಿ ಹೆಣ್ಣುಮಕ್ಕಳು ಹೀಗೆಯೆ ಮಾಡುತ್ತಾರೆ. ಸವಿಯುಣಿಸು ಎಲ್ಲ ರಿಗೂ ಬೇಕು. ಹೆಣ್ಣುಮಕ್ಕಳು ಸವಿಯಡಿಗೆಯನ್ನು ಮಾಡಿ ಎಲ್ಲರಿಗೂ ಹೊಟ್ಟೆತುಂಬ ನೀಡಿ ಉಳಿದ ಚೂರುಪಾರು ಸೀಕಲನ್ನು ತಾವು ತಿನ್ನುತ್ತಾರೆ. ಅವರ ಪಾಲಿಗೆ ಶ್ರಮವೇ ಹೆಚ್ಚು. ಏನೇ ಇರಲಿ, ಹೀಗೆ ಹೆಂಗಸು ತನ್ನ ಕಾಮನೆಗೆ ಕುಟುಂಬವ್ಯಾಪಿ ಸ್ವರೂಪವನ್ನು ಕೊಡುತ್ತಾಳೆ. ಇದು ಕರ್ಮ ಯೋಗದ ಕಾಮನಾನಾಶದ ಯುಕ್ತಿ. ವ್ಯಕ್ತಿಗತವಾದ ವಾಸನೆಗೆ ಸಾಮಾ ಜಿಕ ಸ್ವರೂಪ ಕೊಡಬೇಕು. ಇದರಿಂದ ಅದು ವ್ಯಾಪಕವಾಗುತ್ತಾಗುತ್ತ ಕರಗಿ ಕಾಣದಾಗುತ್ತದೆ. ಇದು ಈ ಪ್ರಕ್ರಿಯೆಯ ಗುಟ್ಟು.

## ೧೯. ಧ್ಯಾನಯೋಗದ ಏಕಾಗ್ರ ಪ್ರಕ್ರಿಯೆ

(೨) ಏಕಾಗ್ರ ಪ್ರಕ್ರಿಯೆ: ನಿಮ್ಮ ಮನದಲ್ಲಿಯ ಅನೇಕ ವಾಸನೆಗಳನ್ನು ತೂಗಿನೋಡಿ ಅವುಗಳಲ್ಲಿ ಅತ್ಯಂತ ಪ್ರಬಲವಾದುದು ಯಾವುದೆಂಬುದನ್ನು ಕಂಡುಕೊಳ್ಳಿ. ಉಳಿದೆಲ್ಲ ವಾಸನೆಗಳನ್ನು ಬಿಟ್ಟು ಬಿಟ್ಟು ಆ ಒಂದೇ ವಾಸನೆಯಲ್ಲಿ ಚಿತ್ತವನ್ನು ಏಕಾಗ್ರಗೊಳಿಸಿ. ಒಬ್ಬ ವಿದ್ಯಾರ್ಥಿಗೆ ಅನೇಕ ವಾಸನೆಗಳೊಡನೆ ವೇದಾಭ್ಯಾಸದ ಇಚ್ಛೆಯೂ ಇದೆಯೆಂದು ತಿಳಿಯಿರಿ. ಆದರೆ ಇದು ಇತರ ವಾಸನೆಗಳಿಗಿಂತ ಪ್ರಬಲ. ಆತ ಗುರುಗೃಹದಲ್ಲಿ

ಹೋಗಿ ಇರಬಹುದು, ಸಿಕ್ಕಿದ ಅನ್ನವನ್ನು ಉಂಡು ಅಭ್ಯಾಸ ಮಾಡಬಹುದು. ಹೀಗೆ ಮಾತಿ ಸವಿಯುಣಿಸಿದ ವಾಸನೆಯನ್ನು ಆತ ಕೊಲ್ಲಬಹುದು. ಈ ಬಗೆಯಾಗಿ ಮುಖ್ಯ ವಾಸನೆ ಯಾವುದೆಂಬುದನ್ನು ಕಂಡುಕೊಂಡು ಅದಕ್ಕನುರೋಧವಾಗಿ ಇಡಿಯ ಜೀವನವನ್ನು ಸಿದ್ಧಗೊಳಿಸುವುದು ಧ್ಯಾನಯೋಗದ ಯುಕ್ತಿ. ವಿದ್ಯೆಯ ತೀವ್ರ ಇಚ್ಛೆಯಿರುವ ವಿದ್ಯಾರ್ಥಿಯಲ್ಲಿ ಅದನ್ನು ನಾವು ಕಾಣುತ್ತೇವೆ. ಇತರ ವಾಸನೆಗಳನ್ನು ನಿಗ್ರಹಿಸಿ ಅವನು ವಿದ್ಯೆಗೋಸುಗ ತೊಂದರೆಗಳನ್ನು ಸಹಿಸುತ್ತಾನೆ. "ಸುಖಾರ್ಥಿನಃ ಕುತೋವಿದ್ಯಾ, ಕುತೋ ವಿದ್ಯಾರ್ಥಿನಃ ಸುಖಂ" ಎಂದು ವ್ಯಾಸರು ಹೇಳಿಯೆ ಇದ್ದಾರೆ. ನಮ್ಮ ಛಾತ್ರಾಲಯಗಳಲ್ಲಿ ಸುಖದ ಅನುಕೂಲತೆಗಳೂ ವಿದ್ಯೆಯೂ ಇವೆಯೆಂದು ನಾವು ಜಾಹೀರ ತುಗಳನ್ನು ಪ್ರಕಟಿಸುತ್ತೇವೆ! ಈ ಭಾಷೆಯೆ ತಪ್ಪು. ಸುಖದತ್ತ ಲಕ್ಷ್ಯವಿದ್ದರೆ ವಿದ್ಯೆಯತ್ತ ಲಕ್ಷ್ಯ ಬರಲಾರದು. ನಿಮ್ಮ ವಾಸನೆಗಳನ್ನೆಲ್ಲ ತೂಗಿ ನೋಡಿ ಎಲ್ಲಕ್ಕೂ ಪ್ರಬಲವಾದ ವಾಸನೆಯಲ್ಲಿ ಏಕಾಗ್ರರಾಗಿ. ಇಂದಿನ ಭೌತಿಕ ಪ್ರಯೋಗಿಗಳಾದ ವೈಜ್ಞಾನಿಕರು ಹೀಗೆಯೆ ಮಾಡುತ್ತಾರೆ. ತಮ್ಮ ಪ್ರಯೋಗದ ಮೇಲೆ ಎಲ್ಲ ಶಕ್ತಿಯನ್ನು ಲಕ್ಷ್ಯವನ್ನು ಅವರು ಕೇಂದ್ರೀಕರಿಸುತ್ತಾರೆ. ಇದು ಧ್ಯಾನಯೋಗ. ಇತರ ವಾಸನೆಗಳನ್ನು ನಿರಾಕರಿಸಿ ಒಂದೇ ವಾಸನೆಯ ಮೇಲೆ ಕೇಂದ್ರಿತವಾಗಿರುವುದು, ತರುವಾಯ ಅದನ್ನೂ ಬಿಡುವುದು, ಇದುವೆ ಈ ಯುಕ್ತಿ. ಏಕಾಗ್ರತೆ ಸಾಧ್ಯವಾದ ಬಳಿಕ ಆ ವಾಸನೆಯನ್ನೂ ತ್ಯಜಿಸಿ ಮುಕ್ತರಾಗಬೇಕು

## ೨೦. ಜ್ಞಾನಯೋಗದ ಸೂಕ್ಷ್ಮ ಪ್ರಕ್ರಿಯೆ

(೩) ಸೂಕ್ಷ್ಮ ಪ್ರಕ್ರಿಯೆ: ಈ ಪ್ರಕ್ರಿಯೆಯಲ್ಲಿ ಸ್ಥೂಲವಾಸನೆಗಳನ್ನು ಬಿಡು, ಸೂಕ್ಷ್ಮ ವಾಸನೆಗಳನ್ನು ಹಿಡಿ ಎಂಬ ಯುಕ್ತಿ ಹೇಳಲ್ಪಟ್ಟಿದೆ. ಅಲಂಕರಿಸಿಕೊಳ್ಳಬೇಕೆಂದು ಬಯಕೆಯಾಗುತ್ತಿದ್ದರೆ, ಶರೀರವನ್ನು ಅಲಂಕರಿಸಿಕೊಳ್ಳುವುದಕ್ಕಿಂತ ಅಂತರಂಗವನ್ನು ಅಲಂಕರಿಸಿಕೊಳ್ಳಿ. ನಿಮ್ಮ ಬುದ್ಧಿಯನ್ನು ಸಿಂಗರಿಸಿ ಚೆಂದಗೊಳಿಸಿರಿ, ಚತುರರಾಗಿರಿ, ಹೊಸ ವಿದ್ಯೆ ಗಳಿಸಿರಿ, ಕಲೆಗಳನ್ನು ಸಂಪಾದಿಸಿ. ಶರೀರದ ಪೊಳ್ಳು ಶೃಂಗಾರಕ್ಕಿಂತ ಈ ಬೌದ್ಧಿಕ ಶೃಂಗಾರವು ಸೂಕ್ಷ್ಮ. ಇದಕ್ಕೂ ಸೂಕ್ಷ್ಮ ಶೃಂಗಾರವೆಂದರೆ ಹೃದಯವನ್ನು ಶುಭ ಗುಣಗಳಿಂದ ಚೆಂದಗೊಳಿಸುವುದು. ಶರೀರವನ್ನು ಸುಗಂಧಿತವಾಗಿ

ಮಾಡುವ ಅತ್ತರಿಗಿಂತ ಬುದ್ಧಿಯ ಚಾತುರ್ಯ ಹೆಚ್ಚಿನ ಸುಗಂಧಿಯಾದ ಅತ್ತರು; ಈ ಅತ್ತರಿಗಿಂತಲೂ ಹೃದಯದ ಶುಭ ಗುಣ-ಸಂಪತ್ತಿ ಇನ್ನೂ ಹೆಚ್ಚಿನ ಸುಗಂಧಿಯಾದ ಅತ್ತರು. ನಾಮದೇವನು ಒಂದು ಅಭಂಗದಲ್ಲಿ ವಿಠಾಯಿ ಮಾಉಲಿ ತನ್ನನ್ನು ಹೇಗೆ ಶೃಂಗರಿಸಿದಳೆಂಬುದನ್ನು ಸುಂದರವಾಗಿ ವರ್ಣಿಸಿದಾನೆ. ತಾಯಿ ಮಗುವಿನ ಬಾಹ್ಯಾಂಗವನ್ನು ಹೇಗೆ ಶೃಂಗರಿಸುತ್ತಾಳೋ ಅದೇ ಬಗೆಯ ಅಂತರಂಗ ಶೃಂಗಾರ ವರ್ಣನೆ ಆ ವರ್ಣನೆಯಲ್ಲಿ ಉಂಟು. ಬಾಹ್ಯ ಶೃಂಗಾರಕ್ಕಿಂತ ಅಂತಃಶೃಂಗಾರದಿಂದ ಜೀವನದ ಶೋಭೆ ಹೆಚ್ಚಾಗಿ ಕಂಗೊಳಿಸುತ್ತದೆ. ಶೋಭೆಯ ಸ್ಥೂಲ ರೂಪವನ್ನು ಬಿಟ್ಟು ಸೂಕ್ಷ್ಮ ರೂಪವನ್ನು ಅವಲಂಬಿಸಿ. ಆನಂದ ಕಾಮನೆಯಲ್ಲಿ ಇಲ್ಲ; ಕಾಮನೆಯ ತೃಪ್ತಿಯಲ್ಲಿದೆ. ಕಾಮನೆ ಸ್ಥೂಲವಾಗಿದ್ದರೆ ಅದರ ತೃಪ್ತಿ ಕಠಿಣವಾಗುತ್ತದೆ. ಏಕೆಂದರೆ ಹೊರಗಿನ ಸಾಧನಗಳನ್ನು ಅವಲಂಭಿಸಬೇಕಾಗುತ್ತದೆ. ಅದೇ ಸೂಕ್ಷ್ಮವಾಗಿದ್ದರೆ, ತೃಪ್ತಿಗೆ ಆತಂಕಗಳು ಕಡಿಮೆ. ಏಕೆಂದರೆ ಸ್ವಂತದ ಅಂತಃ ಸಾಧನಗಳಿಂದಲೇ ತೃಪ್ತಿ ಲಭಿಸುತ್ತದೆ. ಹೀಗೆ ಕಾಮನೆ ಅಂತರ್ಮುಖವೂ ಸೂಕ್ಷ್ಮವೂ ಆಗುತ್ತಾಗುತ್ತ ಮುಂದೆ ಸಂಪೂರ್ಣವಾಗಿ ಹೋಗಬಲ್ಲುದು ಅಥವಾ ಹೋಗಬೇಕು. ಇದು ಜ್ಞಾನಯೋಗದ ಯುಕ್ತಿ.

## ೨೧. ಭಕ್ತಿಯೋಗದ ವಿಶುದ್ಧ ಪ್ರಕ್ರಿಯೆ

೪. ವಿಶುದ್ಧ ಪ್ರಕ್ರಿಯೆ: ಈ ಪ್ರಕ್ರಿಯೆಯನ್ನು ಕುರಿತು ಹೇಳುವುದಾದರೆ, ನಾವು ವಾಸನೆಯಲ್ಲಿ ವ್ಯಕ್ತಿಗತ, ಸಾಮಾಜಿಕ ಅಥವಾ ಸ್ಥೂಲ, ಸೂಕ್ಷ್ಮ ಎಂಬ ಭೇದವನ್ನು ಮಾಡುವುದಿಲ್ಲ. ಶುಭವಾಸನೆ, ಅಶುಭವಾಸನೆ ಎಂಬಭೇದವನ್ನು ಮಾಡುತ್ತೇವೆ. ಒಳಿತಾದ ವಾಸನೆಗಳನ್ನು ಇಟ್ಟುಕೊಳ್ಳಿ, ಕೆಟ್ಟುವನ್ನು ಬಿಟ್ಟುಬಿಡಿ. ಸಿಹಿ ತಿನ್ನುವ ಇಚ್ಛೆಯಾದರೆ ಮಿಠಾಯಿ ತಿನ್ನದೆ, ಮಾವಿನಹಣ್ಣನ್ನು ತಿನ್ನಿ. ಮಿಠಾಯಿಯಿಂದ ಅಪಾಯವಾಗಬಹುದು. ಅದರಿಂದ ರಜೋಗುಣವೂ ಬೆಳೆಯಬಹುದು. ಮಾವಿನಹಣ್ಣು ಪ್ರಕೃತಿಗೆ ಒಳಿತಾದುದು, ಸತ್ತ್ವಗುಣವನ್ನು ಅದು ಬೆಳೆಯಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಆರಂಭದಲ್ಲಿಯೆ ವಾಸನೆಯನ್ನು ಕೊಲ್ಲಲು ಹೇಳುವುದಿಲ್ಲ. ಅಶುಭವನ್ನು ಬಿಡಿ, ಶುಭವನ್ನು ಹಿಡಿಯಿರಿ, ಎಂದಿಷ್ಟೇ ನಾವು ಹೇಳುವುದು. ಶುಭವಾವುದು

ಅಶುಭವಾವುದು ಎಂಬುದನ್ನು ಮನುಷ್ಯರು ತಾವೇ ತಮ್ಮ ಬುದ್ಧಿಯಿಂದ ಅರಿಯಬೇಕು. ತಮ್ಮ ತಮ್ಮ ಮತ ತಮತಮಗೆ ಪ್ರಮಾಣ. ಕೆಲವು ವಾಸನೆಗಳ ವಿಷಯದಲ್ಲಿ ಶುಭಾಶುಭ ನಿರ್ಣಯವನ್ನು ಸೈನ್ಸಿನ ಎಂದರೆ ವಿಜ್ಞಾನದ ಸಾಹಾಯ್ಯದಿಂದ ಮಾಡಬಹುದು. ಕೆಲವು ವಾಸನೆಗಳ ವಿಷಯದಲ್ಲಿ ವಿಜ್ಞಾನದ ಸಾಹಾಯ್ಯದಿಂದ ಹೀಗೆ ವಿವೇಕವನ್ನು ಮಾಡಲು ಬಂದರೂ ಶುಭವಾವುದು ಅಶುಭವಾವುದು ಎಂಬುದರ ನಿರ್ಣಯವನ್ನು ನಮ್ಮ ನಮ್ಮ ವಿಚಾರದಿಂದಲೇ ಮಾಡಬೇಕಾಗುತ್ತದೆ. ಅಶುಭವಾಸನೆಗಳ ತ್ಯಾಗವನ್ನು, ಶುಭವಾಸನೆಗಳ ಪೂರ್ತಿಯನ್ನು ಮಾಡುತ್ತ ಮಾಡುತ್ತ ಹೋದರೆ ಮಾನವು ಶುದ್ಧವಾಗಿ ವಾಸನೆಯೆ ನಷ್ಟವಾಗುತ್ತದೆ. ಇದು ಕಾಮನಾ-ನಾಶದ ವಿಶುದ್ಧ ಪ್ರಕ್ರಿಯೆ.

**೨೨. ವಿಶುದ್ಧ ಪ್ರಕ್ರಿಯೆ ಎಲ್ಲ ಬಗೆಯಿಂದಲೂ ಸುರಕ್ಷಿತವಾದುದು.**

ಈ ನಾಲ್ಕು ಪ್ರಕ್ರಿಯೆಗಳಲ್ಲಿ ಕೊನೆಯದಾದ ವಿಶುದ್ಧ ಪ್ರಕ್ರಿಯೆ ಎಲ್ಲಕ್ಕಿಂತ ನಿರಪಾಯವಾದುದು, ಆದುದರಿಂದ ಉತ್ತಮವಾದುದು. ಪ್ರಾಯಃ ಭಕ್ತಿಯೋಗವು ಅದನ್ನೇ ಸ್ವೀಕರಿಸಿದೆ. ಇತರ ಪ್ರಕ್ರಿಯೆಗಳಲ್ಲಿ ಶಕ್ತಿ ಇದೆ, ಹಾಗೆ ಅಪಾಯವೂ ಬಹಳವಾಗಿ ಇದೆ. ವ್ಯಾಪಕ ಪ್ರಕ್ರಿಯೆಯಲ್ಲಿ ಕಾಮನೆಯನ್ನು ಸಾಮಾಜಿಕವಾಗಿ ಮಾಡಬೇಕೆಂದು ಹೇಳಲಾಗಿದೆ. ಆದರೆ ಆ ಕಾಮನೆಯೆ ಅಶುಭವಾಗಿದ್ದರೆ? ಒಬ್ಬನಿಗೆ ಹೆಂಡವನ್ನು ಕುಡಿವ ಇಚ್ಛೆಯಾದರೆ, ಈ ಪ್ರಕ್ರಿಯೆಯಂತೆ ಅವನು ಹೆಂಡದ ಸಾರ್ವಜನಿಕ ಸಮಾಜ (ಕ್ಲಬ್ಬನ್ನು) ಸ್ಥಾಪಿಸಬೇಕಾಗುತ್ತದೆ! ಹಾಗೆ ಮಾಡಿದರೆ ಅವನ, ಸಮಾಜದ ಅಧಃಪಾತ ಖಂಡಿತ. ಸಾಮಾಜಿಕವಾಗಿ ಮಾಡಿದಷ್ಟಕ್ಕೆ ವಾಸನೆ ಶುದ್ಧವಾಗುವುದೆಂದಲ್ಲ. ಏಕಾಗ್ರ ಪ್ರಕ್ರಿಯೆಯಲ್ಲಿಯೂ ಅದೇ ಅಪಾಯವಿದೆ. ಯಾವ ವಾಸನೆಯ ಮೇಲೆ ಚಿತ್ತವನ್ನು ಏಕಾಗ್ರಗೊಳಿಸಬೇಕೋ ಅದೇ ಅಶುಭವಾಗಿದ್ದರೆ, ಎಲ್ಲವೂ ಹೋಗಿಬಿಡುತ್ತದೆ. ಚಿತ್ತದ ಏಕಾಗ್ರತೆ ಯೋಗಶಾಸ್ತ್ರದ ವಿಷಯ. ಪತಂಜಲಿ ಧ್ಯಾನಯೋಗವನ್ನು ಯಮ-ನಿಯಮ ಪೂರ್ವಕವಾಗಿ ಆಚರಿಸಬೇಕೆಂದು ಎಚ್ಚರಿಸಿದಾನೆ. ಇಲ್ಲದಿದ್ದರೆ ಅದರಿಂದ ಅನರ್ಥ ಒದಗಬಹುದು. ಧ್ಯಾನಯೋಗವು ಕಾರಕವಾಗದೆ ಮಾರಕವಾಗಬಹುದು. ಸಾಮಾಜಿಕತೆಯಲ್ಲಿ, ಏಕಾಗ್ರತೆಯಲ್ಲಿ ಶಕ್ತಿಯಿದೆ, ನಿಜ. ಆದರೆ

ಆ ಶಕ್ತಿ ಕೆಟ್ಟದಾದರೆ ಅದರಿಂದ ಮನುಷ್ಯ ರಾಕ್ಷಸನೇ ಆಗುತ್ತಾನೆ. ಸೂಕ್ಷ್ಮ ಪ್ರಕ್ರಿಯೆಯೂ ಸುರಕ್ಷಿತವಲ್ಲ. ವಾಸನೆ ಸೂಕ್ಷ್ಮವಾದರೆ ಅದು ಪವಿತ್ರವೇ ಆದೀತೆಂದು ಹೇಳಲಾಗದು. ಯಾವನಾದರೂ ಒಬ್ಬ ಮನುಷ್ಯ ಕಾಮವಾಸನೆಯ ಹಿಡಿತದಲ್ಲಿ ಸಿಕ್ಕಿ ಅಮೂರ್ತ ಕಾಮನೆಯ ಚಿಂತನೆ ಮಾಡ ತೊಡಗಿದರೆ, ಅದು ಹೆಚ್ಚಾಗಿ ಭಯಾನಕವಾಗುತ್ತದೆ. ಭಕ್ತಿಯೋಗವು ಸ್ವೀಕರಿಸಿದ ಈ ವಿಶುದ್ಧ-ಪ್ರಕ್ರಿಯೆ ಎಲ್ಲಕ್ಕಿಂತಲೂ ಸುರಕ್ಷಿತವಾದುದು. ಆದುದರಿಂದಲೇ ತುಲಸೀದಾಸರು, " **ಭಗತಿ ಸುತಂತ್ರ ಅವಲಂಬ ನ ಆನಾ** " ಎಂದು ಹೇಳಿದಾರೆ. ಇತರ ಸಾಧನಗಳಲ್ಲಿಯ ಅಪಾಯಗಳನ್ನು ಇಲ್ಲದಾಗಿ-ಸಲು ಅವಕ್ಕೆ ಭಕ್ತಿಯೋಗದ ಆಧಾರ ಬೇಕಾಗುತ್ತದೆ. ಭಕ್ತಿಗೆ ಎರಡನೆಯ ಆಲಂಬನ ಬೇಡ. ಉಳಿದ ಸಾಧನಗಳು ಶಕ್ತಿಶಾಲಿಗಳೇ ಸರಿ. ಆದರೆ ಅಪಾಯಸಹಿತ. ಒಂದೆಡೆಯಲ್ಲಿ ಶಕ್ತಿ ಇದ್ದರೆ, ಇನ್ನೊಂದೆಡೆಯಲ್ಲಿ ಸುರಕ್ಷಿತತೆ ಇರುತ್ತದೆ. ಹೀಗೆ ಈ ಬಗೆಯ ಭೇದ ಭಕ್ತಿ-ಶಕ್ತಿಗಳಲ್ಲಿ ಇರುತ್ತದೆ. ಭಕ್ತಿಗೆ ಶಕ್ತಿಯ ನೆರವು ಇಲ್ಲದಿದ್ದರೆ, ಅದು ದುರ್ಬಲವಾಗಬಹುದು. ಆದರೆ ಅಪವಿತ್ರವೂ ಮಾರಕವೂ ಆಗದು. ಆದರೆ ಶಕ್ತಿಗೆ ಭಕ್ತಿಯ ನೆರವು ಇರದಿದ್ದರೆ, ಅದರಿಂದ ಸರ್ವ ನಾಶವಾಗುತ್ತದೆ. ಭಕ್ತಿ ಯಾವ ಸ್ಥಿತಿಯಲ್ಲಿಯೂ ಅಕಲ್ಯಾಣವನ್ನು ಮಾಡದು. ಆದುದರಿಂದ ಕಾಮನಾ-ನಾಶಕ್ಕೋಸುಗ ಭಕ್ತಿಯೋಗವು ಸ್ವೀಕರಿಸಿದ ವಿಶುದ್ಧ ಪ್ರಕ್ರಿಯೆ ಎಲ್ಲ ಬಗೆಯಿಂದಲೂ ಸುರಕ್ಷಿತ, ಅನುಕೂಲ. "**ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ**" ಎಂಬೀ ವಾಕ್ಯ ಇದನ್ನೇ ಸೂಚಿಸುತ್ತದೆ.

# ೩ ನೆಯ ವ್ಯಾಖ್ಯಾನ

೧

## ೨೩. ಸ್ಥಿತಪ್ರಜ್ಞತೆಯ ಸುಲಭ ಸಾಧನ
## (ಅ) ಸುಖದುಃಖಗಳನ್ನು ಸಹಿಸಿರಿ

ಸ್ಥಿತ-ಪ್ರಜ್ಞನ ವ್ಯಾಖ್ಯೆ ಪರಿಪೂರ್ಣವಾಯ್ತು. ಇನ್ನು ಮುಂದಿನ ಮೂರು ಶ್ಲೋಕಗಳಲ್ಲಿ ಈ ವ್ಯಾಖ್ಯೆಯ ಉತ್ತರೋತ್ತರ ಸುಲಭ ವಿವರಣ ವನ್ನು ಮಾಡಲಾಗಿದೆ. ಮೊದಲನೆಯ ಶ್ಲೋಕದಲ್ಲಿ ಸ್ಥಿತಪ್ರಜ್ಞನ ವ್ಯಾಖ್ಯೆಯ ಮಾನಸ-ಶಾಸ್ತ್ರೀಯ ವಿವರಣವಿದೆ.

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತ ಸ್ಪೃಹಃ |**
**ವೀತರಾಗ ಭಯ ಕ್ರೋಧಃ ಸ್ಥಿತಧೀರ್ ಮುನಿರುಚ್ಯತೇ ||**

ವ್ಯಾಖ್ಯಾ-ನಿದರ್ಶಕವಾದ ಉಚ್ಯತೇ ಶಬ್ದ ಇಲ್ಲಿ ಬಂದಿದ್ದರೂ, ಇಲ್ಲಿ ವ್ಯಾಖ್ಯೆಯ ಅಪೇಕ್ಷೆ ಇಲ್ಲ. ಏಕೆಂದರೆ ವ್ಯಾಖ್ಯೆಯನ್ನು ಈ ಮೊದಲೇ ಹೇಳ ಲಾಗಿದೆ. ಸ್ಥಿತಪ್ರಜ್ಞನ ಶಾಸ್ತ್ರೀಯ ವ್ಯಾಖ್ಯೆಯಲ್ಲಿ ಎಲ್ಲಕಾಮನೆಗಳ ಸಮೂಲ ತ್ಯಾಗ ಅಪೇಕ್ಷಿತವಾಗಿದೆ. ಆದರೆ ಅದೇನೂ ಸುಲಭವಲ್ಲ. ಆದುದರಿಂದ ಈಗ ಈ ಶ್ಲೋಕದಲ್ಲಿ ಆ ಮಾನದಿಂದ ಸುಲಭವಾದ ಲಕ್ಷಣ ಹೇಳಲ್ಪಟ್ಟಿದೆ. ಕೆಟ್ಟುದು ಬಂದಾಗ ಉದ್ವೇಗಕ್ಕೆ ಎಡೆಗೊಡಬೇಡ. ಉದ್ವೇಗಗೊಳ್ಳುವುದೆಂದರೆ ಹತಬಲ ನಾಗುವುದು. ಆ ಶಬ್ದದಲ್ಲಿಯೆ ಆ ಅರ್ಥ ಸೂಚಿತವಾಗಿದೆ. 'ಉತ್' ಎಂದರೆ ಮೇಲೆ, 'ವೇಗ' ಎಂದರೆ 'ಗತಿ'. ಮೇಲೆ ಏರುವಾಗ ಎತ್ತಿಗೆ ಸಾಕು ಸಾಕಾಗು ತ್ತದೆ. ಆದರೂ ಮತ್ತೆ ಏರುತ್ತದೆ. ಇಂತಹ ಸ್ಥಿತಿ ಆಗಬಾರದು. ದುಃಖ ವನ್ನು ಧೈರ್ಯದಿಂದ ಸಹಿಸಬೇಕು. ಅದಕ್ಕೆ ಸೋಲ ಕೂಡದು. ದುಃಖ ದಂತೆ ಸುಖವನ್ನೂ ಸಾವಧಾನವಾಗಿ ಸೈರಿಸಬೇಕು ಎದಃಖ. ಮನುಷ್ಯನಿಗೆ ಬೇಕೆನಿಸುವುದಿಲ್ಲ. ಆದುದರಿಂದ ಅದು ಆತನನ್ನು ಮೋಹಗೊಳಿಸದು. ಧೈರ್ಯದಿಂದ ಸೈಸಿದರಾಯ್ತು. ಆದರೆ ಸುಖ ಬೇಕು ಎನಿಸುತ್ತದೆ; ಮನವನ್ನು ಮೋಸಗೊಳಿಸುತ್ತದೆ. ಆದುದರಿಂದ ಸುಖದಲ್ಲಿ ಅಪಾಯವಿದೆ. ಸುಖಕ್ಕೋಸುಗ ಲಾಲಸೆಯಾಗುವುದು ಸುಖದ ಬಗ್ಗೆ ತಪ್ಪು ತಿಳಿವಳಿಕೆಯ

ಪರಿಣಾಮ. ಆದುದರಿಂದ ಸುಖವು ಬರಲು, ಎಚ್ಚತ್ತು ಮನವನ್ನು ಬಿಗಿ ಹಿಡಿಯಬೇಕು. ದುಃಖ ಬರಲು ಧೈರ್ಯವನ್ನು ಅವಲಂಬಿಸಬೇಕು. ಸುಖ ಬಂದರೆ ಅದರಲ್ಲಿ ಮನವನ್ನು ತೊಡಗಿಸಕೂಡದು. ಅದನ್ನು ಬಿಗಿ ಹಿಡಿಯಬೇಕು. ಇಳಿಕಲಿನಲ್ಲಿ ಎತ್ತು ಓಡಲೆಳಸುತ್ತದೆ. ಹಾಗೇ ಸುಖದ ಪ್ರಸಂಗಗಳಲ್ಲಿ ಮನದ ವೃತ್ತಿ ಓಡಲೆಳಸುತ್ತದೆ. ಆದುದರಿಂದ ಅದನ್ನು ಬಿಗಿಹಿಡಿವುದು ಆವಶ್ಯಕ. ಈ ಕೆಲಸ ಅಷ್ಟೇನು ಬಿಗಿಯಾದುದಲ್ಲ. ಕಾಮನಾತ್ಯಾಗದ ಆಳತೆಯಿಂದ ಇದು ಎಷ್ಟೋ ಹಗುರು. ಕಾಮನೆಯ ಎರಡು ರೂಪಗಳನ್ನು ಇಲ್ಲಿ ಸೂಚಿಸಲಾಗಿದೆ. ಸುಖ ಬೇಕೆನಿಸುತ್ತದೆ. ದುಃಖ ಬೇಡವೆನಿಸುತ್ತದೆ. ಇಲ್ಲಿ ಇವೆರಡರ ಸಂಯಮ ಹೇಳಲ್ಪಟ್ಟಿದೆ.

## ೨೪. (ಅ) ವೃತ್ತಿಗಳನ್ನು ಏಳಗೊಡಬೇಡ

ಕಾಮನೆಯ ಎರಡು ಪ್ರಕಾರಗಳಿರುವಂತೆ, ಮೂರು ಪರಿಣಾಮಗಳು ಇವೆ. (೧) ತೃಷ್ಣೆ (೨) ಕ್ರೋಧ (೩) ಭಯ. ಅನುಕೂಲವಾದ ವೇದನೆಯಿಂದ ತೃಷ್ಣೆ ಹುಟ್ಟುತ್ತದೆ. ಪ್ರತಿಕೂಲ ವೇದನೆಯಿಂದ ಕ್ರೋಧ ಹುಟ್ಟುತ್ತದೆ. ಭಯವೂ ಕ್ರೋಧದ್ದೇ, ಪ್ರತಿಕೂಲ ವೇದನೆಯದೇ, ಒಂದು ರೂಪ. ಆದರೆ ನಮ್ಮಲ್ಲಿ ಬದುಕಿರಲು ಒಂದು ವಿಶೇಷ ಆಸಕ್ತಿ ಇರುವುದರಿಂದ ಭಯ ವೃತ್ತಿ ಕ್ರೋಧದಿಂದ ಬೇರೆಯೆಂದು ಎಣಿಸಲ್ಪಟ್ಟಿದೆ. ನಮ್ಮಲ್ಲಿಯ ಜಿಜೀವಿಷೆಯ ಮೇಲೆ ಆಘಾತವಾದೊಡನೆ ಭೀತಿ ಹುಟ್ಟುತ್ತದೆ. ಈ ವೃತ್ತಿ ಎಲ್ಲ ಪ್ರಾಣಿಗಳಲ್ಲಿಯೂ ಸ್ವರಸ-ವಾಹಿಯಾಗಿದೆ ಎಂದರೆ ರಕ್ತದಲ್ಲಿ ಬೆರೆತಿರುತ್ತದೆ. ಜೀವನೋಚ್ಛೇದದ ಪ್ರಸಂಗ ಬಂದೊಡನೆ ಅದು ಜಾಗೃತವಾಗುತ್ತದೆ. ಬಲಾತ್ಕಾರಮಾಡುವ ಜನರು ಈ ಭಯ ವೃತ್ತಿಯ ಸಂಪೂರ್ಣ ಲಾಭವನ್ನು ಮಾಡಿಕೊಂಡಿದಾರೆ ಅವರು ಜನರನ್ನು ಹೆದರಿಸಿಯೆ ಗುಲಾಮರಾಗಿ ಮಾಡಿದಾರೆ. ತೋಪು-ಬಂದೂಕು ಮುಂತಾದ ಶಸ್ತ್ರಾಸ್ತ್ರಗಳಿಗಿಂತ ಈ ಭಯ ವೃತ್ತಿಯೆ ಅವರ ಸತ್ತೆಯ ನಿಜವಾದ ಆಧಾರ. ಆದುದರಿಂದ ತೃಷ್ಣೆ, ಕ್ರೋಧ ವೃತ್ತಿಗಳನ್ನು ಕಳೆಯಲು ಸ್ವತಂತ್ರ ಸಾಧನೆ ಮಾಡಬೇಕಾಗುವಂತೆ ಭಯ ವೃತ್ತಿಯನ್ನು ಗೆಲ್ಲಲಾದರೂ ಸ್ವತಂತ್ರ ಸಾಧನೆಯನ್ನು ಮಾಡುವುದು ಅಗತ್ಯ. ತೃಷ್ಣೆ, ಕ್ರೋಧ, ಭಯ ಈ ಮೂರೂ ವೃತ್ತಿಗಳು ಇಲ್ಲವಾದರೆ ಪ್ರಜ್ಞೆ ಸ್ಥಿರವಾಗುತ್ತದೆ. ಈ ವೃತ್ತಿಗಳು ಬುದ್ಧಿಯ ಮೇಲೆ ಆಘಾತ

ಮಾಡುತ್ತವೆ. ಆದುದರಿಂದ ಅವುಗಳ ನಿರಾಸವನ್ನು ಇಲ್ಲಿ ಉಪದೇಶಿಸ ಲಾಗಿದೆ. ಈ ಪ್ರಕಾರವಾಗಿ ಈ ಶ್ಲೋಕದಲ್ಲಿ ಸ್ಥಿತಪ್ರಜ್ಞನ ಸ್ಥಿತಿಯ ಮಾನಸ-ಶಾಸ್ತ್ರೀಯ ವಿವೇಚನೆ ಮಾಡಲ್ಪಟ್ಟಿದೆ. ಮುಂದಿನ ಶ್ಲೋಕಗಳಲ್ಲಿ ಪ್ರತ್ಯಕ್ಷವಾಗಿ ಕರ್ಮಯೋಗವನ್ನು ಆಚರಿಸುತ್ತಿರುವಾಗ ಸಂಯಮವನ್ನು ಹೇಗೆ ಸಾಧಿಸಬೇಕೆಂಬುದನ್ನು ಹೇಳಿದೆ.

## ೨೫. ಸ್ಥಿತಪ್ರಜ್ಞತೆಯ ಸುಲಭತರ ಸಾಧನ– ವೃತ್ತಿಗಳ ಸೆಳೆತಕ್ಕೆ ಸಿಕ್ಕಬೇಡಿ

ಯಃ ಸರ್ವತ್ರಾನಭಿಸ್ನೇಹಸ್ತತ್ತತ್ ಪ್ರಾಪ್ಯ ಶುಭಾಶುಭಂ|
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ||

"ಯಃ ಸರ್ವತ್ರ ಅನಭಿಸ್ನೇಹಃ" ಮನವನ್ನು ಎಲ್ಲಿಯೂ ತೊಡಗಿಸ ಕೂಡದು. ಮನಕ್ಕೆ ಎಲ್ಲಿಯೂ ಅಂಟು, ತೊಡಕು, ಮುಚ್ಚಳ ಇರಕೂಡದು. ಮನುಷ್ಯನ ಮನವು ಯಾವುದಕ್ಕಾದರೂ ಅಂಟುತ್ತದೆ. ಕೆಲವರದು ಪುಸ್ತಕಕ್ಕೆ ಅಂಟಿದ್ದರೆ, ಇನ್ನು ಕೆಲವರದು ಹೊಲದಲ್ಲಿ ಮುಳುಗಿರುತ್ತದೆ. ಅದನ್ನು ಎಲ್ಲಿಯೂ ತೊಡಗಿಸಬೇಡಿರೆಂದು ಇಲ್ಲಿ ಹೇಳಿದೆ. ಹಿಂದಿನ ಶ್ಲೋಕದಲ್ಲಿ ಕೆಟ್ಟುದು ಬರಲು ದುಃಖಿಸಬೇಡಿ, ಒಳಿತು ಬರಲು ಸುಖಿಸ ಬೇಡಿ ಎಂದು ಹೇಳಿದೆ. ಇಲ್ಲಿ ಹೇಳಿರುವುದು ಅದಕ್ಕಿಂತಲೂ ಸುಲಭ ಸಾಧನ. ಒಳಿತು ಬಂದಾಗ ಸುಖಿಸಬೇಡಿರೆಂದು ಹೇಳಿಲ್ಲ. ಸುಖಿಸಿರಿ; ಅಡ್ಡಿಯಿಲ್ಲ. ಆದರೆ ಹುರಿದುಂಬಬೇಡಿ. ಹರ್ಷಿತರಾಗಬೇಡಿ, ಹುರ್ರೆನ್ನುತ್ತ ಕುಣಿದಾಡಬೇಡಿ. ಅದರ ಅಭಿನಂದನ ಮಾಡಬೇಡಿ. ಮಗ ಹುಟ್ಟಿದರೆ ಆನಂದವಾಗುತ್ತದೆ; ಆಗಲಿ. ಆದರೆ ಸಕ್ಕರೆ ಹಂಚಬೇಡಿ. ಲಗ್ನವಾಯ್ತು, ಸಂತೋಷವಾಯ್ತು. ಸರಿ. ಆದರೆ ಬ್ಯಾಂಡಿನ ವಾದ್ಯ ಬೇಡ. ಇಷ್ಟೇ ಇಲ್ಲಿ ಹೇಳಿದೆ. ಅದರಂತೆ ಕೆಟ್ಟದು ಒದಗಿದರೆ ಕೆಡಕೆನಿಸುತ್ತದೆ. ಅಡ್ಡಿಯಿಲ್ಲ. ಆದರೆ ಮನದಲ್ಲಿ ಸಂತಾಪವಾಗಕೂಡದು. ಬುದ್ಧಿಗೆ ಕಾವು ತಗಲುವಷ್ಟು ತೀವ್ರವಾಗಬಾರದು ಆ ವಿಕಾರಗಳು. ತೀವ್ರ ವಿಕಾರಗಳು ಬುದ್ಧಿಯ ಮೇಲೆ ಆಘಾತ ಮಾಡುತ್ತವೆ. ಬುದ್ಧಿ ದೃಢವಾಗಿ ಸುರಕ್ಷಿತವಾಗಿ ಉಳಿಯಬೇಕು. ಚಾಣಕ್ಯ ಹೇಳಿದಾನೆ–ನನ್ನದೆಲ್ಲವೂ ಹೋಗಲಿ, ಆದರೆ ಬುದ್ಧಿ ಉಳಿಯಲಿ! "ಬುದ್ಧಿಸ್ತು ಮಾ ಗಾನ್ಮಮ" ಬುದ್ಧಿಯನ್ನು ದೃಢವಾಗಿ

ಉಳಿಸಿಕೊಳ್ಳಿ. ಕರ್ಮಯೋಗಿ ವ್ಯವಹಾರದಲ್ಲಿ ಹೇಗೆ ವರ್ತಿಸಬೇಕೆಂಬುದರ ವಿವರಣೆ ಇದು. ಮನುಷ್ಯನ ವೃತ್ತಿಯಲ್ಲಿ ಸ್ವಲ್ಪವಾದರೂ ಗಾಂಭೀರ್ಯ ವಿದ್ದರೆ, ಅವನಿಗೆ ಇದು ಸಹಜವಾಗಿ ಸಾಧಿಸಬೇಕು. ಮಂಗನಂತೆ ವೃತ್ತಿ ಯಾಗಿದ್ದರೆ, ಸಂಯಮ ಸಾಧಿಸದು. ಮಂಗಗಳು ಆನಂದದಿಂದ ಕೇಕೆ ಹಾಕುತ್ತವೆ, ದುಃಖದಿಂದ ಕಿರಿಚುತ್ತವೆ. ಇಂಥ ವೃತ್ತಿ ಇರದೆ, ಸ್ವಲ್ಪ ಗಾಂಭೀರ್ಯ ಇದ್ದರೆ, ಇದು ಕಠಿಣವೆನಿಸದು.

## ೨೬. ಸ್ಥಿತಪ್ರಜ್ಞತೆಯ ಸುಲಭತಮ ಸಾಧನ: ಇಂದ್ರಿಯಗಳ ನಿಯಮನ ಮಾಡಿ

ಸಂಯಮವನ್ನು ಇನ್ನಷ್ಟು ಸುಲಭ ಮತ್ತು ಸ್ಪಷ್ಟ ಮಾಡಲು ಮುಂದಿನ ಶ್ಲೋಕದಲ್ಲಿ ಆಮೆಯ ಉದಾಹರಣೆಯನ್ನು ಮುಂದಿರಿಸಿ ಇಂದ್ರಿಯನಿಗ್ರಹವನ್ನು ಸೂಚಿಸಲಾಗಿದೆ.

**ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ|**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ||**

ಸಾಮಾನ್ಯವಾಗಿ ಆಮೆ ತನ್ನ ಅವಯವಗಳನ್ನು ಸ್ವೇಚ್ಛೆಯಾಗಿ ಚಾಚಿ ಕೊಂಡಿರುತ್ತದೆ. ಅಪಾಯವನ್ನು ಕಂಡೊಡನೆ ಒಳಕ್ಕೆ ಎಳೆದುಕೊಳ್ಳುತ್ತದೆ. ನಿಮ್ಮ ಇಂದ್ರಿಯಗಳನ್ನು ಹಾಗೆ ವಿಷಯಗಳಿಂದ ಎಳೆದುಕೊಳ್ಳಿ. ಆಮೆ ತನ್ನ ಅವಯವಗಳನ್ನು ಚಾಚಿಕೊಂಡು ಸ್ವೇಚ್ಛೆಯಿಂದ ನಡೆದಾಡುತ್ತಿರುವಾಗ ಅಪಾಯವನ್ನು ಕಂಡೊಡನೆ ಅವನ್ನು ಒಳಗೆ ಎಳೆದುಕೊಳ್ಳುತ್ತದೆ. ಅದರಂತೆ ನೀವೂ ಅಪಾಯಗಳು ಇರುವ ಎಡೆಯಿಂದ ನಿಮ್ಮ ಇಂದ್ರಿಯಗಳನ್ನು ಒಳಗೆ ಎಳೆದುಕೊಳ್ಳಿ. ಅವುಗಳ ಪಾರಮಾರ್ಥಿಕ ಉಪಯೋಗವಿರುವಲ್ಲಿ ಅವನ್ನು ಅವುಗಳಷ್ಟಕ್ಕೆ ಬಿಟ್ಟುಬಿಡಿ. ಇಲ್ಲಿ ಹೇಳಿರುವ ಸಾಧನ ಮತ್ತಷ್ಟು ಸುಲಭ ವಾಗಿದೆ. ಅಪಾಯವಿದ್ದೆಡೆಯಿಂದ ಹಿಂದಕ್ಕೆ ತೆಗೆದುಕೊಳ್ಳಿ. ಅಪಾಯವಿಲ್ಲ ದಲ್ಲಿ ಸ್ವಾತಂತ್ರ್ಯ ಕೊಡಿ. ಎಷ್ಟೊಂದು ಸುಲಭ! ಇದು ಪಶುಗಳಿಗೂ ಗೊತ್ತಾ ಗುತ್ತದೆ. ಆದುದರಿಂದಲೆ ಆಮೆಯ ಉದಾಹರಣೆ ಕೊಟ್ಟಿದೆ. ಆಮೆ ಯಂತಹ ಪ್ರಾಣಿಯೂ ಹೀಗೆ ವರ್ತಿಸುತ್ತದೆ. ನೀವಂತು ಮನುಷ್ಯರು. ಇದು ಗೀತೆಯ ನಿರ್ದೇಶನ.

೨

## ೨೭. ಇಂದ್ರಿಯನಿಯಮನ ವಸ್ತುತಃ ಕಠಿಣವಲ್ಲ

ಸುಲಭವೆಂದು ಹೇಳಿದ ಈ ಮಾತೂ ನಮಗೆ ಕಠಿಣವೆನಿಸುತ್ತದೆ. ಆದರೆ ಮುಖ್ಯತಃ ಈ ಮಾತು ಅಭ್ಯಾಸಕ್ಕೆ ಸಂಬಂಧಿಸಿದ್ದು. ಚಿಕ್ಕಂದಿನಿಂದ ಈ ವೃತ್ತಿ ನಮಗೆ ಅಭ್ಯಾಸವಾಗಿದ್ದರೆ, ಗೀತೆಯ ಈ ಉಪದೇಶವನ್ನು ಅನುಸರಿಸುವುದು ಸ್ವಲ್ಪವೂ ಬಿಗಿಯಾಗದು. ಕೆಲವರು ಹೇಳುವಂತೆ, ಗೀತೆ ಮನುಷ್ಯ ಸ್ವಭಾವಕ್ಕೆ ವಿರುದ್ಧವಾಗಿ ನಡೆಯಲು ಸರ್ವಥಾ ಹೇಳುವುದಿಲ್ಲ. ಚಿಕ್ಕಮಕ್ಕಳ ನೈಸರ್ಗಿಕವಾದ ಸೇರಿಕೆ–ಬೇಸರಿಕೆಗಳು ಶುದ್ಧವಾಗಿಯೆ ಇರುತ್ತವೆ. ನಾವು ಬಲಾತ್ಕಾರದಿಂದ ಅವರ ನಾಲಗೆಗೆ ಸಲ್ಲದ ಪದಾರ್ಥಗಳ ರುಚಿಯನ್ನು ಒದಗಿಸುತ್ತೇವೆ. ಅವರ ರುಚಿಯನ್ನು ನಾವು ವಿಕೃತಗೊಳಿಸುತ್ತೇವೆ, ಕೃತ್ರಿಮವಾಗಿಸುತ್ತೇವೆ. ಚಿಕ್ಕಮಕ್ಕಳಿಗೆ ಸ್ವಾಭಾವಿಕವಾಗಿ ಯಾವುದು ಸೇರುತ್ತದೆಯೋ ಸುಲಭವಾಗಿರುತ್ತದೆಯೋ ಅದನ್ನೇ ಮಾಡಿರೆಂದು ಗೀತೆ ಹೇಳುತ್ತದೆ. ನಾವು ಮಕ್ಕಳಿಗೆ ಕುಶಿಕ್ಷಣವನ್ನಿತ್ತು ಅವರ ರುಚಿಯನ್ನು ಕೆಡಿಸುತ್ತೇವೆ. ಆದುದರಿಂದ ಮತ್ತೆ ವಿರುದ್ಧ ಶಿಕ್ಷಣ ಕೊಟ್ಟು ಅದನ್ನು ಸರಿಪಡಿಸಬೇಕಾಗುತ್ತದೆ. ಕುಶಿಕ್ಷಣದಿಂದ ಮೊದಲು ಇಂದ್ರಿಯಗಳು ಸ್ವೇಚ್ಛಾಚಾರಿಗಳಾಗುತ್ತವೆ. ಆದುದರಿಂದ ಮುಂದೆ ಅವನ್ನು ಹಿಡಿತದಲ್ಲಿಡುವುದು ಕಠಿಣವೆನಿಸುತ್ತದೆ. ಆರಂಭದಿಂದಲೆ ಅವನ್ನು ಒಳ್ಳೆಯದರ ಕಡೆ ತಿರುಗಿಸಿದರೆ ಇಂದ್ರಿಯ ಸಂಯಮ ಸುಲಭವಾಗುತ್ತದೆ. ಜ್ಞಾನದೇವನು ಹೇಳಿದಾನೆ, “ನನ್ನ ಇಂದ್ರಿಯಗಳ ಸ್ವಭಾವವೇ ಒಂದು ಬಗೆಯಾಗಿ ರೂಪುಗೊಂಡಿದೆ. ಯಾವುದನ್ನು ನೋಡಬಾರದೋ ಅದರ ಕಡೆಗೆ ಕಣ್ಣೇ ಹೋಗುವುದಿಲ್ಲ. ಕೇಳಬಾರದುದನ್ನು ಕಿವಿ ಕೇಳುವುದೇ ಇಲ್ಲ.” ಇದು ಬಿಗಿಯಾಗಿ ಏಕೆ ತೋರಬೇಕು ? ಇದು ಬೆಂಕಿಯೆಂದು ಗೊತ್ತಾದರೆ, ಅತ್ತ ಕೈ ಹೋದೀತೆ ? ಬೆಂಕಿಯಲ್ಲಿ ಕೈಹಾಕುವುದೇ ಆದರೆ ವಿಚಾರದಿಂದ ಮನವನ್ನು ಗಟ್ಟಿಮಾಡಿ ಹಾಕುತ್ತೇವೆ. ಅದರಂತೆಯೆ ಅಪಾಯವಿದೆ ಎಂದು ನಿಶ್ಚಯವಾಗಿ ತೋರುತ್ತಿರುವಲ್ಲಿ ಇಂದ್ರಿಯಗಳು ಸರ್ವಥಾ ಹೋಗವು. ಅಪಾಯದತ್ತ ಇಂದ್ರಿಯಗಳನ್ನು ಹರಿಯಬಿಡುವುದೇ ಕಠಿಣವಾಗಿ ತೋರಬೇಕು. ಆದರೆ ಕುಶಿಕ್ಷಣವು ನಮ್ಮ ಸ್ಥಿತಿಯನ್ನು ಇದಕ್ಕೆ ವಿಪರೀತವಾಗಿ ಮಾಡಿದೆ.

ಯಾವುದು ಕಠಿಣವೋ ಅಸ್ವಾಭಾವಿಕವೋ ಅದೇ ನಮಗೆ ಸ್ವಾಭಾವಿಕವೂ ಸುಲಭವೂ ಆಗಿ ಕಾಣಿಸುತ್ತದೆ. ಇವಕ್ಕೆ ಗೀತೆಯು ಉಪಾಯವಿಲ್ಲ. ಗೀತೆಯ ದೃಷ್ಟಿಯಿಂದ ಚಿಕ್ಕಮಕ್ಕಳಿಗೂ ಸಾಧ್ಯವಾಗಬಹುದಾದ ಸಾಧನ ಇಲ್ಲಿ ಹೇಳಲ್ಪಟ್ಟಿದೆ. ಸಮಾಜದ ಸ್ವಾಭಾವಿಕ ಅವಸ್ಥೆಯಲ್ಲಿ ಇಂದ್ರಿಯ ಜಯ ಕಠಿಣವಾಗುವುದಿಲ್ಲವೆಂಬುದರಲ್ಲಿ ಸಂಶಯವಿಲ್ಲ.

## ೨೮. ಇಂದ್ರಿಯ ನಿಯಮನದ ಎರಡು ಪ್ರಕಾರಗಳು: ಸಂಯಮ–ನಿಗ್ರಹ

ಆದರೆ ಇಂದ್ರಿಯ-ಸಂಯಮ, ಇಂದ್ರಿಯ-ನಿಗ್ರಹ ಈ ಎರಡು ಪ್ರಕಾರಗಳಿಂದ ಇಂದ್ರಿಯ-ಜಯವು ಸೂಚಿಸಲ್ಪಡುತ್ತದೆ. ಈಯೆರಡು ಪ್ರಕಾರಗಳ ವಿವೇಚನೆಯನ್ನು ಸ್ವಲ್ಪ ಮಾಡುವ. ಇಂದ್ರಿಯನಿಗ್ರಹ ಕೆಲವೊಂದು ಸಮಯದ ಮಟ್ಟಿಗೆ ಇರುವಂಥದು. ಇಂದ್ರಿಯಸಂಯಮ ಇಡಿಯ ಜೀವನದ ತತ್ತ್ವ. ಉದಾ: ನನಗೆ ಸಿಹಿ ತಿನ್ನುವ ಅಪೇಕ್ಷೆ ಇದೆ. ಸಿಹಿ ತಿನ್ನುವುದೇ ಕೆಟ್ಟುದು ಎಂದಲ್ಲ. ಆದರೆ ಸಿಹಿಯ ಮೋಹ ಕೆಟ್ಟುದು. ಆದುದರಿಂದ ನಾನು ಕೆಲವೊಂದು ಕಾಲದವರೆಗೆ ಸಿಹಿ ತಿನ್ನುವುದನ್ನು ಸಂಪೂರ್ಣವಾಗಿ ಬಿಟ್ಟುಬಿಡುತ್ತೇನೆ. ಇದರಲ್ಲಿ ನನ್ನ ಉದ್ದೇಶ ನನ್ನನ್ನು ಶಿಕ್ಷಿತನಾಗಿ ಮಾಡುವುದು, ತಿದ್ದುವುದು, ದಾಂತಗೊಳಿಸುವುದು. ಇಂದ್ರಿಯಗಳನ್ನು ದಾಂತಗೊಳಿಸಲು, ವಶದಲ್ಲಿ ಇರಿಸಲು, ಕೆಲವೊಂದು ಕಾಲ ನಾವು ನಿಗ್ರಹ ಮಾಡುತ್ತೇವೆ. ಸಿಹಿ ತಿನ್ನುವುದು ತಪ್ಪೇನೂ ಅಲ್ಲ. ಆರೋಗ್ಯಕ್ಕೆ ಸಿಹಿ ಆವಶ್ಯಕವೂ ಇರಬಹುದು. ಆದರೆ ಸಿಹಿಯ ಅಪೇಕ್ಷೆಯನ್ನು ಮಿತಿಯಲ್ಲಿ ಇಟ್ಟುಕೊಳ್ಳಲು ಕೆಲವೊಂದು ಕಾಲದವರೆಗೆ ಅದನ್ನು ನಿಗ್ರಹಿಸಿದೆ. ಆ ಕಾಲ ಕಳೆದ ಮೇಲೆ ಮತ್ತೆ ಸಿಹಿಯನ್ನು ತಿನ್ನತೊಡಗುತ್ತೇನೆ. ಆದರೆ ಅಳೆದು ತೂಗಿ. ಇದು ಸಂಯಮ. ಅದರಂತೆಯೆ ಮೌನದ ಉದಾಹರಣೆ ತೆಗೆದುಕೊಳ್ಳುವ. ಮೌನ ಕೆಲವೊಂದು ಕಾಲ ಮಾಡುವ ಸಾಧನೆ. ನಿಯಮಿತವಾಗಿ, ಅಗತ್ಯವಿದ್ದಷ್ಟನ್ನೆ ತಿನ್ನುವುದು ನಿತ್ಯದ ಸಾಧನೆ. ಮನುಷ್ಯನ ಪರೀಕ್ಷೆಯೂ ಇದರಲ್ಲಿಯೆ ಇರುತ್ತದೆ. ಗುಜರಾತಿಯಲ್ಲಿ ಒಂದು ಮಾರ್ಮಿಕವಾದ ಗಾದೆ ಇದೆ:—'ಮಾಣಸನೀ ಪರೀಕ್ಷಾ ಖಾಟಲೇ, ನೇ, ಪಾಟಲೇ,' ಮಣೆಯ ಮೇಲೆ, ಮಂಚದ ಮೇಲೆ

ಎಂದರೆ ಉಣ್ಣುವಾಗ, ಬೇನೆಬಂದಾಗ ಮನುಷ್ಯನ ಪರೀಕ್ಷೆ. ಊಟದಲ್ಲೂ ಬೇನೆಯಲ್ಲೂ ಮನುಷ್ಯನ ಸ್ವಭಾವದ ದೋಷಗಳೆಲ್ಲವೂ ಪ್ರಕಟವಾಗುತ್ತವೆ. ಮನುಷ್ಯ ಮಿತಿಗೆಟ್ಟು ತಿನ್ನಲೂ ಬಲ್ಲ, ಅಥವಾ ಏನೂ ತಿನ್ನದೆಯೂ ಇರಲೂ ಬಲ್ಲ. ಆದರೆ ಮಿತವಾಗಿ ತಿನ್ನುವುದು ಮಾತ್ರ ಅವನಿಗೆ ಸಹಸಾ ಸಾಧಿಸುವುದಿಲ್ಲ. ಎರಡು ತುದಿಗಳು ಸಾಧಿಸಬಲ್ಲುವು. ಮಧ್ಯಸ್ಥಿತಿ ಸಾಧಿಸುವುದಿಲ್ಲ. ಇಂದ್ರಿಯಗಳನ್ನು ಮಧ್ಯಸ್ಥವಾಗಿಸುವುದು ಸಂಯಮ. ಹಲಕೆಲವು ಸಲ ಸಂಯಮಕ್ಕೋಸುಗ ಅವನ್ನು ಎರಡನೆಯ ತುದಿಗೆ ಒಯ್ಯುವುದು ನಿಗ್ರಹ. ನಿಗ್ರಹದ ಉಪಯೋಗವೂ ಸ್ಪಷ್ಟವಾಗಿದೆ. ಅದು ನಿತ್ಯಧರ್ಮವಲ್ಲ.

## ೨೯. ಅವುಗಳ ಇನ್ನೊಂದಿಷ್ಟು ವಿವರಣೆ

ನಿಗ್ರಹ ಪ್ರಾಸಂಗಿಕವೆಂದೂ ಸಂಯಮ ನಿತ್ಯವೆಂದೂ ನಾವು ಭೇದವನ್ನು ಕಲ್ಪಿಸಿದೆವು. ಹೀಗೆ ನಾವು ಮಾಡಿದುದು ತಾರತಮ್ಯ ದೃಷ್ಟಿಯಿಂದ ಎಂದು ತಿಳಿಯಬೇಕು. ಏಕೆಂದರೆ, ನಿಗ್ರಹವೂ ಸಂಯಮದಂತೆ ನಿತ್ಯವಾಗಿರಬಲ್ಲುದೆಂಬುದು ಸ್ವಲ್ಪ ವಿಚಾರದಿಂದ ಗೊತ್ತಾಗಬಹುದು. ಉಪವಾಸ ಪ್ರಾಸಂಗಿಕವೆಂದೂ ಮಿತಾಹಾರ ನಿತ್ಯವೆಂದೂ ನಾವು ನೋಡಿದೆವು. ಆದರೆ ಒಬ್ಬ ಮನುಷ್ಯ ದಿನಾಲು ತನ್ನದೊಂದು ಕ್ಲುಪ್ತವಾದ ವೇಳೆಯಲ್ಲಿಯೆ ತಿನ್ನುವ ನಿಯಮವನ್ನು ಇಟ್ಟುಕೊಂಡಿರುವನೆಂದು ತಿಳಿಯಿರಿ. ಇಂತಹ ನಿಯಮವನ್ನು ಇಟ್ಟುಕೊಳ್ಳುವುದು ಇಷ್ಟವೇ. ನಡುವೆ ಯಾರಾದರೂ ತಿನ್ನಲು ತಂದರೆ ಅವನು ತಿನ್ನುವುದಿಲ್ಲ. ಇದು ನಿಗ್ರಹ. ಅದು ಪ್ರಾಸಂಗಿಕವಾಗಿರದೆ ನಿತ್ಯದ್ದೆಂಬುದು ಸ್ಪಷ್ಟ. ಅದರಂತೆಯೆ ಮೌನದ್ದು. ಮೌನವು ಸಾಮಾನ್ಯತಃ ಪ್ರಾಸಂಗಿಕ. ಆದರೆ ವಾಣಿಯನ್ನು ನಿಗ್ರಹ ಮಾಡುವ ಪ್ರಸಂಗ ದಿನಾಲು ಬರುವ ಸಂಭವ ಬಹಳ. ಯಾರಾದರೂ ಏನನ್ನಾದರೂ ಎಂದರೆ, ಅದಕ್ಕೆ ಉತ್ತರಕೊಡುವುದಕ್ಕಿಂತ ಮಾತಿನ ವೇಗವನ್ನು ತಡೆವುದೇ ಅನೇಕ ಸಲ ಅವಶ್ಯವಾಗುತ್ತದೆ. ವಾಣಿಯನ್ನು ಹೀಗೆ ನಿಗ್ರಹಿಸುವುದು ನಿತ್ಯದ ವಸ್ತುವೇ ಅಲ್ಲವೆ? ನಿಗ್ರಹ-ಸಂಯಮಗಳೆರಡನ್ನೂ ನಿತ್ಯವೂ ಆಚರಿಸಬೇಕಾಗುತ್ತದೆಂದು ಇದರ ಅರ್ಥವಾಯ್ತು. ಭೇದಮಾಡಿದುದು ಕೇವಲ ತಾರತಮ್ಯ ದೃಷ್ಟಿಯಿಂದ. ವಾಸ್ತವಿಕವಾಗಿ ಮೂಲದಲ್ಲಿ ಎರಡೂ ಒಂದೇ. ನಿಗ್ರಹದಲ್ಲೂ ಸಂಯಮ

ದಲ್ಲೂ ಸ್ವಂತದ ಮೇಲೆ ಅಂಕುಶ ಸಮಾನವಸ್ತು. ಸಾರಾಂಶ, ಸಂಯಮ-ನಿಗ್ರಹಗಳ ಸೂಕ್ಷ್ಮ ಭೇದವನ್ನು ಮೊದಲು ಲಕ್ಷ್ಯದಲ್ಲಿ ತಂದು, ಬಳಿಕ ಅದನ್ನು ಮರೆವುದೇ ಲೇಸು. ಆದರೆ 'ನಿಗ್ರಹ' ಶಬ್ದದ ವಿಷಯದಲ್ಲಿ ಇನ್ನಷ್ಟು ವಿವರಣೆ ಅವಶ್ಯ. ನಿಗ್ರಹದಲ್ಲಿ ಬಲಾತ್ಕಾರದ ಭಾವ ಬರುತ್ತದೇನೊ ಎಂದು ತೋರುತ್ತದೆ. ಇಂದ್ರಿಯ ನಿಗ್ರಹ ಶಬ್ದದಲ್ಲಿ ಅಂತಹ ಬಲಾತ್ಕಾರ ಸೂಚಿತವಾಗಿಲ್ಲ. ಶಬಕ್ಕೆ ಅರ್ಥದ ಭಾರವಾಗುವುದಿಲ್ಲ. ಆದುದರಿಂದ ಅದು ಪ್ರಸಂಗೋಚಿತವಾಗಿ ಅನೇಕ ಅರ್ಥಗಳಲ್ಲಿ ಉಪಯೋಗಿಸಲ್ಪಡುತ್ತದೆ.

## ೩೦. ಗೀತೆಗೆ ತೋರುವ ಇಂದ್ರಿಯಜಯದ ಮಹತ್ತ್ವ

ಇಲ್ಲಿಗೆ ಸ್ಥಿತಪ್ರಜ್ಞನ ಮುಖ್ಯ ಲಕ್ಷಣ, ಅದರ ಮೂರು ವಿವರಣೆಗಳು ಮುಗಿದುವು. ಮುಂದಿನ ಹತ್ತು ಶ್ಲೋಕಗಳಲ್ಲಿ ಈ ವಿವರಣೆಗಳಲ್ಲಿಯ ಕೊನೆಯದಾದ ಕ್ರಿಯಾತ್ಮಕ ಸುಲಭಸಾಧನದ, ಇಂದ್ರಿಯಜಯದ ವ್ಯಾಖ್ಯಾನವಿದೆ. ಗೀತೆಗೆ ಇದರ ಮಹತ್ತ್ವ ಬಹಳವೆನಿಸುತ್ತದೆ. ಆದುದರಿಂದ ಅನೇಕ ಅಧ್ಯಾಯಗಳಲ್ಲಿ ಅದರ ವಿವೇಚನೆ ಬಂದಿದೆ. ಮೂರನೆಯ ಅಧ್ಯಾಯದಲ್ಲಿ ಕರ್ಮಯೋಗದ ವಿವೇಚನೆ ಮಾಡಿದ ಬಳಿಕ ಇಂದ್ರಿಯ ಜಯದ ಸ್ವತಂತ್ರ ಪ್ರಕರಣವನ್ನೇ ಒಂದನ್ನು ಕೊಡಲಾಗಿದೆ. ಇಲ್ಲಿ ಇನ್ನು ಮುಂದೆ ಈ ವಿಷಯದ ವಿಜ್ಞಾನವನ್ನು, ತತ್ತ್ವಜ್ಞಾನವನ್ನು ಹೇಳಬೇಕಾಗಿದೆ. 'ಹೇಗೆ' ಎಂಬ ಪ್ರಶ್ನೆಗೆ ಉತ್ತರವನ್ನು ವಿಜ್ಞಾನ ಹೇಳುತ್ತದೆ. 'ಏಕೆ' ಎಂಬ ಪ್ರಶ್ನೆಯನ್ನು ತತ್ತ್ವಜ್ಞಾನ ಬಿಡಿಸುತ್ತದೆ. ಇಂದ್ರಿಯ ನಿಗ್ರಹವನ್ನು ಹೇಗೆ ಮಾಡಬೇಕು; ಏಕೆ ಮಾಡಬೇಕು? ಎಂದರೆ ಪ್ರಜ್ಞೆಯ ಸ್ಥಿರತೆಗೂ ಅದಕ್ಕೂ ಏನು ಸಂಬಂಧ? ಈ ಎರಡೂ ಮೀಮಾಂಸೆಗಳನ್ನು ಇನ್ನು ಮುಂದೆ ನಾವು ತಿಳಿಯಬೇಕಾಗಿದೆ.

# ೪ನೆಯ ವ್ಯಾಖ್ಯಾನ

## ೧

### ೩೧. ಇಂದ್ರಿಯಜಯದ ವಿಜ್ಞಾನದ ಪ್ರಸ್ತಾವನೆ

ಸ್ಥಿತಪ್ರಜ್ಞನ ಲಕ್ಷಣಗಳೆಂಬುದು ವಸ್ತುತಃ ಮೊದಲಿನ ನಾಲ್ಕು ಶ್ಲೋಕಗಳಲ್ಲಿಯೆ ಮುಗಿಯಿತು ಇನ್ನು ಮುಂದೆ ಇಂದ್ರಿಯ-ನಿಗ್ರಹದ ವಿಜ್ಞಾನವನ್ನು ತತ್ತ್ವಜ್ಞಾನವನ್ನು ನೋಡಬೇಕು. ಮೊದಲು ಮೂರು ಶ್ಲೋಕಗಳಲ್ಲಿ ವಿಜ್ಞಾನ ಹೇಳಲ್ಪಟ್ಟಿದೆ. ಈ ವರೆಗೆ ಉತ್ತರೋತ್ತರ ಸುಲಭ ಸಾಧನಗಳು ತೋರಿಸಲ್ಪಟ್ಟಿವೆ. (೧) ಕಾಮನೆಗಳನ್ನೆ ಬಿಡಿರೆಂದು ಮೊದಲು ಹೇಳಲಾಯಿತು (೨) ಅನಂತರ ಕಾಮನೆಗಳ ಪರಿಣಾಮ ಆಗಗೊಡಬೇಡಿ, ತೃಷ್ಣೆ, ಕ್ರೋಧ, ಭಯಗಳಲ್ಲಿ ಕಾಮನೆಗಳ ಪರ್ಯವಸಾನವಾಗಗೊಡಬೇಡಿ ಎಂದು; (೩) ತರುವಾಯ, ಪರಿಣಾಮವಾದರೂ ಅದನ್ನು ವಶದಲ್ಲಿಡಿ, ಬುದ್ಧಿಯ ಮೇಲೆ ಅದರ ಆಕ್ರಮಣವಾಗಗೊಡಬೇಡಿ ಎಂದು, (೪) ಕೊನೆಯಲ್ಲಿ, ಇಂದ್ರಿಯಗಳನ್ನೆ ಬಿಗಿಹಿಡಿಯಿರೆಂದು ಹೇಳಲಾಯಿತು. ಈ ಬಗೆಯಾಗಿ ಬೇರೆ ಬೇರೆ ವ್ಯೂಹಗಳಿಂದ ವಿವರಣೆ ಮಾಡಲ್ಪಟ್ಟಿತು. ಸಾಧನೆಯ ಆರಂಭವನ್ನು ಹೇಗೆ ಮಾಡಬೇಕೆಂಬುದನ್ನು ತೋರಿಸಲು ಈ ವಿವರಣೆ ಮಾಡಲ್ಪಟ್ಟಿತು. ಸಾಧನೆಯ ಕೊನೆಯ ಮೆಟ್ಟಿಲನ್ನು ಮುಟ್ಟದೆಯೆ ಸ್ಥಿತ-ಪ್ರಜ್ಞತೆ ಪ್ರಾಪ್ತವಾಗುತ್ತದೆಂದು ಇದರ ಅರ್ಥವಲ್ಲ. ಎಲ್ಲಕ್ಕೂ ಸುಲಭವಾದ ಸಾಧನೆ ಎಂದು ಕೊನೆಯಲ್ಲಿ ಇಂದ್ರಿಯಗಳನ್ನು ಬಿಗಿಹಿಡಿಯಲು ಹೇಳಲಾಯ್ತು. ಆದರೆ ನಿಗ್ರಹ, ಸಂಯಮ ಈ ಎರಡೂ ಅರ್ಥಗಳಿಂದ ಇಂದ್ರಿಯಗಳನ್ನು ಬಿಗಿಹಿಡಿಯಲು ಬಂದರೂ, ಅಷ್ಟರಿಂದ ಮನುಷ್ಯ ಸ್ಥಿತಪ್ರಜ್ಞನಾಗನು. ಇಷ್ಟೇ ಅಲ್ಲ, ಅಷ್ಟರಿಂದ ವಸ್ತುತಃ ಇಂದ್ರಿಯ-ಜಯವೂ ಪೂರ್ಣವಾಗದು. ಇಂದ್ರಿಯಗಳನ್ನು ಬಿಗಿಹಿಡಿಯಲು ಬಂದರೆ, ಅದನ್ನು ಉಪಯೋಗಿಸಿಕೊಂಡು ಒಳಗಿನ ಕಾಮನೆಯನ್ನೆ ಕತ್ತರಿಸಿ ಹಾಕಬೇಕು. ನಾನು ಸಂಕಲ್ಪಿಸಿದಂತೆ ಇಂದ್ರಿಯಗಳು ನಡೆಯುತ್ತವೆ ಎಂಬ ಅನುಭೂತಿಯಿಂದ ನನಗೆ ದೊರೆವ ಶಕ್ತಿಯಿಂದ ಕಾಮನೆಗಳ ಬೀಜವನ್ನೆ ನಿರ್ಜೀವ

ಗೊಳಿಸಬೇಕು. ಈ ಕಾಮನೆಯ ಬೀಜ ನಷ್ಟವಾದಾಗಲೇ ಇಂದ್ರಿಯ-ನಿಗ್ರಹ ಸಾಧ್ಯವಾಯ್ತೆಂದು ತಿಳಿಯಬೇಕು. ನಮ್ಮ ಇಂದ್ರಿಯ ನಿಗ್ರಹದ ಒರೆಗಲ್ಲು ಇಷ್ಟೊಂದು ಸೂಕ್ಷ್ಮವಾಗಿದೆ. ಅದನ್ನೆ ಈಗ ಒಂದು ಶ್ಲೋಕದಲ್ಲಿ ಹೇಳಲಾಗಿದೆ. ಇದು ಇಂದ್ರಿಯ ನಿಗ್ರಹದ ವಿಜ್ಞಾನದ ಆರಂಭ.

## ೩೨. ನಿರಾಹಾರ ಪ್ರಾಥಮಿಕ ಸಾಧನೆ, ರಸನಿವೃತ್ತಿ ಪೂರ್ಣತೆ

**ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ |**
**ರಸವರ್ಜ್ಯಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ||**

"ನಿರಾಹಾರದ ಸಾಧನೆಯಿಂದ ವಿಷಯಗಳು ತೊಲಗುತ್ತವೆ. ಆದರೂ ಸವಿ ಹಾಗೆಯೆ ಉಳಿಯುತ್ತದೆ. ಅದೂ ಮುಂದೆ ಪರ-ದರ್ಶನದಿಂದ ನಿವೃತ್ತವಾಗುತ್ತದೆ," ಇದು ಈ ಶ್ಲೋಕದ ಭಾವಾರ್ಥ. ವಿಷಯಗಳು ತೊಲಗಿದುವು, ವಿಷಯಗಳತ್ತ ಬಿಡದೆ ಇಂದ್ರಿಯಗಳನ್ನು ಬಿಗಿಹಿಡಿದುದಾಯಿತು; ಇಷ್ಟರಿಂದಲೇ ಇಂದ್ರಿಯಜಯ ಪೂರ್ಣವಾಯ್ತೆಂದು ತಿಳಿಯಲಾಗದು. 'ನಿರಾಹಾರ' ಶಬ್ದದಲ್ಲಿಯ 'ಆಹಾರ'ದ ಅರ್ಥ ರಸನೆಯ ಆಹಾರವೆಂದಂತೂ ಸೈ, ಆದರೆ ಅದರ ಹೊರ್ತು ಎಲ್ಲ ಇಂದ್ರಿಯಗಳ ಭೋಗವೂ ಎಂಬ ವ್ಯಾಪಕ ಅರ್ಥವೂ ಉಂಟು. ಈ ಶಬ್ದ ಇಲ್ಲಿ ಉಪಲಕ್ಷಣಾತ್ಮಕ. ಇಂದ್ರಿಯಗಳ ಆಹಾರದ ನಿಗ್ರಹ ಪ್ರಾಥಮಿಕ ಸಾಧನೆ. ಇಷ್ಟರಿಂದ ಸಾಧನೆ ಮುಗಿಯಿತೆಂದಲ್ಲ. ಇದು ಪ್ರಾರಂಭ ಮಾತ್ರ. ಬಾಹ್ಯ-ಇಂದ್ರಿಯನಿಗ್ರಹವಾದುದರಿಂದ ಒಳಗಿನ ಸವಿಯನ್ನು ಬಿಡುವ ಸಿದ್ಧತೆಯನ್ನು ಆರಂಭಿಸಲು ಯೋಗ್ಯತೆ, ಶಕ್ಯತೆ ಪ್ರಾಪ್ತವಾಯ್ತು. ಆಂತರಿಕ ಸಾಧನೆಯ ಆರಂಭವಾಯ್ತು. ಒಳಗಿನ ಸವಿ ಹೋದ ಬಳಿಕವೇ ಸಾಧನೆ ಪೂರ್ಣವಾಗುವುದು. ಬಾಹ್ಯ ಇಂದ್ರಿಯ ನಿಗ್ರಹ ಒಳಗಿನ ಸವಿಯನ್ನು ಬಿಡುವ ಶಕ್ಯತೆಯನ್ನು ನಿರ್ಮಿಸುತ್ತದೆ. ಆದುದರಿಂದ ಗೀತೆ ಸ್ಥಿತಪ್ರಜ್ಞನ ಲಕ್ಷಣಗಳಲ್ಲಿ ಅದನ್ನು ಸಮಾವೇಶಮಾಡಿದೆ.

## ೩೩. ಪೂರ್ಣ ವ್ಯಾಖ್ಯೆಯೊಡನೆ ಪ್ರಾಥಮಿಕ ಸಾಧನೆಯನ್ನು ತೋರಿಸುವ ಗೀತೆಯ ಗುರು-ದೃಷ್ಟಿ

ತತ್ತ್ವಜ್ಞಾನಿಯ ದೃಷ್ಟಿಯಿಂದ ಹೇಳುವುದಾದರೆ, ಎಲ್ಲ ಕಾಮನೆಗಳನ್ನು ಬಿಡಬೇಕೆಂದು ಹೇಳಿದರೆ ಸಾಕು. ಆರಂಭದ ಸ್ಥಿತ-ಪ್ರಜ್ಞನ

ವ್ಯಾಖ್ಯೆ ತತ್ತ್ವಜ್ಞಾನಿಯ ಭಾಷೆಯಲ್ಲಿ ಮಾಡಲ್ಪಟ್ಟಿದೆ. ಆದರೆ ತತ್ತ್ವಜ್ಞಾನಿಯ ರೀತಿ ಬೇರೆ. ಶಿಕ್ಷಕನ ರೀತಿ ಬೇರೆ. ಶಿಕ್ಷಕ ವಿದ್ಯಾರ್ಥಿಯ ಹಿನ್ನೆಲೆಯನ್ನು, ಅಧಿಕಾರವನ್ನು ಲಕ್ಷ್ಯದಲ್ಲಿಟ್ಟು ಮಾತಾಡುತ್ತಾನೆ. ಅಂತಿಮ ಸಾಧನೆ ಪೂರ್ಣವಾದ ಹೊರ್ತು ಯೋಗ್ಯತಾ-ಪತ್ರ ದೊರೆಯದು ಎಂದು ಗಟ್ಟಿಯಾಗಿ ಹೇಳುವುದಲ್ಲದೆ, ಇಂದಿನ ಪಾಠ ಯಾವುದೆಂಬುದನ್ನೂ ಹೇಳುತ್ತ ಹೋಗುತ್ತಾನೆ. ಆತ ಶಾಸ್ತ್ರೀಯತೆಯನ್ನೂ ಇಟ್ಟುಕೊಳ್ಳುತ್ತಾನೆ. ಕನಿಕರದಿಂದ ಹುಡುಗನಿಗೆ ಉತ್ಸಾಹವೂ ಧೈರ್ಯವೂ ಉಂಟಾಗುವಂತೆ ಸಾಧನವನ್ನು ಹೇಳುತ್ತಾನೆ. ಗೀತೆಯ ಪದ್ಧತಿಯೂ ಹೀಗೆಯೆ ವತ್ಸಲತೆಯದು. ಅಮೆಯ ಉದಾಹರಣೆ ಮೊದಲನೆಯ ಪಾಠ. ಒಂದು ಪಾಠವಾದ ಬಳಿಕ ಮುಂದಿನದು. ಹೀಗೆ ಗುರುವಿನ ವಾತ್ಸಲ್ಯದಿಂದ ಗೀತೆ ಒಂದೊಂದು ಹೆಜ್ಜೆ ಮುಂದೆ ಒಯ್ಯುತ್ತದೆ. ದಯಾಳುಗಳಾದ ಸಂತರಂತೂ ಈಶ್ವರ–ನಾಮವನ್ನು ಭಕ್ತಿಪೂರ್ವಕವಾಗಿ ಒಮ್ಮೆಯಾದರೂ ಉಚ್ಚರಿಸುವವನು ಮೋಕ್ಷಾಭಿಮುಖನಾಗುವನೆಂದು ಆಶ್ವಾಸನ ಕೊಟ್ಟಿದಾರೆ. ಆತನ ಮುಖ ಇಷ್ಟವಾದ ದಿಶೆಯ ಕಡೆಗೆ ಹೊರಳಿತು. ಇಷ್ಟರಿಂದ ಅವನು ಗುರಿ ಮುಟ್ಟಿದನೆಂದಲ್ಲ. ಆದರೆ ದಿಶೆ ಗೊತ್ತಾದರೆ, ಆಶೆ ಉಂಟಾಗುತ್ತದೆ. ಆಸೆಯನ್ನು ಬೆಳೆಯಿಸುತ್ತ ಬೆಳೆಯಿಸುತ್ತ ಗುರಿಯನ್ನು ಮುಟ್ಟಿಸುವುದು ಗುರುದೃಷ್ಟಿ.

## ೩೪. ಪ್ರಾಥಮಿಕ ಸಾಧನೆ ಅಪೂರ್ಣವೆಂಬುದು ಸ್ಪಷ್ಟ, ಆದರೆ ಅದು ದಂಭವಲ್ಲ

ಒಳಗಿನ ರಸ ಇಲ್ಲದಂತಾಗುವವರೆಗೆ ಪ್ರಯತ್ನ ನಡೆಯಬೇಕು ಎಂಬುದು ಹೇಳಬೇಕಾದ ಮುಖ್ಯ ಮಾತು. ಆವರೆಗೆ ಏನು? ಆವರೆಗೆ ಹೊರಗಿನ ಇಂದ್ರಿಯಗಳನ್ನು ಬಿಗಿಹಿಡಿಯಬೇಕು. ಹೀಗೆಂದರೆ, ಇದು ದಂಭವಾಗುತ್ತದೆಂದು ಕೆಲವರು ಹೇಳುತ್ತಾರೆ. ಆತ್ಮನಾಶ ಮಾಡಿಕೊಳ್ಳ ಬಯಸುವವನು ಈ ತಾರ್ಕಿಕರ ಮಾತಿಗೆ ಬೇಕಾದರೆ ಕಿವಿಗೊಡಬೇಕು. ಸಾಧಕನ ಮೇಲೆ ದಂಭದ ಆರೋಪ ಮಾಡಬೇಕೆಂದರೆ, ಅಥವಾ ಮಾಡಿದರೆ ಅದು ಸಿದ್ಧವಾಗುವುದು ಆಗಲೆ. ಏಕೆಂದರೆ, ಸಾಧನೆ ಪೂರ್ಣವಾಗುವವರೆಗೆ ಅವನ ಪ್ರಯತ್ನ ನಡೆವೇ ಇರುತ್ತದೆ. ಆವರೆಗೆ ಅವನ ಮನೋವಸ್ಥೆಯಲ್ಲಿಯೂ ಆಚಾರದಲ್ಲಿಯೂ ವ್ಯತ್ಯಾಸ ತೋರುತ್ತಲೇ ಇರುತ್ತದೆ. ಅವನು

ಪ್ರಾರ್ಥನೆಯಲ್ಲಿ ಇದ್ದರೂ ಅವನ ಮನವು ಅತ್ತಿತ್ತ ಹರಿದಾಡುತ್ತದೆ. ಹೀಗಾದರೆ, ಅವನು ಪ್ರಾರ್ಥನೆಯನ್ನೇ ಮಾಡಕೂಡದು, ಪ್ರಾರ್ಥನೆಯಲ್ಲಿ ದಂಭವಿದೆ ಎನ್ನಬೇಕಾದೀತು. ಅವನು ತೋರಿಕೆಗಾಗಿ ಪ್ರಾರ್ಥನೆಯ ಸೋಗು ಮಾಡುತ್ತಾನೆ ಎಂದು ಸಿದ್ಧಮಾಡಲು ಬರುವಂತಿದ್ದರೆ ಮಾತ್ರ ದಂಭದ ಆರೋಪ ಸಿದ್ಧವಾಗಬಹುದು. ಆದರೆ ತೋರಿಕೆಗಾಗಿ ಆತ ಪ್ರಾರ್ಥನೆ ಮಾಡುವುದಿಲ್ಲ. ದಂಭದ ಉದ್ದೇಶ ಇದ್ದ ಹೊರತು ದಂಭ ಸಿದ್ಧವಾಗುವುದೆಂತು ? ಮನವನ್ನು ಬಿಗಿಹಿಡಿಯಲು ಬರುವವರೆಗೆ ಇಂದ್ರಿಯ ಗಳನ್ನು ಬಿಗಿಹಿಡಿವುದರಲ್ಲಿ ದಂಭವಿದೆ ಎಂಬ ಅರ್ಥವನ್ನು ಕೆಲವರು ಈ ಶ್ಲೋಕದಲ್ಲಿ ಕಾಣುವುದುಂಟು. ಆದರೆ ಅದು ಸರಿಯಲ್ಲ. "ರಸಂ ತ್ವಸ್ಯ ಪರಂ ದೃಷ್ಟ್ವಾ ನಿವರ್ತತೇ" ಎಂದಿದ್ದರೆ ಈ ಬಗೆಯ ಅರ್ಥ ಹೊರಡಬಹು ದಾಗಿತ್ತು. ಆದರೆ 'ರಸೋಽಪಿ' ಎಂದಿದಾರೆ. 'ಅಪಿ' ಶಬ್ದದಿಂದ ಇಂದ್ರಿಯ ಗಳನ್ನು ಬಿಗಿಹಿಡಿವುದೇ ಮಹತ್ವದ್ದೆಂದು ಸೂಚಿಸಲ್ಪಟ್ಟಿದೆ. ಆದರೆ ಅಷ್ಟರಿಂದ ಸಾಧನೆ ಪೂರ್ಣವಾಗದು, ರಸ ನಷ್ಟವಾಗಬೇಕು, ಇಷ್ಟು ಅರ್ಥ ಅದರಲ್ಲಿ ತುಂಬಿದೆ. ರಸ ನಷ್ಟವಾಗದೆ ಆಗುವ ಇಂದ್ರಿಯ ನಿಗ್ರಹವನ್ನು ಬೇಕಾ ದರೆ ಕುಂಟ ನಿಗ್ರಹ ಎನ್ನಬಹುದು. ಆದರೆ ಅದು ಸರ್ವಥಾ ದಂಭವಲ್ಲ. ಇಂದ್ರಿಯ ನಿಗ್ರಹದ ಅರ್ಥ ಸ್ಥೂಲ, ಸೂಕ್ಷ್ಮ—ಹೀಗೆ ಎರಡು ಬಗೆ. ಎರಡೂ ಬಗೆಯ ನಿಗ್ರಹವನ್ನು ಮಾಡಿ ಕೊನೆಗೆ ಸ್ಥಿತಪ್ರಜ್ಞನ ಮೂಲ ವ್ಯಾಖ್ಯೆಯ ವರೆಗೆ ಒಯ್ದು ನಿಲ್ಲಿಸಬೇಕಾಗಿದೆ.

### ೩೫. ಸಾಧನೆಯ ಪೂರ್ಣತೆ ಪರದರ್ಶನ–ಎಂದರೆ ಆತ್ಮದರ್ಶನ

ಒಳಗಿನ ರಸ ನಷ್ಟವಾದ ಹೊರತು ಸೂಕ್ಷ್ಮ ಅರ್ಥದಿಂದ ಇಂದ್ರಿಯ ನಿಗ್ರಹ ಸಾಧಿಸದು. ಆ ರಸ ನಷ್ಟವಾಗುವುದೆಂತು ? ಪರ–ದರ್ಶನದಿಂದ, ಆತ್ಮದರ್ಶನದಿಂದ ಎಂದು ಉತ್ತರ. ಪರ-ತತ್ವವೆಂದರೆ ಎಲ್ಲದರ ಆಚೆಯ ತತ್ತ್ವ. ವಸ್ತುತಃ ಆ ತತ್ತ್ವ ಎಲ್ಲದರ ಆಚೆಯದಿರದೆ ಎಲ್ಲದರ ಈಚೆಯದೆ ಆಗಿದೆ. ಅದು ಪರ ತತ್ತ್ವವಲ್ಲ; ಸ್ವ-ತತ್ತ್ವ. ಆದರೆ ನಮಗೆ ತಲೆ-ಕೆಳಗು ಭಾಷೆಯೆ ರೂಢಿ. ಅದರ ಕಾರಣ. ನಾವು ಶರೀರದಿಂದ ಎಂದರೆ ಬಾಹ್ಯ ತತ್ತ್ವದಿಂದ ಎಣಿಸಲು ಆರಂಭಿಸುತ್ತೇವೆ. ಶರೀರ ಎಲ್ಲಕ್ಕಿಂತ ಹೊರಗಿನದು; ಅದನ್ನೇ ಎಲ್ಲಕ್ಕಿಂತ ಸಮೀಪದ್ದೆಂದು ನಾವು ಭಾವಿಸುತ್ತೇವೆ. ಆ ಬಳಿಕ

ಮನ, ಅದರಾಚೆಗೆ ಬುದ್ಧಿ, ಬುದ್ಧಿಯ ಆಚೆಗೆ ಆತ್ಮ, ಎಂದು ತಲೆಕೆಳಗಾಗಿ ಎಣಿಸುತ್ತೇವೆ. ಇದರಿಂದ ಎಲ್ಲಕ್ಕೂ ಸಮೀಪದಲ್ಲಿದ್ದುದೇ ಎಲ್ಲಕ್ಕೂ ದೂರ ವಾಗಿ ನಿಲ್ಲುತ್ತದೆ. "ಇಂದ್ರಿಯಾಣಿ ಪರಾಣ್ಯಾಹುಃ ಇಂದ್ರಿಯೇಭ್ಯಃ ಪರಂ ಮನಃ" ಇತ್ಯಾದಿ ವಾಕ್ಯಗಳಲ್ಲಿ ಗೀತೆಯೂ ಇದೇ ಭಾಷೆಯನ್ನು ಉಪಯೋ ಗಿಸಿದಂತೆ ತೋರುತ್ತದೆ. ಆದರೆ ಅಲ್ಲಿ ಪರಶಬ್ದವನ್ನು ಶ್ರೇಷ್ಠ ಅಥವಾ ಸೂಕ್ಷ್ಮ ಎಂದು ಅರ್ಥಮಾಡಬೇಕು. ಎಲ್ಲಕ್ಕೂ ಸೂಕ್ಷ್ಮ, ಎಲ್ಲಕ್ಕೂ ಶ್ರೇಷ್ಠ, ಎಲ್ಲಕ್ಕೂ ಸಮೀಪ ಆದುದು ಆತ್ಮ. ಅದರ ದರ್ಶನವಾದ ಹೊರತು ಇಂದ್ರಿಯ ನಿಗ್ರಹ ಪೂರ್ಣವಾಗದು. ಮೊದಲನೆಯ ಶ್ಲೋಕದಲ್ಲಿ ಹೇಳಿ ದುದನ್ನೇ ಮತ್ತೆ ಇಲ್ಲಿ ಹೇಳಲಾಗಿದೆ.

೨

## ೩೬. ಇಂದ್ರಿಯಗಳ ಪ್ರಬಲ ಸ್ವಭಾವ. ಈ ವಿಷಯದಲ್ಲಿ ಮನುವಿನ ವಚನ

ಇಷ್ಟೆಲ್ಲ ವಿವೇಚನೆಯನ್ನು ನೋಡಿ, "ಉತ್ತರೋತ್ತರ ಸುಲಭ ಸಾಧನೆ ಗಳನ್ನು ಹೇಳುತ್ತೇವೆಂದು ಆಶ್ವಾಸನವಿತ್ತು ನಮ್ಮನ್ನು ಒಳಿತಾಗಿಯೆ ಮೋಸ ಗೊಳಿಸಿದಿರಿ. ಮೊದಲು ಕೊಬ್ಬರಿ–ಬೆಲ್ಲವನ್ನು ತೋರಿಸಿ ಬಳಿಕ ದೊಣ್ಣೆ ಯನ್ನೆ ತೋರಿಸಿದಿರಿ. ಒಳಗಿನ ರಸವನ್ನು ಬಿಡುವುದು ಸುಲಭವಲ್ಲ. ಅದನ್ನು ಹೇಗೆ ಸಾಧಿಸಬೇಕು?" ಎಂದು ಯಾರಾದರೂ ಕೇಳಬಹುದು. ಇದರ ಪ್ರಕ್ರಿಯೆಯನ್ನು ಇನ್ನು ಹೇಳಬೇಕಾಗಿದೆ. ಆದರೆ ಅದಕ್ಕೆ ಮೊದಲು ಆಕ್ಷೇಪಕರು ಎತ್ತಿದ ಆಕ್ಷೇಪವನ್ನೇ ಭಗವಂತನು ಒಂದು ಶ್ಲೋಕದಲ್ಲಿ ದೃಢ ಗೊಳಿಸುತ್ತಾನೆ.

**'ಯತತೋಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ |**
**ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ||'**

ಇದರ ಅರ್ಥ–"ಪ್ರಯತ್ನಶೀಲನೂ ವಿಚಾರವಂತನೂ ಆದವನ ಇಂದ್ರಿ ಯಗಳು ಕೂಡ ಬಲಾತ್ಕಾರದಿಂದ ಅವನ ಮನವನ್ನು ಸೆಳೆಯುತ್ತವೆ". ಮನುವಿನದೂ ಇಂತಹದೇ ಒಂದು ವಾಕ್ಯವಿದೆ. ಅನೇಕ ಜನರು ಅದನ್ನೂ ಗೀತೆಯ ಶ್ಲೋಕದ ಅರ್ಥವನ್ನು ಒಂದೇ ರೀತಿ ಮಾಡುತ್ತಾರೆ.

**ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾಸನೇ ಭವೇತ್ ।**
**ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥**

ಇದು ಮನುವಿನ ವಚನ. ತಾಯಿ, ಅಕ್ಕತಂಗಿಯರು, ಮಗಳು ಇವರ ವಿಷಯದಲ್ಲಿಯೂ ಮನುಷ್ಯನು ಎಚ್ಚರಿರಬೇಕು. ಏಕೆಂದರೆ ಇಂದ್ರಿಯಗಳು ಪ್ರಬಲವಾದುವು, ವಿದ್ವಾಂಸನನ್ನೂ ಅವು ಎಳೆದೊಯ್ಯುತ್ತವೆ".

## ೩೭. ಮನುವಿಗೂ ಗೀತೆಗೂ ಹಿನ್ನೆಲೆ ಸಮಾನವಲ್ಲ

ಮನುವಿನ ಈ ವಚನಕ್ಕೂ ಗೀತೆಯ ವಾಕ್ಯಕ್ಕೂ ಮೇಳವಿಲ್ಲ. ಮನು ಸಾಮಾನ್ಯ ಮನುಷ್ಯನಿಗೋಸ್ಕರ ನಡತೆಯ ಸಾಮಾಜಿಕ ಮರ್ಯಾದೆಯನ್ನು ಹೇಳಿದ. ಗೀತೆಯ ವಿವೇಚನೆ ಆಧ್ಯಾತ್ಮಿಕ ದೃಷ್ಟಿಯದು. "ಮನುಷ್ಯನಿಗೆ ತನ್ನಲ್ಲಿ ಅತಿಯಾಗಿ ವಿಶ್ವಾಸವಿರಕೂಡದು. ಆತನಿಗೆ ಇಂದ್ರಿಯನಿಗ್ರಹ ಬಾಹ್ಯವಾಗಿಯಾದರೂ ನಿಶ್ಚಯವಾಗಿ ಸಾಧಿಸೀತೆಂದು ಹೇಳಲಾಗದು," ಎಂದು ಮನುವಿನ ಭಾವ. ಅವನು ಸಾಮಾನ್ಯ ಮನುಷ್ಯನಿಗೆ ತನ್ನ ದೃಷ್ಟಿಯಿಂದ, ಆ ಕಾಲದ ಪರಿಸ್ಥಿತಿಗನುಗುಣವಾಗಿ ಸುರಕ್ಷಿತವಾದ ಸಾಮಾಜಿಕ ನಿಯಮವನ್ನು ಹೇಳಿದ. ಗೀತೆಯ ವಾಕ್ಯ ಸಾಧಕನಿಗೋಸ್ಕರ. ಅದರಲ್ಲಿ ಈ ಬಗೆಯ ಅವಿಶ್ವಾಸ ವ್ಯಕ್ತವಾಗಿಲ್ಲ. ನಿಮಗೆ ಸ್ಥೂಲ ಅಥವಾ ಬಾಹ್ಯ ಇಂದ್ರಿಯನಿಗ್ರಹವೂ ಸಾಧಿಸದೆಂದು ಗೀತೆ ಸಾಧಕರ ವಿಷಯದಲ್ಲಿ ಹೇಳಬಯಸುವುದಿಲ್ಲ. ಇಂದ್ರಿಯಗಳನ್ನು ಬಾಹ್ಯತಃ ಬಿಗಿಹಿಡಿದು ನಾವು ನಿರಾಹಾರರಾಗಬಲ್ಲೆವೆಂದು ಗೀತೆ ಗೃಹೀತವಾಗಿ ಇಟ್ಟುಕೊಂಡಿದೆ. ನಾವು ಇಚ್ಛಿಸಿದರೆ ವಿಷಯಗಳಿಂದ ಇಂದ್ರಿಯಗಳನ್ನು ನಿವಾರಿಸಬಲ್ಲೆವೆಂಬುದನ್ನು ಗೀತೆ ಒಪ್ಪಿಕೊಳ್ಳುತ್ತದೆ. ಇಷ್ಟೇ ಅಲ್ಲ, ಅವಶ್ಯವಾಗಿ ಹಾಗೆ ಮಾಡಿರಿ ಎಂದು ಹೇಳುತ್ತದೆ. ಮನುವಿಗೆ ಇಷ್ಟು ಅಪೇಕ್ಷೆಯೂ ಇಲ್ಲ. ಅವನು ಸಾಮಾನ್ಯ ಮನುಷ್ಯನಿಗೆ ಎಚ್ಚರಿಕೆ ಕೊಟ್ಟು ಅಲ್ಲಿಯೇ ನಿಲ್ಲುತ್ತಾನೆ. ಇಲ್ಲಿ ಇರುವುದು ಬೇರೆ ವೃತ್ತಿ. ಇಂದ್ರಿಯಗಳನ್ನು ವಿಷಯಗಳಿಂದ ಬಿಡಿಸಿದರೂ ಅವು ಸೋಲದೆ ಮನಸ್ಸಿನ ಮೇಲೆ ಪ್ರಹಾರ ಮಾಡುತ್ತವೆ ಎಂಬ ಆಧ್ಯಾತ್ಮಿಕ ವಿಚಾರ ಇಲ್ಲಿ ಇದೆ. ಹೊರಗಿನ ವಿಷಯಗಳಿಂದ ಇಂದ್ರಿಯಗಳನ್ನು ತಡೆದರೂ ಅವು ಮನಸ್ಸಿನಲ್ಲಿ ತಳವೂರಿ ನಿಲ್ಲುತ್ತವೆ. ಆದುದರಿಂದ ಇಚ್ಛೆ ಇಲ್ಲದಿದ್ದರೂ ಮಾನಸಿಕ ವಿಷಯಸೇವನೆ ಸಾಗತೊಡಗುತ್ತದೆ. ಹಾಗಾದರೆ

ಸೂಕ್ಷ್ಮ ಅರ್ಥದ ಇಂದ್ರಿಯನಿಗ್ರಹ ಸಾಧ್ಯವಾಗದೆಂದು ಗೀತೆ ಹೇಳು ತ್ತದೆ. ಅಷ್ಟೇ.

## ೩೮. ಜ್ಞಾನಿಯ, ಪ್ರಯತ್ನವಂತ ಪುರುಷನ ಮನವನ್ನೂ ಇಂದ್ರಿಯಗಳು ಸೆಳೆಯಬಲ್ಲುವು

ವಿಚಾರಪೂರ್ವಕವಾಗಿ ಪ್ರಯತ್ನ ಮಾಡುವವನಿಗೂ ಹೀಗೆ ಆಗುತ್ತದೆ. **'ಯತತೋಽಹ್ಯಪಿ' 'ವಿಪಶ್ಚಿತಃ ಅಪಿ'** ಹೀಗೆ **ಅಪಿ** ಶಬ್ದವನ್ನು ಎರಡೂ ಕಡೆ ತೆಗೆದುಕೊಳ್ಳಬೇಕು. **'ವಿಪಶ್ಚಿತ್'** ಶಬ್ದದಲ್ಲಿ ವಿಪಃ ಮತ್ತು **ಚಿತ್** ಎಂಬೆರಡು ಶಬ್ದ ಇವೆ. ವಿಪಃ ಎಂಬುದು **ವಿಪ್** ಶಬ್ದದ ದ್ವಿತೀಯೆಯ ಬಹುವಚನ. 'ವಿಪ್' ಇದು ಜ್ಞಾನಾರ್ಥಕ ಧಾತು. ಅದುವೆ 'ವಿಪ್ರ' ಶಬ್ದದಲ್ಲಿ ಇದೆ. ವಿಪ್ರ ಎಂದರೆ ಜ್ಞಾನಿ. **ವಿಪಶ್–ಚಿತ್** ಎಂದರೆ ಅನೇಕ ಜ್ಞಾನಗಳನ್ನು ಬಲ್ಲವ, ಜ್ಞಾತೃ. ಇಂತಹ ಜ್ಞಾತೃವಿಗೂ ಪ್ರಯತ್ನವಂತನಿಗೂ ಸೂಕ್ಷ್ಮ ಇಂದ್ರಿಯಜಯ ಕಷ್ಟಸಾಧ್ಯ. ಏಕೆಂದರೆ ಇಂದ್ರಿಯಗಳು ಅವನ ಮನವನ್ನೂ ಸೆಳೆಯಬಲ್ಲುವು," ಎಂದು ಗೀತೆ ಇಲ್ಲಿ ಹೇಳುತ್ತದೆ.

## ೩೯. ಜ್ಞಾನ ತಿತಿಕ್ಷಾಪೂರ್ವಕ ಪ್ರಯತ್ನಗಳೇ ಮನುಷ್ಯನ ಎರಡು ಶಕ್ತಿಗಳು

ಜ್ಞಾನ ತಿತಿಕ್ಷಾಪೂರ್ವಕ ಪ್ರಯತ್ನಗಳೇ ಮನುಷ್ಯನಿಗಿರುವ ಎರಡು ಶಕ್ತಿಗಳು. ಮೂರನೆಯ ಶಕ್ತಿ ಅವನಿಗೆ ಇಲ್ಲವೇ ಇಲ್ಲ. ಮನುಷ್ಯನಿಗೆ ಉಪಲಬ್ಧವಾದ ಈಯೆರಡೂ ಶಕ್ತಿಗಳನ್ನು ಉಪಯೋಗಿಸಿದರೂ ಇಂದ್ರಿಯಗಳು ದುರ್ದಮ್ಯವಾಗಿ ಮನಸ್ಸಿನಲ್ಲಿ ತಳವೂರುತ್ತವೆ ಎಂದ ಬಳಿಕ ಉಪಾಯ ವಾವುದು ? ಯತ್ನವತ್ ವಿಪಶ್ಚಿತ್ ಪುರುಷನೆಂದರೆ ತತ್ವಜ್ಞಾನ, ತಿತಿಕ್ಷೆ ಈ ಉಭಯ ಶಕ್ತಿಗಳಿಂದ ಸಂಪನ್ನನಾದ ಪುರುಷ. ಎರಡನೆಯ ಅಧ್ಯಾಯದ ಪ್ರಾರಂಭದಲ್ಲಿ ಇದೇ ಪುರುಷನಿಗೆ 'ಧೀರ' ಎಂಬ ಸಂಜ್ಞೆಯನ್ನು ಕೊಡಲಾಗಿದೆ. 'ಧೀರ' ಶಬ್ದವು ಎರಡು ರೀತಿಯಾಗಿ ಉಪಯೋಗಿಸಲ್ಪಡುತ್ತದೆ. ಧೀ ಎಂದರೆ ಬುದ್ಧಿ, ಧೀರ ಎಂದರೆ ಬುದ್ಧಿವಂತ, ಜ್ಞಾನಿ. ಆದರೆ ಕೇವಲ ಜ್ಞಾನದಿಂದ ಸಾಧನೆ ಪೂರ್ಣವಾಗದು. ಜ್ಞಾನವೇನೊ ಇದೆ. ಆದರೆ ಸಹನ ಮಾಡುವ ಶಕ್ತಿ, ತಿತಿಕ್ಷೆ ಇಲ್ಲದಿದ್ದರೆ ಮನುಷ್ಯನು ಬಾಳನು. ಮನುಷ್ಯನನ್ನು ಅತಿ ಕಷ್ಟಕ್ಕೆ ಗುರಿಮಾಡಿದರೆ, ಕೇವಲ ಜ್ಞಾನಬಲದಿಂದಲೆ ಕೊನೆಯವರೆಗೆ

ಅವನ್ನು ಅವನು ಸಹಿಸಬಲ್ಲನೆಂದು ಹೇಳಲಾಗದು. ವೈಜ್ಞಾನಿಕನೊಬ್ಬನನ್ನು ಕುರಿತು ಇರುವ ಈ ಮುಂದಿನ ಸಂಗತಿಯನ್ನು ಬಹುಶಃ ಎಲ್ಲರೂ ಬಲ್ಲರು. ಪೃಥ್ವಿ ತಿರುಗುತ್ತದೆ ಎಂದು ಹೇಳಿದುದರಿಂದ ಆತ ಅತ್ಯಂತ ಭಯಂಕರ ಅಸಹನೀಯ ಛಲನೆಗೆ ಗುರಿಮಾಡಲ್ಪಟ್ಟ. ಆಗ 'ನೀವೇನು ಹೇಳಿದರೂ ಅದಕ್ಕೆ ನಾನು ಒಪ್ಪುತ್ತೇನೆ. ಬರೆದುಕೊಟ್ಟು ಬಿಡಿ, ಅದಕ್ಕೆ ಸಹಿ ಮಾಡುತ್ತೇನೆ' ಎಂದ ಆತ. ವಿರೋಧಿಗಳು, 'ಪೃಥ್ವಿ ತಿರುಗುವುದಿಲ್ಲ' ಎಂದು ಬರೆದು ಆತನ ಮುಂದಿಟ್ಟರು. ಬಾಧೆ ಸಹಿಸಲಾರದೆ ತಪ್ಪಿಸಿಕೊಳ್ಳಲು ಆತ ಹಾಗೆ ಹೇಳಿದ್ದ. ಪ್ರತ್ಯಕ್ಷವಾಗಿ ಹಾಗೆ ಆಗಿಯೇ ಬಿಟ್ಟಾಗ ಆತ "ನಾನಾದರೂ ಏನುಮಾಡಲಿ? ನಾನು ಇಲ್ಲವೆಂದರೂ ಪೃಥ್ವಿ ತಿರುಗೇ ತಿರುಗುತ್ತದೆ, ತಿರುಗುತ್ತದೆ, ತಿರುಗುತ್ತದೆ!" ಎಂದ. ಜ್ಞಾನದ ಜೊತೆಗೆ ತಿತಿಕ್ಷೆಯೂ ಬೇಕು. ಧೀರ ಶಬ್ದದ ಎರಡನೆಯ ಅರ್ಥವಲ್ಲಿದೆ ಇದು ಈ ಅರ್ಥಕ್ಕೋಸುಗ ಧೀರ ಶಬ್ದವು ಧೃ ಧಾತುವಿನಿಂದ ಬಂದಿದೆ. ಧೀರನೆಂದರೆ ಧೃತಿಮಂತ, ಧೈರ್ಯವಂತ, ತಿತಿಕ್ಷಾವಂತ. ಗೀತೆಯಲ್ಲಿ ಉಕ್ತವಾದ ಧೀರ ಶಬ್ದ ಈ ಯೆರಡೂ ಅರ್ಥಗಳಿಂದ ಕೂಡಿದೆ.

## ೪೦. ಈಯೆರಡು ಶಕ್ತಿಗಳಿದ್ದರೂ ಉದ್ದೇಶ ಸಾಧ್ಯವಾಗದೆಂದ ಬಳಿಕ ಮಾಡಬೇಕಾದುದೇನು ?

ಇಂತಹ ತತ್ತ್ವಜ್ಞಾನ-ತಿತಿಕ್ಷಾ ಸಂಪನ್ನನಾದ ಧೀರ ಪುರುಷನೇ ಶೀತೋಷ್ಣಾದಿ ದ್ವಂದ್ವಗಳನ್ನು ಸಹಿಸಲು ಸಮರ್ಥನಾಗಿ ಮೋಕ್ಷವನ್ನು ಪಡೆಯಲು ಯೋಗ್ಯನಾಗುತ್ತಾನೆಂದು ಭಗವಂತನು ಎರಡನೆಯ ಅಧ್ಯಾಯದ ಆರಂಭದಲ್ಲಿ ಹೇಳಿದಾನೆ. ಆದರೆ ಈಯೆರಡೂ ಶಕ್ತಿಗಳಿದ್ದರೂ ಇಂದ್ರಿಯಗಳು ಮನವನ್ನು ಸೆಳೆಯುತ್ತವೆಂದು ಸ್ಥಿತಪ್ರಜ್ಞನ ಲಕ್ಷಣದಲ್ಲಿ ಭಗವಂತ ಹೇಳುತ್ತಿದಾನೆ. ಯತ್ನವಂತನಾದ ವಿಪಶ್ಚಿತ್ ಪುರುಷನಿಗೂ ಇಂದ್ರಿಯಗಳು ವಶವಾಗವು. ಅವನನ್ನೂ ಅವು ಜಯಿಸುತ್ತವೆ. ಹಾಗಾದರೆ ಆಶೆಗೆ ಆಸ್ಪದವೇ ಉಳಿಯಲಿಲ್ಲ. ನಿರಾಶವಾದವೇ ಬಂದಿತು! ಇಂದ್ರಿಯನಿಗ್ರಹದ ಅರ್ಥವನ್ನು ನೀವು ಬಲು ಬಿಗಿಗೊಳಿಸಿದಿರಿ. ಆಕ್ಷೇಪಕರ ಈ ಆಕ್ಷೇಪವನ್ನು ಗೀತೆ ಮತ್ತಷ್ಟು ದೃಢಗೊಳಿಸಿತು. ಇದರೊಳಗಿಂದ ಮಾರ್ಗವನ್ನು ಹೇಗೆ ಕಾಣಬೇಕೆಂಬುದನ್ನು ಮುಂದಿನ ಶ್ಲೋಕದಲ್ಲಿ ಹೇಳಲಾಗಿದೆ.

# ೫ ನೆಯ ವ್ಯಾಖ್ಯಾನ

## ೧

### ೪೧. ಮನುವಿನ ಮತ್ತು ಗೀತೆಯ ವಚನಗಳ ಅಧಿಕ ವಿವರಣ

ಮನುವಿನ ಮತ್ತು ಗೀತೆಯ ವಾಕ್ಯಗಳ ಭೇದವನ್ನು ಕಂಡಿರಿ. ಅದು ಇನ್ನಷ್ಟು ಸ್ಪಷ್ಟವಾದರೆ ಒಳ್ಳೆಯದು. ಮನುಷ್ಯನ ಬುದ್ಧಿ, ಇಂದ್ರಿಯಗಳ ನಡುವೆ ಮನವು ಇದೆ. ಆದುದರಿಂದ ಇಂದ್ರಿಯಗಳನ್ನು ವಶಪಡಿಸಿಕೊಳ್ಳ ಬಯಸುವವನು ಮನವನ್ನೂ ವಶದಲ್ಲಿಟ್ಟುಕೊಳ್ಳಬಯಸುತ್ತಾನೆ. ಆದರೆ ಮನವನ್ನು ಹಿಡಿತದಲ್ಲಿಡುವುದು ಸುಲಭವಾದ ಕೆಲಸವಲ್ಲ. ಆದುದರಿಂದ ಮೊದಲು ಇಂದ್ರಿಯಗಳನ್ನು ವಶಪಡಿಸಿಕೊಳ್ಳಿರೆಂದು ಗೀತೆ ಸೂಚಿಸುತ್ತದೆ. ಅರ್ಥಾತ್ ಅಷ್ಟರಿಂದಲೆ ಮನವು ವಶವಾಗುವುದೆಂದಲ್ಲ. ಇಷ್ಟೇ ಅಲ್ಲ; ಇಂದ್ರಿಯಗಳು ವಿಷಯಗಳಿಂದ ತೊಲಗಿಸಲ್ಪಟ್ಟೊಡನೆ, ಮನದ ಮೇಲೆ ಅವುಗಳ ಆಘಾತ ಪ್ರಾರಂಭವಾಗುತ್ತದೆ. ಸಾಧಕನಿಗೆ ಈ ಮಾತು ಗೊತ್ತು. ಆತ ಮನದಿಂದ ತನ್ನನ್ನು ಬೇರೆಯಾಗಿಸಿ ಬಿಡಿಸಿಕೊಳ್ಳುತ್ತಾನೆ. ಮನದ ಮೇಲೆ ಸವಾರಿ ನಡೆದಿದೆ ಎಂಬುದು ಆತನಿಗೆ ತಿಳಿಯುತ್ತದೆ. ಆತ ಮನಕ್ಕೆ ಅಧೀನನಾಗನು. ಆದರೊಡನೆ ಸಹಕಾರ್ಯ ಮಾಡನು. ಗೀತೆಯ ಭಾಷೆ ಯಲ್ಲಿ ಇದು ಸೂಚಿಸಲ್ಪಟ್ಟಿದೆ: 'ಹರನ್ತಿ ಪ್ರಸಭಂ ಮನಃ' ಇಂದ್ರಿಯಗಳು ಪ್ರಬಲವಾಗಿ ಆತನ ಮನವನ್ನು ಸೆಳೆಯುತ್ತವೆಂದು ಹೇಳಿದೆ. ಆತನನ್ನೆ ಎಳೆದೊಯ್ಯುತ್ತವೆಂದು ಹೇಳಿಲ್ಲ. ಸಾಧಕನ ಮನವು ಇಂದ್ರಿಯಗಳೊಡನೆ ಸೆಳೆಯಲ್ಪಡುತ್ತದೆ. ಸಾಧಕ ಸೆಳೆಯಲ್ಪಡುವುದಿಲ್ಲ. ಮನು ಹೀಗೆ ಎನ್ನುವು ದಿಲ್ಲ: " ಈ ಪ್ರಬಲವಾದ ಇಂದ್ರಿಯಗಳು ವಿದ್ವಾಂಸನನ್ನೂ ಸೆಳೆಯುತ್ತವೆ," ಆತನ ಮನವನ್ನಷ್ಟೆ ಅಲ್ಲ, ಆತನನ್ನೇ ಸೆಳೆದೊಯ್ಯುತ್ತವೆ. 'ವಿದ್ವಾಂಸಮ ಪಿ ಕರ್ಷತಿ'. ಇಂದ್ರಿಯಗಳನ್ನು ಬಿಗಿಹಿಡಿದರೂ ಅವು ಮನದಮೇಲೆ ಆಕ್ರಮಣ ಮಾಡುತ್ತವೆ. ಮನದ ಮೇಲೆ ಅವುಗಳ ಆಕ್ರಮಣವಾಗದಂತೆ ಉಪಾಯ ವನ್ನು ಯೋಜಿಸಬೇಕು. ಆದರೆ ಪ್ರಯತ್ನವಂತನಾದ ವಿದ್ವಾಂಸನಿಗೂ ಇದು ಬಿಗಿಯಾಗುತ್ತದೆ. ಹೀಗೆ ಸಾಧಕನ ನಡುವಿನ ಅವಸ್ಥೆ ಕಷ್ಟಮಯ. ಮನವು ವಿಷಯಗಳತ್ತ ದೆಧಾವಿಸುತ್ತ. ಸಾಧಕ ಅದರೊಡನೆ ಸಹಕರಿಸನು

ಆದರೆ ಮನವು ಅತ್ತ ಹೋಗಲೇಬಾರದಂತೆ ಮಾಡಲು ಯತ್ನಿಸಬೇಕು. ಈ ಕೆಲಸಕ್ಕೆ ಅವನ ತತ್ತ್ವಜ್ಞಾನವೂ ತೀವ್ರ ಪ್ರಯತ್ನವೂ ಸಾಕಾಗವು. ಹಾಗಾದರೆ ಏನು ಮಾಡಬೇಕೆಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಉತ್ತರ ಮುಂದಿನ ಶ್ಲೋಕದಲ್ಲಿ ಇದೆ.

## ೪೨. ಯುಕ್ತಿಪೂರ್ವಕವಾಗಿ ಶಕ್ಯವಾದಷ್ಟು ಇಂದ್ರಿಯ ನಿಗ್ರಹವನ್ನು ಸಾಧಿಸಿ. ಬಲ ಸಾಕಾಗದಿದ್ದರೆ ಭಕ್ತಿಯ ಆವಾಹನೆ ಮಾಡಿ

'ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ'

ಯುಕ್ತಃ ಸನ್ ತಾನಿ ಸರ್ವಾಣಿ ಸಂಯಮ್ಯ ಮತ್ಪರಃ ಆಸೀತ್—ಈ ರೀತಿ ಇದರ ಅನ್ವಯಮಾಡಬೇಕು. ಯುಕ್ತಿಪೂರ್ವಕವಾಗಿ ಎಲ್ಲ ಇಂದ್ರಿಯಗಳನ್ನು ನಿಗ್ರಹಿಸಿ ಈಶ್ವರ-ಪರಾಯಣನಾಗಿರಬೇಕು. ಜ್ಞಾನ, ತಿತಿಕ್ಷೆಗಳ ಬಲದಿಂದ ಇಂದ್ರಿಯಗಳನ್ನು ವಶವಾಡಲೇಬೇಕು. ಅವಶ್ಯವಾದಾಗ ನಿಗ್ರಹವನ್ನು ಸಾಧಿಸಲೇಬೇಕು. ಈ ರೀತಿಯಾಗಿ ಮೊದಲು ಯುಕ್ತಿಪೂರ್ವಕವಾಗಿ ಇಂದ್ರಿಯಗಳನ್ನು ವಶಪಡಿಸಿಕೊಳ್ಳಬೇಕೆಂದು ಗೀತೆಯ ಉಪದೇಶ. ನಿಗ್ರಹ, ಸಂಯಮಗಳ ಸಂಗ್ರಾಹಕವಾದ ಒಂದೇ ಶಬ್ದ 'ನಿರೋಧ'. ಜ್ಞಾನ, ತಿತಿಕ್ಷೆಗಳ ಬಲದಿಂದ ಈ ಎರಡು ಶಬ್ದ ನಿರೋಧಶಕ್ತಿಯನ್ನು ಸಂಪಾದಿಸಲು ಗೀತೆ ಹೇಳುತ್ತದೆ. ಆದರೆ ಈ ಬಗೆಯಾಗಿ ಯುಕ್ತಿಯಿಂದ ಇಂದ್ರಿಯ ನಿರೋಧ ಮಾಡಿದರೂ, ಮನವು ವಶವರ್ತಿಯಾದ ಹೊರತು ನಿರೋಧ ಪೂರ್ಣವಾಗದು. ಮನೋನಿರೋಧಕ್ಕೆ ಮನುಷ್ಯನ ಬಲ ಸಾಲದು. ಇಲ್ಲಿ ಭಕ್ತಿ ಪ್ರಾರಂಭವಾಗುತ್ತದೆ.

## ೪೩. ಇಲ್ಲಿಯೆ ಭಕ್ತಿಯ ಆವಶ್ಯಕತೆ

ಮನುಷ್ಯನ ಪುರುಷಾರ್ಥಶಕ್ತಿ ಕುಂಠಿತವಾಗಲು, ಭಗ್ನವಾಗಲು, ಭಕ್ತಿಯ ಆವಶ್ಯಕತೆ ಉಂಟಾಗುತ್ತದೆ. ಪರಿಪೂರ್ಣವಾಗಿ ಪ್ರಯತ್ನವನ್ನು ಮಾಡಿದ ಹೊರತು ಭಕ್ತಿಗೆ ಅವಕಾಶ ಇರುವುದಿಲ್ಲ. ಈಶ್ವರನು ಕೊಟ್ಟಿರುವ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುವುದರಲ್ಲಿಯೆ ನಮ್ರತೆ, ಆಸ್ತಿಕತೆ ಉಂಟು. ನಮ್ಮಲ್ಲಿ ವಾಸಿಸುವ ಶಕ್ತಿ "ವಾಸುದೇವ" ಶಕ್ತಿ. ಅದು

ಈಶ್ವರನದೇ ಶಕ್ತಿ. ಆತ ಅದನ್ನು ಮೊದಲೇ ಕೊಟ್ಟಿದಾನೆ. ಕೆಲವು ಶಕ್ತಿಯನ್ನು ಆತ ಕೊಟ್ಟಿದಾನೆ, ಕೆಲವನ್ನು ಇಟ್ಟುಕೊಂಡಿದಾನೆ. ಈ ದೇವದತ್ತ ಶಕ್ತಿಯನ್ನು ನಾವು ಸ್ವಶಕ್ತಿಯೆಂದು ತಿಳಿಯುತ್ತೇವೆ ಅದು ತಪ್ಪು. ವಸ್ತುತಃ ಅದು ಈಶ್ವರನದೇ ಶಕ್ತಿ. ಈಶ್ವರನು ಇಟ್ಟುಕೊಂಡಿರುವ ಶಕ್ತಿಯೂ ನಮ್ಮದೇ. ಇದ್ದ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸಿದ ಬಳಿಕವೇ ಆ ಶಕ್ತಿಯನ್ನು ಬೇಡಲು ನಮಗೆ ಅಧಿಕಾರ ಪ್ರಾಪ್ತವಾಗುತ್ತದೆ.

## ೪೪. ಪ್ರಾಪ್ತವಾದ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುವುದರಿಂದಲೇ ಈಶ್ವರನಲ್ಲಿರುವ ಹೆಚ್ಚಿನ ಶಕ್ತಿಯನ್ನು ಬೇಡಲು ಅಧಿಕಾರ ಬರುತ್ತದೆ

ನಮಗೆ ಪ್ರಾಪ್ತವಾದ ಶಕ್ತಿಯನ್ನು ನಾವು ಪೂರ್ಣವಾಗಿ ಉಪಯೋಗಿಸದಿರುವಾಗ ಕಾಯ್ದಿಟ್ಟ ಶಕ್ತಿಯನ್ನು ಈಶ್ವರನು ನಮಗೆ ಕೊಡುವುದು ಹೇಗೆ? ತಂದೆ ಮಗನಿಗೆ ವ್ಯಾಪಾರಕ್ಕೋಸುಗ ಕೊಟ್ಟ ಹತ್ತುಸಾವಿರದ ಬಂಡವಾಳವನ್ನು ಆತ ಉಪಯೋಗಿಸದಿದ್ದರೆ, ತಂದೆ ಆತನಿಗೆ ಹತ್ತು ಲಕ್ಷದ ಬಂಡವಾಳವನ್ನು ಕೊಡುವುದೆಂತು? ಅದನ್ನು ಆತ ಉತ್ತಮ ರೀತಿಯಿಂದ ಉಪಯೋಗಿಸಿದ ಬಳಿಕ, "ಉಳಿದುದೆಲ್ಲವು ನಿನ್ನದೇ" ಎನ್ನಬಹುದು. ನಮಗೂ ಈಶ್ವರನಿಗೂ ಇರುವ ಸಂಬಂಧ ಇಂಥದು. ಈಶ್ವರನು ತನ್ನಲ್ಲಿರುವ ಎಲ್ಲ ಶಕ್ತಿಯನ್ನೂ ನಮಗೆ ಕೊಟ್ಟುಬಿಡಲು ಸಿದ್ಧ. ಆದರೆ ಆವಶ್ಯಕತೆ ಸಿದ್ಧವಾಗಬೇಕು. ಮನುಷ್ಯನು ತನಗೆ ದೊರೆತ ಶಕ್ತಿಯನ್ನು ಉಪಯೋಗಿಸುತ್ತ, ಇನ್ನು ತನಗೆ ಈಶ್ವರನ ಎಲ್ಲ ಶಕ್ತಿಯೂ ಬೇಕೆಂದು ಸಿದ್ಧಗೊಳಿಸಿದರೆ ಈಶ್ವರನಿಗೆ ಆನಂದವೇ ಆಗುತ್ತದೆ. "ನನಗೆ ಬೇಕಾದಂತಹ ಪ್ರಯೋಗಿ ಭಕ್ತನನ್ನು ಕಂಡೆ" ಎಂದಾನು ಈಶ್ವರ. ಆದರೆ ಈಶ್ವರನ ಎಲ್ಲ ಶಕ್ತಿಯ ಆವಶ್ಯಕತೆ ಉಂಟಾಗಬಹುದಾದ ಕಾರ್ಯವೇ ಈ ಜಗತ್ತಿನಲ್ಲಿ ಯಾವ ಕಾಲದಲ್ಲಿಯೂ ಆಗಿಲ್ಲ. ಆದುದರಿಂದ ಮನುಷ್ಯನಿಗೆ ಎಷ್ಟು ಶಕ್ತಿ ಆವಶ್ಯಕವಾಗುತ್ತದೆಯೋ ಅಷ್ಟು ಶಕ್ತಿ ಆತನಿಗೆ ಈಶ್ವರನಿಂದ ನಿಶ್ಚಯವಾಗಿಯೂ ದೊರೆಯುತ್ತದೆ. ಮನುಷ್ಯನಿಗೆ ಎಂದೂ ನಿರಾಶನಾಗಲು ಇಲ್ಲವೆ ಪರಾಜಿತನಾಗಲು ಕಾರಣವಿರದು. ತನ್ನ ಬಳಿಯ ಶಕ್ತಿಯನ್ನೆಲ್ಲ ಉಪಯೋಗಿಸಿದರೆ ಹೆಚ್ಚು ಶಕ್ತಿ ಆತನಿಗೆ ನಿಃಸಂಶಯವಾಗಿ ದೊರೆಯುತ್ತದೆ. ಸ್ವಂತದ ಶಕ್ತಿ

ಯನ್ನು ಪೂರ್ಣವಾಗಿ ಉಪಯೋಗಿಸದೆ ಈಶ್ವರನನ್ನು ಸಾಹಾಯ್ಯಕ್ಕೋಸುಗ ಮೊರೆಹೊಕ್ಕರೆ, ಈಶ್ವರನು ಏಕೆ ಧಾವಿಸಿ ಬರಬೇಕು? ದೇವನಿಗೆ ಏನಾದರೊಂದು ಅದ್ಭುತವಾದ ಮಹತ್ಕೃತ್ಯವನ್ನು ಮಾಡಿ ತನ್ನ ಕೀರ್ತಿಯನ್ನು ಬೆಳೆಯಿಸಿಕೊಳ್ಳುವ ಆವಶ್ಯಕತೆ ಇಲ್ಲ. ಅವನ ಕೀರ್ತಿ ಬೆಳೆವುದಾದರೂ ಸಾಧ್ಯವಿದೆಯೆ? ಅವನ ಕೀರ್ತಿ ಪೂರ್ಣವಾಗಿದೆ. ಆತ ಬೆಳೆಯಿಸಬೇಕಾಗಿರುವುದು ನಿಮ್ಮ ವೈಭವವನ್ನೆ, ನಿಮ್ಮ ಕೀರ್ತಿಯನ್ನೆ. ನೀವು ನಿಮ್ಮ ಎಲ್ಲ ಶಕ್ತಿಯನ್ನು ಉಪಯೋಗಿಸಿ ಪ್ರಯತ್ನಮಾಡಿ. ದಣಿದಾಗ ದೇವರಿಗೆ ಮೊರೆಯಿಡಿರಿ. ಅವನು ನಿಮಗೆ ಮತ್ತೆ ಬಲವನ್ನು ಕೊಡುತ್ತಾನೆ.

## ೪೫. ಇದಕ್ಕೆ ಗಜೇಂದ್ರಮೋಕ್ಷದ ಸುಧಾರಿಸಿದ ದೃಷ್ಟಾಂತ

ಗಜೇಂದ್ರಮೋಕ್ಷದ ಉದಾಹರಣೆ ಕೊಡುವಾಗ ಭಕ್ತಿಮಾರ್ಗದಲ್ಲಿ, ಮೊದಲು ಗಜೇಂದ್ರ ಸ್ವಂತದ ಶಕ್ತಿಯಿಂದ ಜಯವನ್ನು ಸಂಪಾದಿಸಲು ಪ್ರಯತ್ನಿಸಿದ, ಆದುದರಿಂದ ದೇವರು ಆತನ ಸಾಹಾಯ್ಯಕ್ಕೆ ಬರಲಿಲ್ಲ, ಗಜೇಂದ್ರನಿಗೆ ಸ್ವಶಕ್ತಿಯ ಅಹಂಕಾರವಿತ್ತು ಎಂದು ಸೂಚಿಸುವುದು ರೂಢಿಯಾಗಿದೆ. ಅಹಂಕಾರವಿದ್ದರೆ ಆತನ ಗರ್ವಪರಿಹಾರವಾದ ಬಳಿಕವೇ ದೇವರು ಆತನಿಗೆ ಸಾಹಾಯ್ಯವಿತ್ತುದು ಸರಿಯೇ ಆಯ್ತು. ಆದರೆ ಸ್ವಶಕ್ತಿಯ ಅಹಂಕಾರವಿಲ್ಲದ ಗಜೇಂದ್ರನೊಬ್ಬನಿದಾನೆಂದು ತಿಳಿಯಿರಿ. ಆತ ತನ್ನ ಬಲವನ್ನು ಉಪಯೋಗಿಸದೆಯೆ ದೇವನನ್ನು ಸಾಹಾಯ್ಯಕ್ಕಾಗಿ ಮೊರೆಹೊಕ್ಕರೆ, ತನ್ನ ಬಲವನ್ನು ಉಪಯೋಗಿಸಬಾರದೆಂಬ ಆತನ ಹಟವೂ ಅಹಂಕಾರವೇ ಸೈ. ಸ್ವಂತದ ಬಲವನ್ನು ಉಪಯೋಗಿಸಬಾರದೇಕೆ? ಆ ಬಲವಾದರೂ ಆತನದೇ ಏನು? ಅದೂ ದೇವನದೇ. ತನ್ನ ಬಲವೂ ದೇವನದೇ ಎಂಬ ಭಾವನೆಯಿಂದ ಸ್ವಶಕ್ತಿಯನ್ನು ಉಪಯೋಗಿಸುವುದರಲ್ಲಿ ಅಹಂಕಾರವಿಲ್ಲ. ಆದರೆ ತನ್ನಲ್ಲಿದ್ದ ಬಲವನ್ನು ಉಪಯೋಗಿಸದೆ ಇರುವುದರಲ್ಲಿಯೆ ಅಹಂಕಾರ ಆಲಸ್ಯ, ಅಶ್ರದ್ಧೆ ಇದೆ. ನಿನ್ನದಲ್ಲದ ಆ ಶಕ್ತಿಯನ್ನು ಕಾಯ್ದಿಟ್ಟು ಮೇಲೆ ದೇವನ ಸಹಾಯ ಬೇಡುತ್ತೀ, ನಿನ್ನಲ್ಲಿರುವ ದೇವನ ಶಕ್ತಿಯನ್ನು ನಿರಹಂಕಾರ ಬುದ್ಧಿಯಿಂದ ಸಂಪೂರ್ಣವಾಗಿ ಮೊದಲು ಉಪಯೋಗಿಸು, ಆ ಬಳಿಕ ಹೆಚ್ಚಿನ ಶಕ್ತಿಯ ಆವಾಹನೆ ಮಾಡು. ಇದ್ದ ಶಕ್ತಿಯನ್ನು ಪೂರ್ಣ

ವಾಗಿ ಉಪಯೋಗಿಸಿದ ಬಳಿಕ ಇಲ್ಲದ ಶಕ್ತಿಯನ್ನು ದೇವನು ಕೊಟ್ಟೇ ಕೊಡುತ್ತಾನೆ.

## ೪೬. ಈಶ್ವರಶರಣತೆಯಲ್ಲಿ ಪರಾಧೀನತೆ ಇರುವುದಿಲ್ಲ

ಆದರೆ ಇವರಲ್ಲಿಯೂ ಕೊನೆಗೆ ಈಶ್ವರನನ್ನೇ ಮೊರೆ ಹೋಗಬೇಕು. ಆದುದರಿಂದ ಇದಾದರೂ ಪರಾಧೀನವೆಂದು ತೋರಬಹುದು. ಆದರೆ ಅದು ಸರಿಯಲ್ಲ. ಏಕೆಂದರೆ ಹಾಗೆನ್ನುವುದಾದರೆ, ನಮ್ಮ ಶಕ್ತಿ ಕುಂಠಿತ ವಾದ ಬಳಿಕವೆ ಪರಾಧೀನತೆ ಬರುವುದು. ಆದರೆ ಈಶ್ವರನ ಶಕ್ತಿಯನ್ನು ಆವಾಹನೆ ಮಾಡುವುದರಲ್ಲಿ ನಿಜವಾಗಿಯೂ ಪರಾಧೀನತೆ ಇಲ್ಲ. ಈಶ್ವರ ನನ್ನು ಪರಕೀಯನಾಗಿ ಭಾವಿಸಿದರೆ ಮಾತ್ರ ಪರಾಧೀನತೆ ಆಗುತ್ತದೆ. ಆದರೆ ವಸ್ತುಸ್ಥಿತಿ ಹಾಗೆ ಇಲ್ಲ. ಅಂಗಿಗೆ ಎರಡು ಕಿಸೆ ಮಾಡಿಸಿ ಅದರಲ್ಲಿ ಹಣ ತುಂಬಿದಿರಿ ಅನ್ನಿ. ಒಂದರಲ್ಲಿಯ ಹಣ ತೀರಿದರೆ, ಇನ್ನೊಂದರಿಂದ ಬಳಸ ಬಹುದು. ಎರಡೂ ಕಿಸೆಗಳು ನಮ್ಮ ಅಂಗಿಯವೇ! ಅಥವಾ ಕೆಲವು ಹಣವನ್ನು ನಿಮ್ಮ ಟ್ರಂಕಿನಲ್ಲಿ, ಕೆಲವನ್ನು ಒಂದು ಬ್ಯಾಂಕಿನಲ್ಲಿ ಇಟ್ಟಿದ್ದರೆ ಹೇಗೋ ಹಾಗೆ ಇದು. ಈಶ್ವರನೂ ನಾವೂ ಒಂದೇ ಚೈತನ್ಯದ ರೂಪಗಳು. ನಾವು ಅಂಶ ಮಾತ್ರ. ಈಶ್ವರನು ಆ ಚೈತನ್ಯದ ಪೂರ್ಣರೂಪ. ಆದರೂ ಚೈತನ್ಯ ಒಂದೇ. ಆದುದರಿಂದ ಆತನ ಶಕ್ತಿಯೆಂಬುದು ನಮ್ಮ ಶಕ್ತಿ. ಆದುದರಿಂದ ಈಶ್ವರನ ಬಳಿಯಲ್ಲಿ ಶಕ್ತಿಯನ್ನು ಬೇಡುವುದರಲ್ಲಿ ಪರಾಧೀನತೆ ಏನೂ ಇಲ್ಲ.

೨

## ೪೭. ಸ್ಥೂಲ ಸಾಂಸಾರಿಕ ಕಾರ್ಯಗಳು ಈಶ್ವರನ ಸಾಹಾಯ್ಯದ ವಿಷಯಗಳಲ್ಲ

ಮನೋನಿರೋಧದ ನಮ್ಮ ಪ್ರಯತ್ನಗಳ ಪರಮಾವಧಿಯಾದ ಬಳಿಕ ಭಕ್ತಿಗೆ ಅವಕಾಶವಾಗುತ್ತದೆ. ಅದರ ಆವಶ್ಯಕತೆಯಾದರೂ ಆಗಲೇ ಉಂಟಾಗುತ್ತದೆಂಬುದನ್ನು ನಾವು ಅರಿತಿದೇವೆ. ನಮ್ಮ ಪ್ರಯತ್ನವೆಲ್ಲವೂ ತೀರಿದ ಬಳಿಕ ನಮಗೆ ಸಾಹಾಯ್ಯದ ಆವಶ್ಯಕತೆ ತೀವ್ರವಾಗುತ್ತದೆ. ಈ ತೀವ್ರತೆಯೆ ಭಕ್ತಿಯ ಉಗಮಸ್ಥಾನ. ಆದಕ್ಕೊ ಮೊದಲು ತೀವ್ರತೆ ಇರುವು

ದಿಲ್ಲ. ಆದುದರಿಂದ ಭಕ್ತಿ ಇರುವುದಿಲ್ಲ. ಶ್ರದ್ಧೆ ಇರಬಲ್ಲುದು. ನಮ್ಮ ಶಕ್ತಿಯನ್ನು ಉಪಯೋಗಿಸಿ ಇಂದ್ರಿಯಗಳನ್ನು ವಶಪಡಿಸಿಕೊಳ್ಳಬೇಕು. ವಿಷಯಗಳಿಗೆರವಾದ ಇಂದ್ರಿಯಗಳು ಮನದ ಮೇಲೆ ಆಕ್ರಮಣ ಮಾಡಲು ಬಂದಾಗ, ಆ ಸೂಕ್ಷ್ಮ ಆಕ್ರಮಣದ ಪ್ರತೀಕಾರಕ್ಕೋಸುಗ ಈಶ್ವರನ ಸಾಹಾಯ್ಯವನ್ನು ಕೋರಬೇಕು. ಇಂತಹ ಪವಿತ್ರ, ಸೂಕ್ಷ್ಮ ಕಾರ್ಯದಲ್ಲಿಯೆ ಈಶ್ವರನ ಸಾಹಾಯ್ಯವನ್ನು ಪ್ರಾರ್ಥಿಸುವುದು ಆಸ್ತಿಕತೆ. ಜನರಲ್ಲಿ ಸಾಮಾನ್ಯವಾದ ವ್ಯಾವಹಾರಿಕ ಕಾರ್ಯಕ್ಕೋಸುಗ ದೇವನ ಸಾಹಾಯ್ಯವನ್ನು ಅಪೇಕ್ಷಿಸುವ ರೂಢಿಯಿದೆ. ಇಂತಹ ಜನರನ್ನು ನಾವು ಆಸ್ತಿಕರೆಂದು ತಿಳಿಯುತ್ತೇವೆ. ನಿಜವಾಗಿ ಅದು ಆಸ್ತಿಕತೆ ಅಲ್ಲ. ಪರೀಕ್ಷೆಯಲ್ಲಿ ಪಾಸಾಗಲು ಈಶ್ವರನ ಸಹಾಯ ಕೇಳುವುದು ಎಂತಹ ಆಸ್ತಿಕತೆ? ಅದು ಮೂಢತನ, ಪುರುಷಾರ್ಥ ಹೀನತೆ. ಹೊಲದಲ್ಲಿ ಬೆಳೆ ಚೆನ್ನಾಗಿ ಬಾರದಿದ್ದರೆ ಕೇಳಿ ಈಶ್ವರನ ಸಹಾಯ! ಈ ಪ್ರಶ್ನೆಗಳನ್ನು ಬಿಡಿಸಲು ನಮಗೆ ಆತ ಶಕ್ತಿಯನ್ನೇ ಕೊಟ್ಟಿಲ್ಲವೇನೊ ಎಂಬಂತಲ್ಲವೆ ಇದು? ಇವು ಈಶ್ವರನ ಸಾಹಾಯ್ಯದ ವಿಷಯಗಳೇ ಅಲ್ಲ. ಸಕಾಮ ಭಾವನೆಯಿಂದ ಬಾಹ್ಯ ಕಾರ್ಯಗಳಲ್ಲಿ ಈಶ್ವರನ ಸಹಾಯ ಬೇಡುವುದು ಸರಿಯಲ್ಲ.

### ೪೮. ಈಶ್ವರನ ಬಳಿಯಲ್ಲಿ ಬೇಡುವುದು—ಬೇಡುವ ಯೋಗ್ಯ ರೀತಿ

ನಮಗೆ ಯುದ್ಧದಲ್ಲಿ ಜಯ ಕೊಡು ಎಂದು ಎರಡೂ ಪಕ್ಷಗಳು ದೇವರನ್ನು ಬೇಡುತ್ತವೆ. ಈಶ್ವರ ತನ್ನ ಇಚ್ಛೆಯಂತೆ ಮಾಡುತ್ತಾನೆ. ಇಬ್ಬರಿಗೂ ಜಯ ಕೊಡುವುದು ಆತನಿಗೆ ಶಕ್ಯವಲ್ಲ. ಆದರೆ ನಾನು ಆತನನ್ನು ನನ್ನ ಇಚ್ಛೆಯ ಗುಲಾಮ ಎಂದು ಭಾವಿಸುತ್ತೇನೆ. ಆತ ನನ್ನ ಇಚ್ಛೆಯಂತೆ ತನ್ನ ದೈವೀಶಕ್ತಿಯನ್ನು ಉಪಯೋಗಿಸಬೇಕೆಂದು ನನ್ನ ಅಪೇಕ್ಷೆ. ಆತನ ಇಚ್ಛೆಗೆ ಅನುಕೂಲವಾಗಿ ನಮ್ಮ ಇಚ್ಛೆಯನ್ನು ಮಾಡುವುದು ಆಸ್ತಿಕತೆ. ಆದರೆ ನಾನು ಅದಕ್ಕೆ ವಿರುದ್ಧವಾಗಿಯೆ ನಡೆಯುತ್ತೇನೆ. ನನಗೆ ಜಯವಾಗಲೇಬೇಕೆಂದು ನನ್ನ ಇಚ್ಛೆ ನಿಶ್ಚಯವಾಗಿದೆ. ಆತನನ್ನು ಕೇಳುವುದು ಕೇವಲ ಇಚ್ಛಾಪೂರ್ಣತೆಗಾಗಿ, ಸಫಲತೆಗಾಗಿ. 'ನನ್ನ ಪಕ್ಷ ನ್ಯಾಯವಾಗಿದ್ದರೆ ನನಗೆ ಜಯ ಬರಲಿ, ಇಲ್ಲದಿದ್ದರೆ ಅಪಜಯ ಬರಲಿ, ನನ್ನ ಬುದ್ಧಿಯಾದರೂ ಶುದ್ಧವಾದೀತು'—ವಾಸ್ತವಿಕವಾಗಿ ಪ್ರಾರ್ಥನೆ ಮಾಡಬೇಕಾದ್ದು ಹೀಗೆ.

ಮಹಾಭಾರತದಲ್ಲಿ ಒಂದು ಆಖ್ಯಾಯಿಕೆ ಇದೆ. ಕುರುಡ ಧೃತರಾಷ್ಟ್ರನಿಗೋಸುಗ ಸಹಾನುಭೂತಿಯಿಂದ ಗಾಂಧಾರಿ ತನ್ನ ಕಣ್ಣುಗಳ ಮೇಲೆ ಬಟ್ಟೆ ಕಟ್ಟಿಕೊಂಡಿದ್ದಳು. ಅವಳ ಮಗ ದುರ್ಯೋಧನ ಯುದ್ಧಕ್ಕೆ ಹೊರಡುವ ಮೊದಲು ಅವಳಿಗೆ ನಮಸ್ಕಾರ ಮಾಡಲು ಬಂದ. ಆಗ ಆಕೆ, ನೀನು ಸನ್ಮಾರ್ಗದಲ್ಲಿ ನಡೆಯುತ್ತಿದ್ದರೆ ನಿನಗೆ ಯಶ ಬರಲಿ! ಎಂದು ಹರಸಿದಳು. ಇದೇ ನಿಜವಾದ ಹರಕೆ. ದೇವರೇ, ಕಳೆದು ಹೋದ ನನ್ನ ವಸ್ತು ನನಗೆ ದೊರೆಯಲಿ ಎಂದು ಏಕೆ ಬೇಡಬೇಕು? ವಸ್ತು ದೊರೆಯಲಿ ದೊರೆಯದಿರಲಿ, ನನ್ನ ಶಾಂತಿ ಹೋಗದಿರಲಿ ಎಂದು ಬೇಡಬೇಕು. ಮಗನಿಗೆ ಬೇನೆ ಬಂದರೆ ನನ್ನ ಮಗ ಸಾಯದಿರಲಿ ಎಂಬುದು ಪ್ರಾರ್ಥನೆಯೆ? ಮನುಷ್ಯ ಎಂದಾದರೂ ಸಾಯಲೇಬೇಕು: ಇದು ನಿಶ್ಚಯ. ಈಗ ಸಾಯಬಾರದು ಎಂದು ಬೇಡಿದರೆ, ಮತ್ತೊಮ್ಮೆ ಎಂದಾದರೂ ಸಾಯಲು ಅಡ್ಡಿಯಿಲ್ಲ ಎಂದು ನಿರ್ಣಯಿಸಿಕೊಳ್ಳಿ. ಈಗ ಬೇಡ, ೨೮ನೆಯ ತಾರೀಖಿನ ದಿವಸ ಸಾಯಲಿ ಎಂದು ದೇವರನ್ನು ಬೇಡಿಕೊಳ್ಳಿ. ಆದರೆ ಹೀಗೆ ಯಾರು ಬೇಡಿಕೊಳ್ಳುತ್ತಾರೆ? ಆದುದರಿಂದ ಮಗ ಸಾಯುವುದಿದ್ದರೆ ಸಾಯಲಿ. ಸಾಯುವಾಗ ಅವನಿಗೆ ಮಾನಸಿಕ ವ್ಯಾಕುಲತೆ ಆಗದಿರಲಿ ಎಂದು ಬೇಡಿಕೊಳ್ಳಿ.

## ೪೯. ನನಗೆ ಯೋಗ್ಯವಾದುದೇನೆಂಬುದನ್ನು ಈಶ್ವರನೇ ಬಲ್ಲ. ಆದುದರಿಂದ ಸಕಾಮ ಪ್ರಾರ್ಥನೆ ಬೇಡ

ಮೊದಲು ನಿಮ್ಮದು ಯೋಗ್ಯ ಎಂದು ನಿರ್ಣಯಿಸಿಯೆ ಬಿಡುತ್ತೀರಿ, ಬಳಿಕ ದೇವನನ್ನು ಸಾಹಾಯ್ಯಕ್ಕಾಗಿ ಪ್ರಾರ್ಥಿಸುತ್ತೀರಿ. ಎಂದರೆ ದೇವನನ್ನು ನಿಮ್ಮ ಬುದ್ಧಿಯ ಗುಲಾಮನನ್ನಾಗಿ ಮಾಡಬಯಸುತ್ತೀರಿ. ಉಪನಿಷತ್ತಿನಲ್ಲಿ ಒಂದು ಕತೆಯಿದೆ. ಒಬ್ಬನಿಗೆ ದೇವನು ಪ್ರಸನ್ನನಾದ. ವರ ಬೇಡು ಎಂದ. ಆತನೆಂದ-ದೇವಾ, ನನಗೇನು ಗೊತ್ತಿದೆ? ನನಗೇನು ಯೋಗ್ಯ ಎಂಬುದರ ಜ್ಞಾನ ನನಗೆ ಎಲ್ಲಿದೆ? ನೀನೆ ಎಲ್ಲವನ್ನೂ ಬಲ್ಲೆ. ನನಗೆ ಯೋಗ್ಯವಾದುದನ್ನು ನೀನೇ ಕೊಡು". ಆ ಭಕ್ತ ಪರೀಕ್ಷೆಯಲ್ಲಿ ಪಾರಾದ. ಅದೇ ನಿಜವಾದ ಪರೀಕ್ಷೆಯ ವೇಳೆ. ಆತ ತಾನೇ ನಿರ್ಣಯಿಸಿ ತನ್ನ ನಿರ್ಣಯವನ್ನು ದೇವನ ಮೇಲೆ ಹೇರಲು ಪ್ರಯತ್ನಿಸಲಿಲ್ಲ. ನನ್ನ ಬುದ್ಧಿಯಂತೆ ದೇವನು ನಡೆಯಲು ಸಿದ್ಧನಾಗಿರಬಾರದು; ಅದೇ ನನ್ನ ಕಲ್ಯಾಣ. ಅವನು ನನ್ನ ಬುದ್ಧಿಯಂತೆ

ನಡೆಯಲು ಸಿದ್ಧನಾದರೆ, ನನಗೆ ಅಕಲ್ಯಾಣ ಮಾಡಿ ನನಗೆ ಅವನು ಬುದ್ಧಿಗಲಿಸಬೇಕಾಗಿದೆ ಎಂಬುದು ನಿಶ್ಚಯದ ಮಾತು. ನಾವು ನಮ್ಮ ಬುದ್ಧಿಯನ್ನು ಪ್ರಮಾಣವಾಗಿ ಎಣಿಸುತ್ತೇವೆ. ಆ ಬುದ್ಧಿಯ ನಿರ್ಣಯದಂತೆ ದೇವನು ನಡೆಯಬೇಕೆಂದು ಅಪೇಕ್ಷಿಸುತ್ತೇವೆ. ಎಂದರೆ ಪರಮೇಶ್ವರ ನಮ್ಮ ಬುದ್ಧಿಯಂತೆ ನಡೆವ ಆಳೆಂದು ನಾವು ತಿಳಿಯುತ್ತೇವೆ. ಅವನು ಶಕ್ತಿಶಾಲಿಯೇನೊ ಅಹುದು, ಆದರೂ ಆಳು. ನಿರ್ಣಯದ, ವಿಚಾರದ ಅಧಿಕಾರ ಅವನಿಗಿಲ್ಲ. ವಿಚಾರ ಮಾಡುವವರು, ನಿರ್ಣಯಿಸುವವರು ನಾವು. ನಾವು ಶಾಸಕರು, ಅವನು ವ್ಯವಹಾರ ಖಾತೆಯ ಅಧಿಕಾರಿ. ದೇವನನ್ನು ಒಂದು ಜಡರೂಪಿ ಉಪಕರಣದಂತೆ ಉಪಯೋಗಿಸಲೆಳಸುವುದು ಜಡತೆಯ ಲಕ್ಷಣ. ಅಹಂಕಾರದ ಲಕ್ಷಣವೂ ಅಹುದು. ಇದು ದೇವನಿಗೆ ಅಪಮಾನ ಮಾಡಿದಂತೆ. ಇದು ನಾಸ್ತಿಕತೆ. ಈ ಜಡತೆ ಎಲ್ಲ ಧರ್ಮಗಳಲ್ಲಿಯೂ ಭಕ್ತಿಯಾಗಿ ಎಣಿಸಲ್ಪಟ್ಟಿದೆ! ಸಕಾಮ ಕರ್ಮದಲ್ಲಿ ದೇವನ ಸಹಾಯ ಬೇಡುವುದು ಭಕ್ತಿಯ ಲಕ್ಷಣವಲ್ಲ. ಆದುದರಿಂದ ಗೀತೆ ಎಲ್ಲೆಲ್ಲಿಯೂ ಸಕಾಮತೆಯ ಮೇಲೆ ಪ್ರಹಾರ ಮಾಡಿದೆ. ಗೀತೆ ಸಕಾಮತೆಗೆ ತನ್ನ ವಿರೋಧವನ್ನೇ ವ್ಯಕ್ತಪಡಿಸುತ್ತದೆ.

### ೫೦. ಸಕಾಮ ಭಕ್ತಿಗೂ ಒಂದು ಬಗೆಯ ಮಾನ್ಯತೆ

ಆದರೆ ಗೀತೆ ದಯಾಬುದ್ಧಿಯಿಂದ, ಭಕ್ತನು ಸಕಾಮತೆಯಿಂದಾದರೂ ನನಗೆ ಶರಣಾಗತನಾಗಲಿ, ನಾನು ಅವನಿಗೆ ಫಲ ಕೊಡುತ್ತೇನೆಂದು ಹೇಳಿದೆ. ಅಷ್ಟರ ಮಟ್ಟಿಗೆ ನಾನು ಅವನ ಕಾಮನೆಯನ್ನು ಪೂರ್ಣಮಾಡುತ್ತೇನೆ ಎಂದಿದೆ. ಆದರೆ ಅದು ದಯಾಬುದ್ಧಿಯಿಂದ ಇತ್ತ ಆಶ್ವಾಸನ ಮಾತ್ರ. ಅದೇನೂ ಶಾಸ್ತ್ರವಲ್ಲ. ಹಿತವನ್ನು ಬಯಸುವವನು ನಿಷ್ಕಾಮಭಾವನೆಯಿಂದಲೇ ಶರಣು ಹೋಗಬೇಕು. ಸಕಾಮ ಭಾವನೆಯಿಂದ ಶರಣು ಬಂದವನಿಗೂ ಫಲದ ಆಶ್ವಾಸನವೇನೋ ಇದೆ. ಇದರ ಅರ್ಥ ಸಕಾಮ ಪ್ರಾರ್ಥನೆಗೆ ಒಪ್ಪಿಗೆ ಎಂದಲ್ಲ. ಸಕಾಮತೆಯಿಂದಾದರೂ ಆಗಲಿ, ಅಂತು ಮನುಷ್ಯ ಈಶ್ವರನಿಗೆ ಅನನ್ಯಭಾವದಿಂದ ಶರಣು ಬಂದರೆ ಎಷ್ಟೋ ಒಳಿತು ಎಂಬ ಕರುಣೆ ಅದರಲ್ಲಿ ಸೂಚಿತವಾಗಿದೆ. ಸಕಾಮತೆಯಲ್ಲಿ ಮೂಢತೆ ಇರುವುದಂತೂ ಸೈ; ಅವನತಿಯ ಸಂಭವವೂ ಇದೆ. ಆದರೆ ಅನನ್ಯಭಾವ

ವಿದ್ದರೆ ಉನ್ನತಿಯ ಶಕ್ಯತೆ ಇರುತ್ತದೆ. ಸಕಾಮತೆ ಇಲ್ಲದಾಗುವ ಸಂಭವವುಂಟು ಎಂದು ಅದರ ಅರ್ಥ. ಅನನ್ಯಭಾವದಿಂದ, ಅಂತಃಕರಣ ಪೂರ್ವಕವಾಗಿ ಸಕಾಮ ಪ್ರಾರ್ಥನೆ ಮಾಡಿದರೂ ಈಶ್ವರನ ಸ್ಪರ್ಶದಿಂದ ವೃತ್ತಿಗೆ ಪಾವಿತ್ರ್ಯ ಲಭಿಸುತ್ತದೆ. ಆದರೆ ಸಾಮಾನ್ಯವಾಗಿ ಮನುಷ್ಯ ಸಕಾಮ ಪ್ರಾರ್ಥನೆಯನ್ನು ಅನನ್ಯಭಾವದಿಂದ ಮಾಡುವುದಿಲ್ಲ. ಈಶ್ವರನಲ್ಲಿ ಅವನಿಗೆ ಇತ್ತ ಅಶ್ರದ್ಧೆಯೂ ಇಲ್ಲ, ಅತ್ತ ಶ್ರದ್ಧೆಯೂ ಇಲ್ಲ. ಬೇನೆ ಅಡರಿದರೆ ಇತ್ತ ವೈದ್ಯನ ಕಾಲು ಹಿಡಿಯುತ್ತಾನೆ, ಅತ್ತ ಬ್ರಾಹ್ಮಣರಿಂದ ಅನುಷ್ಠಾನವನ್ನೂ ಮಾಡಿಸುತ್ತಾನೆ. ಅವನ ಶ್ರದ್ಧೆಯೂ ಅಸ್ಥಿರ, ಪುರುಷಾರ್ಥವೂ ಅಪೂರ್ಣ. ಇಂತಹ ದುರ್ಬಲ ಶ್ರದ್ಧೆ ಅಧಃಪಾತಕ್ಕೆ ಕಾರಣವಾಗುತ್ತದೆ. ಸಕಾಮತೆ ಗೌಣ, ನಿಜ; ಆದರೂ ಅದು ಅನನ್ಯಭಕ್ತಿ ಯುತವಾದರೆ ಅದರಲ್ಲೂ ಲೇಸು ಉಂಟು. ಅನನ್ಯ ನಿಷ್ಠೆಯಿಂದ ಸಕಾಮತೆ ಪಾವನವಾಗುತ್ತದೆ. ವಸ್ತುತಃ ನಿಷ್ಕಾಮತೆ, ಅನನ್ಯತೆಗಳ ಯೋಗವೆ ಇಷ್ಟವಾದುದು.

# ೬ ನೆಯ ವ್ಯಾಖ್ಯಾನ

೧

### ೫೧. ಈವರೆಗಿನ ವಿವೇಚನೆಯ ಸಾರಾಂಶ :—

### ಯತತ್ + ವಿಪಶ್ಚಿತ್ + ಮತ್ಪರ = ಸ್ಥಿತಪ್ರಜ್ಞ

ಇಂದ್ರಿಯನಿರೋಧದ ಕಾರ್ಯವನ್ನು, ಸ್ಥೂಲವಾದಷ್ಟನ್ನು, ಸಾಧಕನು ಸ್ವಶಕ್ತಿಯಿಂದ ಮಾಡಿಕೊಳ್ಳಬೇಕು. ಆದರೆ ಅಷ್ಟರಿಂದ, ಎಂದರೆ ಸ್ಥೂಲ ನಿಗ್ರಹದಿಂದ, ಇಂದ್ರಿಯಜಯ ಪೂರ್ಣವಾಗದು. ಮನ ದೊಳಗಿನ ಸವಿ ಇಲ್ಲದಾಗಬೇಕು. ಇಂದ್ರಿಯಗಳು ಮನವನ್ನು ಮುತ್ತ ತೊಡಗಲು ಮನುಷ್ಯನ ಬಳಿಯಲ್ಲಿರುವ ಎರಡೂ ಶಕ್ತಿಗಳು—ಜ್ಞಾನ, ತಿತಿಕ್ಷೆ— ಸಾಕಾಗವು. ಈ ಶಕ್ತಿಗಳಿಗೆ ವಿವೇಕ, ವೈರಾಗ್ಯ ಎಂದೂ ಹೆಸರು ಕೊಡ

ಬಹುದು. ಯಾವಾಗ ಇಂದ್ರಿಯಗಳ ನಿಗ್ರಹ ಮಾಡಬೇಕು, ಯಾವಾಗ ಸಂಯಮ ಮಾಡಬೇಕು ಎಂಬುದನ್ನು ತಿಳಿವ ಶಕ್ತಿ ವಿವೇಕ. ವಿವೇಕ ದಿಂದ ನಿಗ್ರಹದ, ಸಂಯಮದ ಪ್ರಸಂಗಗಳನ್ನು ಅರಿತು ಯಥೋಚಿತವಾಗಿ ವರ್ತಿಸುವ ಶಕ್ತಿ ವೈರಾಗ್ಯ. ಆದರೆ ಹೀಗೆ ವಿವೇಕ-ವೈರಾಗ್ಯ ಪೂರ್ವಕ ವಾಗಿ ಇಂದ್ರಿಯ ನಿರೋಧದ ಪ್ರಯತ್ನ ಮಾಡಿದರೂ ರಸ ಉಳಿಯುತ್ತದೆ. ರಸನಿವೃತ್ತಿಗೋಸುಗ ಮತ್ ಪರಾಯಣನಾಗಬೇಕೆಂದು ಹೇಳಲಾಗಿದೆ. ವಿವೇಕ ವೈರಾಗ್ಯ ಈ ಎರಡೂ ಶಕ್ತಿಗಳನ್ನು ಉಪಯೋಗಿಸಿದ ಬಳಿಕಲೂ, ಉಪಯೋಗಿಸುತ್ತಿರುವಾಗಲೂ, ಈಶ್ವರ-ಪರಾಯಣನಾಗಿರಬೇಕು. ಈ ಬಗೆಯಾಗಿ ಈ ಮೂರು ಶ್ಲೋಕಗಳಲ್ಲಿ ಇಂದ್ರಿಯಜಯದ ಪರಿಪೂರ್ಣ ವ್ಯಾಖ್ಯೆಯೂ ಸಾಧನೆಯೂ ಹೇಳಲ್ಪಟ್ಟಿದೆ. ಇಂದ್ರಿಯಗಳ ನಿಗ್ರಹವನ್ನೂ ಸಂಯಮವನ್ನೂ ಮಾಡಿ ಕಾಮನಾಮುಕ್ತಿಯನ್ನು ಸಾಧಿಸುವುದು ಇಂದ್ರಿಯ ಜಯದ ಪರಿಪೂರ್ಣ ವ್ಯಾಖ್ಯೆ. ಇದರ ಮೂಬಗೆಯ ಸಾಧನೆ ಮೂರು ವಿಶೇಷಣಗಳಿಂದ ತೋರಿಸಲ್ಪಟ್ಟಿತು. **ಯತತ್, ವಿಪಶ್ಚಿತ್, ಮತ್ಪರ**- ಈ ಮೂರು ವಿಶೇಷಣಗಳ ಬೇರೀಜೇ ಗೀತೆಯ ಸ್ಥಿತಪ್ರಜ್ಞ. ಈ ಬಗೆಯಾಗಿ ಇಂದ್ರಿಯ ನಿರೋಧದ ವಿಜ್ಞಾನವನ್ನು ಹೇಳುವ ಈ ಮೂರು ಶ್ಲೋಕಗಳ ತ್ರಿಕ ಇಲ್ಲಿಗೆ ಮುಗಿಯಿತು.

## ೫೨. ಈಶ್ವರ ಪರಾಯಣತೆ ಸ್ವತಂತ್ರ ಧ್ಯೇಯ

ಆದರೆ ಈವರೆಗೆ ನಾವು ಮಾಡಿದ ಅರ್ಥಕ್ಕಿಂತ ಆಳವಾದ ಅರ್ಥವನ್ನು ಹೇಳುವ ಭಾಷೆ ಇದು. ಇಂದ್ರಿಯ ನಿರೋಧದ ಕಾರ್ಯದಲ್ಲಿ ಮನುಷ್ಯನ ಎರಡು ಶಕ್ತಿಗಳೂ ಸಾಲವು. ಆದುದರಿಂದ ಅದನ್ನು ಪೂರ್ಣಗೊಳಿಸಲು ಸಾಧಕನು ಈಶ್ವರಪರಾಯಣನಾಗಬೇಕೆಂದಿಷ್ಟೇ ಹೇಳಿದೆ. ಯುಕ್ತಿ ಪೂರ್ವಕವಾಗಿ ಇಂದ್ರಿಯನಿಗ್ರಹವನ್ನು ಶಕ್ಯವಿದ್ದ ಮಟ್ಟಿಗೆ ಸಾಧಿಸಿ ಈಶ್ವರಪರಾಯಣನಾಗಿರಬೇಕೆಂದು ಇಲ್ಲಿ ಹೇಳಿದೆ. ಎಂದರೆ ಈಶ್ವರ-ಪರಾಯಣತೆ ಸ್ವತಂತ್ರ ಧ್ಯೇಯವೆಂದು ಇಲ್ಲಿಯ ಭಾಷೆಯ ಆಳವಾದ ಅರ್ಥ. ಈ ಅರ್ಥವೇ ಶಾಸ್ತ್ರೀಯ ದೃಷ್ಟಿಯಿಂದ ಸರಿ. ಅದು ಹೇಗೆಂಬು ದನ್ನು ನೋಡೋಣ.

## ೫೩. ಧ್ಯೇಯವು ವಿಧಾಯಕವಿರಬೇಕು

ಮನದ ಮೇಲೆ ಇಂದ್ರಿಯಗಳ ಆಕ್ರಮಣವಾಗಲು, ಸಾಧಕನು ಮನದೊಳಗಿನ ದೋಷವನ್ನು ತೆಗೆದೊಯಲು ಪ್ರಯತ್ನಿಸತೊಡಗುತ್ತಾನೆ. ಆದರೆ ಮನದೊಳಗಿನ ವಿಕಾರವನ್ನು ತೆಗೆದೊಗೆಯಬೇಕು, ತೆಗೆದೊಗೆಯಬೇಕು, ತೆಗೆದೊಗೆಯಬೇಕು ಎಂದು ಒಂದೇ ಸಮನೆ ಚಿಂತನಮಾಡುತ್ತ ಮಾಡುತ್ತ, ಆ ವಿಕಾರ ಮನದಿಂದ ಹೊರಟುಹೋಗುವುದರ ಬದಲು ಮತ್ತಷ್ಟು ದೃಢವಾಗುತ್ತದೆ. ಏಕೆಂದರೆ ಮನಕ್ಕೆ ಅದರದೇ ಚಿಂತನ ಅಂಟಿಕೊಳ್ಳುತ್ತದೆ. ಇದಕ್ಕೆ ವಿರೋಧಿಭಕ್ತಿ ಎನ್ನುತ್ತಾರೆ. ದುರ್ಜನತೆಯ ಪ್ರತಿಕಾರಕ್ಕೋಸುಗವೇ ಆದರೂ ಚಿಂತನಮಾಡುತ್ತ ಉಳಿದರೆ ಚಿತ್ತದಲ್ಲಿ ದುರ್ಜನತೆ ಹುಟ್ಟುತ್ತದೆ. ವಿರೋಧಿಚಿಂತನದಿಂದ ವಿಕಾರದ ನಿರಾಸವಾಗುವುದರ ಬದಲು ಅದು ಮತ್ತಷ್ಟು ಆಳವಾಗಿ ನಿಲ್ಲುತ್ತದೆ. ವಿರೋಧಿಚಿಂತನದಿಂದ ಕಂಸ ಕೃಷ್ಣಮಯನಾಗಿದ್ದನೆಂದು ಭಾಗವತ ಹೇಳುತ್ತದೆ. ಕೇವಲ ನಿಷೇಧಕ ಸಾಧನದಿಂದ ಮನುಷ್ಯನು ವಿಕಾರದಲ್ಲಿ ಬೀಳುತ್ತಾನೆಂಬ ಅನುಭವವಿದೆ. ಮನದಿಂದ ವಿಷಯದ ಸವಿಯನ್ನು ಹೊರದೂಡಬೇಕೆಂಬ ನಿಷೇಧಕ ಸಾಧ್ಯವನ್ನು ಮುಂದಿಟ್ಟುಕೊಂಡರೆ ನಿಷೇಧಕ ಸಾಧನವು ಪ್ರಾಪ್ತವಾಗುತ್ತದೆ. ಆದುದರಿಂದ ಕಣ್ಣ ಮುಂದೆ ಒಂದು ವಿಧಾಯಕ ಧ್ಯೇಯವೂ ಅದಕ್ಕನುರೂಪವಾದ ವಿಧಾಯಕ ಸಾಧನವೂ ಬೇಕು. ಬ್ರಹ್ಮ–ಪ್ರಾಪ್ತಿಯ ತೀವ್ರವಾದ ಇಚ್ಛೆಯೆ ಆ ವಿಧಾಯಕ ಧ್ಯೇಯ.

## ೫೪. ಬ್ರಹ್ಮಚರ್ಯ ಎಂದರೆ ಈಶ್ವರಪರಾಯಣತೆ

ಬ್ರಹ್ಮದೊಡನೆ ತನ್ಮಯನಾಗಲು ಎಂದರೆ ಈಶ್ವರಪರಾಯಣನಾಗಲು ಪ್ರಯತ್ನಿಸುವುದು ವಿಧಾಯಕ ಸಾಧನೆ. ಇದಕ್ಕೆ ಬ್ರಹ್ಮಚರ್ಯವೆನ್ನುತ್ತಾರೆ. ಬ್ರಹ್ಮದೊಡನೆ ಅಥವಾ ಈಶ್ವರನೊಡನೆ ವೃತ್ತಿಯ ತಾದಾತ್ಮ್ಯವಾಗಬೇಕು. ಬ್ರಹ್ಮಚರ್ಯವೆಂದರೆ ಕೇವಲ ಇಂದ್ರಿಯನಿಗ್ರಹವಲ್ಲ. ಇಂದ್ರಿಯನಿಗ್ರಹವೇನೂ ಸ್ವತಂತ್ರ ಅಥವಾ ಅಂತಿಮ ಸಾಧ್ಯವಲ್ಲ. ಪ್ರಜ್ಞೆಯನ್ನು ಸ್ಥಿರಗೊಳಿಸುವುದು ಉದ್ದಿಷ್ಟ. ಇಂದ್ರಿಯನಿಗ್ರಹ ಪ್ರಜ್ಞೆಯನ್ನು ಸ್ಥಿರಗೊಳಿಸಲು ಸಾಧನ. ಆದರೆ ಪ್ರಜ್ಞೆಯನ್ನು ಸ್ಥಿರಗೊಳಿಸುವುದೆಂದರೆ ಎಲ್ಲಿ ಸ್ಥಿರಗೊಳಿಸಬೇಕು? ಇದಕ್ಕೆ ಉತ್ತರ ಈಶ್ವರನಲ್ಲಿ ಅದನ್ನು ಸ್ಥಿರಗೊಳಿಸ

ಬೇಕು ಎಂದು ಇಂದ್ರಿಯನಿಗ್ರಹವನ್ನು ಸಾಧಿಸಲು ಮತ್ಪರಾಯಣನಾಗು, ಕಾಮನಾ ನಿವೃತ್ತಿಗೋಸುಗ ಮತ್ಪರಾಯಣನಾಗು ಎಂದು ಇಲ್ಲಿ ಹೇಳಿಲ್ಲ. ಇದು ನಿಷೇಧಕ ಅರ್ಥ ; ಪೂರ್ಣ ಅರ್ಥವಲ್ಲ. ಇಂದ್ರಿಯ ನಿಗ್ರಹ ಮಾಡಿ ಮತ್ಪರಾಯಣನಾಗು ಎಂಬೀ ವಿಧಾಯಕ ಅರ್ಥ ಈ ವಾಕ್ಯದಲ್ಲಿ ಉಂಟು. ಕಾಮನೆಗಳು ಹೊರಗಿನಿಂದ ನಿವೃತ್ತವಾಗುವುದಾದರೆ ಅವುಗಳಿಗೆ ಇರಲು ಸ್ಥಳವಾವುದು? ಆತ್ಮವೇ ಆ ಸ್ಥಳ. ಆ ಆತ್ಮವೇ ಇಲ್ಲಿ ಮತ್ಪರಾಯಣ ಶಬ್ದದಲ್ಲಿ ಸೂಚಿಸಲ್ಪಟ್ಟಿದೆ. ಕಾಮನೆಯು ಆಲಂಬನವನ್ನು ತೆಗೆದೊಗೆದರೆ, ಮನವು ನಿರಾಲಂಬವೂ ಬರಿದೂ ಆಗುತ್ತದೆ. ಹಾಗೆ ಅದು ಬಹಳ ಕಾಲ ಉಳಿಯಲಾರದು. ಆದುದರಿಂದ ಅದಕ್ಕೆ ಈಶ್ವರನ ಆಧಾರವನ್ನಿತ್ತು ಅದನ್ನು ಈಶ್ವರ ಚಿಂತನದಿಂದ ತುಂಬಬೇಕು. ಅದು ಈಶ್ವರಚಿಂತನದಲ್ಲಿ ಮಗ್ನವಾಯ್ತೆಂದರೆ, ಅದನ್ನು ಇಂದ್ರಿಯಗಳು ಆಕ್ರಮಿಸುವ ಪ್ರಶ್ನೆಯೆ ಉಂಟಾಗದು.

## ೫೫. ಈಶ್ವರಭಕ್ತಿ ಈಶ್ವರಭಕ್ತಿಗೋಸುಗವೇ

ಇಂದ್ರಿಯ ನಿರೋಧದ ಪೂರ್ಣತೆಗೋಸುಗ ಈಶ್ವರ ಭಕ್ತಿಯ ನೆರವನ್ನು ಪಡೆವುದು ಯೋಗ್ಯವೆಂದು ಈ ಮೊದಲು ಹೇಳಿದೆ. ಆದರೆ ಆ ಸಾಧನವೂ ಪೂರ್ಣವಾದುದಲ್ಲ. ಏಕೆಂದರೆ ಈಶ್ವರಭಕ್ತಿ ಏತರದೂ ಸಾಧನವಲ್ಲ, ಸ್ವಯಂಭೂ ಸಾಧ್ಯ ಎಂದು ಆಮೇಲೆ ಲಕ್ಷ್ಯದಲ್ಲಿ ಬಂದಿತು. ಈಶ್ವರ ಭಕ್ತಿ ಯಾವ ಅವಾಂತರ ಉದ್ದೇಶಕ್ಕಾಗಿಯೂ ಅಲ್ಲ. ಈಶ್ವರಭಕ್ತಿ ಈಶ್ವರಭಕ್ತಿಗೋಸುಗವೇ. ಇಂದು ನಾವು ಕಲೆಗೋಸುಗ ಕಲೆ, ವಿದ್ಯೆಗೋಸುಗ ವಿದ್ಯೆ, ಜ್ಞಾನಕ್ಕೋಸುಗ ಜ್ಞಾನಎಂಬ ಭಾಷೆಯನ್ನು ಕೇಳುತ್ತೇವೆ. ಆದರೆ ಈ ಭಾಷೆ ಕೊನೆಯವರೆಗೆ ನಿಲ್ಲದು. ಸಾಂಖ್ಯರು ಈ ವಿಷಯದ ಇತಿಶ್ರೀಯನ್ನು ಎಂದೋ ಮಾಡಿಬಿಟ್ಟಿದ್ದಾರೆ. ಜಡವಸ್ತು ತನಗೋಸುಗ ಎಂದೂ ಇರಲಾರದು. ಪ್ರಕೃತಿ ಪುರುಷನಿಗಾಗಿ, ಕಲೆ ಆತ್ಮಕ್ಕಾಗಿ, ವಿದ್ಯೆ-ಜ್ಞಾನ ನನಗೋಸುಗ. ಜಡಕ್ಕೋಸುಗ ಜಡವೆಂಬ ಭಾಷೆಯೆ ತಪ್ಪು. ಆದರೆ ಈ ಭಾಷೆ ಉಳಿದೆಲ್ಲ ವಿಷಯಗಳಲ್ಲಿ ಕುಂಟು; ಆದರೆ ಈಶ್ವರಭಕ್ತಿಯ ವಿಷಯದಲ್ಲಿ ಮಾತ್ರ ಸರಿ. ಈಶ್ವರಭಕ್ತಿಗಾಗಿಯೇ ಈಶ್ವರಭಕ್ತಿ ಎಂಬ ಭಾಷೆ ಕುಂಟು ಅಲ್ಲ. ಏಕೆಂದರೆ, ಈಶ್ವರ ಜಡವಸ್ತುವಲ್ಲ; ಬಾಹ್ಯ

ವಸ್ತುವಲ್ಲ. ಈಶ್ವರ ನನ್ನದೇ ಪರಿಶುದ್ಧರೂಪ. ಈಶ್ವರಭಕ್ತಿಯೆ ಧ್ಯೇಯ. ಉಳಿದೆಲ್ಲ ಕಾಮನೆಗಳೂ ಸಾಧನೆಗಳೂ ಅದಕ್ಕೋಸುಗವೇ ಆಗಬೇಕು.

## ೩೬. ಭಕ್ತನ ಭೂಮಿಕೆ ನಿಸರ್ಗೋಪಚಾರವೇತ್ತನಂತೆ

ರೋಗ ಬಂದಿದೆ. ಸರಿಪಡಿಸಲು ಉಪಾಯ ನಡೆದಿದೆ. ರೋಗ ಏಕೆ ಹೋಗಬೇಕು? ರೋಗ ಕಳೆಯಬೇಕೆಂಬುದೇನೂ ಸ್ವತಂತ್ರ ಧ್ಯೇಯ ವಲ್ಲ. ಧ್ಯೇಯ ಆತ್ಮಕಲ್ಯಾಣ. ಆತ್ಮಕಲ್ಯಾಣಕ್ಕೋಸುಗ ರೋಗ ಹೋಗ ಬೇಕೆಂದಿದ್ದರೆ ಅದು ಹೋಗುವುದು ಇಷ್ಟ. ರೋಗ ಹೋಗದಿರುವುದು ಅವಶ್ಯಕವಾಗಿದ್ದರೆ, ಅದು ಹೋಗದಿರುವುದು ಇಷ್ಟ. ಒಮ್ಮೆ ಒಬ್ಬ ಶಾಸ್ತ್ರಜ್ಞನೊಡನೆ ಮಾತಿನ ಪ್ರಸಂಗ ಬಂದಿತು. ಆತನು ನಿಸರ್ಗೋಪ ಚಾರಪದ್ಧತಿಯ ಪುರಸ್ಕರ್ತ. ನಮ್ಮ ಶಾಸ್ತ್ರದಂತೆ ಎಲ್ಲ ರೋಗಿಗಳು ಗುಣ ಹೊಂದುವುದಿಲ್ಲ, ಎಲ್ಲ ರೋಗಗಳು ಗುಣವಾಗುತ್ತವೆ, ಎಂದ ಆತ. ಆತನ ಭಾಷೆ ಕ್ರಮವಾಗಿತ್ತು. ಆತನ ಪದ್ಧತಿಯಲ್ಲಿ ಸಾಯಲು ಯೋಗ್ಯರಾದ ರೋಗಿಗಳು ಸಾಯುತ್ತಾರೆ. ಆದರೆ ಶಾಂತಿಯಿಂದ ಸಾಯುತ್ತಾರೆ. ಗುಣ ವಾಗಲು ಯೋಗ್ಯರಾದ ರೋಗಿಗಳು ಗುಣ ಹೊಂದುತ್ತಾರೆ. ಅವರೂ ಶಾಂತಿಪೂರ್ವಕವಾಗಿ ಗುಣಪಡುತ್ತಾರೆ. ಹಾಗೆಯೆ ಇಲ್ಲಿ ಭಕ್ತನ ಭೂಮಿಕೆ ಈ ನಿಸರ್ಗೋಪಚಾರ ವೇತ್ತನಂತೆ. 'ಈಶ್ವರನ ಯೋಜನೆಯಂತೆ ನನ್ನ ಆತ್ಮೋನ್ನತಿಗೋಸುಗ ರೋಗ ಗುಣವಾಗುವುದು ಇಷ್ಟವಾಗಿದ್ದರೆ ಆಗಲಿ, ಅದೇ ಯೋಜನೆಯಂತೆ ಆತ್ಮೋನ್ನತಿಗೋಸುಗ ಅದು ಗುಣವಾಗುವುದು ಇಷ್ಟವಿರದಿದ್ದರೆ ಬೇಡ' ಎನ್ನುತ್ತಾನೆ ಭಕ್ತ. ಅವನು ಎಲ್ಲ ಅವಾಂತರ ನಿರ್ಣಯದ ಕೆಲಸವನ್ನು ದೇವರಿಗೆ ಒಪ್ಪಿಸಿ ನಿಶ್ಚಿಂತನಾಗುತ್ತಾನೆ. ಅವನ ಬುದ್ಧಿಯ ನಿರ್ಣಯ ಒಂದೇ ಆಗಿರುತ್ತದೆ. 'ನನಗೆ ಆತ್ಮೋನ್ನತಿ ಇಷ್ಟ ವಾದುದು, ಈಶ್ವರ ಭಕ್ತಿ ಇಷ್ಟವಾದುದು' ಇದನ್ನಷ್ಟೇ ಅವನು ಬಲ್ಲ. ಉಳಿದುದು ಯಾವುದನ್ನೂ ಅರಿಯ. ಎಲ್ಲ ಬಾಹ್ಯ ಕಾರ್ಯಗಳನ್ನು ಅವನು ಈಶ್ವರಭಕ್ತಿಯ ಪ್ರಾಪ್ತಿಗಾಗಿ ಮಾಡುತ್ತಾನೆ. ಯಾವ ಹೊರಗಿನ ಕಾರ್ಯ ಕ್ಕೋಸುಗವೂ ಅವನು ಈಶ್ವರಭಕ್ತಿಯನ್ನು ದುರುಪಯೋಗ (ಎಕ್ಸ್ ಪ್ಲಾಯಿಟ್) ಮಾಡಲೆಳಸುವುದಿಲ್ಲ, ಸುಲಿಯಲೆಳಸುವುದಿಲ್ಲ.

೨

## ೫೭. ಅನನ್ಯತೆ ಸಕಾಮತೆಯನ್ನು ರಕ್ಷಿಸುತ್ತದೆ

ಗೌಣವೆಂದೇ ಆಗಲಿ, ಅನನ್ಯತೆಯು ಕರಾರಿನಿಂದಲೇ ಆಗಲಿ, ಗೀತೆ ಸಕಾಮ ಭಕ್ತಿಗೆ ಅವಕಾಶ ಕೊಟ್ಟಿದ್ದೇಕೆ ಎಂಬ ಪ್ರಶ್ನೆ ಸಹಜವಾಗಿ ಹುಟ್ಟಬಹುದು. ಉತ್ತರ ಹೀಗಿದೆ: ಕಾಮನೆಯು ಸ್ವಾರ್ಥಗೋಸುಗವಾದರೂ ಎಲ್ಲ ಅವಾಂತರ ಆಧಾರಗಳನ್ನು ತೊರೆದು ಅನನ್ಯತೆಯಿಂದ ಈಶ್ವರನಿಗೆ ಶರಣಾಗತನಾದರೆ, ಅಂಥವನು ಉತ್ತಮ ನಿಶ್ಚಯವನ್ನು ಮಾಡಿದಂತಾಗುತ್ತದೆ. ಬೇರೆ ಎಲ್ಲ ಆಧಾರಗಳನ್ನು ತೊರೆದು ಈಶ್ವರನ ಆಧಾರವನ್ನು ಆಶ್ರಯಿಸಿಕೊಂಡಿರುವುದೇನು, ಸಣ್ಣ ಪುಟ್ಟ ಕಾರ್ಯವಲ್ಲ. ಆದುದರಿಂದ ಸಕಾಮತೆ ಗೌಣವಾಗಿದ್ದರೂ ಈ ನಿಶ್ಚಯು ಆತ್ಮೋನ್ನತಿಗೆ ಸಾಧಕವಾಗುತ್ತದೆ. ಮುಂದೆ ಒಂಬತ್ತನೆಯ ಅಧ್ಯಾಯದಲ್ಲಿ ಇದಕ್ಕೂ ಮುಂದೆ ಹೋಗಿ ಭಗವಂತ, " ನನ್ನನ್ನು ಅನನ್ಯಭಾವದಿಂದ ಭಜಿಸುವವನು ಅತ್ಯಂತ ದುರಾಚಾರಿಯಾಗಿದ್ದರೂ, ಬೇಗನೆ ಅವನ ಭಾವನೆ ಶುದ್ಧವಾಗುತ್ತದೆ," ಎಂದು ಹೇಳುತ್ತಾನೆ. "ಕ್ಷಿಪ್ರಂ ಭವತಿ ಧರ್ಮಾತ್ಮಾ". ಅವನು ಬೇಗನೆ ಧರ್ಮಾತ್ಮನಾಗುತ್ತಾನೆ. ಇದು ಅನನ್ಯತೆಯ ಸಾಮರ್ಥ್ಯ. ಕಾಯಿಲೆಯಾಯಿತು. ಬೇಗನೆ ಗುಣವಾಗಬೇಕೆಂದು ತಳಮಳವಾಗುತ್ತದೆ. ಆದರೆ ಎಲ್ಲ ಭಾರವನ್ನೂ ದೇವರಿಗೆ ಒಪ್ಪಿಸಿದ್ದಾಯಿತು. ಡಾಕ್ಟರ್ ಬೇಡ, ಗೀಕ್ಟರ್ ಬೇಡ. ಆಹಾರವನ್ನೂ ತೊರೆದಾಯಿತು. 'ದೇವಾ, ನನಗೆ ಗುಣಮಾಡು' ಎಂದು ಅನನ್ಯತೆಯಿಂದ ಮೊರೆಹೊಕ್ಕದ್ದಾಗಿದೆ. ಈಶ್ವರ ಅವನ ಶ್ರದ್ಧೆಯನ್ನು ಕಂಡು ಅವನಿಗೆ ಗುಣಮಾಡುತ್ತಾನೆ, ಅಥವಾ ಅವನಿಗೆ ದರ್ಶನವಿತ್ತು ತನ್ನೆಡೆಗೆ ಕರೆದುಕೊಂಡು ಹೋಗುತ್ತಾನೆ. ಎರಡನೆಯದಾದರೆ ಅವನ ಕಾಮನೆ ಪೂರ್ಣವಾಗಲಿಲ್ಲವೆಂದು ಜನರಿಗೆ ತೋರಬಹುದು. ಆದರೆ ಅವನಿಗೆ ದೇವರಲ್ಲಿರುವ ಅನನ್ಯಶ್ರದ್ಧೆಯಿಂದ ತನ್ನ ಅತ್ಯಂತ ಕಲ್ಯಾಣವಾಯ್ತೆಂದು ಅವನಿಗೆ ನಿಶ್ಚಯವಾಗಿ ಅನುಭವವಾಗುತ್ತದೆ.

## ೫೮. ಸುದಾಮ ದೇವನ ದೃಷ್ಟಾಂತ

ಈ ವಿಷಯದಲ್ಲಿ ಸುದಾಮದೇವನ ಉದಾಹರಣೆ ಉತ್ತಮವಾಗಿದೆ. ದಾರಿದ್ರ್ಯದಿಂದ ಅತಿಯಾಗಿ ನೊಂದು ಅವನ ಹೆಂಡತಿ ಅವನನ್ನು ಶ್ರೀ

ಕೃಷ್ಣನೆಡೆಗೆ ಕಳುಹಿದಳು. ಶ್ರೀಕೃಷ್ಣ ಆತನಿಗೆ ಏನನ್ನೂ ಕೊಡದೆ ತಿರುಗಿ ಕಳುಹಿದ. ತಾನೇ ಆತನೊಡನೆ ದೂರದವರೆಗೆ ನಡೆಯುತ್ತ ಬಂದು ಹೋಗಿ ಬಾ ಎಂದು ಹೇಳಿ ಮರಳಿದ. ಸುದಾಮ ಶ್ರೀಕೃಷ್ಣನೆಡೆಗೆ ಹೋಗುವಾಗ ಹಿಡಿ ಅವಲಕ್ಕಿಯನ್ನು ಒಯ್ದಿದ್ದ. ಅದನ್ನೂ ಕಳೆದುಕೊಂಡು ಬರಿಗೈಯಿಂದ ಮರಳಿದ. ಆದರೆ ಮನಸ್ಸಿನಲ್ಲಿ ಆನಂದ. "ಹೆಂಡತಿ ನನ್ನನ್ನು ಸಕಾಮತೆಯಿಂದ ದೇವನೆಡೆಗೆ ಕಳುಹಿದಳು. ಆದರೆ ಈ ಮಾಧವ ಎಷ್ಟೊಂದು ದಯಾವಂತ! ನನ್ನ ಸಲ್ಲದ ಕಾಮನೆಯನ್ನು ಆತ ಪೂರ್ಣಮಾಡಲಿಲ್ಲ" ಎಂದು ಸುದಾಮ ತನ್ನ ಭಕ್ತಿಯನ್ನು ದೃಢಗೊಳಿಸುತ್ತಾ ಊರಿಗೆ ಮರಳುತ್ತಾನೆ. ಆದರೆ ಊರೆಲ್ಲವೂ ಚಿನ್ನದ ಊರಾಗಿದ್ದಿತು! ತನ್ನ ಮನಸ್ಸಿನಲ್ಲೇ ಯೋಚಿಸುತ್ತಾನೆ, "ದೇವರ ಕೃಪೆ ಎಷ್ಟು ಅಪಾರ. ಊರೆಲ್ಲ ಚಿನ್ನದ ಊರು ಮಾಡಿದಾನೆ. ಇದನ್ನು ನನ್ನ ತುಚ್ಛ ಸುಖೋಪಭೋಗಕ್ಕೆ ಉಪಯೋಗಿಸಲೆ? ದೇವರು ಕೊಟ್ಟುದನ್ನು ಜನತೆಯ ಸೇವೆಗಾಗಿ ಇನ್ನು ಉಪಯೋಗಿಸುತ್ತೇನೆ." ದೇವರು ಕೊಟ್ಟರೂ ಆತನ ಕೃಪೆ; ಕೊಡದಿದ್ದರೂ ಆತನ ಕೃಪೆ. ಈ ಅನನ್ಯತೆಯ ಭಾವನೆಯಲ್ಲಿ ನೆಲಸಿದೆ ಭಕ್ತಿಯ ಮಹತ್ವ.

### ೫೯. ಭಕ್ತನಿಗೆ ಎಲ್ಲ ಸಂಗತಿಗಳಲ್ಲಿ ದೇವನ ಕೃಪೆ ಕಾಣಿಸುತ್ತದೆ.

ಏಕನಾಥನಿಗೆ ದೇವರು ಮನಸ್ಸಿಗೆ ತಕ್ಕ ಹೆಂಡತಿಯನ್ನು ಕೊಟ್ಟ. ಅವನಿಗೆ ಅನಿಸಿತು, "ದೇವರಿಗೆ ನನ್ನ ಮೇಲೆ ಎಷ್ಟು ದಯೆ! ನಾನು ಇವಳ ಸಹಾಯದಿಂದ ಶೀಘ್ರವಾಗಿ ದೇವರನ್ನು ಕೂಡಿಯೇನು." ತುಕಾರಾಮನಿಗೆ ಅನುಕೂಲ ಸ್ತ್ರೀ ಲಭಿಸಲಿಲ್ಲ. ಅವನು ಅನ್ನುತ್ತಿದ್ದ, "ದೇವರಿಗೆ ನನ್ನ ಮೇಲೆ ಎಷ್ಟು ಕೃಪೆ! ಆತ ನನಗೆ ಅನುಕೂಲ ಸ್ತ್ರೀಯನ್ನು ಕೊಡಲಿಲ್ಲ. ಇಲ್ಲದಿದ್ದರೆ ನಾನು ಸಂಸಾರದಲ್ಲೇ ನಿಶ್ಚಯವಾಗಿಯೂ ಆಸಕ್ತನಾಗಿರುತ್ತಿದ್ದೆ." ಮನಸ್ಸಿಗೆ ತಕ್ಕ ಹೆಂಡತಿ ದೊರೆತರೂ ಕೃಪೆ, ಮನಸ್ಸಿನ ವಿರುದ್ಧ ನಡೆವವಳು ದೊರೆತರೂ ಕೃಪೆ. ದೊರೆಯದೆಯೆ ಇದ್ದರೂ ಕೃಪೆ, ದೊರೆತು ಸತ್ತರೂ ಕೃಪೆ. "ದೇವಾ, ನಿನ್ನ ನನ್ನ ನಡುವೆ ತೆರೆಯಿತ್ತು. ಅದು ಈಗ ಹೋಯ್ತು. ಇಬ್ಬರದೂ ಏಕಛತ್ರ ರಾಜ್ಯವಾಯ್ತು."* ಹೀಗೆ

* 'ಬಾಯಿಲ್ ಮೇಲೀ ಮುಕ್ತ ಝಾಲೀ, ದೇವೇ ಮಾಯಾ ಸೋಡವಿಲೀ
ವಿಠೋ ತುಝೇ ಮಾಝೇ ರಾಜ್ಯ'

ಭಕ್ತನಿಗೆ ಎಲ್ಲ ಸಂಗತಿಗಳಲ್ಲಿ ದೇವನ ಕೃಪೆಯೆ ಕಾಣಿಸುತ್ತದೆ. ಅನನ್ಯ ಭಕ್ತನ ಭೂಮಿಕೆಯ ಮಹತ್ತ್ವವಿದೇ.

### ೬೦. ಅನನ್ಯಭಕ್ತನ ಸಕಾಮತೆಯೆಂದರೆ ವ್ಯಾಪಕ ಸದ್ಭಾವನೆಯೆ ಅಹುದು : ಒಂದು ಲೌಕಿಕ ದೃಷ್ಟಾಂತ

ಕಾಮನಾಪೂರ್ವಕವಾದರೂ ಅನನ್ಯತೆಯಿಂದ ಮಾಡಿದ ಈಶ್ವರಭಕ್ತಿಯಲ್ಲಿ ಉದ್ದೇಶ ಗೌಣವಾಗಿದ್ದರೂ ಅಥವಾ ಹಾಗೆ ತೋರಿದರೂ, ಅನನ್ಯತೆಯ ಮೂಲಕ ದೇವರ ಕೃಪೆಯಿಂದ ಚಿತ್ತಶುದ್ಧಿಯಾಗುತ್ತದೆ; ಅಥವಾ ಬೇರೆ ಭಾಷೆಯಲ್ಲಿ, ಸಕಾಮತೆ ಲೋಪವಾಗಿ ನಿಷ್ಕಾಮತೆ ಲಭಿಸುತ್ತದೆ; ಇನ್ನೂ ಬೇರೆ ಭಾಷೆಯಲ್ಲಿ, ಸಕಾಮತೆಯೆ ನಿಷ್ಕಾಮವಾಗುತ್ತದೆ. ಕಿಂಬಹುನಾ, ಅನನ್ಯತೆಯೊಡನೆ ಕೂಡಿದ ಸಕಾಮತೆ, ಸೂಕ್ಷ್ಮವಾಗಿ ನೋಡಿದರೆ, ಸಂಕುಚಿತ ಸಕಾಮತೆಯಲ್ಲ. ಅದು ವ್ಯಾಪಕ ಸದ್‌ಭಾವನೆಯೆ. ಇದಕ್ಕಾಗಿ ದೊಡ್ಡ ಉದಾಹರಣೆಗಳೇನು ಬೇಡ; ಸಣ್ಣ ಲೌಕಿಕ ಉದಾಹರಣೆಯೆ ಸಾಕು. ಒಬ್ಬ ಸ್ತ್ರೀ; ಅವಳಿಗೆ ಈಶ್ವರನಲ್ಲಿ ಅನನ್ಯಭಕ್ತಿ. ಅವಳ ಮೂಗುತಿ ಕಳೆದುಹೋಗಿದೆ. ಅದು ದೊರೆಯಬೇಕೆಂದು ಅವಳ ಇಚ್ಛೆ. "ದೇವರೆ, ನನ್ನ ಮೂಗುತಿ ಕೈಗೆ ಬರಲಿ. ನನ್ನ ಭಕ್ತಿಯಲ್ಲಿ ಎಳ್ಳಷ್ಟೂ ಕೊರತೆಯಿಲ್ಲವಲ್ಲ. ಹಾಗಿದ್ದೂ ನನ್ನ ಮೂಗುತಿ ಏಕೆ ಹೋಗಬೇಕು? ಇತರರಿಗೆ ಅದನ್ನು ತೆಗೆದುಕೊಳ್ಳುವ ಇಚ್ಛೆ ಏಕಾಗಬೇಕು? ಅದನ್ನು ಹುಡುಕಿ ಪಡೆಯಲು ನಾನು ಸ್ವಲ್ಪವೂ ಪ್ರಯತ್ನಿಸೆ. ಪೋಲೀಸರಿಗೂ ತಿಳಿಸಿಲ್ಲ. ಯಾರ ವಿಷಯದಲ್ಲಿಯೂ ಸಂಶಯ ತಳೆಯೆ. ಅದನ್ನು ಒಯ್ದವಗೆ ನೀನು ಸದ್ಭಾವನೆ ಕೊಟ್ಟರೆ ಅವನು ಅದನ್ನು ತಂದುಕೊಟ್ಟಾನು. ಅವನಿಗೆ ನಾನು ಬಾಯ್ತುಂಬ ಸಕ್ಕರೆ ಕೊಟ್ಟೇನು. ಅವನ ವಿಷಯದಲ್ಲಿ ನಾನು ಅಪ್ರೀತಿ ತಳೆಯೆ. ನಿನ್ನಲ್ಲಿ ಹೆಚ್ಚಾಗಿ ಭಕ್ತಿಯಿಟ್ಟೇನು. ಅವನಿಗೆ ನೀನು ಅಂತಹ ಬುದ್ಧಿ ಕೊಡದಿದ್ದರೆ, ನಾನು ಅವನ ಮೇಲೆ ಕೋಪಿಸೆ. ನಿನ್ನ ಮೇಲೆ ಕೋಪಿಸಿಕೊಂಡೇನು; ಕೋಪದಿಂದ ಮೊದಲಿಗಿಂತ ತೀವ್ರವಾಗಿ ಭಕ್ತಿ ಮಾಡೇನು. ನಿನಗೆ ಇಷ್ಟ ಬಂದಂತೆ ಮಾಡು." ಅನನ್ಯಭಕ್ತಿ, ಸಕಾಮತೆಗಳೆರಡೂ ಏಕತ್ರವಾಗಿ ಕಲ್ಪಿಸಲ್ಪಟ್ಟರೆ ಇಷ್ಟೊಂದು ಆಳವಾದ ಅರ್ಥ ಹೊರಡುತ್ತದೆ. ನಾವು ಕಲ್ಪಿಸಿದ ಈ ಸ್ತ್ರೀಯ ಮೂಗುತಿಯ ಕಾಮನೆ

ನಿಜವಾಗಿಯೂ ಎಂಥದು? ಪ್ರಪಂಚದಲ್ಲಿ ಕಳವಿನ ಪ್ರೇರಣೆ ಇರಬಾರದು, ಪ್ರಪಂಚದ ವಾಸನೆ ಶುದ್ಧವಾಗಿರಬೇಕು, ಎಂಬುದೇ ಆ ಕಾಮನೆಯ ಅರ್ಥವಲ್ಲವೇ? ಇಷ್ಟಿದ್ದ ಬಳಿಕ ದೇವರು ಅವಳಿಗೆ ಕಳೆದ ಮೂಗುತಿಯನ್ನು ದೊರಕಿಸಿಕೊಟ್ಟಾನು; ಕೊಡಲಿಕ್ಕೂ ಇಲ್ಲ. ಅವನ ಇಷ್ಟ. ಆತನ ಶಾಸ್ತ್ರದಂತೆ ಯಾವುದು ಯೋಗ್ಯವೋ ಅದನ್ನು ಮಾಡಿಯಾನು. ಅವನ ಶಾಸ್ತ್ರ ನಿಶ್ಚಿತವಾದುದು. ನಾವು ಅದನ್ನು ಅರಿಯೆವು. ನಮಗೆ ಅದು ಗೊತ್ತಾದರೆ ನಾವೇ ಈಶ್ವರನಾಗಬಹುದಲ್ಲವೆ? ಅವನ ಶಾಸ್ತ್ರ ಏನೇ ಇರಲಿ. ಆ ಸ್ತ್ರೀಗೆ ಉಭಯ ಪಕ್ಷದಲ್ಲಿಯೂ ಭಕ್ತಿಯೇ ಕಾರ್ಯ. ಅನನ್ಯ ಭಕ್ತಿ, ಸಕಾಮತೆಗಳ ಬೇರೀಜಿನಿಂದ ನಿಷ್ಪನ್ನವಾಗುವುದು ಏನೆಂಬುದು ಈ ಉದಾಹರಣೆಯಿಂದ ತಿಳಿಯಬಹುದು.

೩

## ೬೧. ಈಶ್ವರಪರಾಯಣತೆಯೆ ಮುಖ್ಯ ವಸ್ತು. ವಾಸನೆಯನ್ನೂ ಈಶ್ವರ-ಪರಾಯಣವಾಗಿ ಮಾಡಬೇಕು

ಇದೆಲ್ಲದರ ಅರ್ಥ ಹೀಗೆ—ಅವಾಂತರ ಕಾಮನೆಗಳಷ್ಟೇ ಏಕೆ, ಇಂದ್ರಿಯನಿಗ್ರಹ ಸಾಧನೆಯೂ ಗೌಣ, ಈಶ್ವರಪರಾಯಣತೆಯೇ ಮುಖ್ಯ ವಸ್ತು. "ಮತ್-ಪರಾಯಣನಾಗು, ವಿಷಯಗಳಿಗೆ ಮನಸೋತು ವಶನಾಗಬೇಡ. ಇಷ್ಟರಿಂದ ನಿನ್ನ ಎಲ್ಲ ವಾಸನೆ ತೊಳೆದು ಹೋಗುತ್ತದೆ" ಎಂದು ಸ್ವಲ್ಪದರಲ್ಲಿ ಗೀತೆ ಸ್ಪಷ್ಟವಾಗಿ ಹೇಳುತ್ತದೆ. ವಾಸನೆಗಳು ಚಿತ್ತದಲ್ಲಿ ಮೂಡಿದರೆ ಮೂಡಲಿ, ಆದರೆ ತದನುಕೂಲವಾಗಿ ಬಾಹ್ಯಕೃತಿಯಾಗದಂತೆ ನೋಡಿಕೊಂಡಿದ್ದರಾಯ್ತು. ವಾಸನಾನುಕೂಲವಾದ ಕೃತಿಯನ್ನು ಮಾಡುವುದರಿಂದ ವಾಸನೆ ಗಟ್ಟಿಯಾಗುತ್ತದೆ. ಆದುದರಿಂದ ಅಷ್ಟು ಮಾಡಬೇಡ. ಆದರೆ ಸಾಧಕ ಬಾಹ್ಯ—ಇಂದ್ರಿಯನಿಗ್ರಹವನ್ನು ಮಾಡಿದರೂ, ಚಿತ್ತದಲ್ಲಿಯ ವಾಸನೆ ಹೋಗಿರುವುದಿಲ್ಲ. ಅದು ಒಳಗೊಳಗೆ ಅಡಗಿ ಕುಳಿತು ಅವನನ್ನು ಪೀಡಿಸುತ್ತದೆ. ಅವನ ಚಿತ್ತಕ್ಕೆ ಸಮಾಧಾನ ದೊರೆಯದಂತೆ ಮಾಡುತ್ತದೆ. ಹಾಗಾದರೆ ಅವನು ಏನು ಮಾಡಬೇಕು? ಆ ವಾಸನೆಯನ್ನೆ ಈಶ್ವರಪರಾಯಣವಾಗಿ ಮಾಡಬೇಕು. "ನನ್ನ ಚಿತ್ತದಲ್ಲಿ ಬರುವ ವಾಸನೆಯೆಲ್ಲವೂ

ನೀನೇ ಆಗು" ಎಂದು ನಾಥರು ದೇವರನ್ನು ಬೇಡಿದರು. ಹೀಗೆ ಎಲ್ಲ ವಾಸನೆಗಳ ರೂಪಾಂತರವಾಗುತ್ತದೆ. ವಾಸನೆ ಈಶ್ವರಮಯವಾಗುತ್ತದೆ. ಭಕ್ತಿಯಿಂದ ಅದು ಉನ್ನತವಾಗುತ್ತ ಹೋಗುತ್ತದೆ.

**೬೨. ವಾಸನೆ ಸ್ವರೂಪತಃ ಕೆಟ್ಟದಲ್ಲ. ಈಶ್ವರಪರಾಯಣತೆಯಿಂದ ವಾಸನೆಯು ರೂಪಾಂತರವಾಗುತ್ತದೆ**

ವಸ್ತುತಃ ಯಾವ ಮನುಷ್ಯನಲ್ಲಿಯೂ ಕೆಟ್ಟವಾಸನೆ ಇರುವುದೇ ಇಲ್ಲ. ಇದು ಅವನಿಗೂ ತಿಳಿವುದಿಲ್ಲ. ಉಳಿದವರಿಗೂ ತಿಳಿವುದಿಲ್ಲ. ಬಾಹ್ಯ ವಸ್ತುವಿನ ಪ್ರಾಪ್ತಿಗೋಸುಗ ಅವನು ಹೆಣಗುತ್ತಿರುವಂತೆ ತೋರುತ್ತದೆ. ಎಲ್ಲ ಬಾಹ್ಯಸೃಷ್ಟಿಯನ್ನು ತನ್ನದಾಗಿ ಮಾಡಿಕೊಳ್ಳಲು ಅವನ ಪ್ರಯತ್ನ ನಡೆದಿರುತ್ತದೆ. ಒಮ್ಮೊಮ್ಮೆ ನಿಷಿದ್ಧ ವಸ್ತುವಿನ ಪ್ರಾಪ್ತಿಗೋಸುಗವೂ ಅವನು ಹೆಣಗುತ್ತಿರುವುದಾಗಿ ತೋರುತ್ತದೆ. ವಾಸ್ತವವಾಗಿ ಶರೀರದಲ್ಲಿ ಸಿಕ್ಕಿಕೊಂಡಿದ್ದ ಆತ್ಮವು ವ್ಯಾಪಕವಾಗಲು ನಡೆಸಿದ ಪ್ರಯತ್ನ ಇದು. ಆತ್ಮವು ವಿರಾಟ್ ಸೃಷ್ಟಿಯೊಡನೆ ಏಕರೂಪವಾಗಲು ಇಚ್ಛಿಸುತ್ತದೆ. ಶರೀರದ ಸಂಕುಚಿತ ಕ್ಷೇತ್ರ ಅದಕ್ಕೆ ಸಮಾಧಾನವಿಲ್ಲ. ಹೆಂಡಗುಡುಕ ಹೆಂಡ ಕುಡಿಯುತ್ತಾನೆ. ಅದಕ್ಕೂ ಇದೇ ಅಸಮಾಧಾನ ಕಾರಣ. "ನೀನು ಈ ಹೊರಗಿನ ತುಚ್ಛವಾದ ಹೆಂಡವನ್ನು ಬಿಡು. ದೇವರೆ ನಿನ್ನ ಹೆಂಡವಾಗಲಿ. ಆತನ ಭಕ್ತಿಯ ಹೆಂಡವನ್ನು ಕುಡಿಯುತ್ತ ಹೋಗು" ಎಂದು ಅವನಿಗೆ ಭಕ್ತಿ ಮಾರ್ಗ ಹೇಳುತ್ತದೆ. ಉಮರ ಖಯ್ಯಾಮನ ರುಬಾಯಾಗಳಲ್ಲಿ ಇದೇ ಮಾತು ಇದೆ. **'ವಾಸೋ ಯಯಾ ಪರಿಕೃತಂ ಮದಿರಾ ಮದಾನ್ಧಃ'** ಆ ಭಕ್ತಿ ಮದ್ಯದ ಪಾನದಿಂದ ಸ್ಥಿತಿ ಹೀಗೆ ಆಗುತ್ತದೆ. ಈ ರೀತಿ ವಾಸನೆಯನ್ನು ದೇವರಿಗೆ ಅರ್ಪಿಸಿದರೆ, ಅದಕ್ಕೆ ದಿವ್ಯ ರೂಪ ಬರುತ್ತದೆ. ಆದುದರಿಂದ ಮತ್-ಪರಾಯಣರಾಗಿರೆಂದು ಭಗವಂತ ಹೇಳುತ್ತಾನೆ. ಚಿತ್ತದಲ್ಲಿ ವಿಷಯ ವಾಸನೆ ಬಂದರೂ ಹೆದರಬೇಡಿ. ವಿಷಯ-ಭೋಗದಲ್ಲಿ ಮಾತ್ರ ಬೀಳಬೇಡಿ. ವಾಸನೆಯನ್ನು ಈಶ್ವರನಿಗೆ ಸಮರ್ಪಿಸಿ. ಕಾಮ ಕ್ರೋಧಗಳನ್ನೂ ಆತನಿಗೆ ಸಮರ್ಪಿಸಿ. ಹೀಗೆ ಮಾಡಿದರೆ ಆ ವಿಕಾರಗಳೂ ನಿಮ್ಮ ವಾಸನೆಗಳೂ ರೂಪಾಂತರವಾಗುತ್ತವೆ. ಬಳಿಕ ಚಿತ್ತದ ವಿಕಾರಗಳು ಶಮನಗೊಂಡು ಪ್ರಜ್ಞೆ ಸ್ಥಿರವಾಗುತ್ತದೆ.

## ೭೩. ನಿಷ್ಕಾಮತೆ, ಅನನ್ಯತೆ, ಈಶ್ವರಭಾವನೆ ಇದ್ದರೆ, ಭೌತವಿದ್ಯೆಯ ಉಪಾಸನೆಯೂ ಪಾವನವಾಗಬಲ್ಲುದು

ಭೌತವಿದ್ಯೆಯ ಉಪಾಸನೆಯಲ್ಲಿಯೂ ನಿಷ್ಕಾಮತೆ, ಅನನ್ಯತೆ, ಈಶ್ವರ ಭಾವನೆ ಇದ್ದರೆ ಚಿತ್ತಶುದ್ಧಿಯಾಗಬಲ್ಲುದು. ಈ ದೃಷ್ಟಿಯಿಂದ ಭೌತಿಕ, ಆಧ್ಯಾತ್ಮಿಕ ಎಂಬ ಭೇದವೇ ಉಳಿವುದಿಲ್ಲ. ಈ ಭೇದ ವಾಸ್ತವಿಕವಾಗಿ ನಿಜ ವಾದುದೇ ಅಲ್ಲ. ಗಣಿತೋಪಾಸಕನಿಗೆ ಗಣಿತವೆ ಈಶ್ವರ. ಅರ್ಥಾತ್ ಆ ಭಾವನೆಯಿಂದ ಅದರ ಸಾಧನೆ ಆಗುತ್ತಿರಬೇಕು. ಒಬ್ಬ ಗಣಿತಜ್ಞನ ವಿಷಯ ದಲ್ಲಿ ಒಂದು ಆಖ್ಯಾಯಿಕೆ ಉಂಟು. ಅಪೂರ್ವವಾದ ಒಂದು ಶೋಧವನ್ನು ಅವನು ಕಂಡ. ಪ್ರಪಂಚದ ಜ್ಞಾನವನ್ನು ವೃದ್ಧಿ ಮಾಡಲು ಯೋಗ್ಯತೆಯುಳ್ಳ ಈ ಶೋಧದ ಟಿಪ್ಪಣಿಗಳನ್ನು ಬರೆದಿಟ್ಟ. ಆದರೆ ಮುಂದೆ ಆ ಟಿಪ್ಪಣಿಗಳ ಕಾಗದವೆ ಇಲ್ಲದಾಯ್ತು. ಆದರೂ ಆ ಗಣಿತಜ್ಞ ಶಾಂತವಾಗಿಯೆ ಇದ್ದ. ಆತನ ಚಿತ್ತದಲ್ಲಿ ಕ್ಷೋಭವಾಗಲಿಲ್ಲ. ಬರಿಯ ಗಣಿತದಿಂದಲೆ ಇಷ್ಟೊಂದು ಶಾಂತಿ ದೊರೆವುದು ಸಂಭವನೀಯವಲ್ಲ. ಆತ ಗಣಿತದ ಉಪಾಸನೆಯನ್ನು ಈಶ್ವರಾರ್ಪಣ ಬುದ್ಧಿಯಿಂದಲೆ ಮಾಡುತ್ತಿದ್ದನೆಂದು ತಿಳಿಯಬೇಕು. ಈಶ್ವರನ ಹೆಸರೂ ಆತನಿಗೆ ಗೊತ್ತಿರಲಿಕ್ಕಿಲ್ಲ. ಆದರಿಂದ ಆತನ ಉಪಾಸನೆ ಯಲ್ಲಿ ಅಂತರ ಬಾರದು. ನನ್ನಂತಹನು ಯಾರಾದರೂ ನೂಲುವುದರಲ್ಲಿ ತನ್ಮಯನಾಗಬಹುದು. ಇನ್ನೊಬ್ಬ ಬೇರಾವುದಾದರೂ ಪವಿತ್ರವಾದ ಸಾಮಾಜಿಕ ಉದ್ಯೋಗದಲ್ಲಿ ತನ್ಮಯನಾಗಬಹುದು ಆಯಾ ವಿಷಯವನ್ನು ಈಶ್ವರಸ್ವರೂಪವಾಗಿ ಕಂಡು ಅದರ ಉಪಾಸನೆ ಮಾಡುವವನ ಚಿತ್ತದ ಮೇಲೆ ಇಂದ್ರಿಯಗಳ ಆಕ್ರಮಣ ಆಗಲಾರದು. ಕೇವಲ ಭೌತದೃಷ್ಟಿಯಿಂದ ವಿಜ್ಞಾನದ ಇಲ್ಲವೆ ಬೇರೆ ವಿಷಯಗಳ ಸಾಧನೆ ಮಾಡುವವನಿಗೆ, ಅರ್ಥಾತ್ ಈ ಸಿದ್ಧಿ ಸಾಧಿಸದು. ಕಾರಣ ಸ್ಪಷ್ಟವಾಗಿಯೆ ಇದೆ. ಭೌತ ವಿಷಯಗಳು ಏನೇ ಇರಲಿ. ಆತ್ಮದಿಂದ ಭಿನ್ನವಾದುವು. ಆತ್ಮಭಿನ್ನವಾದ ಅನಾತ್ಮ ವಿಷಯಗಳಲ್ಲಿ ಲೀನವಾಗಲು ಆತ್ಮ ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗುವು ದೆಂತು? ಅವೇ ವಿಷಯಗಳು ಈಶ್ವರ ಭಾವನಾ ಭಾವಿತವಾಗಿದ್ದರೆ, ಅವು ಗಳಲ್ಲಿ ಲೀನವಾಗಲು ಆತ್ಮಕ್ಕೆ ಯಾವ ಆತಂಕವೂ ಉಳಿಯದು. ಆತ್ಮ ಅವುಗಳಲ್ಲಿ ಪೂರ್ಣವಾಗಿ ವಿಸರ್ಜನ ಹೊಂದಬಲ್ಲುದು.

# ೭ ನೆಯ ವ್ಯಾಖ್ಯಾನ

## ೧

### ೬೪. ಇಂದ್ರಿಯಜಯದ ತತ್ತ್ವಜ್ಞಾನದ ಪ್ರಸ್ತಾವನೆ. ವಿಷಯ ಚಿಂತನೆಯಿಂದ ಬುದ್ಧಿನಾಶದವರೆಗಿನ ವ್ಯತಿರೇಕ ಪರಂಪರೆ

ಸ್ಥಿತಪ್ರಜ್ಞನ ಪ್ರಕಟ ಲಕ್ಷಣ ಜಿತೇಂದ್ರಿಯತೆ. ಅದರ ವಿಸ್ತಾರ ನಡುವಿನ ಹತ್ತು ಶ್ಲೋಕಗಳಲ್ಲಿ ಆಗಬೇಕಾಗಿದೆ. ಅದರಲ್ಲಿ ಮೂರು ಶ್ಲೋಕಗಳ ಮೊದಲಿನ ವಿಜ್ಞಾನಪರಿಚ್ಛೇದ ಮುಗಿಯಿತು. ಇನ್ನು ಮುಂದೆ ಪ್ರಜ್ಞೆಗೂ ಇಂದ್ರಿಯಜಯಕ್ಕೂ ಏನು ಸಂಬಂಧ ಎಂಬುದು ಅನ್ವಯ ವ್ಯತಿರೇಕವಾಗಿ ವಿವೇಚಿಸಲ್ಪಟ್ಟಿದೆ. ಮೊದಲಿನ ಎರಡು ಶ್ಲೋಕಗಳಲ್ಲಿ ಅನ್ವಯದಿಂದ ಸ್ಥಿತಪ್ರಜ್ಞೆಗೋಸುಗ ಇಂದ್ರಿಯಜಯ ಅವಶ್ಯಕವೆಂಬುದು ಹೇಳಲ್ಪಟ್ಟಿದೆ. ಇಂದ್ರಿಯಜಯದ ತತ್ತ್ವಜ್ಞಾನದ ಕಥನ ಇಲ್ಲಿಂದ ಪ್ರಾರಂಭ.

### ೬೫. ವಿಷಯ ಚಿಂತನೆಯಿಂದ ಸಂಗ, ಸಂಗದಿಂದ ಕಾಮ ಹುಟ್ಟುತ್ತದೆ

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ॥

ಯಾರಿಗೆ ಇಂದ್ರಿಯನಿರೋಧವಿಲ್ಲವೋ, ಯಾರು ವಿಷಯಗಳನ್ನು ಧ್ಯಾನಿಸುತ್ತಿರುವನೋ, ಅವನಿಗೆ ವಿಷಯಗಳ ಸಂಗ ಉಂಟಾಗುತ್ತದೆ. ಸಂಗವೆಂದರೆ ಸಂಗತಿ; ಪರಿಚಯ. ವಿಷಯಗಳ ಸಂಗವೆಂದರೆ ವಿಷಯಗಳಲ್ಲಿ ತೊಡಗಿಕೊಂಡಿರುವುದು. ಮನವು ವಿಷಯಕ್ಕೆ ಅಂಟಿಕೊಳ್ಳುತ್ತದೆ. ಅದರಿಂದ ಕಾಮ ಉದವಿಸುತ್ತದೆ. ವಿಷಯಗಳ ಧ್ಯಾನ. ಬಳಿಕ ಸಂಗ, ಆ ಬಳಿಕ ಕಾಮ, ಹೀಗ ಉತ್ತರೋತ್ತರ ಕ್ರಮ. ಈ ಮೂರೂ ವೃತ್ತಿಗಳಲ್ಲಿ ಅಷ್ಟೊಂದು ಬಲು ದೊಡ್ಡ ಭೇದವಿಲ್ಲ. ಅವು ಒಂದೇ ವೃತ್ತಿಯ ಮೂರು ರೂಪಗಳೆಂದು ಹೇಳಬಹುದು. ಉಗಮದಿಂದ ಮುಖದವರೆಗೆ ಒಂದು ದೊಡ್ಡ ನದಿಗೆ ಅನೇಕ ಹೆಸರು ಇರುತ್ತವೆ. ಆದರೆ ಪ್ರವಾಹ ಒಂದೇ.

ಆದರಂತೆ ಹರಿಯುತ್ತಿರುವ ಒಂದೇ ವೃತ್ತಿಯ ಮೂರು ಹೆಸರು ಇವು. ಮಣ್ಣು, ಮಣ್ಣಿನ ವಸ್ತುಗಳಲ್ಲಿ ಭೇದ ಏನು? ಚಿಂತನದಿಂದ ವಿಷಯ ದೊಡನೆ ಪರಿಚಯವಾಗುತ್ತದೆ, ಎಂದರೆ ವಿಷಯ ಮನದಲ್ಲಿ ಸಾಕಾರವಾಗುತ್ತದೆ. ಮಿತ್ರನ ಬಲವಂತದಿಂದ ಒಬ್ಬನು ಜಿಜ್ಞಾಸೆಗೆ ವಶನಾಗಿ ಹೆಂಡದಂಗಡಿಗೆ ಹೋಗುತ್ತಾನೆ. ಮುಂದೆ ಮಿತ್ರನ ಸೆಳೆತದಿಂದ ಆಗಾಗ ಹೋಗಲಾರಂಭಿಸುತ್ತಾನೆ. ಈ ಸೆಳೆತವೆ ಸಂಗ. ಮುಂದೆ ಆ ವಿಷಯದಲ್ಲಿ ರಮಣೀಯತೆ, ಸುಂದರತೆ, ಆಕರ್ಷಕತೆ, ರಸ, ಸವಿ ಕಾಣತೊಡಗುತ್ತದೆ. ಇದುವೆ ಕಾಮ. ಈ ಕಾಮದಿಂದ ಮುಂದೆ ಕ್ರೋಧ ಹುಟ್ಟುತ್ತದೆಂದು ಗೀತೆ ಹೇಳುತ್ತದೆ.

## ೬೬. ಮುಂದೆ ಕಾಮದಿಂದ ಕ್ರೋಧ ಹುಟ್ಟುತ್ತದೆ. ಈ ವಿಷಯದಲ್ಲಿ ಭಾಷ್ಯಕಾರರ ಸ್ಪಷ್ಟೀಕರಣ

ಇಲ್ಲೇ ನಿಜವಾದ ತೊಂದರೆ. ಈ ಸ್ಥಳದಲ್ಲಿ ವಿಚಾರಕರು ದಿಕ್ಕು ತಪ್ಪಿದವರಾಗಿ ತೋರುತ್ತಾರೆ. ಕಾಮದಿಂದ ಕ್ರೋಧ ಹೇಗೆ ಹುಟ್ಟುತ್ತದೆ ಎಂಬುದು ಬಿಗಿಯಾದ ಪ್ರಶ್ನೆ. ಮುಂದೆ ಕ್ರೋಧದಿಂದ ಮೋಹ, ಮೋಹದಿಂದ ಸ್ಮೃತಿಭ್ರಂಶ, ಅದರಿಂದ ಬುದ್ಧಿನಾಶ, ಈ ಸೋಪಾನ ಸರಳವಾಗಿದೆ. ಆದರೆ ಕಾಮದಿಂದ ಕ್ರೋಧ ಹೇಗೆ ಹುಟ್ಟುತ್ತದೆಂಬುದು ಸರಿಯಾಗಿ ಲಕ್ಷ್ಯದಲ್ಲಿ ಬರುವುದಿಲ್ಲ. ಶಂಕರಾಚಾರ್ಯರು ಭಾಷ್ಯದಲ್ಲಿ "**ಕಾಮಾತ್ ಕುತಶ್ಚಿತ್ ಪ್ರತಿಹತಾತ್ ಕ್ರೋಧಃ ಅಭಿಜಾಯತೇ**" ಎಂದು ದಾರಿ ಹುಡುಕಿದಾರೆ. ಕಾಮವು ಪ್ರತಿಹತವಾದರೆ, ಅದರಿಂದ ಕ್ರೋಧ ಹುಟ್ಟುತ್ತದೆ ಎಂದು ಅವರ ಅಭಿಪ್ರಾಯ. ಆದರೆ ಅದು ಪ್ರತಿಹತವಾಗದಂತೆ ಮಾಡಲು ನಮಗೆ ಯುಕ್ತಿ ದೊರೆತರೆ, ಕಾಮದಿಂದ ಕ್ರೋಧ ಹುಟ್ಟದು. ಹಾಗೆಂದರೆ ಕಾಮದಿಂದ ಕ್ರೋಧ ಹುಟ್ಟುತ್ತದೆಂಬ ವಾಕ್ಯ ಶಾಶ್ವತ ಸತ್ಯವಲ್ಲವೆಂದು ಹೇಳಿದಂತಾಗುತ್ತದೆ. ಕಾಮಕ್ಕೆ ಪ್ರತ್ಯಾಹತಿ ಉಂಟಾಗದಿದ್ದರೆ, ಈ ವಾಕ್ಯದ ಕಟ್ಟಡ ನಡುಗಲಾರಂಭಿಸುತ್ತದೆ! ಆದುದರಿಂದ ಗಾಂಧಿಯವರು ಇದಕ್ಕೊಂದು ಯುಕ್ತಿ ಹುಡುಕಿದಾರೆ. "ಕಾಮ ಎಂದೂ ಪೂರ್ಣವಾಗದು" ಎಂದು ಅವರ ಟಿಪ್ಪಣಿ. ಸಾಧಾರಣವಾಗಿ ಈ ಯುಕ್ತಿ ಸರಿ. ಕಾಮವು ಸಹಸಾ ಪೂರ್ಣವಾಗದೆಂಬುದು ಅನುಭವದ ಮಾತು. ವಾಸನೆ ಬೆಳೆಯುತ್ತಲೇ ಹೋಗುತ್ತದೆ.

ತೃಪ್ತಿ ಎಂಬುದು ಆಗದು. ಹತ್ತು ಸಾವಿರ ದೊರೆತರೆ, ಲಕ್ಷದ ಇಚ್ಛೆಯಾಗುತ್ತದೆ. ಲಕ್ಷದ ಬಳಿಕ ದಶಲಕ್ಷದ ಇಚ್ಛೆ; ಬಳಿಕ ಕೋಟಿಯ ಇಚ್ಛೆ. ಗಣಿತಕ್ಕೆ ಅಂತವಿಲ್ಲ. ವಾಸನೆಗೂ ಅಂತವಿಲ್ಲ. ಯಯಾತಿಯ ವಾಕ್ಯ ಪ್ರಸಿದ್ಧವಾಗಿದೆ. "ಆಹುತಿಯಿಕ್ಕಿದ ಅಗ್ನಿಯಂತೆ ಭೋಗದಿಂದ ಕಾಮ ಒಂದೇ ಸಮನೆ ಬೆಳೆಯುತ್ತಲೆ ಇರುತ್ತದೆ." ಆದುದರಿಂದ ಸಾಮಾನ್ಯತಃ ಗಾಂಧಿಯವರ ಯುಕ್ತಿ ಸರಿಯಾದುದಾಗಿ ತೋರುತ್ತದೆ. ಶಂಕರಾಚಾರ್ಯರ ಯುಕ್ತಿಯೂ ಈ ಯುಕ್ತಿಯೂ ಬಹುಶಃ ಒಂದೇ. ಕಾಮನೆಗೆ ಅಂತವಿಲ್ಲ. ಆದುದರಿಂದ ಅದಕ್ಕೆ ಹೇಗಾದರೂ ಪ್ರತ್ಯಾಹತಿ ಒದಗಿಯೇ ತೀರುತ್ತದೆ. ಪ್ರತ್ಯಾಹತಿ ಉಂಟಾದೊಡನೆ ಕ್ರೋಧ ತಪ್ಪುವುದಲ್ಲವೆಂದು ಶಂಕರಾಚಾರ್ಯರ ಭಾವ. ಕಾಮಕ್ಕೆ ಗೀತೆಯಲ್ಲಿ 'ಅನಲ' ವೆಂದು ಹೇಳಿದೆ. ಅದಕ್ಕೆ 'ಅಲಂ' ಎಂದರೆ ಸಾಕು, ಎಂದೂ ಆಗುವುದಿಲ್ಲ.

## ೬೭. ಈ ವಿಷಯದಲ್ಲಿ ನಾಥರ ಯುಕ್ತಿ

ಆದರೆ ಇಷ್ಟರಿಂದಲೇ ತೊಡಕಿನಿಂದ ಬಿಡುಗಡೆಯಿಲ್ಲ. ಯಾವನಾದರೂ ಒಬ್ಬನು ಬಾಹ್ಯಪರಿಸ್ಥಿತಿಯನ್ನು ತನ್ನ ಕಾಮನೆಗೆ ಅನುಕೂಲವಾಗಿ ಮಾಡಿಕೊಂಡರೆ, ಅಥವಾ ಕಾಮನೆಯನ್ನು ಪರಿಸ್ಥಿತಿಗನುಕೂಲವಾಗಿ ಮಾಡಿಕೊಂಡರೆ, ಕ್ರೋಧಕ್ಕೆ ಅವಕಾಶವೆಲ್ಲಿ? ಕಾಮನೆ ಪರಿಸ್ಥಿತಿಗಳನ್ನು ಒಂದ ಕ್ಕೊಂದು ಅನುಕೂಲವಾಗಿ ಮಾಡಿಕೊಂಡ ಬಳಿಕ ಕಾಮನೆಗೆ ಆತಂಕವಾಗುವ ಸಂಭವ ಕಡಿಮೆಯಾಗುತ್ತದೆಂದ ಮೇಲೆ. ಕಾಮನೆಯಿಂದ ಕ್ರೋಧ ಹುಟ್ಟುತ್ತದೆ ಎಂಬ ವಾಕ್ಯಕ್ಕೆ ಬಾಧೆ ಬಂದೇ ಬರುತ್ತದೆ. ಈ ವಿಷಯದಲ್ಲಿ ನಾಥರು ಭಾಗವತದಲ್ಲಿ ಬೇರೆ ಬಗೆಯ ಕೋಟಿಯನ್ನು ಮಾಡಿದಾರೆ. ಅವರು ಹೇಳುವುದು ಹೀಗೆ: ಕಾಮ ಅಪೂರ್ಣವಾಗಿ ಉಳಿದೀತು, ಅಥವಾ ಪೂರ್ಣವಾದೀತು. ಅಪೂರ್ಣವಾಗಿ ಉಳಿದರೆ, ಅದರಿಂದ ಕ್ರೋಧ ಹುಟ್ಟುತ್ತದೆ. ಪೂರ್ಣವಾದರೆ ಲೋಭಕ್ಕೆ ಜನ್ಮ ಕೊಡುತ್ತದೆ. ಆದುದರಿಂದ ಕ್ರೋಧ ಶಬ್ದಕ್ಕೆ ಕ್ರೋಧ, ಲೋಭ ಎಂದು ವ್ಯಾಪಕ ಅರ್ಥವನ್ನು ಮಾಡಬೇಕು. ಮುಂದೆ ಆಗುವ ಸಂಮೋಹ ಕ್ರೋಧದಿಂದಲಾದರೂ ಆಗುತ್ತದೆ, ಲೋಭದಿಂದಲಾದರೂ ಆಗುತ್ತದೆ. ನರಕದ ಮೂರು ದ್ವಾರಗಳನ್ನು ಹೇಳುವಾಗ ಗೀತೆಯೂ ಕಾಮ ಕ್ರೋಧಗಳೊಡನೆ ಲೋಭವನ್ನೂ ಹೇಳುತ್ತದೆ. ಕಾಮ

ದಿಂದ ಕ್ರೋಧದಂತೆ ಲೋಭವೂ ಹುಟ್ಟುತ್ತದೆಂಬ ಅನುಭೂತಿಯಂತೂ ಇರುವುದಷ್ಟೆ.

**೬೮. ಕ್ರೋಧ ಶಬ್ದದಿಂದ ಇಲ್ಲಿ ಕ್ಷೋಭವೆಂದು ತಿಳಿಯಬೇಕು**

ಆದರೆ ಈ ಪ್ರಶ್ನೆಯನ್ನು ಬಿಡಿಸುವ ಮಾರ್ಗ ವಾಸ್ತವವಾಗಿ ಬೇರೆ. ಇಲ್ಲಿಯ ಕ್ರೋಧ ಶಬ್ದ ವಿಶೇಷವಾದ ಅರ್ಥವುಳ್ಳದೆಂಬುದನ್ನು ನಾವು ಅರಿಯಬೇಕು. ವಿಷಯದ ದಾಸ್ಯ ಪ್ರಾರಂಭವಾಗಲು ಸಂಗ ಹುಟ್ಟುತ್ತದೆ. 'ಸಂಗ'ವೆಂದರೆ ವಿಷಯ ಸಾಕಾರವಾಗುವುದು. ಬಳಿಕ ಅದು ಶಾಂತ, ಕಮನೀಯ ಆಗುತ್ತದೆ, ಬೇಕಾದ ವಸ್ತುವಾಗುತ್ತದೆ. ಇದು ಕಾಮ. ಇದರಿಂದ ಕ್ರೋಧ ಅವಶ್ಯಂಭಾವಿಯೆಂದು ಹೇಳಲ್ಪಟ್ಟಿದೆ. ಯಾವಾಗಲೋ ಹುಟ್ಟುತ್ತದೆಂದು ಹೇಳಿಲ್ಲ. ಆದುದರಿಂದ ಇಲ್ಲಿಯ ಕ್ರೋಧ ಶಬ್ದ ಸಾಮಾನ್ಯವಾದ ಅರ್ಥದ್ದಲ್ಲ. ಕ್ರೋಧವೆಂದರೆ ಇಲ್ಲಿ ಸಂತಾಪ, ಸಿಡುಕು ಎಂಬ ಸಾಮಾನ್ಯವಾದ ಸ್ಥೂಲ ಅರ್ಥವಲ್ಲ; ಚಿತ್ತದ ಚಲನ ಅಥವಾ ಕ್ಷೋಭ ಎಂದು ಅರ್ಥ. ಕೃಧ್ ಧಾತುವಿನ ಮೂಲ ಅರ್ಥ ತೌಲನಿಕ ಭಾಷಾಶಾಸ್ತ್ರದಂತೆ ಕ್ಷೋಭ, ಅಲ್ಲಕಲ್ಲೋಲ ಅಥವಾ ಸಂಚಲನವೆಂದು ಇದೆ. ಇದರ ಸಮಾನಾರ್ಥಕವಾದ ಕುಪ್ ಧಾತು ಕ್ಷೋಭವೆಂಬ ಅರ್ಥದಲ್ಲಿ ಸಂಸ್ಕೃತದಲ್ಲಿ ಪ್ರಾಯಃ ಯಾವಾಗಲೂ ಪ್ರಯೋಗಿಸಲ್ಪಡುತ್ತದೆ. ಕಾಮ ಹುಟ್ಟಿದೊಡನೆ ಮನಸ್ಸಿನ ಸ್ವಸ್ಥತೆ ಶಿಥಿಲವಾಗುತ್ತದೆ. ಮನದಲ್ಲಿ ಅಪ್ರಸನ್ನತೆ ಹುಟ್ಟುತ್ತದೆ. ಕಾಮ ಪೂರ್ಣವಾಗಲಿ ಆಗದಿರಲಿ, ಅದು ಹುಟ್ಟಿದೊಡನೆ ಚಿತ್ತದ ಸಮತೆ ಅಳಿಯುತ್ತದೆ.

**೬೯. ಕ್ರೋಧವೆಂದರೆ ಕ್ಷೋಭ, ಎಂದರೆ ಚಿತ್ತದ ಅಪ್ರಸನ್ನತೆ**

ಅನ್ವಯ ಪದ್ಧತಿಯಿಂದ ಮುಂದೆ ಹೇಳಿರುವ ಪರಂಪರೆಯಿಂದಲೂ ಇದೇ ಅರ್ಥ ಹೊರಡುತ್ತದೆ. ಇಂದ್ರಿಯಗಳನ್ನು ಗೆದ್ದವನಿಗೆ ಪ್ರಸನ್ನತೆ ಲಭಿಸುತ್ತದೆಂದು ಮುಂದೆ ಹೇಳಿದೆ. ಇದರಿಂದ ಕ್ರೋಧ ಶಬ್ದ ಪ್ರಸನ್ನತೆಯ ವಿರೋಧಿಯಾಗಿ ಯೋಜಿಸಲ್ಪಟ್ಟಿದೆ ಎಂದು ತಿಳಿದು ಬರುತ್ತದೆ. ಕಾಮವೆಂದರೆ ಇಂತಹದೊಂದು ಪದಾರ್ಥ ನನಗೆ ಬೇಕೆಂಬ ಮನದ ಆತುರತೆ. ಇದುವೆ ಅಪ್ರಸನ್ನತೆ. ಆ ಪದಾರ್ಥ ದೊರೆತಲ್ಲದೆ ನಾನು ಪೂರ್ಣನಾಗೆನು. ಅದಿಲ್ಲದೆ ನಾನು ಅಪೂರ್ಣ ಎಂಬ ಸಿಹೀನ ಭಾವನೆ ಕಾಮನೆಯ

ಬುಡದಲ್ಲಿ ಇದೆ. ಈ ಕಾರಣದಿಂದ ಮನವು ಕಾಮನೆಯಿಂದ ಮಲಿನವಾಗುತ್ತದೆ. ಅದರ ನಿರ್ಮಲತೆ ಅಳಿಯುತ್ತದೆ. ಸಂಸ್ಕೃತದಲ್ಲಿ ಪ್ರಸನ್ನ ಶಬ್ದ ನಿರ್ಮಲವೆಂಬ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ. ಸ್ವಚ್ಛವಾದ ನೀರಿಗೆ 'ಪ್ರಸನ್ನ ಜಲಂ' ಎಂದು ಹೇಳುವುದುಂಟು. ಸಿಂಹಗಡದ ಮೇಲಿನ 'ದೇವ' ಕೊಳದ ನೀರು ಪ್ರಸನ್ನವಾಗಿರುತ್ತದೆ. ಮೇಲಿನಿಂದ ಕಲ್ಲನ್ನು ಎಸೆದರೆ ಅದು ತಳಕ್ಕೆ ಹೋಗುವವರೆಗೆ ನೀರಿನಲ್ಲಿ ಅದರ ಪ್ರವಾಸವೆಲ್ಲವು ಸ್ಪಷ್ಟವಾಗಿ ಕಾಣಿಸುತ್ತದೆ. ಪ್ರಸನ್ನತೆಯೆಂದರೆ ಈ ಬಗೆಯ ನಿರ್ಮಲತೆ, ಪಾರದರ್ಶಕತೆ. ತಾವು ಸ್ನಾನ ಮಾಡಲು ಹೋದ ತೀರ್ಥದ ವಿಷಯದಲ್ಲಿ ವಾಲ್ಮೀಕಿ **"ಅಕರ್ದಮಮಿದಂ ತೀರ್ಥಂ ಸಜ್ಜನಾನಾಂ ಮನೋ ಯಥಾ"** ಎಂದು ಹೇಳಿದ್ದಾರೆ. ಸಜ್ಜನರ ಚಿತ್ತ ಎಲ್ಲ ವಿಧದಿಂದಲೂ ನಿಃಸಂಕೋಚವೂ ನಿರ್ಮಲವೂ ಪ್ರಕಟವೂ ಆಗಿರುತ್ತದೆ. ಕರ್ದಮವೆಂದರೆ ಮಲ. ಮಲವೆಂದರೆ ನೀರ ಹೊರಗಿನ ಬೇರೆ ವಸ್ತು. ಅದರ ಬಣ್ಣ ನೀರಿಗೆ ಸೋಕಿದರೆ ಅದು ಮಲಿನವಾಗುತ್ತದೆ. ನೀರು ಅವರ್ಣವಾಗಿದ್ದರೆ ಪ್ರಸನ್ನವಾಗಿರುತ್ತದೆ. ಆತ್ಮ ತನ್ನ ಮೂಲ ಸ್ವರೂಪದಲ್ಲಿದ್ದರೆ ಪ್ರಸನ್ನವಾಗಿರುತ್ತದೆ. ಅದಕ್ಕೆ ಹೊರಗಿನ ವಸ್ತುವಿನ ಇಚ್ಛೆಯಾಗುವುದು, ಅದರ ಬಣ್ಣ ಅದಕ್ಕೆ ಸೋಕುವುದು, ಅದರ ಮಲಿನತೆ; ಇದೇ ಅಪ್ರಸನ್ನತೆ. ಬಾಹ್ಯಕಾಮನೆ ಬಂದೊಡನೆ ಬೆರಕೆ ಆಯ್ತೋ! ಬಳಿಕ ಆತ್ಮಕ್ಕೆ ಕಾಮನೆಯ ಮಹತ್ತ್ವ ಅನಿಸಲಾರಂಭಿಸುತ್ತದೆ. ಅದರ ಇದಿರಲ್ಲಿ ಆತ್ಮ ಗೌಣಸ್ಥಾನವುಳ್ಳದಾಗುತ್ತದೆ, ನಿಸ್ತೇಜವಾಗುತ್ತದೆ. ಮನ ಚಂಚಲವಾಗುತ್ತದೆ, ಅಶಾಂತಿ ಕಾಣಿಸಿಕೊಳ್ಳುತ್ತದೆ. ಕ್ಷೋಭವಾಗುತ್ತದೆ. ಇದೇ ಕ್ರೋಧ. ಕಾಮನೆಯಿಂದ ಚಿತ್ತಕ್ಕೆ ಆಗುವ ಸ್ಪಂದನ ಕ್ರೋಧ ಶಬ್ದದಿಂದ ಸೂಚಿಸಲ್ಪಡುತ್ತದೆ. ಆತ್ಮದ ಮೂಲ ರೂಪ ಪ್ರಶಾಂತ, ನಿಸ್ಪಂದ. ರಾತ್ರಿಕಾಲದ ನೀರವ, ನಿರಭ್ರ, ತಾರಕಿತ ಆಕಾಶ ಹೇಗೋ ಹಾಗೆ. ಅನಂತ ಶುಭ ಗುಣಗಳೇ ಇಲ್ಲಿಯ ಅನಂತ ತಾರಕೆಗಳು!

## ೨೦. ಕಾಮನೆಯಿಂದ ಚಿತ್ತಕ್ಷೋಭ ಏಕಾಗುತ್ತದೆ?

ಆತ್ಮವು ಪರಿಪೂರ್ಣವೂ ಅನಂತ ಗುಣವೂ ಇರುತ್ತಿರಲು ಮನುಷ್ಯನು ಬಾಹ್ಯ ವಸ್ತುವಿಗಾಗಿ ಏಕೆ ಹಾತೊರೆಯಬೇಕು? ಹೊರಗಿನ ಇಷ್ಟ ಪ್ರಾಪ್ತಿಯು,

ಅನಿಷ್ಟ ಪರಿಹಾರದ ತೊಡಕಿನಲ್ಲಿ ಆತ ಏಕೆ ಬೀಳಬೇಕು ಏಕೆಂದರೆ ಮನುಷ್ಯನ ಚಿತ್ತಕ್ಕೆ ಆತ್ಮದ ದರ್ಶನವಿಲ್ಲ, ಬಹಿರ್ದರ್ಶನವಷ್ಟೇ. ಹೊರಗಿನ ಸೃಷ್ಟಿಯ ಸೌಂದರ್ಯ ಅದನ್ನು ಸೆಳೆಯುತ್ತದೆ. ಆ ಸೌಂದರ್ಯ ಪೀಡಿಸುತ್ತದೆ. ವಸ್ತುತಃ ಸೌಂದರ್ಯವಾಗಲಿ ಅಸೌಂದರ್ಯವಾಗಲಿ ಬಾಹ್ಯ ವಸ್ತುಗಳಲ್ಲಿ ಇರುವುದಿಲ್ಲ, ಅಲ್ಲಿರುವುದು ಬರೀ ಆಕಾರ. ತದ್ವಿಷಯಕವಾದ ಅನುಕೂಲ ಅಥವಾ ಪ್ರತಿಕೂಲ ವೃತ್ತಿ ಮುಖ್ಯವಾಗಿ ಚಿತ್ತದಿಂದ ಉಂಟಾಗುತ್ತದೆ. ಚಿತ್ತ ಇಂದ್ರಿಯಾಧೀನ. ಕತ್ತೆಯ ಕೂಗು ನಮ್ಮ ಕಿವಿಗೆ ಕಟು. ಆದುದರಿಂದ ಚಿತ್ತ ಅದನ್ನು ಕಟುವೆಂದು ತಿಳಿಯುತ್ತದೆ. ವಾಸ್ತವವಾಗಿ ಅದು ಕಹಿಯೂ ಅಲ್ಲ ಸಿಹಿಯೂ ಅಲ್ಲ. ತಾನು ಇರುವಂತೆ ಇರುತ್ತದೆ. ನಮ್ಮ ಕಿವಿಗೆ ಕರ್ಕಶವೆನಿಸಿದರೇನಾಯ್ತು ? ಕತ್ತೆಯ ಕಿವಿಗೆ ಅದು ಆನಂದದಾಯಿ ಇರಬಹುದು. ನನಗೆ ಸಂಗೀತವೆಂದರೆ ಪ್ರೀತಿ. ಆದರೆ ನಾನು ವಿಚಾರ ಮಾಡಲಾರಂಭಿಸುತ್ತೇನೆ. ಇದು ಮಧುರ ಧ್ವನಿ, ಇದು ಕರ್ಕಶ ಧ್ವನಿ ಎಂಬುದು ನಿಜವಾಗಿಯೂ ಶಬ್ದದ ಮೇಲೆ ಮಾಡಿದ ಆರೋಪವೇ ಅಲ್ಲವೆ ? ಶಬ್ದವು ಸುಳ್ಳೆಂದು ನಾನು ಹೇಳೆ. ಹಾಗೆ ಹೇಳಿದರೆ ಮಾರ್ಕ್ಸ್‌ವಾದಿಗಳು ಕೋಪಿಸಿಕೊಂಡಾರು. 'ಈತ ಅಖಿಲ ಸೃಷ್ಟಿಯೆ ಕಲ್ಪನೆಯದೆನ್ನುತ್ತಾನೆ' ಎಂದಾರು. ನಾನು ಹಾಗೆ ಅನ್ನುವುದಿಲ್ಲ. ಸೃಷ್ಟಿ ನಿಜವಾದುದೇ. ನಾನು ನನ್ನ ಕಲ್ಪನೆಯಿಂದ ಅದನ್ನು ಮಾಡಿಲ್ಲ. ಆದ್ದರಿಂದಲೇ ಅದನ್ನು ಈಶ್ವರ ಮಾಡಿದ್ದಾನೆ ಎನ್ನುತ್ತೇನೆ. ಆದರೆ ಅದರ ವಿಷಯದ ಕಲ್ಪನೆ ಮಾತ್ರ ನನ್ನದು. ಏಂದರೆ ನನ್ನ ಇಂದ್ರಿಯಾಧೀನವಾದ ಚಿತ್ತದ್ದು. ಈ ಬಗೆಯಾಗಿ ನಾನು ಸೃಷ್ಟಿಯ ಬೇರೆ ಬೇರೆ ಪದಾರ್ಥಗಳ ವಿಷಯದಲ್ಲಿ ಅನುಕೂಲ, ಪ್ರತಿಕೂಲ ವೃತ್ತಿಯನ್ನು ಮಾಡಿಕೊಳ್ಳುತ್ತೇನೆ. ಈ ವೃತ್ತಿಯು ಕ್ಷೋಭಕ್ಕೆ ಕಾರಣವಾಗುತ್ತದೆ. ಆತ್ಮವು ಪರಿಪೂರ್ಣ ಎಂಬುದು ಲಕ್ಷದಲ್ಲಿ ಬಂದರೆ, ಮನುಷ್ಯನ ಚಿತ್ತ ಸಂತುಷ್ಟವೂ ಪ್ರಸನ್ನವೂ ಆಗಿ ಉಳಿಯುತ್ತದೆ. ಆತ ಇಂಥ ವಸ್ತು ಎಂದು ತೊಂದರೆಪಡನು. "ನಾನು ಹೊರಗಿನ ವಸ್ತುವನ್ನು ಬಯಸಿ ಅದಕ್ಕೋಸುಗ ಆತುರನಾಗಿ ಪರತಂತ್ರನಾಗಲೆ ? ಆ ವಸ್ತುವೆ ನನ್ನನ್ನೇಕೆ ಬಯಸಬಾರದು ? ನಾನೇ ಏಕೆ ಅದಕ್ಕೋಸುಗ ಆತುರನಾಗಿ ನನ್ನ ಚಿತ್ತವನ್ನು ಕೆಡಿಸಿಕೊಳ್ಳಲಿ ? ಅದು ತನ್ನ ಸೊಕ್ಕಿನಲ್ಲಿದೆ.

ನಾನೇಕೆ ನನ್ನ ಸೊಕ್ಕಿನಲ್ಲಿ ಇರಕೂಡದು ?" ಎಂದು ಆತ ಯೋಚಿಸುತ್ತಾನೆ. ಬಾಹ್ಯವಸ್ತುವನ್ನು ಬಯಸುತ್ತಿರುವುದರಿಂದ ಆತ್ಮ ಕೀಳಾಗುತ್ತದೆ, ಆದರಿಂದ ಚಿತ್ತ ಕ್ಷುಬ್ಧವಾಗುತ್ತದೆ. ಚಿತ್ತದ ಈ ಕ್ಷುಬ್ಧತೆಯೇ ಇಲ್ಲಿ ಕ್ರೋಧವೆಂದು ಹೇಳಲ್ಪಟ್ಟಿದೆ.

೨

## ೭೧. ಕ್ರೋಧದಿಂದ ಮೋಹ ಉಂಟಾಗುತ್ತದೆ. ಎಂದರೆ ಬುದ್ಧಿ ಕುಂಠಿತವಾಗುತ್ತದೆ.

ಕ್ರೋಧದಿಂದ ಮನಸ್ಸಿಗೆ ಮೂಢತೆ ಬರುತ್ತದೆ. "ಕ್ರೋಧಾತ್ ಭವತಿ ಸಂಮೋಹಃ" ನಾನು ಚಿಕ್ಕವನಿದ್ದಾಗ ಎಷ್ಟೇ ಕೋಪಿಸಿಕೊಂಡರೂ ನನ್ನ ಬುದ್ಧಿ ಗಟ್ಟಿಯಾಗಿ ಉಳಿಯುತ್ತದೆ" ಎನ್ನುತ್ತಿದ್ದೆ. ಕ್ರೋಧದಿಂದ ಬುದ್ಧಿಯ ಸಮತೆ ಇಲ್ಲದಾಗುತ್ತದೆಂದು ಗೊತ್ತಾಗದಿರುವುದೇ ಬುದ್ಧಿ ಗಟ್ಟಿಯಾಗಿ ಇರದುದರ ಲಕ್ಷಣ. ಮೋಹವೆಂದರೆ ಬುದ್ಧಿಯ ಶಕ್ತಿಯೆಲ್ಲವೂ ಇಲ್ಲದಾಗುತ್ತದೆಂದು ಅರ್ಥವಲ್ಲ. ಬುದ್ಧಿಯ ಪ್ರಖರತೆ ನಷ್ಟವಾಗಿ ಅದು ಮೊಂಡವಾಗುತ್ತದೆ. ಇದು ಸಂಮೋಹ.

## ೭೨. ಮೋಹದಿಂದ ಸ್ಮೃತಿಭ್ರಂಶವಾಗುತ್ತದೆ. ಅರ್ಥಾತ್ ತಾನು ಯಾರೆಂಬುದರ ಭಾನ ಅಳಿಯುತ್ತದೆ

ಈ ಪ್ರಕಾರ ಸಮ್ಮೋಹವಾಯಿತೆಂದರೆ ಸ್ಮೃತಿಭ್ರಂಶ ಆಗುತ್ತದೆ. ಸ್ಮೃತಿಭ್ರಂಶವೆಂದರೆ ಸಾಮಾನ್ಯ ವಿಸ್ಮೃತಿಯಲ್ಲ. ನಾನು ಯಾರು ಎಂಬುದನ್ನು ಮರೆವುದೇ ಸ್ಮೃತಿಭ್ರಂಶ. ಲಕ್ಷ್ಯದಲ್ಲಿ ಅನೇಕ ಇರುವುದು ಸ್ಮೃತಿಯಲ್ಲ. ನಾನು ಹೇಳಿದ್ದನ್ನು ಯಾರಾದರೂ ಅಕ್ಷರಶಃ ಇದ್ದುದನ್ನು ಇದ್ದಂತೆ ಹೇಳಿ ತೋರಿಸಿದರೆ ಅವನನ್ನು ಜಡಯಂತ್ರ ಎಂದೇನು. ಮರೆಯಲು ಯೋಗ್ಯವಾದುದನ್ನು ಮರೆಯುವ, ಲಕ್ಷದಲ್ಲಿ ಇಡಬೇಕಾದುದನ್ನು ಇಡುವ ವಿವೇಕ ಶಕ್ತಿ ಅವನಲ್ಲಿಲ್ಲ. ನಿಜವಾದ ಸ್ಮೃತಿಯಲ್ಲಿ ಈ ವಿವೇಕ ಗೃಹೀತವಾಗಿದೆ. ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಳ್ಳುವ ಭಾರವೇಕೆ ? ವಿವೇಕದಿಂದ ಕೆಲವನ್ನು ಬಿಡಬೇಕು, ಕೆಲವನ್ನು ಇಡಬೇಕು. ಉಚಿತ ಸ್ಮರಣೆ, ಉಚಿತ ವಿಸ್ಮರಣೆ, ಎರಡೂ ಸೇರಿ ಸಮ್ಯಕ್ ಸ್ಮರಣಶಕ್ತಿ. ಆದುದರಿಂದ ಇಲ್ಲಿ ಸ್ಮೃತಿ-

ಎಂದರೆ ನಾನು ಯಾರು ಎಂಬುದರ ನಿರಂತರ ಭಾಸ. ಆತ್ಮದ ನಿರಂತರ ಭಾಸ.

## ೭೩. ಭಾವ ಅಳಿವುದೆಂದರೇನು?

ಮನುಷ್ಯ ಯಾವಾಗಲೂ ಆತ್ಮವನ್ನು ಮರೆಯುತ್ತಾನೆ. ಕ್ರೀಡಾಂಗಣಕ್ಕೆ ಹೋದರೆ ತಾನು ಆಟಗಾರ ಎನ್ನುತ್ತಾನೆ. ರಣಾಂಗಣಕ್ಕೆ ಹೋದರೆ ತಾನು ಯೋದ್ಧಾರ ಎನ್ನುತ್ತಾನೆ. ಮಗನನ್ನು ನೋಡಿದೊಡನೆ ತಾನು ತಂದೆಯೆನ್ನುತ್ತಾನೆ. ತಾನು ನಿರ್ಮಲ, ವರ್ಣರಹಿತ, ಉಪಾಧಿವರ್ಜಿತ, ಪರಿಶುದ್ಧ ಆತ್ಮ ಎಂಬುವನ್ನು ಸಂಪೂರ್ಣವಾಗಿ ಮರೆಯುತ್ತಾನೆ. ಯಾವ ಪರಿಸ್ಥಿತಿಯಲ್ಲಿ ಹೋಗುತ್ತಾನೋ ಆ ಬಣ್ಣದವನು ಆಗುತ್ತಾನೆ. ಇದರ ಹೆಸರು ಸ್ಮೃತಿಭ್ರಂಶ. ವ್ಯವಹಾರದಲ್ಲಿಯೂ ಸಾಮಾನ್ಯವಾಗಿ ನಾವು ಇದನ್ನೇ ಸ್ಮೃತಿಭ್ರಂಶದ ಲಕ್ಷಣವೆಂದು ತಿಳಿಯುತ್ತೇವೆ. ಯಾವನಾದರೂ ಒಬ್ಬ ಮನುಷ್ಯ ಎಚ್ಚರದಪ್ಪಿ ಬಡಬಡಿಸತೊಡಗಿದರೆ, ಈತನಿಗೆ ಶುದ್ಧಿಯಿಲ್ಲ, ಭ್ರಮೆಯಾಗಿದೆ ಎನ್ನುತ್ತೇವೆ. ಇದೇ ಸ್ಮೃತಿಭ್ರಂಶ. ನದಿಗಳು ತುಂಬಿ ತುಂಬಿ ಗರ್ಜಿಸುತ್ತ ಬಂದು ಸಮುದ್ರವನ್ನು ಸೇರಿದರೂ ಸಮುದ್ರ ಶಾಂತವಾಗಿಯೆ ಇರುತ್ತದೆ. ಅವು ಬತ್ತಿದರೂ, ಅದು ಸೊರಗದು. ತನ್ನ ಗಾಂಭೀರ್ಯವನ್ನೂ ಶಾಂತಿಯನ್ನೂ ತೊರೆದು ಅದು ನದಿಗಳ ಹಿಂದೆ ಓಡತೊಡಗಿದರೆ, ನಾವು ಏನೆಂದೇವು? ಸಮುದ್ರ ತನ್ನನ್ನು ತಾನು ಮರೆಯಿತು ಎನ್ನುತ್ತೇವೆ. ನಮ್ಮದಾದರೂ ಅದರಂತೆಯೆ. ನಾನು ಅಖಿಲ ಸೃಷ್ಟಿಯ ಸಾಕ್ಷಿ. ಸೃಷ್ಟಿ ಬೇಕಾದರೆ ನನ್ನನ್ನು ಹಿಂಬಾಲಿಸಲಿ, ನಾನು ಅದಕ್ಕೆ ಮನಸೋಲೆ! ನಾನು ಪರಿಪೂರ್ಣ, ನನಗೆ ಯಾತರದೂ ಕೊರತೆಯಿಲ್ಲ ಎಂಬುದರ ಅರಿವು ಸ್ಮೃತಿ. ಪರಿಪೂರ್ಣವಾಗಿರುವಾಗ ಅಪೂರ್ಣತೆಯ ಭಾಸವಾಗುವುದು ಸ್ಮೃತಿಭ್ರಂಶ. ರಾಜನೊಬ್ಬ ಸ್ವಪ್ನದಲ್ಲಿ ತಾನು ತಿರಿಯುತ್ತ ತಿರುಗುವುದನ್ನು ಕಂಡರೆ, ಆತ ತನ್ನ ರಾಜತ್ವವನ್ನು ಮರೆತನೆಂದು ಹೇಳಬೇಕಲ್ಲವೆ? ಹಾಗೆಯೆ ಈ ಸ್ಥಿತಿ.

## ೭೪. ಸ್ಮೃತಿಭ್ರಂಶದಿಂದ ಬುದ್ಧಿನಾಶ.

ಹೀಗೆ ಮನುಷ್ಯ ತನ್ನ ಅರಿವನ್ನು ಕಳೆದುಕೊಂಡರೆ, ಆತನ ಬುದ್ಧಿ ನಷ್ಟವಾಗುತ್ತದೆ. ಎಂದರೆ ವಿಷಯಾಧೀನವಾಗುತ್ತದೆ. ಬುದ್ಧಿ ವಿಷಯಾಧೀನ

ಅಥವಾ ವಿಷಯನಿಷ್ಠ ಆದರೆ, ತನ್ನ ಮೂಲಸ್ಥಿತಿಯನ್ನು ಕಳೆದುಕೊಳ್ಳುತ್ತದೆ. ಬುದ್ಧಿಯ ಮೂಲಸ್ಥಿತಿ ನಷ್ಟವಾಗುವುದಕ್ಕೇ ಬುದ್ಧಿನಾಶವೆಂದು ಹೇಳುತ್ತಾರೆ. ಮನುಷ್ಯನಿಗೆ ತನ್ನ ಸ್ವರೂಪದ ಮರವಾದೊಡನೆ ಅವನ ಬುದ್ಧಿ ತನ್ನ ಮೂಲಪದದದಿಂದ ಭ್ರಷ್ಟವಾಗುತ್ತದೆ. 'ಸ್ಮೃತಿ ಭ್ರಂಶಾತ್ ಬುದ್ಧಿ ನಾಶಃ' ಬುದ್ಧಿಯೆಂದರೆ ಜ್ಞಾನಶಕ್ತಿ. ಆತ್ಮವನ್ನು ಅರಿವ ಸಾಮರ್ಥ್ಯ ಇರುವುದು ಅದಕ್ಕೇ. ಆ ಬುದ್ಧಿಯನ್ನು ಸಾಮಾನ್ಯ ವಿಷಯಗಳ ರಸದ ವಿಚಿಕಿತ್ಸೆಗೋಸುಗ ಉಪಯೋಗಿಸುವುದೆಂದರೆ, ಅದರ ಅಧಿಕಾರವನ್ನು ಸೆಳೆದುಕೊಂಡಂತೆಯೆ ಸರಿ. ತಾಯಿ ಮಗನ ಬೆರಳಿಗೆ ಚಿನ್ನದ ಉಂಗುರವಿಡುತ್ತಾಳೆ. ಆತ ಮಿಠಾಯಿ ಅಂಗಡಿಗೆ ಹೋಗಿ ಎರಡು ಪೇಡೆಗಳಿಗಾಗಿ ಅದನ್ನು ಮಾರುತ್ತಾನೆ. ಮೇಲೆ ಹೇಳಿದಮಾತೂ ಹೀಗೆಯೇ ಇದೆ. ಬುದ್ಧಿ,ಸರ್ವಕಾಂತಿಮಯವೂ ಸರ್ವಪ್ರಭಾಯುಕ್ತವೂ ಆದ ಶಕ್ತಿ. ವಿಚಾರದಷ್ಟು ಪ್ರಭೆ, ವಿಚಾರದಷ್ಟು ತೇಜ ಮತ್ತೀತರಲ್ಲಿಯೂ ಇಲ್ಲ. ಇಷ್ಟೊಂದು ವಿಚಾರಸಮರ್ಥವಾದ ಬುದ್ಧಿಯನ್ನು ಈ ವಿಷಯಗಳಲ್ಲಿ ವ್ಯಯಮಾಡುವುದೆಂದರೆ, ಅದನ್ನು ನಾಶಗೊಳಿಸುವುದಲ್ಲದೆ ಬೇರೆ ಏನೂ ಅಲ್ಲ. ಆತ್ಮದ ಜ್ಞಾನವನ್ನು ಮಾಡಿಕೊಳ್ಳುವುದು ಬುದ್ಧಿಯ ವಿಶಿಷ್ಟ ಸಾಮರ್ಥ್ಯ. ಬುದ್ಧಿ ವಿಷಯನಿಷ್ಠವಾದರೆ ಅದು ಈ ಸಾಮರ್ಥ್ಯಕ್ಕೆ ಎರವಾಗುತ್ತದೆ. ಇದು ಅದರ ನಾಶವಲ್ಲದೆ ಮತ್ತೇನು? ಆತ್ಮನಿಷ್ಠತೆಯನ್ನು ಕಳೆದುಕೊಂಡ ಬುದ್ಧಿ ಎಷ್ಟೇ ಚುರುಕಾಗಿ ತೋರಿದರೂ ಅದು ತನ್ನ ನಾಶವನ್ನು ಮಾಡಿಕೊಂಡೇ ಇದೆಯೆಂದು ತಿಳಿಯಬೇಕು.

# ೮ ನೆಯ ವ್ಯಾಖ್ಯಾನ

## ೧

## ೭೪. ಹಿಂದಿನ ವಿವೇಚನೆಯ ಸಾರ:—ಬುದ್ಧಿನಾಶವೆ ವಿನಾಶದ ಕೊನೆಯ ಮೆಟ್ಟಿಲು

ನಕಾರಾರ್ಥದಿಂದ ಮತ್ತು ಪ್ರಕೃತಾರ್ಥದಿಂದ, 'ವ್ಯತಿರೇಕದಿಂದ

ಮತ್ತು ಅನ್ವಯದಿಂದ' ಪ್ರಜ್ಞೆಯೊಡನೆ ಇಂದ್ರಿಯನಿರೋಧದ ಸಂಬಂಧ ವನ್ನು ಈ ಮೊದಲೇ ವಿವೇಚಿಸಲಾಗಿದೆ. ವಿಷಯಚಿಂತನೆಯಿಂದ ಬುದ್ಧಿ ನಾಶದವರೆಗಿನ ಪರಂಪರೆಯನ್ನು ವ್ಯತಿರೇಕದಿಂದ ಹೇಳಲಾಗಿದೆ. ಬುದ್ಧಿ ನಾಶ ಈ ಪರಂಪರೆಯ ಕೊನೆಯ ಮೆಟ್ಟಲು. ಇದಕ್ಕೆ ವಿರುದ್ಧವಾದ ಅನ್ವಯ ಪರಂಪರೆಯನ್ನು ಹೇಳುವಾಗ ಬುದ್ಧಿಯ ಸ್ಥಿರತೆ ಕೊನೆಯ ಮೆಟ್ಟಲು ಎಂದು ಹೇಳಲ್ಪಡುತ್ತದೆ. ಅತ್ತ ಬುದ್ಧಿಯ ಸ್ಥಿರತೆ ಕೊನೆಯದು, ಇತ್ತ ಬುದ್ಧಿನಾಶ ಕೊನೆಯದು. 'ಬುದ್ಧಿನಾಶಾತ್ ಪ್ರಣಶ್ಯತಿ' ಎಂದು ಮುಂದೆ ಹೇಳಿದ ವಾಕ್ಯ ಬುದ್ಧಿನಾಶದ ತರುವಾಯದ ಇನ್ನೊಂದು ಮೆಟ್ಟಲನ್ನು ಸೂಚಿಸಲು ಬಂದಿಲ್ಲ. ಬುದ್ಧಿನಾಶದ ಭಯಾನಕತೆಯನ್ನು ಹೇಳುವು ದಕ್ಕಾಗಿಯೆ ಆ ವಾಕ್ಯ ಇದೆ. ಬುದ್ಧಿ ಹೋಯ್ತೆಂದರೆ ಎಲ್ಲವೂ ಹೋಯ್ತು. ಆತ್ಮನಾಶವೇ ಆಯಿತು. ನಾಶವಾಗುವಂಥದು ಇನ್ನೇನೂ ಉಳಿಯಲಿಲ್ಲವೆಂದು ಅದರ ಅರ್ಥ. ಇದರ ಸ್ಪಷ್ಟೀಕರಣ ಮುಂದೆ ಆಗಲಿದೆ.

## ೭೫. ಗೀತೆಗೆ ಶಬ್ದಗಳ ಸೂಕ್ಷ್ಮ ಅರ್ಥಗಳೇ ಅಭಿಪ್ರೇತವಾಗಿವೆ

ನಾವು ಈ ಶ್ಲೋಕದ ಎಲ್ಲ ಪದಗಳಿಗೂ ಸೂಕ್ಷ್ಮ ಅರ್ಥವನ್ನು ಮಾಡಿದೆವು. ಹಾಗೆ ಸೂಕ್ಷ್ಮ ಅರ್ಥವನ್ನು ಮಾಡದೆ ಸ್ವಲ್ಪ ಅರ್ಥವನ್ನೇ ತೆಗೆದುಕೊಂಡರೆ ಸ್ವಲ್ಪದರಲ್ಲಿ ಮನುಷ್ಯನ ಸಮಾಧಾನವಾಗುತ್ತದೆ. ಮನುಷ್ಯನು ಸ್ವಲ್ಪದರಿಂದಲೆ ತಾನು ಸ್ಥಿತಪ್ರಜ್ಞನೆಂದು ತಿಳಿಯತೊಡಗು ತ್ತಾನೆ. ಗೀತೆಯ ಮನಸ್ಸಿನಲ್ಲಿ ಸ್ಥೂಲ ಅರ್ಥಗಳಿಲ್ಲ, ಸೂಕ್ಷ್ಮ ಅರ್ಥಗಳೇ ಇವೆ. ಉಪನಿಷತ್ತಿನ ಒಂದು ಸಮಾನಾರ್ಥಕ ವಾಕ್ಯದಿಂದ ಇದು ತಿಳಿಯು ತ್ತದೆ. "ಆಹಾರಃ ಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾಸ್ಮೃತಿಃ ಸ್ಮೃತಿಃ ಲಾಭೇ ಸರ್ವಗ್ರಂಥಿನಾಂ ವಿಪ್ರಮೋಕ್ಷಃ" ಇದರ ಅರ್ಥ:—ಆಹಾರವನ್ನು ಶುದ್ಧಗೊಳಿಸಿದರೆ ಚಿತ್ತದ ಶುದ್ಧಿಯಾಗುತ್ತದೆ. ಅದರಿಂದ ಅವಿಚಲ ಸ್ಮೃತಿ ಲಭಿಸುವುದರಿಂದ ಮನುಷ್ಯನ ಚಿತ್ತದಲ್ಲಿ ಎಲ್ಲ ಗಂಟುಗಳೂ ಬಿಡುತ್ತವೆ. ಇಲ್ಲಿ ಆಹಾರ ಶಬ್ದಕ್ಕೆ ಬರಿಯ ಅನ್ನವೆಂದು ಅರ್ಥವಲ್ಲ, ಎಲ್ಲ ಇಂದ್ರಿಯಗಳ ಆಹಾರ. ಗೀತೆಯ ನಿರಾಹಾರ ಶಬ್ದಕ್ಕೂ ಇದೇ ಅರ್ಥವನ್ನು ನಾವು ಮಾಡಿದೇವೆ ಹಿಂದೆ ನಾವು ಭಕ್ತಿಮಾರ್ಗದ 'ವಿಶುದ್ಧ ಪ್ರಕ್ರಿಯೆ' ಎಂಬು ದನ್ನು ನೋಡಿದೆವು. ಇದು ಅಶುದ್ಧ ಆಹಾರವನ್ನು ವರ್ಜಿಸಿ ಎಲ್ಲಾ ಇಂದ್ರಿ

ಯಗಳಿಗೆ ಶುದ್ಧ ಆಹಾರವನ್ನು ಕೊಡುತ್ತ ಹೋದರೆ, ಚಿತ್ತದ ಅಥವಾ ಬುದ್ಧಿಯ ಶುದ್ಧಿಯಾಗುತ್ತದೆ. ಹಾಗಾಯ್ತೆಂದರೆ 'ಧ್ರುವಾ ಸ್ಮೃತಿ' ಲಭಿಸುತ್ತದೆ. ಸ್ವಂತದ ಅರಿವು ಅಚಲವಾಗುತ್ತದೆ. ಬಳಿಕ ಚಿತ್ತದ ಎಲ್ಲಾ ಗಂಟುಗಳು ಬಿಚ್ಚುತ್ತವೆ. ಮನುಷ್ಯನ ಮನದಲ್ಲಿ ಬೇರೆ ಬೇರೆ ಗ್ರಹಗಳ ಗ್ರಂಥಿಗಳು, ಅಥವಾ ಗಂಟುಗಳು ಇರುತ್ತದೆ. ಈ ಗ್ರಂಥಿಗಳಿಗೆ ಇಂಗ್ಲಿಷ್‌ನಲ್ಲಿ 'ಕಾಂಪ್ಲೆಕ್ಸ್' ಎನ್ನುತ್ತಾರೆ. ಬುದ್ಧಿ ಶುದ್ಧವಾಗುವುದೆಂದರೆ ಈ ಎಲ್ಲ ಗಂಟುಗಳು ಇಲ್ಲದಾಗುವಿಕೆ. ಈ ಗಂಟುಗಳು ಹೋದರೆ ಬುದ್ಧಿ ಮುಕ್ತವಾಗುತ್ತದೆ. ಕನ್ನಡಿಯಂತೆ ಸ್ವಚ್ಛವಾಗುತ್ತದೆ. ಬಳಿಕ ಅದರಲ್ಲಿ ಆತ್ಮದ ಪ್ರತಿಬಿಂಬ ಮೂಡುತ್ತದೆ.

## ೭೬. ಸ್ಮೃತಿ ವಿರುದ್ಧ ಸ್ಮರಣಶಕ್ತಿ.

ಇಷ್ಟೆಲ್ಲ ಕಾರ್ಯ ಇಲ್ಲಿ ಸ್ಮೃತಿಲಾಭದಿಂದ ಅಪೇಕ್ಷಿತವಾಗಿರುವುದರಿಂದ ಸ್ಮೃತಿ ಶಬ್ದಕ್ಕೆ ಸಾಮಾನ್ಯ ಸ್ಮರಣಶಕ್ತಿಯೆಂದಷ್ಟೇ ಇಲ್ಲಿ ಅರ್ಥ ಮಾಡಬಾರದು. ಸಾಮಾನ್ಯ ಸ್ಮರಣಶಕ್ತಿಯೆಂದರೆ ಇಂಗ್ಲೀಸಿನಲ್ಲಿ 'ಮೆಮರಿ' ಎನ್ನುವುದು. ತರ್ಕಶಕ್ತಿಯಿಂದ ಶಾಲೆಗಳಲ್ಲಿ ಯಾವುದರ ವಿಕಾಸದ ಪ್ರಯತ್ನ ಮಾಡಲ್ಪಡುತ್ತದೆಯೋ ಅದು. ವ್ಯವಹಾರದಲ್ಲಿ ಮನುಷ್ಯ ಮರಗುಳಿಯಾಗಿದ್ದರೆ ಸಾಗದು. ನೆನಪು ಗಟ್ಟಿಯಾಗಿರಬೇಕು. ತಮೋಗುಣದಲ್ಲಿ ಲೀನನಾದ ಮನುಷ್ಯ ಮರಗುಳಿಯಾಗುತ್ತಾನೆ. ಅವನು ವ್ಯವಹಾರದಲ್ಲಿ ಕುಶಲನಾಗುವುದಿಲ್ಲ. ತಮೋಗುಣ ಕಡಿಮೆಯಾಗಿದ್ದರೆ ಅವನು ವ್ಯವಹಾರೋಪಯೋಗಿಯಾದ ಸ್ಮರಣವನ್ನು ಇಟ್ಟುಕೊಳ್ಳಬಲ್ಲ. ಇಷ್ಟೇ ಆ ಸಾಮಾನ್ಯ ಸ್ಮರಣಶಕ್ತಿಯ ಕಾರ್ಯ. ಆದರೆ ಈ ಸ್ಮರಣಶಕ್ತಿ ಹೃದಯಗ್ರಂಥಿಗಳನ್ನೂ ಬಿಡಿಸುತ್ತದೆಂದು ಯಾರೂ ಅಪೇಕ್ಷಿಸರು. ಉಪನಿಷತ್ತುಗಳೂ ಗೀತೆಯೂ ಉಲ್ಲೇಖಿಸಿದ ಸ್ಮೃತಿ ಇಂಥ ಶಕ್ತಿಯಲ್ಲ; ಅದು ಚಿತ್ತದ ಒಂದು ಅವಸ್ಥೆ. ಆತ್ಮದ ನಿತ್ಯಸ್ಮರಣವಿರುವುದು ಅದರ ಸ್ವರೂಪ. ಆತ್ಮದ ನಿತ್ಯಸ್ಮರಣ ಇದ್ದರೆ ಇತರ ಸಂಸ್ಕಾರಗಳು ಚಿತ್ತದ ಮೇಲೆ ಎಷ್ಟೇ ಆಘಾತ ಮಾಡಿದರೂ ಅವುಗಳ ಪರಿಣಾಮ ಅದರ ಮೇಲೆ ಆಗದು. ಆ ಸಂಸ್ಕಾರಗಳ ಆಘಾತಗಳನ್ನು ತಡೆಯಲು ಆತ್ಮಸ್ಮೃತಿಯು ಗುರಾಣಿ ಯಾವಾಗಲೂ ಸಿದ್ಧವಾಗಿರುತ್ತದೆ. ಇಂತಹ ಬುದ್ಧಿಗೆ ಆತ್ಮದರ್ಶನವಾಗುವುದು ನಿಶ್ಚಿತ.

## ೬೭. ಆತ್ಮಸ್ಮೃತಿಯ ಅಭಾವದಲ್ಲಿ ಸಂಸ್ಕಾರ ಪರಾಧೀನತೆ

ಇದಕ್ಕೆ ವಿಪರೀತವಾಗಿ, ಆತ್ಮವಿಸ್ಮೃತಿ ಇದ್ದವನ ಚಿತ್ತದಮೇಲೆ ಹೊರಗಿನ ಸಂಸ್ಕಾರಗಳ ಪರಿಣಾಮಗಳು ಮೂಡುತ್ತವೆ. ಚಿಕ್ಕಮಕ್ಕಳ ಮನಸ್ಸಿನ ಮೇಲೆ ಯಾವ ಸಂಸ್ಕಾರಗಳಾದರೂ ಕೂಡಲೇ ಮೂಡುತ್ತವೆ. ಚಿಕ್ಕಮಕ್ಕಳ ಮನಸ್ಸು ಸ್ವಚ್ಛ, ಕೋಮಲ ಎನ್ನುತ್ತೇವೆ. ಇದಕ್ಕೆ ಕಾರಣ, ಚಿಕ್ಕಮಕ್ಕಳಲ್ಲಿರುವ ಸಂಪೂರ್ಣ ಆತ್ಮವಿಸ್ಮೃತಿ. ಈ ಕಾರಣದಿಂದ ಅವರ ಚಿತ್ತದ ಮೇಲೆ ಹೊರಗಿನ ಪ್ರತಿಯೊಂದೂ ವಾತಿನ ಪರಿಣಾಮವಾಗುತ್ತದೆ. ನಾವು ಆ ಚಿತ್ತ ಸಂಸ್ಕಾರಾರ್ಹವೆಂದೂ ಸಂಸ್ಕಾರ-ಸುಲಭವೆಂದೂ ಗೌರವಿಸುತ್ತೇವೆ. ಆದರೆ ಸಂಸ್ಕಾರಗಳು ಯೋಗ್ಯವಾಗಿದ್ದರೆ ಚಿತ್ತ ಒಳಿತಾಗುತ್ತದೆ. ಕೆಟ್ಟವಾಗಿದ್ದರೆ ಕೆಡುತ್ತದೆ. ಸಂಸ್ಕಾರಗಳು ಹೇಗೋ ಹಾಗೆ ಅವುಗಳ ಪರಿಣಾಮ. ಈ ದೃಷ್ಟಿಯಿಂದ ಸಂಸ್ಕಾರಸುಲಭತೆಯೆಂಬ ಚಿತ್ತದ ದಶೆ ಭಯಾನಕವೂ ಅಹುದು ಎನ್ನಬೇಕಾಗುತ್ತದೆ.

ಜ್ಞಾನಿಗಳ ಮನವು ಚಿಕ್ಕಮಕ್ಕಳ ಮನದಂತೆ ಎನ್ನುವಾಗ, ಅದು ಸಂಸ್ಕಾರ-ಸುಲಭವೆಂದು ಅರ್ಥವಲ್ಲ. ಅದು ಸಣ್ಣಮಕ್ಕಳ ಮನದಂತೆ ಅಕೃತ್ರಿಮ, ನಿರ್ದಂಭ, ಮುಕ್ತ, ಸಹಜ ಎಂದು ಅರ್ಥ. ಮನವಲ್ಲಿ ಆತ್ಮಸ್ಮೃತಿ ಅಖಂಡವಾಗಿ ಜಾಗೃತವಾಗಿದ್ದರೆ, ಅದಕ್ಕೆ ಅನ್ಯ ಸಂಸ್ಕಾರಗಳ ಭಯ ಇರದು. ಇಂತಹ ಮನುಷ್ಯ ತುಂಬಿದ ಪೇಟೆಯಲ್ಲಿ ಹೋಗಿ ಕುಳಿತರೂ ಅವನು ತನ್ನೆಡೆಯಲ್ಲಿಯೇ ಇದ್ದಾನು. ಅವನಿಗೆ ಎಲ್ಲಿಯೂ ಭಯವಿಲ್ಲ. ಅವನು ರಕ್ಷಣೆಯನ್ನು ದಾಟಿ ಹೋಗಿದಾನೆ. ಆತ್ಮಸ್ಮೃತಿ ನಿರಂತರವೂ ಜಾಗೃತವಾಗಿರುವುದರಿಂದ ಅವನಿಗೆ ರಕ್ಷಣೆಯ ಅಥವಾ ಬೇಲಿಯ ಆವಶ್ಯಕತೆ ಇಲ್ಲ. ನೀತಿಶಾಸ್ತ್ರದ ನಿಯಮಗಳ ಬೇಲಿ ಸಾಮಾನ್ಯ ಚಿತ್ತದ ಸಂರಕ್ಷಣೆಗೋಸುಗ ಆವಶ್ಯಕ. ಆ ಸ್ಥಿತಿ ಇಲ್ಲಿಲ್ಲ. ಆತ್ಮ ವಿಸ್ಮೃತಿಯಾದರೆ. ಬುದ್ಧಿ ಹೊರಗಿನ ಪ್ರಹಾರಗಳಿಗೆ ಗುರಿಯಾಗುತ್ತದೆ. ಆದರಿಂದ ಅದಕ್ಕೆ ಹೊರಗಿನ ಕೃತ್ರಿಮ ಸಂರಕ್ಷಣೆ ಅವಶ್ಯಕವಾಗುತ್ತದೆ. ಅದರೆ ಆತ್ಮಸ್ಮೃತಿಯ ಅಭಾವವಿದ್ದಲ್ಲಿ ಆ ಎಲ್ಲ ಸಂರಕ್ಷಣೆಗಳೂ ನಿರುಪಯುಕ್ತವಾಗುವ ಸಂಭವವುಂಟು.

## ೭೯. ಗೀತಾಶ್ರವಣದ ಫಲಿತ. ಮೋಹನಾಶ, ತಜ್ಜನ್ಯ ಸ್ಮೃತಿಲಾಭ.

ಇಲ್ಲಿ ಸ್ಮೃತಿ ಶಬ್ದಕ್ಕೆ ಆತ್ಮಸ್ಮೃತಿ ಎಂದು ಅರ್ಥ ಮಾಡುವುದೇ ಯೋಗ್ಯ. ಇದಕ್ಕೆ ಇನ್ನೊಂದು ಪ್ರಮಾಣವನ್ನು ಕೊಡಬಹುದು. ಇಲ್ಲಿ ಸಂಮೋಹದಿಂದ ಸ್ಮೃತಿಭ್ರಂಶ, ಸ್ಮೃತಿಭ್ರಂಶದಿಂದ ಬುದ್ಧಿನಾಶ ಎಂದ ಪರಂಪರೆಯನ್ನು ಹೇಳಿದೆ. ಇದಕ್ಕೆ ವಿರುದ್ಧ ಪರಂಪರೆಯನ್ನು ಸರಿಯಾಗಿ ಇರಿಸಿದರೆ, ಅದು ಹೇಗಾಗುತ್ತದೆಂಬುದನ್ನು ನೋಡಿದರೆ ಈ ಶಬ್ದಗಳ ಅರ್ಥದ ಮೇಲೆ ಪ್ರಕಾಶ ಬೀಳುತ್ತದೆ. ಇದಕ್ಕೆ ವಿರುದ್ಧ ಮೋಹನಾಶದಿಂದ ಸ್ಮೃತಿಲಾಭವಾಗುವುದು ಮತ್ತು ಸ್ಮೃತಿಲಾಭದಿಂದ ಬುದ್ಧಿಯಲ್ಲಿ ಸಂದೇಹ ಹೋಗಿ ಬುದ್ಧಿ ಸ್ಥಿರವಾಗುವುದು-ಹೀಗೆ ಪರಂಪರೆ. ಗೀತಾಶ್ರವಣದ ಕೊನೆಯಲ್ಲಿ ಅರ್ಜುನ ಆ ಸಮಯದ ತನ್ನ ಸ್ಥಿತಿಯನ್ನು ವರ್ಣಿಸುವಾಗ ಇವೇ ಶಬ್ದಗಳಲ್ಲಿ ಈ ಪರಂಪರೆಯನ್ನು ವಿವರಿಸಿದ್ದಾನೆ. **"ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ಸ್ಥಿತೋಽಸ್ಮಿ ಗತಸಂದೇಹಃ".** "ಗೀತಾ ಶ್ರವಣದಿಂದ ನನ್ನ ಮೋಹವು ಅಳಿಯಿತು. ನನಗೆ ಸ್ಮೃತಿ ಲಭಿಸಿತು, ನನ್ನ ಎಲ್ಲ ಸಂದೇಹಗಳು ಇಲ್ಲದಾದುವು." ಅರ್ಜುನನಿಗೆ ಯಾವ ಬಗೆಯ ಮೋಹವಾಗಿತ್ತೆಂಬುದನ್ನು ನೋಡಿದರೆ ಮೋಹ ಶಬ್ದದ, ಸ್ಮೃತಿ ಶಬ್ದದ ಅರ್ಥ ಗೊತ್ತಾಗುತ್ತದೆ.

## ೮೦. ಮೋಹನಾಶವೆಂದರೆ ಕರ್ತವ್ಯದ ವಿಷಯದಲ್ಲಿ ಸ್ಪಷ್ಟಜ್ಞಾನ.

ಅರ್ಜುನನಿಗೆ ಕರ್ತವ್ಯಾಕರ್ತವ್ಯಗಳ ವಿಷಯದಲ್ಲಿ ಮೋಹವುಂಟಾಗಿದ್ದಿತೆಂದು ತೋರುತ್ತದೆ. ಇಲ್ಲಿ ಮೋಹ ಶಬ್ದಕ್ಕೆ ಕರ್ತವ್ಯ-ಮೋಹವೆಂದೇ ಅರ್ಥ ಮಾಡಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಮೋಹ ಅರ್ಜುನನಿಗೆ ಏಕೆ ಉಂಟಾಯಿತು? ಯುದ್ಧದಲ್ಲಿ ಎಲ್ಲರನ್ನೂ ತನ್ನ ಜನರನ್ನೇ ಕೊಲ್ಲಬೇಕಾಗುವುದೆಂಬ ವಿಚಾರದಿಂದ ಆತನ ಮನಸ್ಸು ಉದ್ವಿಗ್ನವಾಗಿದ್ದಿತು. ಆತನ ಚಿತ್ತದ ವ್ಯವಸ್ಥಿತಿ ಇಲ್ಲದಾಗಿತ್ತು. ಮನಕ್ಕೆ ಹೊಯ್ದಾಟ ಬಂದಿತ್ತು ಇವರು ನನ್ನವರು, ಇವರು ಪರಕೀಯರು ಎಂಬ ವಿಚಾರದಿಂದ ಆತನ ಮನವು ಕ್ಷುಬ್ಧವಾಗಿತ್ತು ಒಬ್ಬ ಅಪಕ್ವ ಹೃದಯದ ನ್ಯಾಯಾಧೀಶನ ಮುಂದೆ ಆತನ ಮಗನೇ ಆರೋಪಿಯಾಗಿ ಬಂದಾಗ ಅವನ ಮನಸ್ಸಿನಲ್ಲಿ

ತನ್ನ ಮಗ ಉಳಿಯಬೇಕೆಂಬ ಭಾವನೆ ಬರತೊಡಗುತ್ತದೆ. ಕರ್ತವ್ಯಾಕರ್ತವ್ಯದ ವಿಷಯದಲ್ಲಿ ಆತನ ಮನವು ಮೂಢವಾಗುತ್ತದೆ. ಹೊಯ್ದಾಡತೊಡಗುತ್ತದೆ, ಅನೇಕ ವಿಧವಾಗುತ್ತದೆ. ಏನುಮಾಡಬೇಕೆಂಬುದು ತಿಳಿಯದಂತಾಗುತ್ತದೆ. ಹಾಗೆ ಅರ್ಜುನನ ಸ್ಥಿತಿ ಆಯಿತು. ಗೀತೆಯ ಆರಂಭದಲ್ಲಿ ಅರ್ಜುನ ಹೀಗೆಯೆ ಹೇಳಿದಾನೆ: "ಪೃಚ್ಛಾಮಿ ತ್ವಾಂ ಧರ್ಮ ಸಮ್ಮೂಢ ಚೇತಾಃ" ಸಂಮೋಹದಿಂದ ನನ್ನ ಬುದ್ಧಿ ಮಂಕಾಗಿ ನನಗೆ ಕರ್ತವ್ಯ ತಿಳಿಯದಂತಾಗಿದೆ. ಆದುದರಿಂದ ನಾನು ನಿನಗೆ ಶರಣು ಬಂದಿದ್ದೇನೆ ಅರ್ಥಾತ್ ಅರ್ಜುನನಿಗೆ ಕರ್ತವ್ಯದ ವಿಷಯದಲ್ಲಿ ಮೋಹ ಉಂಟಾಗಿದ್ದಿತು. ಗೀತೆಯ ಮೂಲಭೂಮಿಕೆ ಹೀಗಿರುವುದರಿಂದ ಮೂಲಭೂಮಿಕೆಯಲ್ಲಿ ಮೋಹಕ್ಕೆ ಇರುವ ಈ ಅರ್ಥವನ್ನೆ ಇಲ್ಲಿ ಸ್ಥಿತಪ್ರಜ್ಞನ ಪ್ರಕರಣದಲ್ಲಿಯೂ ಸ್ವೀಕರಿಸಬೇಕೆಂಬುದು ಸ್ಪಷ್ಟ.

## ೬೧. ಅನುಷಂಗದಿಂದ ಕ್ರೋಧ ಶಬ್ದದ ಅರ್ಥದ ವಿಷಯದಲ್ಲಿ ವಿಚಾರ

ಅರ್ಜುನನಿಗೆ ಮೋಹ ಹೇಗೆ ಉಂಟಾಯ್ತೆಂಬುದನ್ನು ವಿಚಾರಿಸಿದರೆ ಕ್ರೋಧ ಶಬ್ದದ ಅರ್ಥವೂ ಸ್ಪಷ್ಟವಾಗುತ್ತದೆಂಬುದನ್ನು ಇಲ್ಲಿ ಅನುಷಂಗದಿಂದ ಲಕ್ಷಿಸಬಹುದಾಗಿದೆ. ಅರ್ಜುನನಿಗೆ ಮೋಹ ಉಂಟಾಗಿತ್ತೆಂಬುದು ನಿಜ. ಆದರೆ ಸ್ಥೂಲ ಅರ್ಥದಿಂದ ಆತನಿಗೆ ಕ್ರೋಧ ಬಂದಿರಲಿಲ್ಲ. ಆತ ಕೋಪವಶನಾಗಿರಲಿಲ್ಲ, ಆತನಿಗೆ ಸಂತಾಪ ಆಗಿರಲಿಲ್ಲ. ನನ್ನವರೇ ನನ್ನೊಡನೆ ಯುದ್ಧ ಮಾಡಲು ನಿಂತಿದಾರೆ ಎಂದು ಆತ ವಿಷಾದಕ್ಕೊಳಗಾದ. ಅದರಿಂದಲೇ ಆತನಿಗೆ ಕರ್ತವ್ಯ-ಮೋಹವಾಯ್ತು. ಆದರೆ ಗೀತೆ ಹೇಳುವುದು, ಕ್ರೋಧದಿಂದ ಮೋಹ ಹುಟ್ಟುತ್ತದೆ ಎಂದು. ಅರ್ಥಾತ್ ವಿಷಾದ ಕ್ರೋಧಗಳು ಗೀತೆಯ ದೃಷ್ಟಿಯಿಂದ ಪರ್ಯಾಯ ಶಬ್ದಗಳೆಂದು ತೋರುತ್ತದೆ. ಈ ವಿಷಾದ ಶಬ್ದವನ್ನು ನಾವು ಲಕ್ಷಿಸಬೇಕಾಗಿದೆ. ಪ್ರಸನ್ನತಾ ಸೂಚಕವಾದ ಮೂರು ಅಕ್ಷರಗಳ 'ಪ್ರ-ಸಾ-ದ' ಶಬ್ದದ ವಿರುದ್ಧಾರ್ಥದ ಶಬ್ದ 'ವಿ-ಷಾ-ದ'. ಕ್ರೋಧದ ಸ್ವರೂಪವೂ ಇದರಂತೆಯೆ ಪ್ರಸನ್ನತಾ ವಿರೋಧಿ ಎಂಬುದನ್ನು ನಾವು ಕಂಡಿದೇವೆ. ಈ ಅರ್ಥದಿಂದ ಕ್ರೋಧ, ವಿಷಾದ ಈ ಎರಡೂ ಶಬ್ದಗಳು ಕ್ಷೋಭ ಸೂಚಕ.

### ೮೨. ಸ್ಥಿತೋಸ್ಮಿ ಗತಸಂದೇಹ: ಎಂದರೆ ನಾನು ಸ್ಥಿತಪ್ರಜ್ಞನಾದೆ

ಈ ಬಗೆಯ ಕ್ಷೋಭದಿಂದ ಅರ್ಜುನನಿಗೆ ಕರ್ತವ್ಯಾಕರ್ತವ್ಯದ ವಿಷಯದಲ್ಲಿ ಮೋಹವುಂಟಾಯಿತು. ದೇವರ ಕೃಪೆಯಿಂದ ಗೀತಾಶ್ರವಣದ ಭಾಗ್ಯ ಲಭಿಸಿ. ಅದರಿಂದ ಆ ಮೋಹ ನಷ್ಟವಾಯಿತು, ಎಂದು ಅರ್ಜುನ ಹೇಳುತ್ತಾನೆ. ಆ ಬಳಿಕ ಆತ ಮೋಹ ಹೋದುದರಿಂದ ನನಗೆ ಸ್ಮೃತಿ ಲಭಿಸಿತು, ನನ್ನ ಸಂದೇಹವೆಲ್ಲವು ಅಳಿಯಿತು ಎಂದು ಉಪನಿಷತ್ತಿನ ಭಾಷೆಯಲ್ಲಿ ತನ್ನ ಸ್ಥಿತಿಯನ್ನು ಸ್ಪಷ್ಟಗೊಳಿಸಿದಾನೆ. ಇದರಿಂದ ಸ್ಮೃತಿ ಶಬ್ದದ ಅರ್ಥ ಸ್ಪಷ್ಟವಾಗುತ್ತದೆ. ನನ್ನ ಸಂದೇಹಗಳೆಲ್ಲವು ಛಿನ್ನವಾದುವು, ಎಂದರೆ ಬುದ್ಧಿಯಲ್ಲಿಯ ಎಲ್ಲ ಬಗೆಯ ಗ್ರಂಥಿಗಳು ಇಲ್ಲದಾದವು, ಬುದ್ಧಿ ಸ್ಥಿರವಾಯಿತು, ನಾನು ಸ್ಥಿತಪ್ರಜ್ಞನಾದೆ ಎಂದು ಆ ಅರ್ಥ. ಐತಿಹಾಸಿಕ ಅರ್ಜುನನ ತೊಡಕಿನಲ್ಲಿ ನಾವು ಬಿದ್ದು ಈ ವಾಕ್ಯಕ್ಕೆ ಗೌಣ ಅರ್ಥವನ್ನು ಮಾಡುವುದು ಸರಿಯಲ್ಲ. ಯಾವ ವ್ಯಕ್ತಿಯ ವಿಚಾರವನ್ನೂ ಮಾಡದೆ ನಾವು ಶಬ್ದಗಳ ಯಥಾಶ್ರುತ ಸೂಕ್ಷ್ಮ ಅರ್ಥವನ್ನು ಸ್ವೀಕರಿಸುವುದೇ ಯೋಗ್ಯ. ಬಲು ಆಳವಾಗಿ ಹೋಗಿ ಶಬ್ದದ ಸೂಕ್ಷ್ಮ, ಅಂತಿಮ, ವ್ಯಕ್ತಿನಿರಪೇಕ್ಷವಾದ ಅರ್ಥವನ್ನು ಗ್ರಹಿಸಲು ಸಮರ್ಥವಾಗಿರುವುದು ಮಾನವಬುದ್ಧಿಯ ಸಹಜ ಗುಣ. ಅದರಲ್ಲಿಯೆ ಮಾನವನ ಶ್ರೇಯವಿದೆ. ಅರ್ಜುನನ ವಾಕ್ಯದಲ್ಲಿಯ ಸ್ಥಿತೋಸ್ಮಿ ಎಂಬ ಶಬ್ದಗಳೂ ಸೂಚಕವಾಗಿವೆ. ಸ್ಥಿತ ಶಬ್ದದಿಂದ ಸ್ಥಿತಪ್ರಜ್ಞನೆಂಬ ಅರ್ಥ ಸೂಚಿತವಾಗಲೇಬೇಕು.

## ೨

### ೮೩. ನಾರದರು ಸೂಚಿಸಿದಂತೆ ಶಬ್ದಗಳ ಸ್ಥೂಲ ಅರ್ಥವನ್ನು ತಮ್ಮ ತಮ್ಮ ಭೂಮಿಕೆಗನುಸಾರವಾಗಿ ತೆಗೆದುಕೊಳ್ಳಬಹುದು.

ಆದರೆ ಹೀಗೆ ಶಬ್ದಗಳಿಗೆ ಸೂಕ್ಷ್ಮವಾದ ಅರ್ಥವನ್ನೇ ಮಾಡಿದರೆ, ಸಾಮಾನ್ಯ ಮನುಷ್ಯನಿಗೆ ಈ ಶ್ಲೋಕ ಅಷ್ಟೊಂದು ಉಪಯೋಗಿಯಾಗಲಾರದು. ಹಾಗಾದರೆ ತಮಗೆ ತಕ್ಕಂತೆ ಮರ್ಯಾದಿತ ಅರ್ಥವನ್ನು ಮಾಡಿದರೆ ಹಿಂದೆ ಹೇಳಿದಂತೆ, ಸ್ವಲ್ಪದರಿಂದ ಸಂತೋಷವಾಗಿ ಪ್ರಗತಿಯೆ ನಿಲ್ಲುತ್ತದೆ. ಆದುದರಿಂದ ಆವಶ್ಯಕತೆಗನುಸಾರವಾಗಿ ಎರಡು ಅರ್ಥಗಳನ್ನು ತೆಗೆದುಕೊಳ್ಳ

ಬೇಕು. ನಾರದರು ಭಕ್ತಿಸೂತ್ರಗಳಲ್ಲಿ ಈ ಶಬ್ದಗಳಿಗೆ ಸ್ಥೂಲ ಅರ್ಥಗಳನ್ನು ಹೇಳಿದಾರೆ. ಅವರ ಸೂತ್ರಗಳು ಹೀಗಿರುವುವು.

**"ದುಸ್ಸಂಗಃ ಸರ್ವಥೈವ ತ್ಯಾಜ್ಯಃ ಕಾಮ ಕ್ರೋಧ ಮೋಹ ಸ್ಮೃತಿಭ್ರಂಶ ಬುದ್ಧಿನಾಶ ಸರ್ವನಾಶ ಕಾರಣತ್ವಾತ್ ತರಂಗಾಯಿತಾ ಅಪೀಮೇ ಸಂಗಾತ್ ಸಮುದ್ರಾಯಂತಿ।"** 'ಕುಸಂಗತಿಯನ್ನು ಸಂಪೂರ್ಣವಾಗಿ ಬಿಡಬೇಕು. ಏಕೆಂದರೆ, ಅದರಿಂದ ಕಾಮ, ಕ್ರೋಧ, ಮೋಹ, ಸ್ಮೃತಿಭ್ರಂಶ ಈ ಪರಂಪರೆಯಿಂದ ಬುದ್ಧಿನಾಶ, ಸರ್ವನಾಶ ಒದಗುತ್ತದೆ. ಮನಷ್ಯನ ಮನದಲ್ಲಿ ಈ ವಿಕಾರಗಳು ಮೂಲತಃ ತರಂಗದಂತೆ ಅಲ್ಪವಾಗಿದ್ದರೂ, ಕುಸಂಗತಿಯಿಂದ ಸಮುದ್ರದಂತೆ ವಿಶಾಲವಾಗುತ್ತವೆ.' ನಾರದರ ಸೂತ್ರಗಳಂತೆ ಈ ಶ್ಲೋಕಗಳಿಗೆ ತಮ್ಮ ತಮ್ಮ ಭೂಮಿಕೆಗನುಸಾರವಾದ, ಆದರೆ ಪ್ರಗತಿಶೀಲವಾದ, ಅರ್ಥವನ್ನು ಯಥಾಸಂಭವವಾಗಿ ಹಚ್ಚಿಕೊಳ್ಳಬೇಕು.

### ೬೪. ಬುದ್ಧಿನಾಶ ಪರಂಪರೆಯ ವಿಭಾಗದ ರಹಸ್ಯ; ಮೊದಲು ಮನದ ಮೇಲೆ ಆಕ್ರಮಣ, ಬಳಿಕ ಬುದ್ಧಿಯ ಮೇಲೆ

ಈಯೆರಡು ಶ್ಲೋಕಗಳ ಇನ್ನಷ್ಟು ಪೃಥಕ್ಕರಣ ಉಪಯುಕ್ತವಾಗಬಹುದು. ಮೊದಲನೆಯ ಶ್ಲೋಕದಲ್ಲಿ **'ಧ್ಯಾಯತೋ ವಿಷಯಾನ್ ಪುಂಸಃ'** ಇಲ್ಲಿಂದ ಪ್ರಾರಂಭಿಸಿ **'ಕಾಮಾತ್ ಕ್ರೋಧೋಭಿಜಾಯತೇ'** ಇಲ್ಲಿ ಮುಗಿಸಲಾಗಿದೆ. ಮುಂದಿನ ಶ್ಲೋಕದಲ್ಲಿ **'ಕ್ರೋಧಾದ್ ಭವತಿ ಸಂಮೋಹಃ'** ಇಲ್ಲಿಂದ ಬುದ್ಧಿನಾಶದ ಭಾಗವನ್ನು ಹೇಳಲಾಗಿದೆ. ಈ ವಿಭಾಗ ಏಕೆ ಮಾಡಲ್ಪಟ್ಟಿದೆ, ಅದರಲ್ಲಿ ಯಾವುದಾದರೂ ಯೋಜನೆ ಕಾಣಬರುತ್ತದೆಯೊ? ಮನುಷ್ಯನ ಚಿತ್ತದಲ್ಲಿ ಎರಡು ಭಾಗ: ಮನ, ಬುದ್ಧಿ. ವಿಷಯ ಚಿಂತನೆಯ ಪರಿಣಾಮವಾಗಿ ಮನದ ಮೇಲೆ ವಿಷಯಗಳ ಆಕ್ರಮಣ ಹೇಗಾಗುತ್ತದೆಂಬುದನ್ನು ಮೊದಲನೆಯ ಶ್ಲೋಕದಲ್ಲಿ ಹೇಳಲಾಗಿದೆ. ಬುದ್ಧಿಯ ಮೇಲೆ ಅವುಗಳ ಪ್ರಹಾರ ಯಾವ ಬಗೆಯದಿರುತ್ತದೆಂಬುದರ ನಿರೂಪಣ ಎರಡನೆಯ ಶ್ಲೋಕದಲ್ಲಿ ಇದೆ. ವಿಷಯಗಳ ಪ್ರಹಾರ ಮೊದಲು ಮನದಮೇಲೆ ಆಗುತ್ತದೆ. ಒಮ್ಮೆಲೇ ಬುದ್ಧಿಯ ಮೇಲೆ ಆಗುವುದಿಲ್ಲ. ಆದುದರಿಂದ ಮನವು ವಿಕಾರಯುಕ್ತವಾದರೂ ಬುದ್ಧಿ ಗಟ್ಟಿಯಿರುತ್ತದೆಂದು ಭಾಸವಾಗಬಲ್ಲುದು. ಆದರೆ ಈ ಸ್ಥಿತಿ ಬಹಳ ಹೊತ್ತು ಇರದು. ಆದುದರಿಂದ

ಸಕಾಲದಲ್ಲಿಯೆ ಎಚ್ಚತ್ತು ಮನದ ಮೇಲೆ ಆಕ್ರಮಣವಾಗತೊಡಗಿದೊಡನೆ ಅದನ್ನು ಹೊಡೆದಟ್ಟಬೇಕು. ಹಾಗೆ ನೋಡಿದರೆ, ಮೊದಲನೆಯ ಆಕ್ರಮಣ ಇಂದ್ರಿಯಗಳ ಮೇಲೆ. ಅವು ವಿಷಯಗಳ ಮೊದಲನೆಯ ಸುತ್ತುಕೋಟೆ. ಅಲ್ಲಿಂದಲೇ ಅವುಗಳ ಆಕ್ರಮಣವನ್ನು ಹಿಂದಿರುಗಿಸಬೇಕು. ಮುಂದೆ ಮೂರನೆಯ ಅಧ್ಯಾಯದಲ್ಲಿ ಇದರ ಹೆಚ್ಚಿನ ವಿವೇಚನೆಯಿದೆ. "ಇಂದ್ರಿಯಾಣಿ ಮನೋ ಬುದ್ಧಿಃ ಅಸ್ಯಾಧಿಷ್ಠಾನಮುಚ್ಯತೇ". ಇಂದ್ರಿಯಗಳು, ಮನ, ಬುದ್ಧಿ ಇವು ಕಾಮನೆಗಳಿಗೆ ಆಶ್ರಯ ನೀಡುವ ಮೂರು ಕೋಟೆಗಳು. ಇಂದ್ರಿಯಗಳು ಎಲ್ಲಕ್ಕೂ ಹೊರಗಿನ ಕೋಟೆ. ಆದುದರಿಂದ ಯುದ್ಧದ ಆರಂಭವನ್ನು ಇಂದ್ರಿಯಗಳಿಂದಲೇ ಮಾಡಬೇಕು. ಇದನ್ನು ನಾವು ಈ ಮೊದಲೇ ಕಂಡಿದೇವೆ.

೧

**೬೫. ಸ್ಥಿರ ಬುದ್ಧಿಯ ಪರಂಪರೆಯ ಆರಂಭ :— ರಾಗ ದ್ವೇಷಗಳನ್ನು ತೊರೆದು ಇಂದ್ರಿಯಗಳೊಡನೆ ವ್ಯವಹರಿಸುವವನಿಗೆ ಪ್ರಸಾದ ದೊರೆಯುತ್ತದೆ.**

ವಿಷಯಚಿಂತನೆಯಿಂದ ಪ್ರಾರಂಭವಾಗುವ ಬುದ್ಧಿನಾಶದ ಪರಂಪರೆಯನ್ನು ಹೇಳಿದುದಾಯ್ತು. ಇನ್ನು ಮುಂದಿನ ಎರಡು ಶ್ಲೋಕಗಳಲ್ಲಿ ವಿರುದ್ಧ ಪರಂಪರೆಯನ್ನು ಹೇಳಲಾಗುತ್ತದೆ. ಇಂದ್ರಿಯಜಯವನ್ನು ಸ್ಥೂಲ, ಸೂಕ್ಷ್ಮ ಈ ಎರಡು ಅರ್ಥಗಳಿಂದ ಮಾಡಿಕೊಳ್ಳಬೇಕೆಂದು ಬುದ್ಧಿನಾಶದ ಪರಂಪರೆಯಿಂದ ನಾವು ಅರಿತುಕೊಂಡಿದ್ದೇವೆ. ಹೀಗಾದರೇನೆ ಬುದ್ಧಿಯ ರಕ್ಷಣೆಯಾಗುತ್ತದೆ. ಹಾಗಾದರೆ ಆತ್ಮಜ್ಞಾನಿ ಪುರುಷನು ಇಂದ್ರಿಯಗಳ ವ್ಯವಹಾರವನ್ನೇ ನಿಲ್ಲಿಸಬೇಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಪ್ರಶ್ನೆಗೆ ಉತ್ತರ ಇಂತಿದೆ:

**ರಾಗದ್ವೇಷವಿಯುಕ್ತೈಸ್ತು** ವಿಷಯಾನಿಂದ್ರಿಯೈಶ್ಚರನ್ ।
**ಆತ್ಮವಶ್ಯೈರ್ ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ** ॥

ಇದರ ಅರ್ಥ :— 'ವಿಷಯಗಳ ಬಗೆಗೆ ವೈರಾಗ್ಯ ಸ್ಥಿರವಾದರೆ, ಇಂದ್ರಿಯಗಳು ಸ್ವಾಧೀನವಾಗುತ್ತವೆ. ಇಂತಹ ಇಂದ್ರಿಯಗಳಿಂದ ವಿಷಯ

ಗಳನ್ನು ಬಳಸುವ ಮನುಷ್ಯ ಪ್ರಸಾದವನ್ನು ಎಂದರೆ ಪ್ರಸನ್ನತೆಯನ್ನು ಪಡೆಯುತ್ತಾನೆ. ಜ್ಞಾನಿ-ಮನುಷ್ಯನೆ ನಿರ್ಭಯತೆಯಿಂದ ಇಂದ್ರಿಯಗಳನ್ನು ಬಳಸಬಲ್ಲನೆಂದು ಇದರ ಆಶಯ. ಇಂದ್ರಿಯಗಳ ಮೇಲೆ ಅಧಿಕಾರ ಮಾಡಲಾರದವರಿಗೆ ಭಯವುಂಟು. ಭಯವುಳ್ಳವರು ನಿರ್ಭಯರಂತೆ ನಡೆಯಬಾರದು. ಇಂದ್ರಿಯಗಳ ವ್ಯವಹಾರವನ್ನು ಮಾಡುವಾಗ ರಾಗದ್ವೇಷಗಳು ಹುಟ್ಟುತ್ತವೆ. ಇದೊಂದು ಗಂಡಾಂತರ. ಈ ಗಂಡಾಂತರವನ್ನು ದೂರೀಕರಿಸಿದ ಮನುಷ್ಯ ಇಂದ್ರಿಯಗಳ ಯೋಗ್ಯವಾದ ಎಲ್ಲ ವ್ಯವಹಾರಗಳನ್ನು ಮಾಡುತ್ತಾನೆ. ಅವನ ದೃಷ್ಟಿಯಿಂದ ಎಲ್ಲ ವ್ಯವಹಾರಗಳೂ ಆಧ್ಯಾತ್ಮಿಕವೇ. ಇಂದ್ರಿಯಗಳಿಗೆ ಆಹಾರವನ್ನು ಕೊಡುವಾಗ ರಾಗದ್ವೇಷಗಳು ಹುಟ್ಟದಿದ್ದರಾಯಿತು. ಪ್ರಸನ್ನತೆಯು ಲಭಿಸುವುದಕ್ಕೋಸುಗ ಇಂದ್ರಿಯಗಳ ಜಯ ಆವಶ್ಯಕ. ಆದರೆ ಇಂದ್ರಿಯಗಳನ್ನು ಉಪಯೋಗಿಸಲಾಗದೆಂದು ಇದರ ಅರ್ಥವಲ್ಲ. ಇಂದ್ರಿಯಗಳನ್ನು ಉಪಯೋಗಿಸಲೇ ಬಾರದೆಂದಿದ್ದರೆ ಇಂದ್ರಿಯಜಯದ ಆವಶ್ಯಕತೆಯೇ ಉಳಿವುದಿಲ್ಲ. ಇಂದ್ರಿಯಗಳಿಗೆ ಅಧೀನವಾಗಬಾರದೆಂಬುದು ಮುಖ್ಯ ಮಾತು. ಚೂರಿಯನ್ನು ಉಪಯೋಗಿಸುವುದು, ಚೂರಿಗೆ ಅಧೀನವಾಗುವುದು, ಇವುಗಳಲ್ಲಿ ಭೇದವಿದೆ. ಚೂರಿಯಿಂದ ಲೇಖನಿಯನ್ನು ಸರಿಗೊಳಿಸುವುದೆಂದರೆ ಚೂರಿಯನ್ನು ಉಪಯೋಗಿಸುವುದು. ಬೆರಳ ಮೇಲೆ ಉಪಯೋಗಿಸಿ ಗಾಯಗೊಳಿಸಿಕೊಳ್ಳುವುದೆಂದರೆ ಚೂರಿಗೆ ಅಧೀನವಾಗುವುದು. ಇಂದ್ರಿಯಗಳನ್ನು ಭಗವಂತನ ಸೇವೆಯಲ್ಲಿ ಬಳಸುವುದು ಚೂರಿಯಿಂದ ಲೇಖನಿಯನ್ನು ಸರಿಗೊಳಿಸಿದಂತೆ; ಅವುಗಳಿಗೆ ಅಧೀನವಾಗಿ ಬುದ್ಧಿನಾಶವನ್ನು ಮಾಡಿಕೊಳ್ಳುವುದು ಚೂರಿಯಿಂದ ಬೆರಳನ್ನು ಕೊಯ್ದುಕೊಂಡಂತೆ.

## ೪೬. ಎರಡೂ ಪರಂಪರೆಗಳಲ್ಲಿಯ ಮುಖ್ಯ ಮೆಟ್ಟಲುಗಳು ಬೀಜ, ಶಕ್ತಿ, ಫಲಿತ.

ಬುದ್ಧಿನಾಶದ ಪರಂಪರೆ ವಿವರಪೂರ್ವಕವಾಗಿ ಹೇಳಲ್ಪಟ್ಟಂತೆ ವಿರುದ್ಧ ಪರಂಪರೆ ಸವಿಸ್ತರವಾಗಿ ಹೇಳಲ್ಪಟ್ಟಿಲ್ಲ. ಒಂದು ಪರಂಪರೆ ಸವಿಸ್ತರವಾಗಿ ಹೇಳಲ್ಪಟ್ಟಿದೆ. ಒಂದು ಪರಂಪರೆಯನ್ನು ಸವಿಸ್ತರವಾಗಿ ಸ್ಪಷ್ಟಗೊಳಿಸಿದರೆ ಎರಡನೆಯದೂ ಅದರಲ್ಲಿ ಬರುತ್ತದೆ. ಅಲ್ಲದೆ ಪರಂಪರೆಯ ಎಲ್ಲ ಮೆಟ್ಟಲುಗಳೂ ಅಷ್ಟೇ ಮಹತ್ವದವಾಗಿ ಇರುವುದಿಲ್ಲ. ಆದಿ, ಮಧ್ಯ, ಅಂತ,

ಅಥವಾ ಶಾಸ್ತ್ರೀಯ ಭಾಷೆಯಲ್ಲಿ ಬೀಜ, ಶಕ್ತಿ, ಫಲಿತ ಈ ಮೂರು ಮೆಟ್ಟಲನ್ನು ಲಕ್ಷ್ಯದಲ್ಲಿಟ್ಟರೆ ಸಾಕು ವಿಷಯಚಿಂತನೆ ಬೀಜ: ಆದರಿಂದಾಗುವ ಅಪ್ರಸನ್ನತೆ ಅಥವಾ ಚಿತ್ತಚಲನ (ನಾನು ಕ್ರೋಧ ಶಬ್ದವನ್ನು ಬಿಟ್ಟುಬಿಡುತ್ತೇನೆ) ಶಕ್ತಿ; ಬುದ್ಧಿನಾಶ ಫಲಿತ. ವಿರುದ್ಧಪಕ್ಷದಲ್ಲಿ: ವಿಷಯಗಳಿಂದ ರಾಗದ್ವೇಷಗಳನ್ನು ಹುಟ್ಟಗೊಡದಿರುವುದು ಬೀಜ; ಪ್ರಸನ್ನತೆ ಶಕ್ತಿ; ಬುದ್ಧಿಯ ಸ್ಥಿರತೆ ಫಲಿತ. ಮೂರು ಮುಖ್ಯ ಮೆಟ್ಟಲು ಹೇಳಿದುದಾಯಿತು. ಸವಿಸ್ತರ ಪರಂಪರೆಯನ್ನು ಇನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

**೮೭. ಪ್ರಸಾದ ಶಬ್ದದ ಅರ್ಥದ ವಿಷಯದಲ್ಲಿ ತಪ್ಪು ತಿಳಿವಳಿಕೆ.**

ಪ್ರಸಾದ ಶಬ್ದದ ಅರ್ಥವನ್ನು ಕುರಿತು ಸಾಕಷ್ಟು ವಿವೇಚನೆಯಾಗಿದೆ. ಆದರೂ ಆ ಶಬ್ದ ಒಟ್ಟಿನಲ್ಲಿ ತಪ್ಪು ತಿಳಿವಳಿಕೆಯನ್ನು ಹುಟ್ಟಿಸುವಂತಹುದು ಅದಕ್ಕೆ ಪ್ರಸನ್ನತೆಯೆಂದು ಅರ್ಥ ಮಾಡಿದರೂ ತಪ್ಪು ತಿಳಿವಳಿಕೆ ಸಂಪೂರ್ಣವಾಗಿ ದೂರವಾಗುವುದಿಲ್ಲ ಪ್ರಸನ್ನತೆಗೆ ಈಗ ಉಲ್ಲಾಸ, ಆನಂದ ಎಂದು ಅರ್ಥ ಮಾಡುತ್ತಾರೆ. ಮೂಲತಃ ಪ್ರಸಾದ ಅಥವಾ ಪ್ರಸನ್ನತೆಯೆಂದರೆ ಉಲ್ಲಸಿತ ವೃತ್ತಿ ಇಲ್ಲವೆ ಹರ್ಷ ಅಲ್ಲ. ಪ್ರಸಾದವೆಂದರೆ ವಿಷಾದವೂ ಅಲ್ಲ; ಹರ್ಷವೂ ಅಲ್ಲ. ಆದರೆ ಜನರು ಅದಕ್ಕೆ ಪ್ರಾಯ: ಹರ್ಷವೆಂದೇ ಅರ್ಥ ಮಾಡುತ್ತಾರೆ. ತುಲಸೀದಾಸರು ಶ್ರೀರಾಮಚಂದ್ರನ ಮುಖಶ್ರೀಯ ವರ್ಣನೆ ಮಾಡುವಾಗ:

> **ಪ್ರಸನ್ನತಾಂ ಯಾ ನ ಗತಾಭಿಷೇಕತಃ।**
> **ತಥಾ ನ ಮಮ್ಲೇ ವನವಾಸ ದುಃಖತಃ॥**
> **ಮುಖಾಂಬುಜಶ್ರೀ ರಘುನಂದನಸ್ಯ ಮೇ।**
> **ಸದಾಸ್ತು ಸಾ ಮಂಜುಲ ಮಂಗಲಪ್ರದಾ॥**

'ರಾಜ್ಯಾಭಿಷೇಕದ ಸುದ್ದಿಯಿಂದ ಪ್ರಸನ್ನತೆ ಕಾಣಿಸಿಕೊಳ್ಳಲಿಲ್ಲ, ವನವಾಸದ ದುಃಖ ಇದಿರಲ್ಲಿ ನಿಂತಿರುವಾಗಲೂ ವಿಷಣ್ಣತೆ ತೋರಲಿಲ್ಲ, ಅಂಥ ರಾಮನ ಆ ಮುಖದ ಕಾಂತಿ ನಮಗೆ ನಿತ್ಯಮಂಗಲವನ್ನು ಮಾಡಲಿ.' ತುಲಸೀದಾಸರು ಇಲ್ಲಿ ಪ್ರಸನ್ನತಾ ಶಬ್ದವನ್ನು ರೂಢವಾದ ಲೌಕಿಕಾರ್ಥದಲ್ಲಿ

ಉಪಯೋಗಿಸಿದಾರೆ; ಇದು ಸ್ಪಷ್ಟ. ಆದರೆ ಭಾಷೆಯ ಶಾಸ್ತ್ರೀಯತೆಗೋಸ್ಕರ 'ಪ್ರಸನ್ನತಾಂ ಯಾ ನ ಗತಾ' ಎಂಬುದರ ಬದಲು 'ಪ್ರಹೃಷ್ಟತಾಂ ಯಾ ನ ಗತಾ' ಎಂದು ತುಲಸೀದಾಸರು ಬರೆದಿದ್ದರೆ ಒಳಿತಾಗುತ್ತಿತ್ತೆಂದು ನಾನು ಹೇಳಬಹುದು. ರಾಮನ ಮುದ್ರೆ ಹರ್ಷ ವಿಷಾದ ರಹಿತವಾಗಿತ್ತೆಂದು ಅವರು ಹೇಳಬೇಕಾಗಿತ್ತು. ಇದಕ್ಕೇ ಪ್ರಸನ್ನತೆಯೆಂದು ಹೆಸರು.

**೮೮. ವಸ್ತುತಃ ಪ್ರಸಾದವೆಂದರೆ ಪ್ರಸನ್ನತೆ, ಎಂದರೆ ಸ್ವಾಸ್ಥ್ಯ**

ಪ್ರಸನ್ನತೆಯೆಂದರೆ ನಿರ್ವಿಕಾರತೆ, ಶಾಂತಿ, ಗಾಂಭೀರ್ಯ. ಗಾಂಭೀರ್ಯಶಬ್ದದಿಂದ ನಿಮಗೆ ಹೆದರಿಕೆಯಾದರೆ ಆ ಶಬ್ದವನ್ನು ಬಿಟ್ಟುಬಿಡಿ. ಪ್ರಸನ್ನತಾ ಶಬ್ದಕ್ಕೆ ಹೆದರಬೇಕಾಗಿಲ್ಲ. ಪ್ರಸನ್ನತೆಯೆಂದರೆ ರಾಗದ್ವೇಷ ರಹಿತತೆ, ಸ್ವಚ್ಛತೆ, ನಿರ್ಮಲತೆ. ಯಾವುದರ ದರ್ಶನ ಮಾತ್ರದಿಂದ ದುಃಖ ಮಾಯವಾಗುತ್ತದೆಯೋ ಅದು ಪ್ರಸನ್ನತೆ; ಹೀಗೂ ಲಕ್ಷಣ ಹೇಳಬಹುದು. ಒಬ್ಬ ಮನುಷ್ಯನ ಮಗ ಮಡಿದ. ಆತನ ಚಿತ್ತ ಅತ್ಯಂತ ಖಿನ್ನವಾಯ್ತು. ಎಲ್ಲಿಯೂ ಆತನಿಗೆ ಸೊಗಸಾಗದು. ಆದ್ದರಿಂದ ಆತ ಹಳ್ಳದ ದಂಡೆಯ ಮೇಲೆ ಬಂದು ಕುಳಿತ. ಮನವು ಶಾಂತವಾಯ್ತು. ಈ ಗುಣ ಆ ಹಳ್ಳದ ನಿರ್ಮಲತೆಯದು. ನಿರ್ಮಲತೆ ಸ್ವಯಂಪ್ರಚಾರಕ. ಅದರ ಪರಿಣಾಮ ಸ್ವಾಭಾವಿಕವಾಗಿ ಆಗುತ್ತದೆ. ಅದರ ದರ್ಶನವಾದೊಡನೆ ಅದು ಆನಂದವನ್ನು ಒದಗಿಸುತ್ತದೆ. ಪ್ರಸನ್ನತೆಯ ಅರ್ಥವನ್ನು ವ್ಯಕ್ತಗೊಳಿಸಲು ಭಾಷ್ಯಕಾರರು ಯೋಜಿಸಿದ 'ಸ್ವಾಸ್ಥ್ಯ' ಶಬ್ದ ಉಪಯುಕ್ತವಾಗಿದೆ. 'ಸ್ವಾಸ್ಥ್ಯ' ಶಬ್ದದಲ್ಲಿ ಶಾರೀರಿಕ ಆರೋಗ್ಯವೂ ಮಾನಸಿಕ ಆರೋಗ್ಯವೂ ಎರಡೂ ಬರುತ್ತವೆ. ಶಾರೀರಿಕ ಸ್ವಾಸ್ಥ್ಯ ಎಂದರೆ ಶರೀರದಲ್ಲಿ ಧಾತುಸಾಮ್ಯವಿರುವುದು ಎಂದು ವೈದ್ಯಶಾಸ್ತ್ರ ಅರ್ಥ ಮಾಡುತ್ತದೆ. ಮಾನಸಿಕ ಆರೋಗ್ಯವೆಂದರೆ ಚಿತ್ತದ ಸಮತ್ವ–ಮಾನಸಿಕ ಶಾಂತಿ. ಈ ಬಗೆಯಾಗಿ ಈಯೆರಡೂ ಅರ್ಥಗಳ ಸಂಗ್ರಹವನ್ನು ಮಾಡುವ ಈ 'ಸ್ವಾಸ್ಥ್ಯ' ಶಬ್ದ ಪ್ರಸನ್ನತೆಯ ನಿಶ್ಚಿತ ಪರ್ಯಾಯವೆಂದು ಹೇಳಬಹುದು.

**೮೯. ಪ್ರಸನ್ನತೆಯಿಂದ ಎಲ್ಲ ದುಃಖಗಳು ಶಾಶ್ವತವಾಗಿ ಇಲ್ಲದಾಗುತ್ತವೆ. ಏಕೆಂದರೆ, ದುಃಖವೆಂಬುದು ಮನೋ–ಮಲದ ಪರಿಣಾಮ. 'ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪಜಾಯತೇ'**

ಇಂದ್ರಿಯಜಯದಿಂದ ಪ್ರಾಪ್ತವಾದ ಪ್ರಸನ್ನತೆಯಿಂದ ಎಲ್ಲ ದುಃಖಗಳೂ ಒಂದೇ ಸಲಕ್ಕೆ ನಾಶವಾಗುತ್ತವೆ. ಪ್ರಸನ್ನತೆಯ ಈ ಬಗೆಯ ವೈಶಿಷ್ಟ್ಯವನ್ನು ಗೀತೆ ಹೇಳುತ್ತಿದೆ. ಉಳಿದ ಸುಖದ ಸಾಧನಗಳಿಂದ ಯಾವುದಾದರೂ ಒಂದು– ಅರ್ಧ ದುಃಖ ಇಲ್ಲದಾಗಬಹುದು; ಅದೂ ತಾತ್ಕಾಲಿಕವಾಗಿ. ಊಟದಿಂದ ಹಸಿವು ಹಿಂಗುತ್ತದೆ. ಆದರೆ ಸ್ವಲ್ಪ ಹೊತ್ತಾದ ಬಳಿಕ ಮತ್ತೆ ಹಸಿವಾಗುತ್ತದೆ. ನಿದ್ದೆಯಿಂದ ದಣಿವು ಆರುತ್ತದೆ, ಆದರೆ ಕೆಲ ಹೊತ್ತಾದ ಬಳಿಕ ನಿದ್ದೆಯಿಂದಲೂ ಬೇಸರಾಗುತ್ತದೆ. ಹೀಗೆ ಬೇರೆ ಬೇರೆ ದುಃಖಗಳನ್ನು ಕಳೆದುಕೊಳ್ಳಲು ಬೇರೆ ಬೇರೆ ಸುಖಗಳ ಪ್ರಯೋಗಗಳನ್ನು ಸತತವೂ ಮಾಡುತ್ತಿರಬೇಕಾಗುತ್ತದೆ. ಆದರೆ ಪ್ರಸನ್ನತೆಯಿಂದ ಎಲ್ಲ ದುಃಖಗಳೂ ನೀಗುತ್ತವೆ. ಏಕೆಂದರೆ, ದುಃಖ ಹುಟ್ಟುವ ಎಡೆಯಲ್ಲಿಯೆ ಪ್ರಸನ್ನತೆ ತಳವೂರಿರುತ್ತದೆ. ದುಃಖದ ಸಂವೇದನೆ ಮೆದುಳನ್ನು ಮುಟ್ಟದ ಹೊರತು ದುಃಖವಾಗದೆಂದು ವಿಜ್ಞಾನವು ಪ್ರಯೋಗದಿಂದ ಸಿದ್ಧಗೊಳಿಸಿದೆ. ಅದರಂತೆಯೆ ಯಾರ ಚಿತ್ತದಲ್ಲಿ ಪ್ರಸನ್ನತೆಯ ಝರಿ ಹರಿಯುತ್ತಿದೆಯೋ ಅವನ ಮನವನ್ನು ದುಃಖವು ಪೀಡಿಸದು. ಗವಿಯೊಳಗೆ ದೀಪವನ್ನು ಒಯ್ದರೆ ಅಲ್ಲಿಯ ಕತ್ತಲೆ ಇಲ್ಲದಾಗುತ್ತದೆ ಎನ್ನುವುದಕ್ಕಿಂತ ಕತ್ತಲೆಗೇ ಪ್ರಕಾಶದ ರೂಪ ಬರುತ್ತದೆಂದು ಹೇಳುವುದು ಹೆಚ್ಚು ಯೋಗ್ಯ. ಅದೇ ಬಗೆಯಾಗಿ ಅಂತಃಕರಣ ನಿರ್ಮಲ ಎಂದರೆ ಪ್ರಸನ್ನವಾಗಿರುವಲ್ಲಿ ದುಃಖವೇ ಸುಖರೂಪವಾಗುತ್ತದೆ. ಏಕೆಂದರೆ ಶಾರೀರಿಕವೇ ಇರಲಿ, ಇಲ್ಲವೆ ಮಾನಸಿಕವೇ ಇರಲಿ ದುಃಖಗಳೆಲ್ಲವೂ ಮನುಷ್ಯನ ಮನೋಮಲದ ಪರಿಣಾಮ.

೨

## ೯೦. ಪ್ರಸನ್ನತೆಯಿಂದ ಸ್ಥಿರಬುದ್ಧಿ ಸಹಜವಾದುದು

ಚಿತ್ತವು ಪ್ರಸಾದಯುಕ್ತ-ಪ್ರಸನ್ನ-ವಾದರೆ ನೋಡು ನೋಡುವಷ್ಟರಲ್ಲಿ ಬುದ್ಧಿ ಸ್ಥಿರವಾಗುತ್ತದೆ. "ಪ್ರಸನ್ನ ಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೆ" ಪ್ರಸನ್ನತೆ ಪ್ರಾಪ್ತವಾಗಲು ಸ್ಥಿತಪ್ರಜ್ಞತೆಗೆ ತಡವಾಗದು. ನಿರ್ವಿಕಾರತೆ ಅಥವಾ ಪ್ರಸನ್ನತೆ ಚಿತ್ತದ ಸ್ಥಿರತೆಯ ಪ್ರತ್ಯಕ್ಷವಾದ ಸಾಧನ. ಚಿತ್ತದ ಸ್ಥಿರತೆಗೆ ಬೇರೆ ಸಾಧನಗಳು ಹೇಳಲ್ಪಟ್ಟಿವೆ. ಆದರೆ ಅವುಗಳಿಂದ ಚಿತ್ತ

ಸ್ವಲ್ಪ ಕಾಲ ಮಾತ್ರ ಏಕಾಗ್ರವಾಗುತ್ತದೆ. ಈ ಸಾಧನಗಳು ಕೃತ್ರಿಮ, ತಾತ್ಪೂರ್ತಿಕ. ಚಿತ್ತದಿಂದ ಮಲವನ್ನು ತೆಗೆದೊಗೆದರೆ, ಸ್ಥಿರತೆ ತಾನಾಗಿಯೆ ಬರುತ್ತದೆ. ಶಾಶ್ವತವಾಗಿ ಉಳಿಯುತ್ತದೆ. ಸ್ಥಿರತೆಯೆ ಚಿತ್ತದ ಸಹಜವಾದ ಅವಸ್ಥೆಯಾಗಿರುವುದರಿಂದ ವ್ಯಗ್ರತೆ ಜಡವಾಗುತ್ತದೆ.

### ೯೧. ಚಿಕ್ಕಮಕ್ಕಳ ಉದಾಹರಣೆ.

ಚಿಕ್ಕಮಕ್ಕಳಲ್ಲಿ ಇರುವ ಏಕಾಗ್ರತೆಯ ಕಾರಣ ಇದೇ- ಚಿಕ್ಕ ಮಗುವಿನ ಕಣ್ಣುಗಳ ಕಡೆಗೆ ದಿಟ್ಟಿಸಿ ನೋಡಿ. ಎವೆಯಿಕ್ಕದೆ ಅದು ಒಂದೇ ಸಮನೆ ನೋಡುತ್ತಲೇ ಇರುತ್ತದೆ. ಅಷ್ಟು ಹೊತ್ತಿನಲ್ಲಿ ನಾವು ಹತ್ತೆಂಟು ಸಲವಾದರೂ ಎವೆಯಿಕ್ಕುತ್ತೇವೆ. ಅದರ ಕಣ್ಣುಗಳ ಮುಂದೆ ಯೋಗಿಯ ಮುದ್ರೆಯೂ ಸೋಲುತ್ತದೆ. ಇದಕ್ಕೆ ಕಾರಣವೆಂದರೆ, ಅದರ ಚಿತ್ತದ ನಿರ್ಮಲತೆ. ಆದರೆ ಆ ಮಗುವಿನಲ್ಲಿ ನಿರ್ಭಯತೆ ಅಷ್ಟೊಂದು ಇಲ್ಲ. ಆದುದರಿಂದ ಭಯವಾದೊಡನೆ ಅದು ಕಣ್ಣು ಮುಚ್ಚುತ್ತದೆ. ಚಿಕ್ಕಮಗುವಿನ ಚಿತ್ತ ಶಿಕ್ಷಣಶಾಸ್ತ್ರದಲ್ಲಿ ನಿಷ್ಕಾರಣವಾಗಿ ವಾದದ ವಿಷಯವಾಗಿದೆ. ಚಿಕ್ಕಮಕ್ಕಳ ಚಿತ್ತ ಬಹು ಚಂಚಲವಾಗಿರುತ್ತದೆಂದು ಕೆಲವು ಶಿಕ್ಷಣಶಾಸ್ತ್ರಿಗಳೆನ್ನುತ್ತಾರೆ. ವಸ್ತುತಃ ಅವುಗಳ ಚಿತ್ತ ಚಂಚಲವಾಗಿರದು. ಚಂಚಲವಾಗಿರುವುದು ಇವರ ಚಿತ್ತ: ಆರೋಪ ಮಕ್ಕಳಮೇಲೆ. ತಿರುಗ ಮುರುಗ ಎಂಬುದು ಇದೇ. ಚಿಕ್ಕ ಮಗುವಿಗೆ ಏಕಾಗ್ರತೆ ಸ್ವಲ್ಪವೂ ಕಠಿಣವಲ್ಲ. ಚಿಕ್ಕಮಕ್ಕಳು ನೂಲುತ್ತಿರುವಾಗ ಧ್ಯಾನಮಗ್ನರಾಗುವುದನ್ನು ಕಂಡು ದೊಡ್ಡವರು ಆಶ್ಚರ್ಯಪಡುತ್ತಾರೆ. ಆಶ್ಚರ್ಯ ಪಡುವಂತಹದೇನೂ ಅದರಲ್ಲಿ ಇಲ್ಲ. ಸತತವೂ ಪ್ರವಹಿಸುವ ಧಾರೆ ಏಕಾಗ್ರತೆಗೆ ಸಾಧಕವಾಗುತ್ತದೆ. ಆದುದರಿಂದಲೇ ಮಹಾದೇವನ ಪಿಂಡಿಯ ಮೇಲೆ ಅಭಿಷೇಕದ ಧಾರೆಯನ್ನಿರಿಸಿ ಏಕಾಗ್ರತೆಯ ಅಭ್ಯಾಸ ಮಾಡುವುದುಂಟು. ಅಖಂಡವಾಗಿ ಹರಿಯುವ ಹಳ್ಳದ ದಂಡೆಯ ಮೇಲೆ ಕುಳಿತರೆ ಚಿತ್ತ ಏಕಾಗ್ರವಾಗುತ್ತದೆ. ಅದರಂತೆಯೆ ನೂಲಿನೆಳೆ ಸತತವೂ ಹೊರಡುತ್ತಿದ್ದರೆ ಮಗುವಿನ ನಿರ್ಮಲ ಮನ ಧ್ಯಾನವಶವಾಗುತ್ತದೆ. ಮಕ್ಕಳ ಮೆದುಳಿನಲ್ಲಿ ಶಕ್ತಿ ಅಲ್ಪವಾಗಿ ಇರುವುದರಿಂದ ಅವರ ಧ್ಯಾನ ಬಹಳ ಹೊತ್ತು ನಿಲ್ಲುವುದಿಲ್ಲ. ಇದು ಬೇರೆ ಮಾತು. ಆದರೆ ಏಕಾಗ್ರತೆ ಅವರಿಗೆ ಸಹಜ. ಎಷ್ಟು ಸಹಜವಾಗಿರುವುದೊ! ಬಾಯಲ್ಲಿ ಕಲ್ಲುಸಕ್ಕರೆಯ ತುಣು

ಕನ್ನು ಇಡಿ. ಇಡೀ ಪ್ರಪಂಚವನ್ನೆ ಮರೆತು ಆ ಸವಿಯಲ್ಲಿ ಅವರು ಮೆಯ್ಮರೆಯುತ್ತಾರೆ. ಕೂಡಲೆ ಅಳುವುದು ನಿಲ್ಲುತ್ತದೆ. ಮಗು ಅಳತೊಡಗಿದೊಡನೆ ತಾಯಿ "ಅಲಲಲಲಲ, ಏನು ಅದು! ಕಾವ್! ಕಾವ್!" ಎನ್ನುತ್ತಾಳೆ. ಮಗು ತನ್ನ ಎಲ್ಲ ವೃತ್ತಿಗಳೊಡನೆ ಕಾಗೆಯ ಕಡೆ ನೋಡಲಾರಂಭಿಸುತ್ತದೆ. ತನ್ಮಯತೆ ಅದಕ್ಕೆ ಒಡನೆಯೆ ಬರುತ್ತದೆ. ಮಗುವಿಗೆ ಏಕಾಗ್ರತೆ ಸಹಜವಾದುದರಿಂದ ಅದು ಶಿಕ್ಷಣವನ್ನು ಶೀಘ್ರವೇ ಗ್ರಹಿಸುತ್ತದೆ. ಸಹಜವಾದ ಈ ಏಕಾಗ್ರತೆಗೆ ಅದರ ಚಿತ್ತ ನಿರ್ಮಲವಾಗಿರುವುದೇ ಕಾರಣ. ಚಿತ್ತಶುದ್ಧಿಯೆ ಏಕಾಗ್ರತೆಯ ಮುಖ್ಯವೂ ಪ್ರತ್ಯಕ್ಷವೂ ಆದ ಸಾಧನ. ಉಳಿದುದೆಲ್ಲವೂ ಬಾಹ್ಯ ಉಪಚಾರ.

## ೯೨, ಸಮಾಧಿಯೆಂದರೆ ಮೂಲಸ್ಥಿತಿ, ಇಲ್ಲಿ ಬಾಹ್ಯ ಸಾಧನೆಗಳ ಅಪೇಕ್ಷೆಯಿರದು

ಚಿತ್ತದಲ್ಲಿ ವಾಸನೆಗಳು ತುಂಬಿರುವವರೆಗೆ ಬಾಹ್ಯಸಾಧನೆಗಳಿಂದ ಏಕಾಗ್ರತೆ ಬರುವುದು ಹೇಗೆ? ಮುಂಜಾನಿನ ಸಮಯವಿರಬೇಕು, ಕಣ್ಣುಗಳೊಳಗಿಂದ ನಿದ್ದೆ ಹೋಗಿರಬೇಕು, ಶೌಚ ಸ್ನಾನ ಮೊದಲಾದುದು ಮುಗಿದುದರಿಂದ ಚಿತ್ತಕ್ಕೆ ಉತ್ಸಾಹ ಉಂಟಾಗಿರಬೇಕು, ಆಸನದಲ್ಲಿ ನೀಟಾಗಿ ಕುಳಿತಿರಬೇಕು. ದೃಷ್ಟಿ ಅರ್ಧೋನ್ಮೀಲಿತವಾಗಿರಬೇಕು, ಧ್ಯಾನಕ್ಕೋಸುಗ ಶ್ಲೋಕವೊಂದನ್ನು ಗುಣುಗುಣಿಸುತ್ತಿರಬೇಕು. ಅಥವಾ ಒಂದು ಮೂರ್ತಿಯಾಗಲಿ, ಚಿತ್ರವಾಗಲಿ, ಜ್ಯೋತಿಯಾಗಲಿ, ಜಲಧಾರೆಯಾಗಲಿ ಕಣ್ಣ ಮುಂದೆ ಇರಬೇಕು. ಎಲ್ಲಿಂದಾದರೂ ಶಾಂತ ಸಂಗೀತದ ಮಧುರ ನಾದ ಕಿವಿಗೆ ಬರುತ್ತಿರಬೇಕು. ಇಷ್ಟೆಲ್ಲ ಇದ್ದರೂ ಎಂಟು ಹತ್ತು ನಿಮಿಷಗಳಲ್ಲವೆ ಏಕಾಗ್ರತೆ ಲಭಿಸುವುದು! ಬಾಹ್ಯ ಉಪಚಾರಗಳಿಂದಲೆ ಅದು ಬಂದುದರಿಂದ ಶಾಶ್ವತವಾಗಿ ಅದು ಉಳಿವುದು ಹೇಗೆ? ಸಮಾಧಿ ಆತ್ಮದ ಮೂಲ ಅವಸ್ಥೆಯಾಗಿದ್ದರೆ, ಅದು ಸಹಜವಾಗಿರಬೇಕು. ಅದಕ್ಕೋಸುಗ ಬಾಹ್ಯ ಪ್ರಯತ್ನದ ಆವಶ್ಯಕತೆ ಇರಕೂಡದು. ಏನನ್ನೂ ಮಾಡದೆಯೂ ಅದು ನಮಗೆ ಲಭಿಸಬೇಕು. ಇಷ್ಟೇ ಅಲ್ಲ. ಇರಬೇಕು. ಉಣ್ಣುವುದು, ಕುಡಿವುದು, ನೋಡುವುದು, ಕೇಳುವುದು, ನಡೆವುದು, ಮಾಡುವುದು ಮೊದಲಾದುವು ಕ್ರಿಯೆಗಳಾದುದರಿಂದ ಅವುಗಳಿಗೋಸುಗ ಪರಿಶ್ರಮ ಬೇಕು,

ಪ್ರಯತ್ನವು ಬೇಕು. ಇದು ಸರಿ. ಆದರೆ ಸಮಾಧಿಯೆಂದರೆ ಮೂಲಸ್ಥಿತಿ. ಅದಕ್ಕೋಸುಗ ಬಾಹ್ಯಪ್ರಯತ್ನದ, ಪರಿಶ್ರಮದ ಉಪಯೋಗವೇನು?

### ೯೩. ಚಿತ್ತ ಶುದ್ಧಿಯಾಗಲು ಸಮಾಧಿ ತಾನಾಗಿಯೆ ಬರುತ್ತದೆ

"ಚಿತ್ತ ಶುದ್ಧಿಯಾದ ಬಳಿಕ ಆರು ತಿಂಗಳ ತರುವಾಯದಲ್ಲಿ ಸಮಾಧಿ ಪ್ರಾಪ್ತವಾಗುತ್ತದೆ" ಎಂದು ಮಹಾಭಾರತದಲ್ಲಿ ಒಂದು ವಾಕ್ಯವುಂಟು. ವ್ಯಾಸರ ಕಲ್ಪನೆಯಂತೆ ಅವರ ಚಿತ್ತಶುದ್ಧಿಯಾದ ಬಳಿಕ ಅವರಿಗೆ ಆರು ತಿಂಗಳ ತರುವಾಯದಲ್ಲಿ ಸಮಾಧಿ ಲಭಿಸಿತೆಂದು ಆ ವಾಕ್ಯದ ಅರ್ಥ, ಅಷ್ಟೇ. ವಿಚಾರ ಪೂರ್ವಕವಾಗಿ ನೋಡಿದರೆ, ಈ ಆರು ತಿಂಗಳುಗಳ ಅವಧಿಯ ಅವಶ್ಯಕತೆಯೇನು? ಆರು ತಿಂಗಳೆಂದರೆ ಸರಿಯಾಗಿ ೧೮೦ ದಿವಸಗಳೇ? ೧೭೯ ಆಗದೊ? ಇದರ ಅರ್ಥ ಇಷ್ಟೇ, ಚಿತ್ತಶುದ್ಧಿ ಪೂರ್ಣವಾಗಿಲ್ಲ. ವ್ಯಾಸರನ್ನು ಕೆದಕಿ ಕೇಳಿದರೆ, "ನನ್ನ ಗೀತೆಯು ಭಾಷೆಯೆ ಯೋಗ್ಯವಾದುದು." ಎಂದಾರು. ಗೀತೆ ಹೇಳುತ್ತದೆ, "ಚಿತ್ತಶುದ್ಧಿಯಾದ ಕ್ಷಣವೇ ಏಕಾಗ್ರತೆ ಲಭಿಸುತ್ತದೆ". ಎಲ್ಲ ಬಗೆಯ ಪ್ರಯತ್ನಗಳನ್ನು ತೊರೆವುದೇ ಯಾವ ಅವಸ್ಥೆಯ ಸ್ವರೂಪವೋ ಅದು ಸಹಜವಾಗಿ ಸಾಧ್ಯವಾಗಬೇಕೆಂದು ಹೇಳುವ ಆವಶ್ಯಕತೆ ಇಲ್ಲ. ನಮ್ಮ ಬಾಳ ಹೇಳಿದ, "ನಾನು ಪ್ರಯತ್ನ ಮಾಡುತ್ತಿದ್ದರೂ ನಿದ್ದೆ ಬರುವುದಿಲ್ಲ." ನಾನು ಹೇಳಿದೆ, "ಅಯ್ಯಾ, ಪ್ರಯತ್ನ ಮಾಡುತ್ತಿದ್ದೀ ಎಂತಲೇ ಬರುವುದಿಲ್ಲ. ಪ್ರಯತ್ನವೇ ನಿದ್ದೆಗೆ ಆತಂಕ". ಪ್ರಯತ್ನವನ್ನು ಬಿಟ್ಟರೆ ನಿದ್ದೆ ತಾನಾಗಿಯೆ ಬರುತ್ತದೆ. ಏಕಾಗ್ರತೆಯದೂ ಹೀಗೆಯೆ. ಎಲ್ಲ ಪ್ರಯತ್ನವನ್ನು ತೊರೆದ ಬಳಿಕವೆ ನಿಜವಾದ ಏಕಾಗ್ರತೆ, ಸಹಜವಾದ ಏಕಾಗ್ರತೆ ಸಾಧಿಸುತ್ತದೆ. ಏಕಾಗ್ರತೆಯ ಸಾಧನಗಳೇ ಚಿತ್ತಕ್ಕೆ ವಿರೋಧಿಗಳಾಗುತ್ತವೆ. ಸ್ವಲ್ಪ ಸಮಯದ ಏಕಾಗ್ರತೆಯ ತರುವಾಯದಲ್ಲಿ ಅದಕ್ಕೆ ಮತ್ತೆ ವ್ಯಗ್ರತೆ ಬರುತ್ತದೆ.

### ೯೪. ಆದರೂ ತಾತ್ಪೂರ್ತಿಯ ಉಪಾಯಗಳೆಂದು ಬಾಹ್ಯ ಸಾಧನಗಳು ಉಪೇಕ್ಷಣೀಯವಲ್ಲ

ಆದರೆ ಸಹಜವಾದ ಏಕಾಗ್ರತೆ ಸಾಧ್ಯವಾಗುವವರೆಗೆ ಬಾಹ್ಯ ಸಾಧನಗಳಿಂದ ಏಕಾಗ್ರತೆಯನ್ನು ಅಭ್ಯಸಿಸಬಾರದೆಂದಲ್ಲ. ಸಾಧಕನಿಗೆ ಸಾಧನೆಯ ಕಾರ್ಯದಲ್ಲಿ ಬಾಹ್ಯ ಸಾಧನಗಳ ಉಪಯೋಗವೂ ಆಗಬಲ್ಲುದು. ಆ

ಉಪಯೋಗವನ್ನು ಮಾಡಿಕೊಳ್ಳುವುದು ಯೋಗ್ಯವೇ ಸರಿ. ಗೀತೆಯ ಆರನೆಯ ಅಧ್ಯಾಯದಲ್ಲಿ ಸಾಧಕನ ಉಪಯೋಗಕ್ಕೋಸುಗ ಸ್ವಲ್ಪದರಲ್ಲಿ ಆ ಸಾಧನಗಳನ್ನು ಹೇಳಲಾಗಿದೆ. ಸಾಧನೆಗೆ ಅತ್ಯಂತ ಅನುಕೂಲವಾದ ವೇಳೆ ನಸುಕು. ಅದು ಅಪ್ರತಿಮವಾದ ವೇಳೆ. ಅದು ಸತ್ತ್ವಗುಣದ ಪ್ರತೀಕವೇ ಇದ್ದಂತಿರುತ್ತದೆ. ಕತ್ತಲೆ ಹೋಗಿರುತ್ತದೆ, ಪ್ರಕಾಶ ಬಂದಿರುವುದಿಲ್ಲ. ಹಗಲು ರಜೋಗುಣದ ಪ್ರತಿನಿಧಿ, ರಾತ್ರಿಯೆಂದರೆ ತಮೋಗುಣ, ಸಂಧಿಕಾಲ ಸತ್ತ್ವಗುಣದ, ಆತ್ಮದ ಸಮತ್ವದ, ಪ್ರಶಾಂತತೆಯ ಪ್ರತಿನಿಧಿ. ಅಂತೆಯೆ ಸಂಧ್ಯೆಯ ಉಪಾಸನೆ ಹೇಳಲ್ಪಟ್ಟದೆ. ಆ ವೇಳೆಯ ದೃಶ್ಯ ರಮಣೀಯ, ಪವಿತ್ರ, ಉದ್ಬೋಧಕ. ಆ ಹೊತ್ತು ಏಕಾಗ್ರತೆಯ ಪ್ರಯೋಗಕ್ಕೆ ಯೋಗ್ಯ. ಬೆಳಗಿನ ವೇಳೆಯನ್ನು ಹೋಗಗೊಟ್ಟರೆ, ಇಡಿಯ ದಿವಸವೇ ವ್ಯರ್ಥವಾಗಿ ಹೋಗುತ್ತದೆ. ಆದುದರಿಂದ ಆ ವೇಳೆಯನ್ನು ಧ್ಯಾನಕ್ಕೋಸುಗ ಉಪಯೋಗಿಸಿಕೊಳ್ಳುವುದು ನಿಃಸಂಶಯವಾಗಿಯೂ ಶ್ರೇಯಸ್ಕರ. ಆದರೆ ಚಿತ್ತಕ್ಕೆ ಹೊರಗಿನಿಂದ ಆನಿಕೆಯಿತ್ತು ನಿಲ್ಲಿಸುವುದು ಬೇರೆ, ಗೋಡೆಯಂತೆ ಅದು ತಾನಾಗಿಯೆ ನೀಟಾಗಿ ನಿಲ್ಲುವುದು ಬೇರೆ. ಆದುದರಿಂದ ಗೀತೆ ಕೊನೆಯಲ್ಲಿತ್ತ ಎಚ್ಚರಿಕೆ ಯೋಗ್ಯವಾಗಿದೆ. ಚಿತ್ತವು ಶುದ್ಧ ನಿರ್ವಿಕಾರ ವಾದರೆ, ಅದು ತನ್ನ ಬಲದಿಂದಲೆ ಸ್ವಾಭಾವಿಕವಾಗಿ ನೀಟಾಗಿ ನಿಲ್ಲುತ್ತದೆ. ಇದೇ ಎಚ್ಚರವನ್ನು ಪತಂಜಲಿಯೂ ಇತ್ತಿದಾನೆ. ಆತನ ಭಾಷೆಯಲ್ಲಿ ಹೇಳುವುದಾದರೆ, ಧ್ಯಾನಯೋಗಕ್ಕೆ ಯಮ-ನಿಯಮಗಳ ಆಧಾರ ಬೇಕು. ಯಮ-ನಿಯಮಗಳೆಂದರೆ ಚಿತ್ತಶುದ್ಧಿಯ ಸಾಧನವೇ. ಚಿತ್ತಶುದ್ಧಿಯಾದರೆ, ಪ್ರಸನ್ನತೆ ಲಭಿಸಿದರೆ, ನಿಃಸಂಶಯವಾಗಿ ಬುದ್ಧಿ ಸ್ಥಿರವಾಗುತ್ತದೆ. ಏಕಾಗ್ರತೆ ಪ್ರಾಪ್ತವಾಗುತ್ತದೆ. "ಪ್ರಸನ್ನ ಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ"

# ೧೦ ನೆಯ ವ್ಯಾಖ್ಯಾನ

## ೧

### ೯೫. ಬುದ್ಧಿ ನಾಶನದ ಅರ್ಥ ಕಾರಿತೆಯನ್ನು ಹೇಳುವ ನಿಮಿತ್ತದಿಂದ ಜೀವನದಲ್ಲಿಯ ಐದು ಮೂಲ್ಯಗಳ ಅವತರಣ.

ಸಂಯಮದಿಂದ ಪ್ರಸನ್ನತೆ ಪ್ರಾಪ್ತವಾಗಿ ಬುದ್ಧಿ ಸ್ಥಿರವಾಗುತ್ತದೆ; ಅಸಂಯಮದಿಂದ ಚಿತ್ತ ಕ್ಷೋಭ ಉಂಟಾಗಿ ಬುದ್ಧಿ ನಾಶವಾಗುತ್ತದೆ. ಬುದ್ಧಿಸ್ಥೈರ್ಯ ಇಲ್ಲದಂತಾಗುತ್ತದೆ ಎಂಬುದನ್ನು ಅನ್ವಯ ವ್ಯತಿರೇಕ ದಿಂದ ಹೇಳಿದುದಾಯ್ತು. ಇಷ್ಟು ಹೇಳಿದ ಬಳಿಕ ಸಂಯಮದ ಅಗತ್ಯ ಸಹ ಜವಾಗಿ ಸಿದ್ಧವಾಗುತ್ತದೆ. ಬುದ್ಧಿ ಸ್ಥೈರ್ಯ ಇಲ್ಲದಾದರೆ ಹಾನಿಯೇನು? ಈ ಶಂಕೆಗೆ ಉತ್ತರವನ್ನು 'ಬುದ್ಧಿನಾಶಾತ್ ಪ್ರಣಶ್ಯತಿ' ಎಂಬ ವಾಕ್ಯವು ಕೊಟ್ಟಿದೆ. ನಿಜವಾಗಿ ಇಂತಹ ಶಂಕೆಯೆ ಏಳಬಾರದು, ಯಾರಾದರೂ ಈ ಶಂಕೆಯನ್ನು ಮುಂದುವರಿಸಿದರೆ, ಯಾರೂ ಉತ್ತರ ಕೊಡಬಾರದು. ಆದರೆ ಗೀತೆ ಉತ್ತರ ಕೊಟ್ಟಿದೆ; ಅದನ್ನು ಸವಿಸ್ತರವಾಗಿ ಸ್ಪಷ್ಟಗೊಳಿಸಲು ಇನ್ನೊಂದು ಶ್ಲೋಕವನ್ನು ಹೇಳಿದೆ. 'ಬುದ್ಧಿನಾಶಾತ್ ಪ್ರಣಶ್ಯತಿ' ಎಂಬುದು ಮಗುವಿಗೂ ತಿಳಿಯತಕ್ಕ ಮಾತೇ. ಇದಕ್ಕೆ ಹೆಚ್ಚಿನ ಸ್ಪಷ್ಟೀಕರಣವೇಕೆ? ಆದರೆ ಇದು ಕೇವಲ ನಿಮಿತ್ತವಾಗಿ ಮಾಡಲ್ಪಟ್ಟಿದೆ ಈ ನಿಮಿತ್ತದಿಂದ ಜೀವನದ ಮೂಲ್ಯಗಳ ನಿರೂಪಣವನ್ನು ಮಾಡಬೇಕಾಗಿದೆ ಅವೆಲ್ಲವೂ ಸ್ಥಿರ ಬುದ್ಧಿಯನ್ನು, ಎಂದರೆ ಸಂಯಮವನ್ನು. ಅವಲಂಬಿಸಿವೆ ಎಂಬುದನ್ನು ಬಿಂಬಿಸಬೇಕಾಗಿದೆ ಸದ್ಭಾವನೆ, ಚಿತ್ತದ ಶಾಂತಿ ಆತ್ಮಸುಖ ಜೀವನದ ಲ್ಲಿಯ ಸಾಟಿಯಿಲ್ಲದ ಆತ್ಯಂತಿಕೀಯ ಮೂಲ್ಯಗಳು. ಈ ಮೂರು ಮಾತುಗಳು ಸ್ಥಿರ ಬುದ್ಧಿ ಇಲ್ಲದಿದ್ದರೆ ಅದೃಶ್ಯವಾಗುತ್ತವೆ. ಆದುದರಿಂದ ಸ್ಥಿರಬುದ್ಧಿಯು ತತ್ಸಾದರ್ಶವಾದ ಸಂಯಮವೂ ಒಂದೇ ಬೆಲೆಯ ಮೂಲ್ಯಗಳಾಗಿವೆ. ಕೆಂಬ ಹುನಃ, ಇವೆರಡೂ ಸ್ವತಂತ್ರ ಮೂಲ್ಯಗಳು. ಸಾಧಕನ ವ್ಯಕ್ತಿ ವಿಕಾಸಕ್ಕೋ ಸುಗವಷ್ಟೇ ಏಕೆ, ಎಲ್ಲ ಸಮಾಜದ ತ್ರೈಕಾಲಿಕ ಸ್ವಾಸ್ಥ್ಯಕ್ಕಾಗಿಯೂ ಇವ ಕ್ಕಿಂತ ಹೆಚ್ಚು ಉಪಯುಕ್ತ ಅಥವಾ ಭಿನ್ನವಾದ ಮೂಲ್ಯಗಳನ್ನು ವಿಚಾರ

ಕರು ತೋರಿಸಲು ಶಕ್ತರಾಗಿಲ್ಲ. ಇವೆಲ್ಲವು ಚಿಕ್ಕದಾದೊಂದು ಸೂತ್ರದಲ್ಲಿ ಪೋಣಿಸಲ್ಪಟ್ಟುದರಿಂದ ನಾನು ಇದನ್ನು ಸಂಚಗತ್ತಿ ಎನ್ನುತ್ತಿದೇನೆ.

**೯೩. ಸರ್ವಾಧಾರ-ಸಂಯಮ. ಸಂಯಮವಿಲ್ಲದೆ ಬುದ್ಧಿಯಿಲ್ಲ.**

**ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ**

**ನಚಾಭಾವಯತಃ ಶಾಂತಿ ರಶಾಂತಸ್ಯ ಕುತಃ ಸುಖಂ।**

ಹೀಗಿದೆ ಆ ಸೂತ್ರವಾಕ್ಯ. ಅದರ ಅರ್ಥ :— 'ಪ್ರಯುಕ್ತನಿಗೆ ಬುದ್ಧಿ ಇಲ್ಲ, ಅಯುಕ್ತನಿಗೆ ಭಾವನೆಯಿಲ್ಲ. ಭಾವನೆ ಇಲ್ಲದೆ ಶಾಂತಿಯಿಲ್ಲ. ಶಾಂತಿಯಿಲ್ಲದೆ ಸುಖವಿಲ್ಲ" ಇದು ಅಕ್ಷರಶಃ ಅರ್ಥ. ಇದು ಸೂತ್ರವೇ ಆಗಿ ರುವುದರಿಂದ ಭಾಷ್ಯ ಮಾಡಲು ಯೋಗ್ಯವಾಗಿದೆ. ಅಯುಕ್ತನಿಗೆ ಬುದ್ಧಿ ಯಿಲ್ಲವೆಂಬುದು ಈಗಿನವರೆಗೆ ಆದ ಮೀಮಾಂಸೆಯ ಫಲಿತ. ಎಂದರೆ ಅಸಂಯಮಿಯಾದವನಿಗೆ. ಸಂಯಮದಿಂದ ಬುದ್ಧಿ, ಸಂಯಮವಿರದಿದ್ದರೆ ಬುದ್ಧಿನಾಶ. ಈ ಅನ್ವಯ-ವ್ಯತಿರೇಕ ನ್ಯಾಯಗಳ ನಿಷ್ಪತ್ತಿ ಅದು. ಇದು ಕೇವಲ ಪೂರ್ವಾನುವಾದ. "ಅಯುಕ್ತಃ ಕಾಮ ಕಾರೇಣ ಫಲೇಸಕ್ತೋ ನಿಬಧ್ಯತೇ". ಅಯುಕ್ತನಾದವನು ಸ್ವೈರವೃತ್ತಿಯಿಂದ ಫಲಾಶೆಯ ತೊಡ ಕಿನಲ್ಲಿ ಸಿಕ್ಕಿಬೀಳುತ್ತಾನೆ ಎಂದು ಐದನೆಯ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಇದರಿಂದ ಅಯುಕ್ತ ಶಬ್ದದ ಅರ್ಥದ ಮೇಲೆ ಪ್ರಕಾಶ ಬೀಳುತ್ತದೆ. ಅಯು ಕ್ತನೆಂದರೆ ಆಸಕ್ತ, ಕಾಮಗ್ರಸ್ತ, ಅಕ್ಷರಾರ್ಥದಿಂದ 'ಯುಕ್ತಿರಹಿತ'. ಯುಕ್ತಿ ಎಂದರೆ ಸಂಯಮದ ಯುಕ್ತಿ ಎಂದು ಈ ಮೊದಲೇ ನಾವು ಅರಿತಿದ್ದೇವೆ. ಇದು ಜೀವನದ ಗುಟ್ಟು ಎಂದು ತಿಳಿಯಿರಿ. ವ್ಯಕ್ತಿಯ ಅಥವಾ ಸಮಾಜದ ಒಲವು ಸಂಯಮದತ್ತಲೇ ಅಥವಾ ಸ್ವಚ್ಛಂದದತ್ತಲೇ ಎಂಬುದು ತಿಳಿದರೆ ಅದರ ಜೀವನದ ಸ್ವರೂಪ ಗೊತ್ತಾಗುತ್ತದೆ. ಆದುದರಿಂದ ಇದು ಜೀವನ ದಲ್ಲಿಯ ಮೊದಲನೆಯ ಮೂಲ್ಯವೆಂದು ಹೇಳಬಹುದು. ಎರಡನೆಯ ಮೂಲ್ಯ ಇದರಿಂದ ಉಂಟಾಗುವ ಸ್ಥಿರಬುದ್ಧಿ.

**೯೭. ಮುಂದಿನ ಅಧ್ಯಾಹಾರ : ಬುದ್ಧಿಯಿಲ್ಲದೆ ಭಾವನೆ ಇಲ್ಲ.**

ಇಲ್ಲಿಯವರೆಗೆ ಈ ಸೂತ್ರದಲ್ಲಿ ಯಾವ ತೊಂದರೆಯೂ ಇಲ್ಲ. ಆದರೆ ಇನ್ನು ಮುಂದೆ ಸೂತ್ರವು ಖಂಡಿತವಾದಂತೆ ತೋರುತ್ತದೆ. ಅಯುಕ್ತನಿಗೆ ಬುದ್ಧಿಯಿಲ್ಲ, ಭಾವನೆಯಿಲ್ಲ ಎಂಬ ಭಾಷೆ ಮುಂದೆ ಉಪಯೋಗಿಸಲ್ಪಟ್ಟಿದ್ದೆ.

ಈ ಭಾಷೆ ತ್ರುಟಿತವಾಗಿದೆ. ಭಾವನೆ ಜೀವನದ ಮೂರನೆಯ ಮೌಲ್ಯವೆಂದು ಹೇಳುವುದು ಗೀತೆಯ ಉದ್ದೇಶ. ಭಾವನೆಯಿಂದ ಶಾಂತಿ, ಶಾಂತಿಯಿಂದ ಸುಖ, ಹೀಗೆ ಮುಂದಿನ ಎರಡು ಮೌಲ್ಯಗಳು ನಿರ್ಮಿಸಲ್ಪಟ್ಟಿವೆ. ಭಾವನೆಯಿಲ್ಲದೆ ಶಾಂತಿಯಿಲ್ಲ, ಶಾಂತಿಯಿಲ್ಲದೆ ಸುಖವಿಲ್ಲ ಎಂದು ಹೇಳಿದುದರಿಂದ ಭಾವನೆಯ ಆವಶ್ಯಕತೆ ಲಕ್ಷ್ಯದಲ್ಲಿ ಬರುತ್ತದೆ. ಸಂಯಮದಿಂದ ಸುಖದವರೆಗಿನ ಸೋಪಾನದಲ್ಲಿ ಸಂಯಮ, ಭಾವನೆ, ಶಾಂತಿ, ಸುಖ ಇವು ಮೆಟ್ಟಿಲುಗಳೆಂದು ಹೇಳಲ್ಪಟ್ಟಿವೆ. ಆದರೆ ನಡುವೆ ಬುದ್ಧಿ ಎಂಬುದು ಏಕೆ ಬಂತು? ಬುದ್ಧಿ ಭಾವನೆಗಳಲ್ಲಿ ಯಾವ ಬಗೆಯ ಸಂಬಂಧವೂ ಹೇಳಲ್ಪಟ್ಟಿಲ್ಲ. ಆದುದರಿಂದ ಬುದ್ಧಿ ಅಂತರಾಳದಲ್ಲಿಯೆ ನಿಲ್ಲುತ್ತದೆ. ಬುದ್ಧಿಯನ್ನು ಒದಗಿಸಿಯೂ ಸಂಯಮದ ಆವಶ್ಯಕತೆಯನ್ನು ಸಿದ್ಧಮಾಡಬೇಕು ಎಂದರೆ ಈ ಸೂತ್ರದಿಂದ ಸಿದ್ಧವಾಗುವಂತಿದೆ. ಆದರೆ ಹಾಗೆ ಅಪೇಕ್ಷೆಯಿಲ್ಲ. ಸಂಯಮದ ಆವಶ್ಯಕತೆಯೇನೋ ಇದೆ. ಆದರೆ ಅದನ್ನು ಬುದ್ಧಿಯ ಮೂಲಕವಾಗಿ ತೋರಿಸಬೇಕಾಗಿದೆ. ಹೇಗೆ ನೋಡಿದರೂ ಈ ವಾಕ್ಯ ಅಪೂರ್ಣವೇ ಆಗಿದೆ. ಆದುದರಿಂದ "ನಾಸ್ತಿ ಬುದ್ಧಿರಯುಕ್ತಸ್ಯ ನಚಾ ಬುದ್ಧಿಸ್ಯ ಭಾವನಾ"— ಸಂಯಮವಿಲ್ಲದೆ ಬುದ್ಧಿಯಿಲ್ಲ, ಬುದ್ಧಿಯಿಲ್ಲದೆ ಭಾವನೆಯಿಲ್ಲ ಎಂಬ ವಾಕ್ಯ ಇಲ್ಲಿ ಇರಬೇಕಾಗಿತ್ತು. ಈಗ ಇದ್ದ ವಾಕ್ಯವನ್ನ ಗೃಹೀತವಾಗಿ ಇಟ್ಟುಕೊಂಡು "ಸ್ಥಿತಸ್ಯ ಗತಿಶ್ಚಿಂತನೀಯಾ" ಎಂಬ ನ್ಯಾಯದಿಂದ ಅದರಲ್ಲಿ ಈ ಸುಸಂಗತ ಅರ್ಥವನ್ನು ಕಾಣಬೇಕು. ಆದುದರಿಂದ "ನಾಸ್ತಿ ಬುದ್ಧಿರಯುಕ್ತಸ್ಯ ಅತ ಏವ ನಚ ಅಯುಕ್ತಸ್ಯ ಭಾವನಾ" ಎಂದು 'ಅತಏವ' ಶಬ್ದದ ಅಧ್ಯಾಹಾರವನ್ನು ಕಲ್ಪಿಸಿ ಕೆಲಸ ಸಾಗಿಸಿಕೊಳ್ಳಬೇಕು. ಒಟ್ಟಿನಲ್ಲಿ ಹೀಗೆ-"ಸಂಯಮವಿಲ್ಲದೆ ಬುದ್ಧಿ ಇಲ್ಲ, ಬುದ್ಧಿಯಿಲ್ಲದೆ ಭಾವನೆಯಿಲ್ಲ, ಭಾವನೆಯಿಲ್ಲದೆ ಶಾಂತಿಯಿಲ್ಲ, ಶಾಂತಿಯಿಲ್ಲದೆ ಸುಖವಿಲ್ಲ".

೨

## ಅಧ್ಯಾಹಾರದಲ್ಲಿಯ ಸ್ವಾರಸ್ಯ : ಬುದ್ಧಿ ಭಾವನೆಗಳು ಬೇರೆ ಬೇರೆ ಅಲ್ಲ. ಪರಿನಿಷ್ಠಿತ ಬುದ್ಧಿಯೇ ಭಾವನೆ.

ಸಂಯಮದಿಂದ ಸುಖದ ವರೆಗಿನ ಸೋಪಾನವನ್ನು ಹೇಳುತ್ತಿರುವಾಗ ನಡುವಿನ ಮೆಟ್ಟಲು ಒಂದು ಹೇಗೆ ಬಿಟ್ಟುಹೋಯಿತು? ಈ ಶಂಕೆ

ಹುಟ್ಟುತ್ತದೆ. ಇದಕ್ಕೆ ಉತ್ತರ ಹೀಗೆ. ಭಗವಂತನು ಇಲ್ಲಿ ಬುದ್ಧಿ ಭಾವನೆಗಳ ಅದ್ವೈತವನ್ನ ಕಲ್ಪಿಸಿದಂತಿದೆ. ಈ ಕಲ್ಪನೆಯಲ್ಲಿ ಒಂದು ವಿಶೇಷ ದರ್ಶನ ಇದೆ. ಭಾವನೆಯೆಂದರೆ 'ಪರಿನಿಷ್ಠಿತ' ಬುದ್ಧಿ, ಬುದ್ಧಿಯ ಪರಿಪಕ್ವತೆ ಎಂದು ಭಗವಂತನ ಅಭಿಪ್ರಾಯ. ಬುದ್ಧಿ ಪರಿನಿಷ್ಠಿತವಾಗಿ ಅದಕ್ಕೆ ಇನ್ನು ವಿಚಾರದ ಆವಶ್ಯಕತೆ ಇಲ್ಲದಷ್ಟು ಪರಿಣತವಾಗಲು, ಅದುವೆ ಭಾವನೆಯೆಂದು ಕರೆಯಲ್ಪಡುತ್ತದೆ.

**೯೯. ಪರಿನಿಷ್ಠಿತಬುದ್ಧಿಯಾದ ಭಾವನೆಯ ಉದಾಹರಣೆಗಳು.**

ಕೆಲಕೆಲವು ವಿಷಯಗಳಲ್ಲಿ ಬುದ್ಧಿ ಅತ್ಯಂತ ದೃಢವಾಗಿರುತ್ತದೆ. ಆಗ ಅದಕ್ಕೆ ವಿಚಾರ ಮಾಡಬೇಕಾದುದೇ ಇಲ್ಲ. ಕೊಲೆ ನ್ಯಾಯ್ಯವೆಂದು ಕೇಳಿದೊಡನೆ ಬಹಳ ಕೆಟ್ಟದಾಯ್ತೆಂದು ಹೇಳಿಬಿಡುತ್ತೇವೆ, ವಿಚಾರವನ್ನೇ ಮಾಡುವುದಿಲ್ಲ. ಇದಕ್ಕೆ ಭಾವನೆಯೆನ್ನುತ್ತಾರೆ. ಇಂತಹ ಕೆಲವು ಭಾವನೆಗಳು ಸಮಾಜದ ಹೃದಯದಲ್ಲಿ ನೆಲೆಗೊಂಡಿವೆ. ಪೂರ್ವವಿಚಾರದ ಆವಶ್ಯಕತೆ ಅವಕ್ಕಿಲ್ಲವೇ ಇಲ್ಲ. ಮಾನವ ಸಮಾಜ ಆ ವಿಷಯದಲ್ಲಿ ಸಾಕಷ್ಟು ಸಲ ವಿಚಾರಮಾಡಿ ನಿರ್ಣಯ ಮಾಡಿಕೊಂಡಿರುತ್ತದೆ. ಹೆಂಡದಿಂದ ಏನಾದ ಲಾಭವೂ ಇಲ್ಲವೆ? ಹೆಂಡವನ್ನು ಮಿತವಾಗಿ ಕುಡಿದರೆ ಆಪತ್ತಿಯೇನು? ಎಂದು ಭಾರತೀಯ ಸಮಾಜದಲ್ಲಿ ಯಾರನ್ನಾದರೂ ಕೇಳಿದರೆ, ಅದೆಲ್ಲ ನನಗೆ ಗೊತ್ತಿಲ್ಲ, ನೀವು ಹೇಳುವುದು ನನ್ನ ತಲೆಯಲ್ಲಿ ಹೋಗುವುದಿಲ್ಲ ಎಂದು ಅವನು ಹೇಳುತ್ತಾನೆ. ನಮ್ಮ ಪೂರ್ವಜರು ಸಾಕಷ್ಟು ಪ್ರಯೋಗ ಮಾಡಿ ಈ ನಿರ್ಣಯ ಮಾಡಿದಾರೆ. ಹೆಂಡದಿಂದ ಲಾಭ ಸ್ವಲ್ಪ, ಹಾನಿ ಬಹಳ ಎಂದು ಕುರಾನಿನಲ್ಲಿ ಹೇಳಿದೆ. ಇದು ಮೂಲಶಾಸ್ತ್ರಕಾರರ ತರ್ಕ ಶಾಸ್ತ್ರವಾಯಿತು. ಆದರೆ ಬುದ್ಧಿ ಒಮ್ಮೆ ಪಕ್ವಗೊಂಡು ಭಾವನೆಯಾಗಿ ಪರಿಣಮಿಸಿದರೆ, ತರ್ಕದ ಆವಶ್ಯಕತೆ ಉಳಿವುದಿಲ್ಲ. ಅದು ಆಗ ಸ್ವಯಂಸತ್ಯವಾಗಿರುತ್ತದೆ.

**೧೦೦. ಪ್ರಗತ ಸಮಾಜದಲ್ಲಿ ಇಂತಹ ಅನೇಕ ಭಾವನೆಗಳು ನೆಲೆಗೊಂಡಿರುತ್ತವೆ. ಅದರಿಂದಲೇ ಸಮಾಜದಲ್ಲಿ ಶಾಂತಿ ನೆಲಸಿರುತ್ತದೆ.**

ಬುದ್ಧಿಪೂರ್ವಕವಾಗಿ ಮಾಡಿದ ಪ್ರಯೋಗಗಳ ಪರಿಣಾಮವಾಗಿ ಯಾವ ಭಾವನೆಗಳು ಸಮಾಜದಲ್ಲಿ ಪ್ರತಿಷ್ಠಿತವಾಗಿರುತ್ತವೋ, ಅವು

ಸಾಮಾಜಿಕ ಪ್ರಗತಿಯು ದ್ಯೋತಕಗಳಾಗುತ್ತವೆ. ಯುದ್ಧದಲ್ಲಿ ಅನೇಕ ಜನ ಕೊಲ್ಲಲ್ಪಡುತ್ತಾರೆ. ಅವರ ಮಾಂಸವನ್ನು ತಿನ್ನಬಾರದೇಕೆ? ಅವರು ಗಟ್ಟಿಮುಟ್ಟಾಗಿರುತ್ತಾರೆ. ಬೇನೆ ಬೇಸರಿಕೆ ಬಂದು ಅವರು ಸತ್ತಿಲ್ಲ. ಶಾಸ್ತ್ರ ದೃಷ್ಟಿಯಿಂದ ಅವರ ಮಾಂಸವು ತಿನ್ನಲು ಯೋಗ್ಯವಲ್ಲವೆಂದಲ್ಲ. ಮನುಷ್ಯನ ಮಾಂಸ ಮನುಷ್ಯನಿಗೆ ಬೇಗನೆ ಅರಗುತ್ತದೆಂದು ವೈದ್ಯ ಶಾಸ್ತ್ರಿಗಳು ನಿರ್ಣಯಕ್ಕೆ ಬರುವ ಸಂಭವವಿದೆ. ಬೇರೆ ಪ್ರಾಣಿಗಳಂತೆ ಮನುಷ್ಯರನ್ನೂ ತಿಂದರೆ ಇಷ್ಟೊಂದು ಅನ್ನದ ಕೊರತೆಯೂ ಆಗದು. ಕೊಲ್ಲಲ್ಪಟ್ಟವರನ್ನು ತಿನ್ನಬಹುದೆಂದು ನಿರ್ಣಯವಾದರೆ, ಯುದ್ಧದಲ್ಲಿ ಮನುಷ್ಯರನ್ನು ಕೊಲ್ಲಲು ಯೋಧರಿಗೆ ಉತ್ಸಾಹವೂ ಬರಬಹುದು. ಆದರೆ ಇಷ್ಟೆಲ್ಲವೂ ಇದ್ದರೂ, ಮನುಷ್ಯರನ್ನು ತಿನ್ನಕೂಡದೆಂದು ಒಮ್ಮೆ ನಿಶ್ಚಿತವಾಗಿದೆ. ಇದಕ್ಕೆ ಕಾರಣವೆಂದರೆ, ಭಾವನೆಯೇ ಹಾಗಾಗಿದೆ. ಆ ಭಾವನೆಯ ಹಿಂದೆ ಅನುಭವ ಸಿದ್ಧವಾದ ಬುದ್ಧಿಯಿದೆ. ಮನುಷ್ಯ ಮನುಷ್ಯನನ್ನು ಕೊಲ್ಲುವುದೂ ಕೆಟ್ಟದೇ ಹೀಗಿರಲು ಮನುಷ್ಯ ಮನುಷ್ಯನನ್ನು ತಿನ್ನಬಹುದೆಂದರೆ ಹೆಚ್ಚಿನ ಅನರ್ಥ ಸಂಭವಿಸುತ್ತದೆ. ಸಮಾಜದ ಪತನಕ್ಕೆ ಎಲ್ಲೆಯೆ ಉಳಿಯದು. ಈ ಮಾತು ಮನುಷ್ಯನ ಚಿತ್ತದಲ್ಲಿ ಆಳವಾಗಿ ನೆಟ್ಟಿದೆ. ಯುಕ್ತಿವಾದಕ್ಕೆ ಈ ವಿಷಯದಲ್ಲಿ ಆಸ್ಪದವೇ ಇಲ್ಲ. ಸದ್ಭಾವನೆಗೆ ಇದು ಒಳ್ಳೆ ಉದಾಹರಣೆ. ಈ ಬಗೆಯ ಅನೇಕ ವಿಧ ಉನ್ನತ ಭಾವನೆಗಳು ಯಾವ ಸಮಾಜದಲ್ಲಿ ನೆಲಸಿವೆಯೋ ಆ ಸಮಾಜ ಶಾಂತಿಮಯವಾಗಿರುತ್ತದೆ. ಯಾವ ಸಮಾಜದ ವಿಚಾರ ಮುಗಿವುದೇ ಇಲ್ಲವೋ, ಯಾವಾಗಲೂ ಪ್ರತಿಯೊಂದು ವಿಷಯದಲ್ಲಿ ಸಂದೇಹ, ಅನಿರ್ಣಯ ಇರುತ್ತದೋ, ಬುದ್ಧಿ ಪರಿನಿಷ್ಠಿತವಾಗುವುದಿಲ್ಲವೋ, ಆ ಸಮಾಜದಲ್ಲಿ ಯಾವಾಗಲೂ ಅಶಾಂತಿಯೆ ಇರುತ್ತದೆ.

### ೧೦೧. ಆದರೆ ಸಮಾಜದಲ್ಲಿ ನೆಲಸಿದ ಭಾವನೆಗಳೆಲ್ಲವೂ ಬುದ್ಧಿಯುಕ್ತವೇ ಆಗಿರುತ್ತವೆಂದೂ ಹೇಳಲಾಗದು. ಆದುದರಿಂದ ಭಾವನೆಯ ಕುಶಲ ಸಂಶೋಧನದ ಅವಶ್ಯಕತೆ

ಇತಿಹಾಸದ ಅನುಭವದಿಂದ ಕೆಲವು ಭಾವನೆಗಳು ಸಮಾಜದಲ್ಲಿ ಸ್ಥಿರಗೊಂಡಿರುತ್ತವೆ. ಅವುಗಳಿಂದಲೇ ಸಾಮಾಜಿಕ ಜೀವನ ಸುವ್ಯವಸ್ಥಿತವಾಗಿರುತ್ತದೆ. ಸಮಾಜದಲ್ಲಿ ಸಮತೋಲ ಉಳಿಯುತ್ತದೆ. ಆದರೆ ಎಲ್ಲ ಭಾವನೆ

ಗಳೂ ಬುದ್ಧಿಯುಕ್ತವಾಗಿರುತ್ತವೆ ಎನ್ನಲಾಗದು. ಅವುಗಳ ಮೇಲೆ ಬುದ್ಧಿಯ ಪ್ರಕಾಶವನ್ನು ಕೆಡಹಿ ಅವನ್ನು ಪರೀಕ್ಷಿಸಬೇಕು. ಭಾವನೆಯ ಯಾವ ಅಂಶದ ಬುಡದಲ್ಲಿ ಬುದ್ಧಿ ತೋರುತ್ತದೋ ಆ ಅಂಶವನ್ನು ಇಟ್ಟುಕೊಳ್ಳಬೇಕು ಅಬುದ್ಧಿಯ ಅಂಶವನ್ನು ತೆಗೆದೊಗೆಯಬೇಕು. ಆದರೆ ಭಾವನೆಯನ್ನೆ ಸಮೂಲವಾಗಿ ಕಿತ್ತೊಗೆಯಬಾರದು. ಅದನ್ನು ಶುದ್ಧಗೊಳಿಸಿ ವಿಕಾಸಗೊಳಿಸಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಸ್ಥಿರವಾದ ಮೂಲ್ಯಗಳು ಯಾವುವೂ ಉಳಿಯವು, ಸಮಾಜದ ಸಮತೋಲವನ್ನು ಕಾಯ್ದುಕೊಳ್ಳಲು ಬಾರದು; ಅಶಾಂತಿಯೂ ಅನವಸ್ಥೆಯೂ ಎಲ್ಲೆಲ್ಲಿಯೂ ಉಂಟಾಗುತ್ತದೆ. ಕೆಲವು ಸಾಮಾಜಿಕ ಸದ್-ಭಾವನೆಗಳ ಉದಾಹರಣೆಗಳನ್ನು ನೋಡಿದೇವೆ. ಇನ್ನೂ ಕೆಲವನ್ನು ನೋಡುವ, ಆಗ ಈ ವಿಷಯ ಸ್ಪಷ್ಟವಾಗುತ್ತದೆ.

### ೧೦೨. ಸಂಶೋಧ್ಯ ಭಾವನೆಯ ಒಂದು ಉದಾಹರಣೆ: ಮಾಂಸಾಹಾರ ನಿವೃತ್ತಿ

ಭಾವನೆಯಿಂದ ನಮ್ಮ ಸಮಾಜ ಮಾಂಸಾಹಾರವನ್ನು ಗೌಣವಾಗಿ ಎಣಿಸುತ್ತದೆ. ಅದರ ಪರಿಣಾಮವಾಗಿ ಕೆಲವು ಜಾತಿಗಳು ಮಾಂಸಾಹಾರವನ್ನು ಪೂರ್ಣವಾಗಿ ಬಿಟ್ಟವೆ. ಮುಂದೆ ಈ ಜಾತಿಗಳು ತಾವು ಉಚ್ಚವಾದುವೆಂದು ತಿಳಿಯತೊಡಗಿದವು. ಇಷ್ಟಕ್ಕೇ ನಿಲ್ಲಲಿಲ್ಲ. ಕೆಲವು ಜಾತಿಗಳನ್ನು ಅಸ್ಪೃಶ್ಯನೆಂದೂ ಎಣಿಸಲು ಆರಂಭಿಸಿದವು. ಈ ಉಚ್ಚ-ನೀಚ ಭೇದದಲ್ಲಿ ಬೇರೆ ಕೆಲವು ಮಾತೂ ಕೂಡಿರಬಹುದು; ಆದರೂ ಕೆಲವು ಜಾತಿಗಳಲ್ಲಿರುವ ಮಾಂಸ ವಿಷಯದ ವರ್ಜ್ಯಭಾವನೆಯ ಭಾಗ ಅದರಲ್ಲಿ ನಿಶ್ಚಯವಾಗಿಯೂ ಇದೆ. ಈ ಭಾವನೆ ಯೋಗ್ಯವಾಗಿದೆ. ಆದರೆ ಅದರ ಅನುಷಂಗದಿಂದ ಬಂದ ಉಚ್ಚ-ನೀಚ ಭೇದವನ್ನು ಬಿಟ್ಟೇ ಅದನ್ನು ಸಂಗ್ರಹಿಸಬೇಕು, ಪರಿಪೋಷಣೆ ಮಾಡಬೇಕು.

### ೧೦೩. ಇನ್ನೊಂದು ಉದಾಹರಣೆ:- ಅನ್ನದಾನದ ವಿಷಯದಲ್ಲಿರುವ ಶ್ರದ್ಧೆ

ಇಂತಹದೇ ಇನ್ನೊಂದು ಭಾವನೆ ನಮ್ಮ ಸಮಾಜದಲ್ಲಿ ಅನ್ನದಾನಕ್ಕಿರುವ ಮಹತ್ತ್ವ. ಎಲ್ಲ ದಾನಗಳಲ್ಲಿ ಅನ್ನದಾನ ಶ್ರೇಷ್ಠವೆಂದೂ ನಿರ್ದೋಷವೆಂದೂ ತಿಳಿಯಲ್ಪಟ್ಟದೆ. ಸಮಾಜದಲ್ಲಿ ಈ ಭಾವನೆಯನ್ನು

ವಿನಿಯೋಗ ಮಾಡುವಾಗ ಅದಕ್ಕೆ ಇಂದು ವಿಕೃತ, ಅನಿಷ್ಟ ಸ್ವರೂಪ ಬಂದೊದಗಿದೆ. ಆದರೆ ಅದರ ಮೂಲದಲ್ಲಿರುವ ಸದಂಶವನ್ನು ತೆಗೆದೊಗೆವುದು ಇಷ್ಟವಾಗಬಾರದು. ಅದನ್ನು ಸರಿಗೊಳಿಸಿ ಪರಿಪೋಷಿಸಬೇಕು. ಅನ್ನದಾನ ಶ್ರೇಷ್ಠವೆಂದು ಗ್ರಹಿಸಿದುದರಲ್ಲಿ ಹಸಿದ ಮನುಷ್ಯನಿಗೆ ಪ್ರತಿಯೊಬ್ಬನಿಗೂ ಭೋಜನದ ಅಧಿಕಾರವಿದೆ ಎಂಬ ಕಲ್ಪನೆ ಇದೆ. ಹಸಿದವನಿಗೆ ಅನ್ನ ನೀಡುವುದು ಸಮಾಜದ ಕರ್ತವ್ಯ. ಅನ್ನದಾನ ಮನುಷ್ಯನಿಗೆ ನೇರವಾಗಿ ಸೇರುತ್ತದೆ. ಎರಡನೆಯ ಬಗೆಯಿಂದ ಸಾಹಾಯ್ಯ ಮುಟ್ಟಿಸಲು ಬೇರೆ ಮಧ್ಯಸ್ಥರು ಅಡ್ಡ ಬರುತ್ತಾರೆ. ಹೊಟ್ಟೆ ತುಂಬಿದವನಿಗೆ ಒತ್ತಾಯದಿಂದ ಉಣಿಸಲಾಗದು. ಅನ್ನದಾನದ ಅತಿರೇಕವಾಗಕೂಡದು. ಅದರಿಂದ ಆಲಸ್ಯಕ್ಕೆ ಉತ್ತೇಜನ ದೊರೆಯಕೂಡದು. ಇದನ್ನು ಮರೆಯಲಾಗದು. ಮೂಲ ಭಾವನೆಯನ್ನು ಇಟ್ಟುಕೊಂಡು ವಿನಿಯೋಗದ ಪದ್ಧತಿಯಲ್ಲಿ ಇಷ್ಟವಾದ ಸುಧಾರಣೆ ಮಾಡಬೇಕು. ಬುದ್ಧಿಯ ಪ್ರಕಾಶದಲ್ಲಿ ಭಾವನೆಯ ಶುದ್ಧೀಕರಣ ಮಾಡುವ ಈ ಸಾಮಾಜಿಕ ದರ್ಶನ ಇಲ್ಲಿ ದೊರೆಯುತ್ತದೆ.

## ೧೦೪. ಸ್ಥಿತಪ್ರಜ್ಞೆಯ ತಳಹದಿಯ ಮೇಲೆಯೆ ನಿಂತಿರುವ ಭಾವನೆ ಶಾಂತಿದಾಯಿ

ರಾಷ್ಟ್ರದಲ್ಲಿ ವಿಧವಿಧದ ಭಾವನೆಗಳು ಇದ್ದೇ ಇರುತ್ತವೆ. ಅವು ಪರಿಶುದ್ಧವಾಗಿದ್ದರೆ ರಾಷ್ಟ್ರದಲ್ಲಿ ಶಾಂತಿ ನಲಿದಾಡುತ್ತದೆ. ಪರಿಶುದ್ಧವಾಗಿರದಿದ್ದರೆ ಅಶಾಂತಿ ಹಬ್ಬುತ್ತದೆ. ಆದರೆ ಅಶಾಂತಿಯಿಂದ ಯಾರಿಗೂ ಸುಖವಿಲ್ಲ. ಆದುದರಿಂದ ಶಾಂತಿಗೋಸುಗ ಬಗೆಬಗೆಯ ಕೃತ್ರಿಮ, ಹಿಂಸಕ ಉಪಾಯಗಳೂ ಯೋಜಿಸಲ್ಪಡುತ್ತವೆ. ಈಗ ಇರುವುದು ಹೀಗೆಯೆ. ಸಮಾಜದಲ್ಲಿ ಸ್ವಾಭಾವಿಕವಾಗಿ ಶಾಂತಿ ಉಳಿಯಬೇಕಾಗಿದ್ದರೆ, ಒಂದೇ ಒಂದು ಉಪಾಯವಿದೆ. ಶುದ್ಧ ಭಾವನೆಗಳನ್ನು ಉಳಿಸಿಕೊಂಡು ಅವನ್ನು ವಿಕಾಸಗೊಳಿಸುವುದು ಮತ್ತು ಅಶುದ್ಧ ಭಾವನೆಗಳನ್ನು ತೆಗೆದೊಗೆವುದು! ಇದೇ ಆ ಉಪಾಯ. ಅಸದ್-ಭಾವನೆಗಳು ಯಾವುವು, ಸದ್-ಭಾವನೆಗಳು ಯಾವುವು ಎಂಬುದನ್ನು ಹೇಳುವ ಹೊಣೆ ಸ್ಥಿತಪ್ರಜ್ಞನದು. ಏಕೆಂದರೆ ಆತನ ಬುದ್ಧಿಯು ಸ್ಥಿರವೂ ತಟಸ್ಥವೂ ಆಗಿರುವುದರಿಂದ ಸತ್-ಅಸತ್ ಭಾವನೆಗಳನ್ನು ಆತನೇ ಸರಿಯಾಗಿ ಪರೀಕ್ಷಿಸಬಲ್ಲ. ಭಾವನೆಗಳಲ್ಲಿ ಕಲೆ,

ಸಂಗೀತ, ಸೌಂದರ್ಯದ ಕಲ್ಪನೆ, ಮನೋ-ವಿನೋದದ ಸಾಧನೆಗಳು, ಧಾರ್ಮಿಕ ಉತ್ಸವ, ಪೂಜೆಯ ವಿಧಿಗಳು ಮೊದಲಾದ ಎಲ್ಲ ವಿಷಯಗಳೂ ಬರುತ್ತವೆ. ರಾಷ್ಟ್ರದ ಜೀವನ ವಿಕಾಸಕ್ಕೋಸುಗ ಈ ಎಲ್ಲ ವಿಭಾಗ ಗಳಲ್ಲಿಯೂ ಯೋಗ್ಯ ವಿಕಾಸವಾಗುವುದು ಅವಶ್ಯಕ. ಈ ವಿಷಯದಲ್ಲಿ ಅಲ್ಲದ ಸಲ್ಲದ ಕಲ್ಪನೆಗಳು ರಾಷ್ಟ್ರದಲ್ಲಿ ರೂಢವಾಗಿದ್ದರೆ, ಆ ರಾಷ್ಟ್ರಕ್ಕೆ ಅಧೋಗತಿ ತಪ್ಪಿದುದಲ್ಲ. ಅಲ್ಲಿ ಅವ್ಯವಸ್ಥೆ ತುಂಬುತ್ತದೆ. ಆದುದರಿಂದ ಈ ಎಲ್ಲ ವಸ್ತುಗಳು ಸ್ಥಿರಬುದ್ಧಿಯ ತಳಹದಿಯ ಮೇಲೆ ನಿಲ್ಲಬೇಕು. ಸ್ಥಿರಬುದ್ಧಿಯೆಂದರೆ ಶಾಸ್ತ್ರೀಯ ಬುದ್ಧಿ. ಅದರಲ್ಲಿ ಆತ್ಮಜ್ಞಾನ, ಶರೀರ ವಿಜ್ಞಾನ. ಸೃಷ್ಟಿ ವಿಜ್ಞಾನ, ಸೃಷ್ಟಿ ಪದಾರ್ಥ-ವಿಜ್ಞಾನ, ಗಣಿತ, ಚಿಂತನ-ಶಾಸ್ತ್ರ ಮೊದಲಾದುವೆಲ್ಲವು ಸೇರಿವೆ. ಇಂತಹ ಸ್ಥಿರಬುದ್ಧಿಯ ಶಾಸ್ತ್ರೀಯ ವಾದ ತಳಹದಿಯ ಮೇಲೆ ಸಾಮಾಜಿಕ ಭಾವನೆಗಳು ನಿಂತಿದ್ದರೆ ಶಾಂತಿ ತಾನಾಗಿಯೆ ನಲಿದಾಡುತ್ತದೆ. ಅದರ ಸ್ಥಾಪನೆಗೋಸುಗ ಕೃತ್ರಿಮ ಉಪಾಯಗಳನ್ನು ಮಾಡಬೇಕಾದುದಿಲ್ಲ. ಇಂತಹ ಸಮಾಜ ಅಹಿಂಸಕ ವಾಗಿರುತ್ತದೆ. ಎಲ್ಲ ರಾಷ್ಟ್ರೀಯ ವಿಧಾನವೂ ವಿಶಿಷ್ಟ ಬಗೆಯದು. ಶಾಂತಿ ಅದರ ಸ್ವಾಭಾವಿಕ ಲಕ್ಷಣ.

**೧೦೫. ಆದುದರಿಂದ ಸ್ಥಿತಪ್ರಜ್ಞನ ನೇತೃತ್ವವನ್ನು ಸ್ವೀಕರಿಸಬೇಕು.**

ಅದಕ್ಕೋಸುಗ ಮಾರ್ಗದರ್ಶನದ ಹೊಣೆಯನ್ನು ಸ್ಥಿತಪ್ರಜ್ಞ ವ್ಯಕ್ತಿಗೇ ಒಪ್ಪಿಸುವಷ್ಟು ಬುದ್ಧಿ ಸಮಾಜದಲ್ಲಿ ಬಂದಿರಬೇಕು. ಯಾವ ಸಮಾಜದ ಜನರಿಗೆ ಇಷ್ಟು ಬುದ್ಧಿ ಬಂದಿಲ್ಲವೋ ಅಥವಾ ನಾಯಕರು ಸ್ಥಿತಪ್ರಜ್ಞನಿಗೆ ಅದನ್ನು ಕೊಟ್ಟಿಲ್ಲವೋ, ಅಲ್ಲಿ ಮಾರ್ಗದರ್ಶನದ ಕಾರ್ಯ ಅಸ್ಥಿರಪ್ರಜ್ಞನಾದ ಮುಂದಾಳಿನ ಪಾಲಿಗೆ ಬರುತ್ತದೆ. ಸ್ಥಿತಪ್ರಜ್ಞನು ಮಾರ್ಗದರ್ಶನವನ್ನು ಕೈಕೊಂಡಿರುವಾಗ ಸಾಮಾಜಿಕ ನೀತಿಯ ತಳಹದಿ ಸಂಯಮವಾಗಿರುತ್ತದೆ. ವಿಜ್ಞಾನದಿಂದ ಜೀವನದ ಯಥಾರ್ಥ ಸತ್ಯ ಬೋಧಿಸಲ್ಪಟ್ಟು ಸಮಾಜದಲ್ಲಿ ಅದರ ಪ್ರಚಾರ ನಡೆಯುತ್ತದೆ ಕಲೆ ಎಂದರೆ ಹೃದಯ ವಿಕಾಸದ ಭಾಗವು ವಿಜ್ಞಾನದ ತಳಹದಿಯ ಮೇಲೆ ನಿಲ್ಲಿಸಲ್ಪಟ್ಟು, ಸಮಾಜದ ಸಮ ತೂಕವನ್ನು ಕಾಯುವ ಸಮಾಜವಿಧಾನ ನಿರ್ಮಿಸಲ್ಪಡುತ್ತದೆ ಹೀಗಾಗಿ ಸಮಾಜದಲ್ಲಿ ಶಾಶ್ವತ ಶಾಂತಿಯೂ ಸಮಾಧಾನವೂ ನೆಲಸುತ್ತವೆ.

# ೧೧ನೆಯ ವ್ಯಾಖ್ಯಾನ

## ೧

### ೧೦೩. ಇನ್ನಷ್ಟು ಭಾವನಾಶಬ್ದದ ವಿವೇಚನೆ

ಭಾವನಾಶಬ್ದದ ಅರ್ಥವನ್ನು ಇನ್ನಷ್ಟು ವಿವೇಚಿಸುವ ವೈದ್ಯಶಾಸ್ತ್ರದಲ್ಲಿ ಭಾವನಾಶಬ್ದಕ್ಕೆ ತಿಕ್ಕುವುದು, ಅರೆವುದು, ಪುಟ ಕೊಡುವುದು ಎಂದು ಅರ್ಥ. ಹೋಮಿಯೊಪಥಿಯಲ್ಲಿ ಔಷಧಗಳನ್ನು ಅರೆವುದುಂಟು. ಮರ್ದನದಿಂದ ಅವುಗಳ ಶಕ್ತಿ ಹೆಚ್ಚುತ್ತದೆ, ಅವುಗಳ ಗುಣವರ್ಧನವಾಗುತ್ತದೆ. ಬುದ್ಧಿಯನ್ನು ಅರೆಯುತ್ತಿದ್ದರೆ. ಅದರ ಶಕ್ತಿ ಬೆಳೆಯುತ್ತದೆ. ಅದೇ ಭಾವನೆಯಾಗುತ್ತದೆ. ಸ್ಥಿತಪ್ರಜ್ಞನ ಬುದ್ಧಿ ಪರಿಣತವಾಗಿರುವುದರಿಂದ ಆತನ ಜೀವನದಲ್ಲಿ ಭಾವನೆಯು ಇರುತ್ತದೆ. ಆತನ ಜೀವನವು ಭಾವನೆಯಿಂದ ಓತಪ್ರೋತವಾಗಿ ತುಂಬಿರುತ್ತದೆ. ಬುದ್ಧಿ ಭಾವನೆಗಳಲ್ಲಿ ಇನ್ನೂ ಒಂದು ಭೇದವುಂಟು. ಬುದ್ಧಿ ಕೇವಲ ದಿಶೆಯನ್ನು ತೋರಿಸುತ್ತದೆ. ಭಾವನೆ ದಿಶೆಯನ್ನು ತೋರಿಸುತ್ತದೆ, ಕಾರ್ಯವನ್ನೂ ಮಾಡುತ್ತದೆ. ಬುದ್ಧಿ ಕಾರ್ಯಕ್ಷಮವೂ ಕಾರ್ಯಕಾರಿಯೂ ಆದರೆ ಅದು ಭಾವನೆಯಾಗುತ್ತದೆ. ಬುದ್ಧಿ ಭಾವನೆಯಾಗಲು ಅದನ್ನು ಅರೆಯಬೇಕಾಗುತ್ತದೆ. 'ಸರ್ವಭೂತಾಂತರಾತ್ಮಾನಂ' ಎಂಬುದು ಸ್ಥಿತಪ್ರಜ್ಞನಲ್ಲಿ ಒಂದು ತರ್ಕರೂಪ ಬುದ್ಧಿಯಲ್ಲ, ಆಳವಾಗಿ ನೆಲಸಿದ ಭಾವನೆ. ಆದುದರಿಂದ ಆತ ಅಖಿಲ ಸಮಾಜದ ವಿಷಯದಲ್ಲಿ ವಾತ್ಸಲ್ಯಮಯನಾಗಿರುತ್ತಾನೆ. ತಾಯಿಗೆ ಮಗುವಿನ ವಿಷಯದಲ್ಲಿ ಇರುವ ವಾತ್ಸಲ್ಯದಂತೆ ಆತನಿಗಿರುವ ವಾತ್ಸಲ್ಯವೂ ಸ್ವಾಭಾವಿಕ. ಆದುದರಿಂದ ಸಮಾಜದ ಸೇವೆ ಆತನಿಂದ ಸ್ವಾಭಾವಿಕವಾಗಿ ಆಗುತ್ತದೆ. ಸ್ಥಿತಪ್ರಜ್ಞನ ಜೀವನ ಬುದ್ಧಿಮಯವಾಗಿರುತ್ತದೆ. ಹೀಗಿರಲು ಆತನ ಜೀವನದಲ್ಲಿ ಭಾವನೆಗೆ ಸ್ಥಾನ ಹೇಗೆ ಎಂಬ ಶಂಕೆ ಬರಲು ಕಾರಣವಿಲ್ಲ. ಏಕೆಂದರೆ, ಸ್ಥಿರವಾಗಿರುವ ಬುದ್ಧಿಯೆ ಭಾವನೆ. ಸ್ಥಿತಪ್ರಜ್ಞನ ಜೀವನ ಬುದ್ಧಿಮಯ, ಆದುದರಿಂದಲೇ ಭಾವನಾಮಯ.

## ೧೦೭. ಬುದ್ಧಿಪ್ರಧಾನ ವಿರುದ್ಧ ಭಾವನಾಪ್ರಧಾನ ಎಂಬೀ ಭೇದ ಸ್ಥಿತಪ್ರಜ್ಞನಲ್ಲಿ ತೋರದು

ಆದರೆ ಇಂತಹ ಶಂಕೆ ಮನಸ್ಸಿನಲ್ಲಿ ಬರಲು ಕಾರಣವಿದೆ. ನಾವು ಈಗ ಅನೇಕ ಸಲ ಭಾವನೆಯನ್ನು ಬುದ್ಧಿಯ ವಿರುದ್ಧಾರ್ಥದಲ್ಲಿ ಉಪಯೋಗಿಸುತ್ತೇವೆ, ಬುದ್ಧಿಯೊಡನೆ ಅದರ ತುಲನೆ ಮಾಡುತ್ತೇವೆ. ಇವನು ಭಾವನಾ ಪ್ರಧಾನ, ಅವನು ಬುದ್ಧಿಪ್ರಧಾನ ಎಂಬ ಭಾಷೆಯನ್ನು ಇತ್ತಿತ್ತಲಾಗಿ ನಾವು ಬಳಸುತ್ತೇವೆ. ಹೀಗೆ ನುಡಿವಾಗ ಒಬ್ಬನಲ್ಲಿ ಭಾವನೆ ಹೆಚ್ಚು-ಬುದ್ಧಿ ಕಡಿಮೆ, ಇನ್ನೊಬ್ಬನಲ್ಲಿ ಬುದ್ಧಿ ಹೆಚ್ಚು-ಭಾವನೆ ಕಡಿಮೆ ಎಂದು ನಮ್ಮ ಮನಸ್ಸಿನಲ್ಲಿರುತ್ತದೆ. ಇಲ್ಲಿ ಭಾವನಾಪ್ರಧಾನ ಶಬ್ದದ ಅರ್ಥ ನಿರಂಕುಶ ಮನ, ಮನದ ಮೇಲೆ ಬುದ್ಧಿಯ ಅಂಕುಶ ಇಲ್ಲದಿರುವುದು ಎಂತ. ಇಲ್ಲಿ ಭಾವನಾಶಬ್ದ ಮನವನ್ನು ಅನುಲಕ್ಷಿಸಿರುತ್ತದೆ. ಆದರೆ ಗೀತೆಯ ಭಾವನೆ ಮನದ ವಿಕಾರವಲ್ಲ; ಹೃದಯದ ಗುಣ. ವಸ್ತುತಃ ಗೀತೆ ಹೃದಯ ಬುದ್ಧಿ ಎಂದು ಭೇದ ಮಾಡದು. ಆದರೆ ಬುದ್ಧಿಯ ಒಳಒಳಗಿನ ಸ್ಥಾನ ಹೃದಯ ಎಂದು ಅದು ಎಣಿಸುತ್ತದೆ. "ಹೃದಿ ಸರ್ವಸ್ಯ ಅಧಿಷ್ಠಿತಮ್", ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ" ಮೊದಲಾದ ವಾಕ್ಯಗಳಲ್ಲಿ ಹೃದಯವೆಂದರೆ ಬುದ್ಧಿಯ ಒಳಗಿನ ಭಾಗ ಎಂದು ಅರ್ಥವಿದೆ. ಇವನು ಭಾವನಾಪ್ರಧಾನ ಎಂದು ನಾವು ಹೇಳುವಾಗ ವಸ್ತುತಃ ಅವನು ವಿಚಾರ ಪ್ರಧಾನನೆಂದು ಹೇಳುವುದು ನಮ್ಮ ಉದ್ದೇಶ. ಭಾವನೆಯ ಮೇಲೆ ಬುದ್ಧಿಯ ಸತ್ತೆ ನಡೆಯದಿದ್ದರೆ ಆ ಭಾವನೆಯೆ ವಿಕಾರ. ಇಂತಹ ಭಾವನೆ ಗೀತೆಗೆ ಇಷ್ಟವಿಲ್ಲ. ಹಾಗೆಯೆ ಇವನು ಬುದ್ಧಿಪ್ರಧಾನನೆಂದು ಹೇಳುವಾಗ ಅವನಲ್ಲಿ ಅಂತಃಕರಣದ ಪಸೆ ಇಲ್ಲ, ಕೇವಲ ತರ್ಕಶಕ್ತಿಯನ್ನು ಒಲಿಸಿಕೊಂಡಿದಾನೆ ಎಂದು ಹೇಳುವುದು ನಮ್ಮ ಉದ್ದೇಶ. ಆದರೆ ಸ್ಥಿತಪ್ರಜ್ಞನ ಸ್ಥಿತಿ ತೀರ ಬೇರೆ. ಆತ ತನ್ನ ಬುದ್ಧಿಯನ್ನು ಹೃದಯಕ್ಕೆ ಒಪ್ಪಿಸಿದಾನೆ. ಬುದ್ಧಿಯನ್ನು ಅರೆದು ಅರೆದು ಅದನ್ನು ಭಾವನೆಯಾಗಿ ರೂಪಾಂತರಗೊಳಿಸಿದವನ ಬುದ್ಧಿ ಹೃದಯದಲ್ಲಿ ಬೆರೆತುಹೋದಂತಾಯ್ತು. ಅವನ ಬುದ್ಧಿ ಭಾವನೆಗಳು ಒಂದರೊಡನೊಂದು ಏಕರಸವಾದುವು.

## ೧೦೫. ಬುದ್ಧಿಯನ್ನು ಭಾವನೆಯಲ್ಲಿ ಪರಿಣತವಾಗಿಸಲು ಉಪಾಯಗಳು: ಜಪ, ಧ್ಯಾನ, ಆಚರಣೆ

ಬುದ್ಧಿಯನ್ನು ಭಾವನೆಯಾಗಿ ರೂಪಾಂತರಗೊಳಿಸುವ ಪ್ರಯೋಗವನ್ನು ಕುರಿತು ಸಾಮಾನ್ಯವಾಗಿ ವಿಚಾರ ಮಾಡಿದೆವು. ಇನ್ನು ಕೆಲವು ವಿಶೇಷ ಶಾಸ್ತ್ರೀಯ ಪ್ರಯೋಗಗಳನ್ನು ಕುರಿತು ವಿಚಾರ ಮಾಡಬೇಕಾಗಿದೆ. ಇವುಗಳಲ್ಲಿ ಮೊದಲನೆಯ ಪ್ರಯೋಗ ಜಪ. ಜಪವೆಂದರೆ ಕೇವಲ ವಾಣಿಯಿಂದ ಉಚ್ಚಾರ ಮಾಡುವುದಲ್ಲ. ಮನದಲ್ಲಿಯೂ ಅದೇ ವಿಚಾರ ಜಾಗೃತವಿರಬೇಕು. ಈ ಕಾರ್ಯದಲ್ಲಿ ವಾಣಿಯ ಸಾಹಾಯ್ಯ ದೊರೆಯುತ್ತದೆ. ಜಪವೂ ಮನನದಂತಹದೇ ಕ್ರಿಯೆ; ಆದರೆ ಮನನವಲ್ಲ. ಮನನ ನಿರ್ಣಯಕ್ಕೋಸುಗ. ಜಪದಲ್ಲಿ ಮೊದಲೇ ಆದ ನಿರ್ಣಯವನ್ನು ದೃಢಪಡಿಸುವುದು. ಆ ಕಾರ್ಯ ವಾಣಿಯಿಂದಾಗುತ್ತದೆ. ಹೀಗೆ ಜಪಕ್ಕೂ ಮನನಕ್ಕೂ ಭೇದವಿದೆ. ಇದೊಂದು ಭೇದವನ್ನು ಬಿಟ್ಟರೆ ಎರಡೂ ಕ್ರಿಯೆ ಒಂದೇ. ಎರಡನೆಯ ಪ್ರಯೋಗ ಧ್ಯಾನ. ಧ್ಯಾನವೆಂದರೆ ವಿಚಾರದೊಡನೆ ತನ್ಮಯತೆ, ಅದಕ್ಕೆ ಅನುಕೂಲವಾದ ಉಪಾಸನೆ. ಮೂರನೆಯ ಪ್ರಯೋಗ ಆಚರಣೆ; ವಿಚಾರಕ್ಕೆ ಅನುಕೂಲವಾದ ಎಲ್ಲ ಜೀವನದ ರಚನೆ. ಇದರ ಸ್ವರೂಪ ಹೀಗೆ: (೧) ಜಪ (೨) ಧ್ಯಾನ (೩) ಆಚರಣೆ. ಈ ಮೂರು ಪ್ರಯೋಗಗಳಿಂದ ಬುದ್ಧಿ ರೂಪಾಂತರಗೊಂಡು ಭಾವನೆಯಾಗುತ್ತದೆ.

## ೧೦೬. ಭಾವನೆಯೆಂದರೆ ಭಕ್ತಿಯೆಂದೂ ಅರ್ಥ. ಭಕ್ತಿಯಿಲ್ಲದೆ ಶಾಂತಿಯಿಲ್ಲ, ಶಾಂತಿಯಿಲ್ಲದೆ ಸುಖವಿಲ್ಲ

ಈ ವಿಷಯದ ವಿಚಾರವನ್ನು ಇನ್ನೊಂದು ದೃಷ್ಟಿಯಿಂದ ಮಾಡಬಹುದು. ಸ್ಥಿತಪ್ರಜ್ಞ ಲಕ್ಷಣಗಳಲ್ಲಿಯ ಬುದ್ಧಿ ಆತ್ಮನಿಷ್ಠಬುದ್ಧಿ. ಆತ್ಮಜ್ಞಾನ ಪರಿಪಕ್ವವಾದರೆ ಅದು ಭಕ್ತಿಯಾಗುತ್ತದೆ. ಆದುದರಿಂದ ಇಲ್ಲಿ ಭಾವನಾ ಶಬ್ದಕ್ಕೆ ಭಕ್ತಿಯೆಂದೂ ಅರ್ಥ ಹೇಳಬಹುದು. ಬೋಧಕ್ಕೆ ಪ್ರೇಮದ ರೂಪ ಬರುವುದೆಂದರೆ ಜ್ಞಾನಕ್ಕೆ ಭಕ್ತಿಯ ರೂಪು ಬರುವುದೆಂದು ಅರ್ಥ. ಬೋಧವು ಸ್ಥಿರವಾಯ್ತೆಂದರೆ, ಅದು ಬಹು ಪ್ರಿಯವಾಗುತ್ತದೆ. ನಿತ್ಯ ನಿರಂತರವೂ ಅದರಲ್ಲಿಯೆ ಮನವು ರಮಿಸತೊಡಗುತ್ತದೆ. ಹೀಗಾಯ್ತೆಂದರೆ ಬೋಧ ಪ್ರೇಮವಾಗುತ್ತದೆ. ಆದುದರಿಂದ ಭಾವನೆಯ ಅರ್ಥ

ವನ್ನು ಭಕ್ತಿಯೆಂದು ಮಾಡಬಹುದು. ಪ್ರೇಮವಿಲ್ಲದೆ ಅಥವಾ ಭಕ್ತಿಯಿಲ್ಲದೆ ಶಾಂತಿಯಿಲ್ಲ ಎಂಬುದು ಆಗ ಗೊತ್ತಾಗುತ್ತದೆ. ಬೋಧವು ಅತ್ಯಂತ ಪ್ರಿಯವಾದಾಗ ಮನವು ಅದರಲ್ಲಿಯೆ ಲೀನವಾಗುತ್ತದೆ. ಬಳಿಕ ಅಶಾಂತಿಯು ಸ್ಪರ್ಶವಾಗುವುದಿಲ್ಲ. ಮರದ ಬೇರಿಗೆ ನೀರು ಒಂದೇಸವನೆ ದೊರೆತರೆ, ಅದು ಯಾವಾಗಲೂ ಜೀವಕಳೆಯಿಂದ ತುಂಬಿರುತ್ತದೆ. ಅದರಂತೆಯೆ ಅಂತರ್ಯಾಮದಲ್ಲಿ ಬೋಧದ ಸೆಲೆ ಹರಿಯುತ್ತಿದ್ದರೆ, ಅದಕ್ಕೆ ಪ್ರೇಮದ ರೂಪ ಬಂದಿದ್ದರೆ, ಸತತವೂ ಪ್ರೇಮರಸ ದೊರೆಯುತ್ತಿದ್ದರೆ ಜೀವನ ಯಾವಾಗಲೂ ಪ್ರಫುಲ್ಲವಾಗಿರುತ್ತದೆ. ಆಪತ್ತುಗಳು ಬಂದರೂ ಅವು ಸಂಪತ್ತಿನ ರೂಪವನ್ನು ತಳೆಯುತ್ತವೆ. ಅವುಗಳಿಂದ ಶಾಂತಿ ಬೆಳೆಯುತ್ತದೆ. ಹೀಗೆ ಬೋಧ ಭಕ್ತಿಗಳ ಸಂಬಂಧ ಅಭೇದ್ಯವಾಗಿದೆ. ಬೋಧವಿಲ್ಲದೆ ಭಕ್ತಿಯಿಲ್ಲ. ಭಕ್ತಿಯಿಲ್ಲದೆ ಶಾಂತಿ ಇಲ್ಲ, ಶಾಂತಿಯಿಲ್ಲದೆ ಸುಖವಿಲ್ಲ.

### ೧೧೦ ಆದರೆ ಸುಖವೆಂದರೆ ಮನದ ಸುಖವಲ್ಲ. ಮನದ ಸುಖ ಬೇರೆ ಮನುಷ್ಯನ ಸುಖ ಬೇರೆ

ಆದರೆ ಸುಖವೆಂದರೆ ಮನದ ಸುಖವಲ್ಲ. ಮನದ ಸುಖದುಃಖ ಬೇರೆ, ಮನುಷ್ಯನ ಸುಖದುಃಖ ಬೇರೆ. ಮನಕ್ಕೆ ಸುಖದುಃಖವಾದರೆ ಮನುಷ್ಯನಿಗೆ ಆಗಲೇಬೇಕೆಂದಿಲ್ಲ. ಇಂದು ಇಷ್ಟೊಂದು ಜನ ದೇಶಕ್ಕೋಸ್ಕರ ಮಾನಸಿಕ ದುಃಖಗಳನ್ನು ಸಹಿಸುತ್ತಾರೆ. ಆದರಿಂದ ಮನಕ್ಕೆ ಕಷ್ಟವಾಗುತ್ತಿದ್ದರೂ ಅವರಿಗೆ ಸುಖವೇ ಆಗುತ್ತದೆ. ಏಕೆಂದರೆ ಅದರಲ್ಲಿ ಕಲ್ಯಾಣದ ಕಲ್ಪನೆ ಇದೆ. ನಾಲಗೆಗೆ ಸಿಹಿಯಿರಲಿ ಕಹಿಯಿರಲಿ ಮನುಷ್ಯನಿಗೆ ಹಾಗೆ ಆಗಲೇ ಬೇಕೆಂದಿಲ್ಲ. ಔಷಧ ನಾಲಗೆಗೆ ಕಹಿ, ಆದರೆ ಮನುಷ್ಯನಿಗೆ ಅದು ಸಿಹಿ. ಮನದ ದುಃಖಗಳನ್ನು, ಅವು ಕಲ್ಯಾಣಕಾರಕವಾಗಿ ತೋರಿದರೆ, ಮನುಷ್ಯ ಹರ್ಷದಿಂದ ಸ್ವೀಕರಿಸುತ್ತಾನೆ. ಮಾನಸಿಕ ಸುಖ ದುಃಖದ ವ್ಯಾಖ್ಯೆ ಬೇರೆ, ಜೀವನ ದೃಷ್ಟಿಯಿಂದ ಮಾಡಿದ ಸುಖ-ದುಃಖದ ವ್ಯಾಖ್ಯೆ ಬೇರೆ. ಶರೀರಕ್ಕೆ ಆರೋಗ್ಯದಿಂದ ಸುಖ ಆಗುತ್ತದೆ. ಶರೀರದಲ್ಲಿ ಬಲ ತುಂಬಿ ತುಳುಕುವುದು, ಹಿಡಿಸದಂತಾಗುವುದು, ಗೋಡೆಗೆ ಹಾಯಬೇಕೆಂದೆನಿಸುವುದು, ಇದಾವುದೂ ಆರೋಗ್ಯದ ಲಕ್ಷಣವಲ್ಲ. ತನ್ನ ಬಲವನ್ನು ತಾನೇ ತಡೆಯಲಾಗದಂತಾದರೆ, ಬಲವೇ ಒಂದು ರೋಗವಾಗುತ್ತದೆ. ಆರೋಗ್ಯ

ವೆಂದರೆ ಶರೀರದಲ್ಲಿ ಸಮತೂಕ. ಆರೋಗ್ಯ ಬೇರೆ, ಬಲದ ಉದ್ರೇಕ ಬೇರೆ. ಆರೋಗ್ಯದಲ್ಲಿರುವುದು ಸ್ವಾಸ್ಥ್ಯ. ಬಲದ ಅತಿರೇಕದಲ್ಲಿರುವುದು ಕ್ಷೋಭ. ಅದರಂತೆಯೆ ಯಾವ ಸುಖಗಳಿಂದ ಮನಕ್ಕೆ ಹರ್ಷವಾಗುತ್ತದೆಯೋ ಅವು ನಿಜವಾದ ಸುಖಗಳೇ ಅಲ್ಲ. ಜೀವನದ ನಿಜವಾದ ಸುಖಗಳೇ ಬೇರೆ. ಅವು ಶಾಂತಿಯಲ್ಲಿ ಇರುತ್ತವೆ. ಚಿತ್ತದ ಕ್ಷೋಭದಲ್ಲಿಲ್ಲ. ಅವುಗಳ ಆರಂಭ ನಿರ್ವಿಕಾರತೆಯಲ್ಲಿ ನಿರ್ವಿಕಾರತೆಯಿಂದ ಬೋಧ, ಬೋಧದಿಂದ ಭಕ್ತಿ ಅಥವಾ ನಿಷ್ಠೆ, ಬಳಿಕ ಶಾಂತಿ, ತರುವಾಯ ಬೇಸರು ಬಾರದ ಸುಖ, ಹೀಗೆ ಪರಂಪರೆ.

**೧೧೧. ಅಸ್ತಿತ್ವದ ಸುಖ ನಿಜವಾದ ಸುಖ ಅದೇ; ಬೇಸರಿಲ್ಲದುದು**

ಇತರ ಸುಖಗಳಿಂದ ಶಾಂತಿಯು ಭಂಗವಾಗುತ್ತದೆ. ಅದರಿಂದ ಅವು ಬೇಸರಾಗುತ್ತವೆ. ಅದೇ ಅದೇ ಬೇಡವಾಗುತ್ತದೆ. ಬದಲು ಬೇಕಾಗುತ್ತದೆ. ಆತ್ಮದ ಸುಖ ಬೇಸರಾಗದ ಸುಖ. ಯಾವಾಗಲೂ ಅದು ಇರಬೇಕೆನಿಸುತ್ತದೆ. ಅದು ಬೇಸರನ್ನು ಹುಟ್ಟಿಸದು. ಸಂಗೀತ ಎಷ್ಟೇ ಮಧುರವಾಗಿದ್ದರೂ, ಯಾವಾಗಲೂ ಕಿವಿಗೆ ಕೇಳಿಸುತ್ತಿದ್ದರೂ, ಜೀವ ಬೇಸರುತ್ತದೆ. ಬಣ್ಣವಾದರೂ ಇದೇ ರೀತಿ ಚಿತ್ರ ವಿಚಿತ್ರವಾದ ಬಣ್ಣಗಳನ್ನು ನೋಡುವುದರಿಂದ ಕಣ್ಣುಗಳಿಗೆ ಸ್ವಲ್ಪ ಹೊತ್ತು ಸುಖವೆನಿಸುತ್ತದೆ. ಆದರೆ ಅಂತಹ ಬಣ್ಣಗಳು ಒಂದೇ ಸಮನೆ ಕಣ್ಣುಮುಂದೆ ಬಂದರೆ ಕಣ್ಣು ಬಳಲದಿರದು. ಆಗ ಅದು ವಿಶ್ರಾಂತಿಗೋಸುಗ ಆಕಾಶದ ವರ್ಣಹೀನ ನೀಲವರ್ಣವನ್ನು ಆಶ್ರಯಿಸುತ್ತದೆ. ಆಕಾಶದ ನೀಲವರ್ಣಕ್ಕೆ ಕಣ್ಣುಗಳು ಬಳಲವು. ಆದುದರಿಂದಲೆ ಉಪಾಸಕರು ಈಶ್ವರನ ರೂಪವನ್ನು 'ನಭಸದೃಶ'ವಾಗಿ ಕಲ್ಪಿಸಿದಾರೆ. ಉಳಿದ ರಾವು ಬಣ್ಣಗಳಿಗೂ ಆಕಾಶದ ಸೌಮ್ಯ ಬಣ್ಣಕ್ಕೂ ಭೇದವಿರುವಂತೆ, ಇತರ ಸುಖಗಳಿಗೂ ಆತ್ಮಸುಖಕ್ಕೂ ಭೇದವಿದೆ. ಆತ್ಮಸುಖವೆಂದರೆ ತನ್ನ ಅಸ್ತಿತ್ವದ ಅಖಂಡ ಸುಖ. ತಾನು ಇರಬಾರದೆಂದು ಯಾರಿಗೂ ಕ್ಷಣಕಾಲವಾದರೂ ಅನಿಸದು. ಶರೀರ ಬಿಟ್ಟುಹೋಗಲಿ ಎನಿಸಬಹುದು. ಇಂಥ ಸ್ಥಳದಲ್ಲಿ ಇರದಿರುವುದು ಒಳಿತೆಂದು ಎನಿಸಬಹುದು. ಆದರೆ ತಾನು ಇರಲೇಬಾರದೆಂದು ಅನಿಸದು. ತನ್ನ ಅಸ್ತಿತ್ವ ಬೇಸರಾಗುವುದು ಶಕ್ಯವಿಲ್ಲ. ಕೇವಲ ಅಸ್ತಿತ್ವದ

ಸುಖ ನಿರ್ಮಲವಾದುದು. ಅದು ಬೇಸರಾಗದ ಸುಖ. ಉಳಿದ ಸುಖಗಳು ಅಸ್ತಿತ್ವದ ಮೇಲಿನ ವಿಚಾರಗಳು. ಅಸ್ತಿತ್ವದ ಅರಿವೂ ವಿಕಾರವೇ.

### ೧೧೩. ಕುಂಭಕ ದೃಷ್ಟಾಂತದಿಂದ ಅದನ್ನು ತಿಳಿಯಬೇಕು.

ಆದುದರಿಂದ ಯೋಗಶಾಸ್ತ್ರದಲ್ಲಿ ಕುಂಭಕದ ದೃಷ್ಟಾಂತದಿಂದ ಆತ್ಮದ ಕೇವಲ ಅಸ್ತಿತ್ವದರ್ಶನ ಮಾಡಿಸಲ್ಪಡುತ್ತದೆ. ಉಸಿರನ್ನು ಒಳಗೆಳೆದುಕೊಳ್ಳುವ ಕ್ರಿಯೆ ಮುಗಿದಿದೆ. ಹೊರಗೆ ಬಿಡುವ ಕ್ರಿಯೆ ಪ್ರಾರಂಭವಾಗಿದೆ. ಈ ನಡುವಿನ ಅತಿ ಸೂಕ್ಷ್ಮವಾದ, ಉಭಯ ವೃತ್ತಿ ವರ್ಜಿತವಾದ, ನಿಷ್ಕ್ರಿಯವೂ ತಟಸ್ಥವೂ ಆದ ಕ್ಷಣದ ಚಿಂತನೆ ಮಾಡಿದರೆ 'ಕೇವಲ ಅಸ್ತಿತ್ವ' ವೇನೆಂಬುದರ ದರ್ಶನವಾಗುತ್ತದೆ. ಆದುದರಿಂದ ಈ ಕ್ಷಣವನ್ನು ಶಕ್ಯವಿದ್ದಷ್ಟು ಬೆಳೆಯಿಸುವ ಸ್ಥೂಲ ಪ್ರಯತ್ನವನ್ನು-ಇದು ದೀರ್ಘ ಕುಂಭಕ-ಸಾಧಿಸಲು ದಿಙ್ಮೂಢರಾದ ಕೆಲವು ಸಾಧಕರು ಹೋಗುತ್ತಾರೆ. ವಾಸ್ತವವಾಗಿ ಕುಂಭಕವನ್ನು ಬೆಳೆಯಿಸುವ ಅವಶ್ಯಕತೆ ಇಲ್ಲ. ಕುಂಭಕ ದೃಷ್ಟಾಂತದಿಂದ ಸೂಚಿತವಾದ ಆತ್ಮಸ್ಥಿತಿಯನ್ನು ಕಂಡುಹಿಡಿವ, ಆ ಅನುಭವದಲ್ಲಿಯೆ ಸತತವಾಗಿ ಉಳಿವ ಅವಶ್ಯಕತೆ ಇದೆ. ಕುಂಭಕ ಒಂದು ದೃಷ್ಟಾಂತ. ಇಂತಹ ಅನೇಕ ದೃಷ್ಟಾಂತಗಳನ್ನು ಯೋಜಿಸಬಹುದು. ಜ್ಞಾನದೇವನು ಅನುಭವಾಮೃತದಲ್ಲಿ ಒಂದೆಡೆಯಲ್ಲಿ ಇಂತಹ ಅನೇಕ ದೃಷ್ಟಾಂತಗಳನ್ನು ಸಂಗ್ರಹಿಸಿ ಹೇಳಿದಾನೆ. 'ರಾತ್ರಿ ಮುಗಿದಿದೆ, ಹಗಲು ಆರಂಭವಾಗಿಲ್ಲ.' 'ಮಳೆಗಾಲದ ಹೊಳೆಯ ನೆರೆ ಇಳಿದಿದೆ. ಬೇಸಿಗೆಯ ಬತ್ತಿಗೆ ಪ್ರಾರಂಭವಾಗಿಲ್ಲ'. ಇವು ಹೇಗೆ ದೃಷ್ಟಾಂತಗಳೋ ಹಾಗೆಯೆ ಕುಂಭಕವೂ ದೃಷ್ಟಾಂತ. ಕುಂಭಕ ಪ್ರತಿಕ್ರಿಯೆಯನ್ನು ಶಾರೀರಿಕ ಕಾರಣಗಳಿಗೋಸುಗ ಬೆಳೆಯಿಸುವುದಿದ್ದರೆ ಆ ಮಾತು ಬೇರೆ. ಅಧ್ಯಾತ್ಮಿಕ ದೃಷ್ಟಿಯಿಂದ ಮಧ್ಯಸ್ಥಸ್ಥಿತಿ ಲಕ್ಷ್ಯ. ಒಟ್ಟಾರೆ ಜೀವನದಲ್ಲಿ ಎಲ್ಲ ಉಪಾಧಿಗಳಿಂದ ಮುಕ್ತನಾಗಲು ಬರಬೇಕು. ನಾನು ಅಂತಹನು, ನಾನು ಇಂತಹನು ಎಂಬ ಎಲ್ಲ ವಿಶೇಷಣಗಳನ್ನು ದೂರಿರಿಸಲು ಬರಬೇಕು. ಎಲ್ಲ ಗುಣದೋಷಗಳು ಹೋದ ಬಳಿಕ ಉಳಿವ ಮೂಲ ಉಪಶಾಂತ ಸ್ವರೂಪದಲ್ಲಿಯೆ ಸುಖ. ಶಾಂತಿಮಯ ಸುಖ ಸಾಮಾನ್ಯ ಸುಖಗಳಿಂದ ಭಿನ್ನವೆಂಬುದನ್ನು ತೋರಿಸಲು ಅದನ್ನು ನಿತ್ಯಸುಖ, ಆತ್ಮಸುಖ, ಚಿತ್ ಸುಖ ಮೊದಲಾದ ಹೆಸರುಗಳಿಂದ ಕರೆವುದುಂಟು. ಅದುವೆ ನಿಜವಾದ

ಸುಖವಾದುದರಿಂದ ಅದನ್ನು ‘ಸತ್ಯ’ ಸುಖವೆಂದೂ ಹೇಳಬಹುದು. ‘ಸಚ್ಚಿದಾನಂದ’ ಶಬ್ದದಲ್ಲಿ ಹಾಗೆಯೆ ಸೂಚಿಸಲ್ಪಟ್ಟಿದೆ. ಬುದ್ಧಿ ಆತ್ಮದಲ್ಲಿ ಸ್ಥಿರವಾದರೆ ಆ ಸುಖ ದೊರೆಯುತ್ತದೆ. ಆದುದರಿಂದ ಯಾರ ಪ್ರಜ್ಞೆ ಸ್ಥಿರವಾಗುತ್ತದೋ ಅವನ ಜೀವನ ಸುಖಿಯಾಗಿರುತ್ತದೆ.

**೧೧೩. ಆತ್ಮಸುಖಾನುಭೂತಿಗೂ ವ್ಯವಹಾರಕ್ಕೂ ವಿರೋಧವಿಲ್ಲ. ಆತ್ಮಬೋಧವು ಬಾಹ್ಯ ಉದ್ಯೋಗಗಳಲ್ಲಿ ಉಪಯೋಗಿಸಲ್ಪಡದಿದ್ದರಾಯಿತು.**

ಇಲ್ಲಿ ಒಂದು ಪ್ರಶ್ನೆ ಉದ್ಭೂತವಾಗುತ್ತದೆ: ಆತ್ಮದ ಹೊರಗಿನ ವಿಷಯಗಳಲ್ಲಿ ಬುದ್ಧಿಯನ್ನೇ ಉಪಯೋಗಿಸದಿದ್ದರೆ ವ್ಯವಹಾರ ಹೇಗೆ ಸಾಗಬೇಕು? ಚರ್ಮದ ವ್ಯವಸಾಯ ಮಾಡಬೇಕು. ಅದರಲ್ಲಿ ಬುದ್ಧಿಯನ್ನು ಉಪಯೋಗಿಸಬಾರದು, ಹೀಗಾದರೆ ಉದ್ಯೋಗ ಹೇಗೆ ನಡೆಯಬೇಕು! ಅದನ್ನು ಮಾಡಬೇಕೆ? ಬುದ್ಧಿಯನ್ನು ಆತ್ಮದಲ್ಲಿ ಇಡುವುದಾದರೆ ಹೊರಗಿನ ಉದ್ಯೋಗಗಳು ಸಾಧ್ಯವಾಗುವ ಬಗೆ ಹೇಗೆ? ಸಾಮಾನ್ಯ ವ್ಯವಹಾರಕ್ಕೆ ಉಪಯೋಗವಾಗುವ ಬುದ್ಧಿ ಬುದ್ಧಿಯ ಒಂದು ಶಕ್ತಿ. ಅದನ್ನು ತರ್ಕ ಎನ್ನಬಹುದು. ಅದನ್ನು ಬಾಹ್ಯ ಉದ್ಯೋಗಗಳಲ್ಲಿ ಉಪಯೋಗಿಸಲು ಅಡ್ಡಿಯಿಲ್ಲ. ಆದರೆ ‘ಅಹಂಬುದ್ಧಿ’ಯನ್ನು ಎಂದರೆ ಬುದ್ಧಿಯ ತಿರುಳನ್ನು ಆತ್ಮದಲ್ಲಿ ಸ್ಥಿರವಾಗಿರಿಸಿ ನಾವು ತಟಸ್ಥರಾಗಿರಬೇಕು. ಆತ್ಮಬೋಧವನ್ನು ಬಾಹ್ಯ ಉದ್ಯೋಗಗಳಲ್ಲಿ ಉಪಯೋಗಿಸಬಾರದು. ವ್ಯವಹಾರದಲ್ಲಿ ಸಾಮಾನ್ಯ ಬುದ್ಧಿಯನ್ನು ಉಪಯೋಗಿಸುತ್ತ ಆತ್ಮಬೋಧದಲ್ಲಿ ಲೀನವಾಗಿ ಇರುವುದು ಕಠಿಣವೇನೋ ಅಹುದು. ಆದರೆ ಆ ಪ್ರಯತ್ನವನ್ನು ಬಿಡಲಾಗದು. ನಿರಂತರವೂ ಪ್ರಯತ್ನಿಸುತ್ತಿದ್ದರೆ ಸಾಧ್ಯವಾಗುತ್ತದೆ. ಏಕೆಂದರೆ, ಇದು ಕೃತ್ರಿಮವಲ್ಲ, ಆದುದರಿಂದ ಅದು ಸಾಧ್ಯವಾಗುವುದೆಂಬುದು ನಿಃಸಂಶಯ.

**೧೧೪. ಆತ್ಮಬೋಧಕ್ಕೆ ಭಂಗ ಬಾರದಂತೆ ಮಾಡಲು ಯುಕ್ತಿ: ಮೊದಲನೆಯ ಕ್ಷಣದಲ್ಲಿ ಆಘಾತದ ಪರಿಣಾಮ ಆಗಗೊಡಬಾರದು.**

ಇದಕ್ಕೆ ನಾನೊಂದು ಯುಕ್ತಿಯನ್ನು ಶೋಧಿಸಿದೇನೆ. ಬಾಹ್ಯವಸ್ತುವಿನ ಪರಿಣಾಮ ತತ್‌ಕ್ಷಣದಲ್ಲಿ ಆಗಲು ಬಿಡಬಾರದು. ಎರಡನೆಯ ಕ್ಷಣದಲ್ಲಿ

ಆದರೂ ಚಿಂತೆಯಿಲ್ಲ. ಆದರೆ ಆ ಕ್ಷಣದಲ್ಲಿ ಆಗಗೊಡಬಾರದು. ಯಾರಾದರೂ ವಿನೋದ ಮಾಡಿದರೆ, ಮೊದಲನೆಯ ಕ್ಷಣದಲ್ಲಿ ನಗಬೇಡ. ಯಾರಾದರೂ ಏಟು ಕೊಟ್ಟರೆ, ಮೊದಲನೆಯ ಕ್ಷಣದಲ್ಲಿ ಕಣ್ಣೀರು ಹಾಕಬೇಡ. ಮೊದಲನೆಯ ಕ್ಷಣದಲ್ಲಿ ಅದನ್ನು ಭಗವಂತನ ಸ್ಪರ್ಶವೆಂದು ಭಾವಿಸಿ. ಎರಡನೆಯ ಕ್ಷಣದಲ್ಲಿ ಬೇಕಾದರೆ, ಕಣ್ಣೀರು ಹರಿಯಲಿ. ತಾಯಿ ತೀರಿದಳೆಂದು ಸುದ್ದಿ ಬಂದಾಗ ಮೊದಲನೆಯ ಕ್ಷಣದಲ್ಲಿ ಆಘಾತವಾಗದಿರಲಿ. ಶಾಂತಿ ಚಲಿಸಲು ಎಡೆಗೊಡಬೇಡಿ. ಮನಸ್ಸಿನ ಮೇಲೆ ಇಷ್ಟು ಸ್ವಾಮಿತ್ವ ದೊರೆತರೆ, ಮುಂದಿನದು ತನ್ನಿಂದ ತಾನೇ ಸಾಧ್ಯವಾಗುತ್ತದೆ.

## ೧೨ ನೆಯ ವ್ಯಾಖ್ಯಾನ

### ೧

**೧೧೫. ಇಂದ್ರಿಯಗಳನ್ನು ಅನುಸರಿಸುವ ಮನವು ಬುದ್ಧಿಯನ್ನು ಎಳೆಯುತ್ತದೆ. ಆದುದರಿಂದ ಸಂಯಮ ಆವಶ್ಯಕ.**

ಮುಂದಿನ ಶ್ಲೋಕದಲ್ಲಿ ಸಂಯಮದ ಆವಶ್ಯಕತೆಯನ್ನು ಮತ್ತೊಮ್ಮೆ ಬೇರೆ ರೀತಿಯಲ್ಲಿ ಹೇಳಲಾಗಿದೆ.

**ಇಂದ್ರಿಯಾಣಾಂ ಹಿ ಚರತಾಂ ಯನ್ ಮನೋಽನುವಿಧೀಯತೇ ।**
**ತದಸ್ಯ ಹರತಿ ಪ್ರಜ್ಞಾಂ ವಾಯುರ್ ನಾವಮಿವಾಂಭಸಿ ॥**

ಇಂದ್ರಿಯಗಳು ಸ್ವೈರ ವೃತ್ತಿಯವು, ಮನವು ಅವನ್ನು ಅನುಸರಿಸುತ್ತದೆ. ಸ್ಥಿತಿ ಹೀಗಾದರೆ, ಬುದ್ಧಿ ಗಟ್ಟಿಯಾಗಿ ಉಳಿಯಲಾರದು, ತಟಸ್ಥವಾಗಿರಲಾರದು. ಮನವೂ ಇಂದ್ರಿಯಗಳೂ ಒಂದಾದರೆ ಅವುಗಳ ಪಕ್ಷ ಬಲವತ್ತರವಾಗುತ್ತದೆ. ಬಳಿಕ ಬುದ್ಧಿ ತನ್ನ ಕಾರ್ಯವನ್ನು ಬಿಡುತ್ತದೆ. ಕಾರ್ಯವನ್ನು ಬಿಡುತ್ತದೆಂದರೆ ಬುದ್ಧಿ ಇಲ್ಲದಂತಾಗುತ್ತದೆಂದಲ್ಲ. ಬುದ್ಧಿ ಅಬುದ್ಧಿಯಾಗುವುದು ಶಕ್ಯವಿಲ್ಲ. ಆದರೆ ಅದು ಕುಬುದ್ಧಿಯಾಗುತ್ತದೆ. ಹಾಗಾದರೆ ಅದು ಅಬುದ್ಧಿಗಿಂತ ಹೆಚ್ಚು ಅನರ್ಥಕಾರಿಯಾಗುತ್ತದೆ. ಮನವು ಬುದ್ಧಿಯ ಪಕ್ಷದಲ್ಲಿ ಸೇರಿದರೆ, ಬುದ್ಧಿಯ ಪಕ್ಷ ಬಲವತ್ತರವಾಗಿ ಇಂದ್ರಿಯ

ಗಳು ಅದನ್ನು ಅನುಸರಿಸುತ್ತವೆ. ಬುದ್ಧಿಗೆ ಅನುಕೂಲವಾದ ಮನ, ಮನಕ್ಕೆ ಅನುಕೂಲವಾದ ಇಂದ್ರಿಯಗಳು ಇದ್ದರೆ, ಜೀವನದ ಎಲ್ಲ ವ್ಯವಹಾರವು ಆತ್ಮಕ್ಕೆ ಅನುಕೂಲವಾಗುತ್ತದೆ. ಆದರೆ ಇಂದ್ರಿಯಗಳನ್ನು ಮನವೂ, ಮನವನ್ನು ಬುದ್ಧಿಯೂ ಅನುಸರಿಸತೊಡಗಿದರೆ, ಅದು ಅಲ್ಲದ ಸಲ್ಲದ ಪ್ರಯೋಗಗಳನ್ನು ಮಾಡಲಾರಂಭಿಸುತ್ತದೆ, ಮನದ ಪಕ್ಷವನ್ನು ಸಮರ್ಥಿಸಲು ತರ್ಕಗಳನ್ನು ರಚಿಸತೊಡಗುತ್ತದೆ. ಹಾಗೆ ಆದರೆ, ಜೀವನದ ಎಲ್ಲ ವ್ಯವಹಾರವೂ ಆತ್ಮಕ್ಕೆ ಪ್ರತಿಕೂಲವಾಗುತ್ತದೆ.

### ೧೧೬. ಬುದ್ಧಿ ನೌಕೆಯಂತೆ ತಾರಕ, ಆದರೆ ಮನಕ್ಕೆ ವಶವಾದರೆ: ಮಾರಕ

ಹಿಂದೆ ಸ್ಪಷ್ಟವಾದ ಪರಂಪರೆಯನ್ನು ಹೇಳುವಾಗ ವಿಷಯಚಿಂತನೆಯಿಂದ ಮೊದಲು ಮನದ ಮೇಲೆ ಆಕ್ರಮಣವಾಗುತ್ತದೆಂಬುದು ಒಂದು ಶ್ಲೋಕದಲ್ಲಿ ಹೇಳಿ, ಮುಂದೆ ಮೋಹ ಮೊದಲಾದುವು ಹುಟ್ಟಿ ಅವುಗಳ ಸೆಕೆ ಬುದ್ಧಿಗೆ ಹೇಗೆ ತಗಲುವುದೆಂಬುವನ್ನು ಗೀತೆ ಎರಡನೆಯ ಶ್ಲೋಕದಲ್ಲಿ ಹೇಳಿದೆ. ಅದರದೇ ಸ್ಪಷ್ಟೀಕರಣ ಇಲ್ಲಿ ಮಾಡಲ್ಪಡುತ್ತದೆ. ಸವಾರನ ವಶದಲ್ಲಿ ಕಡಿವಾಣ, ಕಡಿವಾಣದ ವಶದಲ್ಲಿ ಕುದುರೆ, ಹೀಗೆ ಇದ್ದರೆ ಸವಾರ ಸುಖದಿಂದ ಇಷ್ಟ ಸ್ಥಳಕ್ಕೆ ಹೋಗಬಹುದು. ಆದರೆ ಕುದುರೆಯ ವಶದಲ್ಲಿ ಕಡಿವಾಣ, ಕಡಿವಾಣದ ವಶದಲ್ಲಿ ಸವಾರ ಹೀಗೆ ಆದರೆ, ಇಷ್ಟ ಸ್ಥಳಕ್ಕೆ ಹೋಗುವ ಆಶೆಯೆ ಉಳಿಯದು ಎಂದು ಕಠೋಪನಿಷತ್ತಿನಲ್ಲಿ ವಿವೇಚಿಸಲ್ಪಟ್ಟಿದೆ. ಅದನ್ನು ಇಲ್ಲಿ ನೌಕೆಯ ಉಪಮೆಯಿಂದ ತೋರಿಸಲಾಗಿದೆ. ಬುದ್ಧಿ ನೌಕೆಯಂತೆ ತಾರಕ. ಆದರೆ ಅದು ಗಾಳಿಗೆ ವಶವಾದರೆ, ಅದರ ತಾರಕಶಕ್ತಿ ನಷ್ಟವಾಗಿ ಅದು ಮುಳುಗಿಸುತ್ತದೆ.

### ೧೧೭. ಬುದ್ಧಿ ಮನಗಳು ನಿರಂತರವೂ ಬೇರೆಬೇರೆಯಾಗಿರಲಾರವು. ಬುದ್ಧಿಯಾದರೂ ಮನಕ್ಕೆ ವಶವಾಗಿರುತ್ತದೆ, ಇಲ್ಲವೆ ಮನವಾದರೂ ಬುದ್ಧಿಗೆ ವಶವಾಗಿರುತ್ತದೆ. ಎರಡನೆಯದೇ ಶ್ರೇಯಸ್ಕರ.

ಮನವು ಇಂದ್ರಿಯಗಳನ್ನು ಅನುಸರಿಸಿದರೂ ಬುದ್ಧಿಯನ್ನು ಸ್ಥಿರವಾಗಿ ಇರಿಸಲು ಬರುವಂತಿದ್ದರೆ, ಮನವು ಇಂದ್ರಿಯಗಳನ್ನು ಅನುಸರಿಸಲಿ ನಮಗೇನೂ ಹಾನಿಯಿಲ್ಲ ಎನ್ನಬಹುದಾಗಿತ್ತು. ಬುದ್ಧಿ, ಆತ್ಮಗಳ ಪಕ್ಷ

ಬಲವತ್ತರವಾಗಿದ್ದರೆ, ಮನವು ಇಂದ್ರಿಯಗಳಿಗೆ ವಶವಾಗಿ ವಿಷಯಗಳತ್ತ ಸೆಳೆಯಲ್ಪಟ್ಟರೂ ಚಿಂತೆಯಿಲ್ಲ ಎಂದುಕೊಳ್ಳಬಹುದು. ಜನರು ಹೀಗೆ ಹೇಳುವುದನ್ನೂ ಕೇಳುತ್ತೇವೆ: "ನಾವು ವಿಷಯ-ವಿಲಾಸ ಮಾಡುತ್ತಿದ್ದರೂ ನಮ್ಮ ಬುದ್ಧಿ ಅದರಲ್ಲಿ ಸಿಕ್ಕಿಕೊಳ್ಳುವುದಿಲ್ಲ. ವಿಚಾರಮಾಡುವಾಗ ನಾವು ಆ ವಿಷಯವನ್ನು ಬಿಟ್ಟು ತಟಸ್ಥರಾಗಿ ವಿಚಾರಮಾಡುತ್ತೇವೆ." ಹೀಗೆ ಕೆಲವರು ಹೇಳುವುದುಂಟು. ಇದು ಭ್ರಮೆ. ಹೀಗಾಗುವುದು ಶಕ್ಯವಿಲ್ಲ. ಇಂದ್ರಿಯ, ಮನ, ಬುದ್ಧಿ, ಈ ಮೂರನ್ನೂ ಒಂದು ಪಕ್ಷದಲ್ಲಿ ಇಟ್ಟು ತಾನು ಬೇರೆಯಾಗಿರುವುದು ಶಕ್ಯವಿದೆ. ಏಕೆಂದರೆ, ಆತ್ಮ ತೀರ ಬೇರೆ. ಆತ್ಮ, ಬುದ್ಧಿಗಳ ನಡುವೆ ಅಂತರವಿದೆ. ಅವುಗಳ ನಡುವೆ ನೀವು ಗೋಡೆಯನ್ನು ಕಲ್ಲಿಸಬಲ್ಲಿರಿ. ಆದರೆ ಸ್ಥಿತಪ್ರಜ್ಞತೆ ಪ್ರಾಪ್ತವಾದ ಮೇಲೆಯೆ ಇದು ಸಾಧ್ಯ. ಇದೇ ವೇದಾಂತ. ಇದು ಕಠಿಣವೇನೋ ನಿಜ, ಆದರೆ ಶಕ್ಯ. ಮನ, ಬುದ್ಧಿಗಳ ನಡುವೆ ಅಂತರವಿಲ್ಲ. ಅವು ಪರಸ್ಪರ ಸಂಬದ್ಧ. ಆದುದರಿಂದ ಒಂದೆಡೆಗೆ ಆತ್ಮ ಇನ್ನೊಂದೆಡೆಗೆ ಬುದ್ಧಿ, ಮನ, ಇಂದ್ರಿಯಗಳು- ಹೀಗೆ ಎರಡು ಭಾಗ ಮಾಡಲು ಬರುವಂತೆ, ಆತ್ಮ ಬುದ್ಧಿ ಒಂದೆಡೆಗೆ, ಮನ ಇಂದ್ರಿಯಗಳು ಇನ್ನೊಂದೆಡೆಗೆ- ಹೀಗೆ ಎರಡು ಭಾಗ ಮಾಡಲು ಬಾರದು. ಇಂದ್ರಿಯಗಳಿಗೆ ಅಧೀನ ಮನ, ಮನಕ್ಕೆ ಅಧೀನ ಬುದ್ಧಿ; ಹೀಗಾದರೂ ಆಗಬಹುದು. ಇಲ್ಲವೆ ಬುದ್ಧಿಗೆ ಅಧೀನ ಮನ, ಮನಕ್ಕೆ ಅಧೀನ ಇಂದ್ರಿಯಗಳು, ಹೀಗಾದರೂ ಆಗಬಹುದು. ಇವುಗಳಲ್ಲಿ ಎರಡನೆಯ ಮಾರ್ಗ ಇಷ್ಟ, ಶ್ರೇಯಸ್ಕರ ಎಂದು ಇಲ್ಲಿ ಸೂಚಿಸಲ್ಪಟ್ಟಿದೆ.

೨

## ೧೪. ಜ್ಞಾನದೇವನ ವಿಶಿಷ್ಟ ಸೂಚನೆ—ಜ್ಞಾನಿಯೂ ಮೈಮರೆತು ಇಂದ್ರಿಯಗಳನ್ನು ಸ್ವೈರವಾಗಿ ಬಿಡಲಾಗದು

ಆದರೆ ಈ ಶ್ಲೋಕದಲ್ಲಿ ಇಷ್ಟೇ ಹೇಳಿದ್ದರೆ, ವಿಶೇಷವೇನನ್ನೂ ಹೇಳಿದಂತಾಗಲಿಲ್ಲ. ಆದುದರಿಂದ ಇದರಲ್ಲಿ ವಿಶೇಷ ಅರ್ಥವಿದ್ದರೆ, ಅದನ್ನು ಸೂಕ್ಷ್ಮವಾಗಿ ಶೋಧಿಸಬೇಕು. ಜ್ಞಾನದೇವನು ಈ ಅರ್ಥವನ್ನು ಸ್ಪಷ್ಟಗೊಳಿಸಿದಾನೆ. ಈ ಶ್ಲೋಕದಲ್ಲಿ ಒಂದು ವಿಶೇಷ ಆಪತ್ತು ಸೂಚಿಸಲ್ಪಟ್ಟಿದೆ

ಎಂದು ಆತನ ಮತ. ಮನುಷ್ಯ ಸ್ಥಿತಪ್ರಜ್ಞತೆಯ ಕೊನೆಯ ಮೆಟ್ಟಲಲ್ಲಿದ್ದರೂ, ಆತ ಮೈಮರೆಯಲಾಗದೆಂದು ಇಲ್ಲಿ ಎಚ್ಚರಿಕೆ ಕೊಡಲ್ಪಟ್ಟಿದೆ. ಜ್ಞಾನದೇವನು "ಪ್ರಾಪ್ತೇ ಹಿ. ಪುರುಷೇ। ಇಂದ್ರಿಯೇಂ ಲಾಡಿಲೀ ಜರೀ **ಕೌತಿಕೇ। ತರೀ ಆಕ್ರಮಿಲಾ ಜಾಣದುಃಖೇ। ಸಾಂಸಾರಿಕೇ"** ಎಂದಿದಾನೆ. ಪ್ರಾಪ್ತ–ಎಂದರೆ ಬಂದ, ಎಂದರೆ ಇಷ್ಟ ಸ್ಥಳಕ್ಕೆ ಬಂದ. ಪ್ರಾಪ್ತ ಪುರುಷ ಎಂದರೆ ತನ್ನ ಇಷ್ಟ ಸ್ಥಳಕ್ಕೆ ಬಂದ ಪುರುಷ–ಎಂದರೆ ಸ್ಥಿರಬುದ್ಧಿಯ ಪುರುಷ ಇಂತಹನು ಇಂದ್ರಿಯಗಳನ್ನು ತೃಪ್ತಿಗೊಳಿಸುವ ಗೊಡವೆಗೆ ಹೋಗುವನೇಕೆ? ಆದುದರಿಂದ ಕೌತಿಕೇಂ ಶಬ್ದ ಉಪಯೋಗಿಸಲ್ಪಟ್ಟಿದೆ. ಅವನು ಕೌತುಕದಿಂದ, ಕುತೂಹಲದಿಂದ, ಮೈಮರೆತು ಅಥವಾ ತಪ್ಪಿ, ಇಂದ್ರಿಯಗಳನ್ನು ಸ್ವೈರವಾಗಿ ಬಿಟ್ಟರೆ, ಅವನ ಮನವೂ ಅವನಿಗಿಂತ ಬಲವತ್ತರವಾಗಿ ಅವನನ್ನು ಸೆಳೆದೊಯ್ಯುತ್ತದೆ. ಈ ಅರ್ಥ ಜ್ಞಾನದೇವನಿಗೆ ಹೊಳೆದುದು ಹೇಗೆ ಎಂಬುದನ್ನು ಆಲೋಚಿಸಿದರೆ ಆತನ ಬುದ್ಧಿಯ ಸೂಕ್ಷ್ಮತ್ವ ವ್ಯಕ್ತವಾಗುತ್ತದೆ. ಈ ಶ್ಲೋಕದಲ್ಲಿ ಗಾಳಿ ನೌಕೆಯನ್ನು ಎಳೆವಂತೆ ಮನವು 'ಬುದ್ಧಿ'ಯನ್ನು ಎಳೆಯುತ್ತದೆ ಎಂದು ಹೇಳಿಲ್ಲ. 'ಪ್ರಜ್ಞೆ'ಯನ್ನು ಸೆಳೆವುದೆಂದು ಬುದ್ಧಿಯ ಬದಲು 'ಪ್ರಜ್ಞಾ' ಶಬ್ದ ಉಪಯೋಗಿಸಲ್ಪಟ್ಟಿದೆ. ಅದನ್ನು ಸುಮ್ಮನೆಯೆ ಉಪಯೋಗಿಸಿದಾರೆ ಎನ್ನೋಣವೆ? ಈ 'ಪ್ರಜ್ಞಾ' ಶಬ್ದದಿಂದ ಜ್ಞಾನದೇವನಿಗೆ, ಮನುಷ್ಯ ಯಾವ ಸ್ಥಿತಿಯಲ್ಲಿಯೂ ಮನವನ್ನು ಸಡಿಲುಬಿಡಲಾಗದೆಂಬ ಹೊಸ ಮಾತು ಸೂಚಿತವಾಯಿತು. ರಾಮದಾಸರೂ ಕೊನೆಯ ಉಪದೇಶವನ್ನು ಹೀಗೆಯೇ ಮಾಡಿರುವರು. **"ಮನಾ ಗೂ ಜರೀ ತೂಜ ಹೇಂ ಪ್ರಾಪ್ತ ಝಾಲೇ"** ಎಂದರೆ ದೊರೆಯಬೇಕಾದುದು–ದೊರೆತರೂ, ಎಂದರೆ–ನೀನು ನಿನ್ನ ಇಷ್ಟ ಸ್ಥಳಕ್ಕೆ ಬಂದರೂ ಮೈಮರೆಯಲಾಗದು. **"ಪರೀ ಅನಾರೀಂ ಪಾಹಿಜೇ ಯತ್ನ ಕೇಲೇ"** ಕೈಗೆ ಸಿಕ್ಕ ಮೇಲೆಯೂ ಕೈ ಬಿಗಿಯಿರಲಿ, ಸಡಿಲುಬಿಡಬೇಡ. ಮನುಷ್ಯನ ಬುದ್ಧಿ ಸ್ಥಿರವಾಗಿ ಪ್ರಜ್ಞಾಸ್ವರೂಪವನ್ನು ಪಡೆದರೂ ಆತ ಸಡಿಲುಬಿಡಲಾಗದು ಎಂದು ತಾತ್ಪರ್ಯ.

ಆದರೆ ಜ್ಞಾನದೇವನು ಬೇರೆಡೆಯಲ್ಲಿ ಮತ್ತೊಂದು ರೀತಿ ಹೇಳಿದಾನೆ. **"ಗಂಗೆ ಸಮುದ್ರವನ್ನು ಸೇರಿದೊಡನೆ ಅದರ ಗತಿ ಮಂದವಾಗುತ್ತದೆ."**

"ಶತ್ರುವನ್ನು ಗೆದ್ದ ಬಳಿಕ ಕತ್ತಿಯ ಮೇಲಿನ ಬಿಗುವು ಕಡಿಮೆಯಾಗುತ್ತದೆ". ಜ್ಞಾನಿಗೆ ಸಾಧನೆಯ ಆವಶ್ಯಕತೆ ಇರದೆಂದು ಈ ಉದ್ಗಾರಗಳಿಂದ ಸೂಚಿತವಾಗುತ್ತದೆ. ಆದರೆ ಇಲ್ಲಿ ಎಚ್ಚರಿಕೆಯ ಸೂಚನೆ ಕೊಡಲ್ಪಟ್ಟಿದೆ. ಹೀಗಾದರೆ ಮೋಕ್ಷವನ್ನು ಸಾಧಿಸುವುದೆಂತು? ಜ್ಞಾನಿಗೆ ಎಚ್ಚರಿಕೆಯು ಸಹಜವಾಗಿದೆ. ಇದೇ ಇಲ್ಲಿ ಮೋಕ್ಷ! ಬ್ರಹ್ಮಸೂತ್ರ ಭಾಷ್ಯದಲ್ಲಿ ಶಂಕರಾಚಾರ್ಯರು ಇದೇ ಅರ್ಥವನ್ನು ಬೇರೆ ಭಾಷೆಯಲ್ಲಿ ಹೇಳಿದಾರೆ. "ಆತ್ಮಜ್ಞಾನಿ ಸ್ವಚ್ಛಂದವಾಗಿ ವರ್ತಿಸುವನೆ? ಸ್ವಚ್ಛಂದವಾಗಿ ವರ್ತಿಸಲು ಅಹಂಕಾರ ಬೇಕು, ಅಲ್ಲವೆ?" ಅವರ ಈ ಉಕ್ತಿ ಮಾರ್ಮಿಕವಾಗಿದೆ. ಸಂಯಮದ ಆಧಾರದಿಂದಲೇ ಮನುಷ್ಯ ಸ್ಥಿತಪ್ರಜ್ಞನಾಗುವುದು. ಹೀಗಿರಲು ಅವನಿಂದ ಅಸಂಯತ ವರ್ತನ ಆಗುವುದು ಹೇಗೆ? ಸಂಯುಕ ವರ್ತನವೇ ಅವನ ಸ್ವಭಾವ. ಸ್ಥಿತಪ್ರಜ್ಞನ ವಿಷಯದಲ್ಲಿ ನಿಯಮ ನಿಯಮವಾಗಿ ಉಳಿವುದಿಲ್ಲ, ಸಂಯಮ ಸಂಯಮವಾಗಿ ಉಳಿವುದಿಲ್ಲ. ನಿಯಮಗಳು ಬೇರೆ, ನಾನು ಬೇರೆ, ನನಗೆ ಅವು ಆವಶ್ಯಕ ಎಂಬೀ ಭೇದಭಾವವೇ ಅವನಲ್ಲಿ ಉಳಿದಿರುವುದಿಲ್ಲ. ಸೂರ್ಯ ನಿಯಮವಶನಾಗಿ ಪ್ರಕಾಶಿಸುವುದಿಲ್ಲ, ಸ್ವಭಾವದಿಂದ ಪ್ರಕಾಶಿಸುತ್ತಾನೆ. ಗಂಗೆ ನಿಯಮದ ದೆಸೆಯಿಂದ ಹರಿಯುವು; ಸ್ವಭಾವದಿಂದ. ಹಾಗೆಯೆ ಸ್ಥಿತಪ್ರಜ್ಞನ ಸ್ಥಿತಿ.

ಇಂದ್ರಿಯ ಸಂಯಮ ಅವನಿಗೆ ಹೊರೆಯಾಗಿದೆಯೆ? ಇಲ್ಲ. ಇಂದ್ರಿಯಗಳ ಅಸಂಯಮವೇ ಅವನಿಗೆ ಹೊರೆ. ಒಬ್ಬ ಗಣಿತವನ್ನು ಕಲಿತು ಪಾರಂಗತನಾದಾನೆ. ಉತ್ತಮ ಗಣಿತಜ್ಞನಾಗಿದಾನೆ. ಆದ್ದರಿಂದ ಅವನು ನನಗಿನ್ನು ಗಣಿತದ ನಿಯಮ ಬೇಕೆ ಎನ್ನಬಹುದೆ? ಇನ್ನು ಮುಂದೆ ನನಗೆ ಎರಡು ಎರಡು ನಾಲ್ಕಾಗದೆ ಮೂರಾಗಬೇಕು ಎನ್ನಬಹುದೆ? ಹೀಗೆ ಎಂದರೆ ಅವನ ಗಣಿತವೇ ಹೋಯ್ತು, ಅವನಿಗೆ ಭ್ರಮೆಯಾಯ್ತು! ಸಂಯಮ ಹೊರೆ, ಹೊರೆ, ಹೊರೆ ಎಂದು ಕಲ್ಪನೆ ಇರುವವರೆಗೆ ಅದು ಬೇಡವಾಗುತ್ತದೆ. ಆದರೆ ಸಾಧಕನಿಗೂ ಸಂಯಮ ಬೇಡವಾಗದು. ಸಾಧಕನಿಗೆ ಮೊದ ಮೊದಲು ಸಂಯಮ ಸ್ವಲ್ಪ ತಾಪದಾಯಕವಾಗುತ್ತದೆ, ನಿಜ. ತಾಪದಾಯಕವಾಗುತ್ತದೆಂದೇ ಸಂಯಮಕ್ಕೆ 'ತಪ'ವೆಂದು ಹೆಸರು ಕೊಡಲ್ಪಟ್ಟಿದೆ. ಸಂಯಮದಿಂದ ತಾಪವಾಗದಿದ್ದರೆ ಅದು ಎಂಥ ತಪ? ಆದರೆ

ಆರಂಭದಲ್ಲಿ ಸ್ವಲ್ಪ ತಾಪದಾಯಿಯಾದರೂ ಸಾಧಕನಿಗೆ ಸರ್ವಥಾ ಸಂಯಮ ಸ್ವಲ್ಪವೂ ಹೊರೆಯಾಗದು. ಆದರಿಂದ ಅವನಿಗೆ ಉತ್ಸಾಹವೇ ಬರುತ್ತದೆ. ಪ್ರವಾಸಿಗೆ ಬುತ್ತಿಯ ಗಂಟು ಹೊರೆಯೆ? ಸಾಧಕನಿಗೇ ಸಂಯಮ ಹೊರೆಯಾಗದ ಬಳಿಕ ಸ್ಥಿತಪ್ರಜ್ಞನಿಗೆ ಹೊರೆಯಾಗುವ ಸಂಭವವೇ ಇಲ್ಲ.

ಅಭ್ಯಾಸವಾಗಿರುವುದರಿಂದ ಸಂಯಮವು ಸ್ಥಿರಬುದ್ಧಿಯ ಅಂಗವೇ ಆಗುತ್ತದೆ. ಸ್ಥಿರಬುದ್ಧಿಗೆ ಸಂಯಮವೇ ಆಧಾರ. ಸ್ಥಿರಬುದ್ಧಿಯಾದ ಬಳಿಕ ಮನುಷ್ಯ ಸಂಯಮದ ವಿಷಯದಲ್ಲಿಯೆ ಸಡಿಲಾಗುವುದು ಶಕ್ಯವಿಲ್ಲ ಮರವನ್ನು ಕಡಿವವನು ಎಲ್ಲ ಟೊಂಗೆಗಳನ್ನು ಕಡಿದಾನು, ತಾನು ನಿಂತ ಟೊಂಗೆಯನ್ನೆ ಕಡಿದಾನೆ? ಸ್ಥಿರಬುದ್ಧಿ ಸಂಯಮದ ಮೇಲೆ ನಿಂತಿರುವುದರಿಂದ ಅದು ಸಂಯಮದ ಮೇಲೆ ಕೊಡಲಿಪೆಟ್ಟು ಇಕ್ಕುವ ಸಂಭವವಿಲ್ಲ. ಹಾಗೆ ಮಾಡುವುದೆಂದರೆ ಆತ್ಮಹತ್ಯೆ ಮಾಡಿಕೊಂಡಂತೆಯೆ. ಜ್ಞಾನದೇವನ ಅರ್ಥ ಇದೇ. ಸ್ಥಿತಪ್ರಜ್ಞ ನಿತ್ಯವೂ ಪ್ರಯತ್ನಶೀಲನಾಗಿರಬೇಕೆಂದು ಅರ್ಥವಲ್ಲ. ಆದರೆ ಸಂಯಮದ ವಿಷಯದಲ್ಲಿ ಸಡಿಲಾಗುವನೆಂದು ಇಟ್ಟುಕೊಂಡರೆ ಅವನ ಸ್ಥಿತಪ್ರಜ್ಞತೆಯ ಆಧಾರವನ್ನೆ ಸಡಿಲಿಸಿದಂತಾಗುತ್ತದೆ. ಆದುದರಿಂದ ಹಾಗಾಗುವ ಸಂಭವವಿಲ್ಲವೆಂದು ಈ ಶ್ಲೋಕದ ಆಳವಾದ ಅರ್ಥ.

ಸ್ಥಿತಪ್ರಜ್ಞನಿಗೆ ಸಾಧನೆಯ ಅಥವಾ ಸಾವಧಾನತೆಯ ಆವಶ್ಯಕತೆ ಇಲ್ಲವೆಂದೂ ಹೇಳಲ್ಪಡುತ್ತದೆ, ಇರುವುವೆಂದೂ ಹೇಳಲ್ಪಡುತ್ತದೆ. ಸ್ಥಿತಪ್ರಜ್ಞನಿಗೆ ಸಾವಧಾನತೆ ಸಹಜವಾಗಿರುತ್ತದೆಂದು ಹೇಳಿ ಪರಸ್ಪರ ವಿರುದ್ಧವಾಗಿ ತೋರುವ ಈ ವಿಧಾನಗಳ ಮೇಳವನ್ನೇನೊ ನಾವು ಸಾಧಿಸಿದೆವು. ಇನ್ನೊಂದು ರೀತಿಯಿಂದಲೂ ಮೇಳವನ್ನು ಸಾಧಿಸಬಹುದು. ಸಾವಧಾನತೆಯ ಅಪೇಕ್ಷೆಯನ್ನಿಟ್ಟುಕೊಳ್ಳದ ಸಹಜಾವಸ್ಥೆ ಒಂದು ಬಗೆಯಿಂದ ಮಾನವನ ಆಕಾಂಕ್ಷೆ ಮಾತ್ರ. ಈ ದೇಹದಲ್ಲಿ ಸ್ಥಿತಪ್ರಜ್ಞನ ಪೂರ್ಣ ವ್ಯಾಖ್ಯೆಯನ್ನು ಮುಟ್ಟುವುದು ಅಶಕ್ಯವಲ್ಲವೆಂದು ಹೇಳಬಹುದಾದರೂ ಅನೇಕರ ದೃಷ್ಟಿಯಿಂದ ಅದು ಅಶಕ್ಯಪ್ರಾಯ. ಸಾಧಕನ ಭೂಮಿಕೆ ಮುಂದುವರಿಯುತ್ತ ಹೋದಂತೆ ಅವನಿಗೆ ಸ್ಥಿತಪ್ರಜ್ಞನ ವ್ಯಾಖ್ಯೆಯ ಅರ್ಥವೂ ಸೂಕ್ಷ್ಮವಾಗುತ್ತ ಹೋಗುತ್ತದೆ. ಆದುದರಿಂದ ತಾನು ಸ್ಥಿತಪ್ರಜ್ಞನಾದೆನೆಂದು ತಿಳಿವ ಸ್ಥಿತಿ

ಮನುಷ್ಯನಿಗೆ ಸಹಜಾ ಲಭಿಸದು. ಹೀಗಾಗುವುದು ಒಂದು ಬಗೆಯಿಂದ ಇಷ್ಟವೇ. ದೇಹವಿರುವವರೆಗೆ ವಿಕಾಸಕ್ಕೆ ಆಸ್ಪದವಿರುವುದು ಇಷ್ಟ. ಇಷ್ಟೇ ಏಕೆ, ದೇಹದ ಅಸ್ತಿತ್ವವೆ ಹೀಗೆ ಆಸ್ಪದವಿರುತ್ತದೆಂಬುದರ ಚಿಹ್ನೆ ಎನ್ನಬಹುದು. ಟಾಲ್‌ಸ್ಟಾಯ್ ಹೇಳಿದಂತೆ, ಸಾಧಕನು ತನ್ನ ಧ್ಯೇಯವನ್ನು ಮುಟ್ಟಲು ಓಡಿದರೆ, ಧ್ಯೇಯವೂ ಮುಂದೆ ಓಡುತ್ತದೆ. ಒಂದು ಬಗೆಯ ಸ್ಪರ್ಧೆಯೆ ನಡೆಯುತ್ತದೆ. ಈ ರೀತಿ ನಿರಂತರವೂ ಸ್ಪರ್ಧೆಯ ಆಟ ನಡೆವುದರಲ್ಲಿಯೆ ಸೊಗಸು ಇದೆ. ಸಾಧಕನಿಗೆ ಧ್ಯೇಯ ಕೈಗೆ ಸಿಕ್ಕಿತು ಅನಿಸುವಷ್ಟರಲ್ಲಿಯೆ 'ನಾನು ತಪ್ಪಿಸಿಕೊಂಡೆ' ಎಂದು ಹೇಳಿ ಧ್ಯೇಯವು ಮುಂದೋಡುತ್ತದೆ. ಇದರಲ್ಲಿಯೆ ಸಾಧನೆಯ ಪ್ರತಿಷ್ಠೆ ಇದೆ. ಆದುದರಿಂದ ಸಾಧಕನಿಗೆ ಅಪಾಯದ ಸೂಚನೆಯನ್ನೀವುದು ಯಾವಾಗಲೂ ಯೋಗ್ಯವೇ. 'ಹಾಗಾದರೆ ಧ್ಯೇಯ-ಲಬ್ಧಿ ಎಂದೂ ಆಗದು' ಎಂದು ಇದರಿಂದ ಅನುಮಾನ ಹೊರಡಿಸಲಾಗದು. ಈಶ್ವರ ಕೃಪೆಯಿಂದ ಧ್ಯೇಯಲಬ್ಧಿ ಅವಶ್ಯವಾಗಿ ಆಗುತ್ತದೆ. ಆದರೆ ನನಗೆ ಲಬ್ಧಿ ಆಯ್ತು, ಇನ್ನು ನನ್ನ ಮನದ ಮೇಲಿನ ಹಿಡಿತವನ್ನು ಸಡಲಿಸಲು ಅಡ್ಡಿಯಿಲ್ಲವೆಂಬ ಕಲ್ಪನೆ ಮನುಷ್ಯನಿಗೆ ಬಂದ ಕ್ಷಣವೇ ಆ ಲಬ್ಧಿ ಆತನ ಕೈ ಬಿಡುತ್ತದೆ. ಈಸುವವನು ಎಷ್ಟೋ ಸಲ ದಂಡೆಗೆ ಬರುತ್ತಾನೆ. ದಂಡೆಯ ಮೇಲೆ ಕೈಯನ್ನೂ ಊರುತ್ತಾನೆ. ಆದರೆ ಕೈ ಜಾರಿ ಮತ್ತೆ ನೀರಿನ ಸೆಳೆತಕ್ಕೆ ಸಿಕ್ಕುತ್ತಾನೆ. ಕೈ ದಂಡೆಯನ್ನು ಮುಟ್ಟಿದರೆ ಸಾಲದು. ಕಾಲು ದಂಡೆಯ ಮೇಲೆ ನಿಲ್ಲಬೇಕು. ಆಗಲೇ ಈಸು ಮುಗಿದಂತೆ. ಆದುದರಿಂದ ಕೊನೆಯವರೆಗೂ ಸಂಯಮದಲ್ಲಿ ಶಿಥಿಲವಾಗಕೂಡದೆಂದು ಹೇಳುವುದು ಸಾಧಕೋಪಯೋಗಿಯಾದುದು.

೩

ಈ ರೀತಿಯಾಗಿ ಸಂಯಮದ ಆವಶ್ಯಕತೆ ಆರಂಭದಿಂದ ಅಂತದವರೆಗೆ ಸಿದ್ಧವಾಯ್ತು, ಎಂದರೆ–ಅದು ಪೂರ್ಣವಾಗಿ ಸಿದ್ಧವಾಯ್ತು. ಸಂಯಮದ ಆವಶ್ಯಕತೆಯನ್ನು ಸಿದ್ಧಮಾಡಿದ ಬಳಿಕ ಇನ್ನು 'ತಸ್ಮಾತ್' ಶಬ್ದವನ್ನು ಉಪಯೋಗಿಸಲು ಅಡ್ಡಿಯಿಲ್ಲ.

**ತಸ್ಮಾತ್ ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**

"ತಸ್ಮಾತ್" ಶಬ್ದವನ್ನಿಟ್ಟು ಇಲ್ಲಿ ಮೂಲ ಪ್ರತಿಜ್ಞೆಯನ್ನು ಪುನರುಚ್ಚಾರ ಮಾಡಲಾಗಿದೆ. ತರ್ಕಶಾಸ್ತ್ರದಲ್ಲಿ ಇದಕ್ಕೆ 'ನಿಗಮನ' ವೆಂದು ಹೆಸರು. ಪ್ರಾರಂಭದಲ್ಲಿ ಮೂಲ ಸಿದ್ಧಾಂತವನ್ನು ಹೇಳುವುದು, ಆ ಬಳಿಕ ಅದನ್ನು ಯುಕ್ತಿವಾದದಿಂದ ಸಿದ್ಧಮಾಡುವುದು, ಕೊನೆಗೆ ಮತ್ತೆ ಆ ಪ್ರತಿಜ್ಞೆಯ ಪುನರುಚ್ಚಾರ ಮಾಡುವುದು, ಇದು ತರ್ಕ ಶಾಸ್ತ್ರದ ರೀತಿ. ಹೀಗೆ ಮಾಡುವುದರಿಂದ ಶಾಸ್ತ್ರದ ಸಮಾಧಾನವಾಗುತ್ತದೆ. ಇದು ಯುಕ್ಲಿಡನ ಕ್ಯೂ. ಇ. ಡಿ. ಎಂದರೆ 'ಇತಿ ಸಿದ್ಧಮ್' ಎಂಬಂತಿರುತ್ತದೆ. ಗೀತೆಯ ಪದ್ಧತಿ ಅಕ್ಷರಶಃ ತರ್ಕಶಾಸ್ತ್ರದ ಪದ್ಧತಿಯಲ್ಲ. ಶಾಸ್ತ್ರದ ಚೌಕಟ್ಟಿನಲ್ಲಿ ಹಿಡಿದಿರಿಸಿ, ಸಾಮಾನ್ಯ ಮನುಷ್ಯನ ಬುದ್ಧಿಯನ್ನು ಸುಮ್ಮನೆ ಆಯಾಸಗೊಳಿಸುವುದು ಗೀತೆಗೆ ಇಷ್ಟವಿಲ್ಲ. ಆದುದರಿಂದ ಸಾಮಾನ್ಯ ಮನುಷ್ಯನಿಗೆ ಸುಖವಾಗಿ ತಿಳಿವಂತೆ ಸುಲಭವಾದ ಸಂವಾದ ಪದ್ಧತಿಯಿಂದ ಅದು ವಿವೇಚನೆ ಮಾಡುತ್ತದೆ. ಆದರೆ ಅದು ಶಾಸ್ತ್ರವನ್ನು ಉಪೇಕ್ಷಿಸುವುದಿಲ್ಲ. ವಿಶೇಷತಃ ಇದು ಸಂಯಮದ ತಾತ್ತ್ವಿಕ ಉಪಪತ್ತಿಯನ್ನು ಹೇಳುವ ವಿವೇಚನೆಯಾಗಿರುವುದರಿಂದ ಇಲ್ಲಿ ಶಾಸ್ತ್ರೀಯ ಶೈಲಿ ಅವಶ್ಯಕ. ಆದುದರಿಂದ ಶಾಸ್ತ್ರದ ಸಮಾಧಾನಕ್ಕೋಸುಗ ಈ ಶ್ಲೋಕ ಒಂದು ಹೇಳಲ್ಪಟ್ಟಿದೆ. "ಯದಾ ಸಂಹರತೇ ಚಾಯಂ ಕೂರ್ಮೋಂಗಾನೀವ ಸರ್ವಶಃ" ಎಂಬ ಶ್ಲೋಕದಲ್ಲಿ ಹೇಳಿದುದನ್ನೇ ಇಲ್ಲಿ ಹೇಳಲಾಗಿದೆ. ಆಮೆಯ ಉಪಮೆಯೊಂದನ್ನುಳಿದು ಆ ಶ್ಲೋಕದ ಪುನರುಚ್ಚಾರವೇ ಈ ಶ್ಲೋಕ. ಇದೇ ನಿಗಮನದ ಸ್ವರೂಪ.

## ೧೩ನೆಯ ವ್ಯಾಖ್ಯಾನ

### ೧

ಸ್ಥಿತಪ್ರಜ್ಞನ ಲಕ್ಷಣದ ಎರಡು ವಿಭಾಗಗಳು ಮುಗಿದುವು. ಇನ್ನು ಮೂರನೆಯ, ಕೊನೆಯ ವಿಭಾಗಗಳನ್ನು ನೋಡೋಣ. ಮೊದಲಿನ ನಾಲ್ಕು ಶ್ಲೋಕಗಳ ವಿಭಾಗದಲ್ಲಿ ಸ್ಥಿತಪ್ರಜ್ಞನ ವ್ಯಾಖ್ಯೆ, ಆ ವ್ಯಾಖ್ಯೆಯ ವಿವರಣೆ

ಗಳು ಹೇಳಲ್ಪಟ್ಟುವು. ನಡುವಿನ ವಿಭಾಗದಲ್ಲಿ ಇದನುಷಂಗವಾಗಿ ಮೂರು ಶ್ಲೋಕಗಳಲ್ಲಿ ಸಂಯಮದ ವಿಜ್ಞಾನವನ್ನು, ಏಳು ಶ್ಲೋಕಗಳಲ್ಲಿ ಸಂಯಮದ ತತ್ತ್ವಜ್ಞಾನವನ್ನು ಸ್ಪಷ್ಟೀಕರಿಸಲಾಯಿತು. ಇನ್ನು ಅಂತಿಮ ವಿಭಾಗದಲ್ಲಿ ಸ್ಥಿತಪ್ರಜ್ಞನ ಸ್ಥಿತಿಯ ಸ್ಪಷ್ಟೀಕರಣವನ್ನು ಮಾಡಿ ಅದರ ಫಲ ಶ್ರುತಿಯನ್ನು ಹೇಳಬೇಕು. ಮೂರು ಶ್ಲೋಕಗಳ ಒಂದು ತ್ರಿಸೂತ್ರಿಯಲ್ಲಿ ಸ್ಥಿತಿಯ ಸ್ಪಷ್ಟೀಕರಣವಾಗುತ್ತದೆ. ಕೊನೆಯ ಶ್ಲೋಕದಲ್ಲಿ ಫಲಶ್ರುತಿ ಹೇಳಲ್ಪಡುತ್ತದೆ.

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**

ಇದು ಸ್ಪಷ್ಟೀಕರಣದ ಮೊದಲನೆಯ ಶ್ಲೋಕ. ಇದರ ಅಕ್ಷರಾರ್ಥ ಹೀಗಿದೆ:—ಯಾವಾಗ ಎಲ್ಲ ಜೀವಿಗಳು ಮಲಗಿರುವರೋ ಆಗ ಸ್ಥಿತಪ್ರಜ್ಞ ಎಚ್ಚರವಿರುತ್ತಾನೆ. ಯಾವಾಗ ಜೀವಿಗಳು ಎಚ್ಚರಿರುತ್ತಾರೋ ಆಗ ಸ್ಥಿತಪ್ರಜ್ಞ ಗಾಢವಾಗಿ ನಿದ್ರಿಸುತ್ತಾನೆ. ಆದರೆ ಇಲ್ಲಿ ಅಕ್ಷರಾರ್ಥವನ್ನು ತೆಗೆದುಕೊಳ್ಳದೆ, ಲಕ್ಷಣಾರ್ಥವನ್ನು ತೆಗೆದುಕೊಳ್ಳಬೇಕೆಂಬುದು ಸ್ಪಷ್ಟ. ಅಕ್ಷರಾರ್ಥವನ್ನು ತೆಗೆದುಕೊಂಡರೆ, ಸ್ಟೇಶನ್ ಮಾಸ್ತರರು, ಕಳ್ಳರು, ರಾತ್ರಿ ಪಾಳಿಯ ಕೆಲಸಗಾರರು ಮುಂತಾದವರಿಗೆ ಇದು ಅನ್ವಯಿಸೀತು. ಗಾಂಧೀಜಿಯವರು ಈ ಶ್ಲೋಕದಿಂದ ಸ್ವಲ್ಪ ಅಕ್ಷರಾರ್ಥವನ್ನೂ ತೆಗೆದುಕೊಳ್ಳಲು ಯತ್ನಿಸಿದ್ದಾರೆ. "ಸಾಮಾನ್ಯ ಜನರು ರಾತ್ರಿಯ ವೇಳೆಯನ್ನು ವಿಲಾಸ ಮೊದಲಾದವುಗಳಲ್ಲಿ ಕಳೆದು ಬೆಳಗಿನ ಸಮಯದಲ್ಲಿ ನಿದ್ದೆ ಹೋಗುತ್ತಾರೆ. ಆದರೆ ಸಂಯಮಿ ಪುರುಷ ರಾತ್ರಿ ನಿದ್ದೆ ಮಾಡುತ್ತಾನೆ, ಬೆಳಗಿನ ಜಾವದಲ್ಲಿ ಎದ್ದು ಮನನ ಚಿಂತನಾದಿಗಳನ್ನು ಮಾಡುತ್ತಾನೆ" ಎಂಬ ಉಪಯುಕ್ತ ಅಕ್ಷರಾರ್ಥವನ್ನು ಅವರು ಹಿಂಡಿ ತೆಗೆದಿದಾರೆ. ಆದರೆ ಅವರೂ ಈ ಅಕ್ಷರಾರ್ಥಕ್ಕೆ ಪ್ರಾಮುಖ್ಯವನ್ನು ಕೊಟ್ಟಿಲ್ಲ. ಈ ಶ್ಲೋಕದ ಸೂಕ್ಷ್ಮ ಲಾಕ್ಷಣಿಕ ಅರ್ಥವನ್ನು ತೆಗೆದುಕೊಳ್ಳಬೇಕೆಂಬುದನ್ನು ಅವರೂ ಬಲ್ಲರು. ಹಾಗೆ ಅವರು ಮುಂದೆ ತಮ್ಮ ಪದ್ಧತಿಯಿಂದ ಮಾಡಿಯೂ ಇದಾರೆ.

ಈ ಶ್ಲೋಕದಲ್ಲಿರುವ ರೂಪಕದಲ್ಲಿ ಸ್ಥಿತಪ್ರಜ್ಞನ ಜೀವನ ದೃಷ್ಟಿಯನ್ನು ಸ್ಪಷ್ಟಗೊಳಿಸಿದಾರೆ. ಸ್ಥಿತಪ್ರಜ್ಞನ ಜೀವನ ದೃಷ್ಟಿ, ಅಜ್ಞಜನರ

ಜೀವನ ದೃಷ್ಟಿ – ಇವುಗಳಲ್ಲಿ ಬಲು ದೊಡ್ಡ ಭೇದವಿದೆ. ಎರಡು ಸಮಾಂತರ ರೇಖೆಗಳಿಗೆ ಎಲ್ಲಿಯೂ ಸ್ಪರ್ಶಬಿಂದು ಇರದು. ಹಾಗಿದೆ ಈ ಎರಡು ಜೀವನದೃಷ್ಟಿಗಳ ಸ್ಥಿತಿ. ಸ್ಥಿತಪ್ರಜ್ಞನ ದೃಷ್ಟಿಯು ಪಲ್ಲಟವಾಗಿರುತ್ತದೆ. ಮೀರಾಬಾಯಿ ಹೇಳುವಂತೆ 'ಉಲಟ್ ಭಾಯೀ ಮೋರೀ ನಯಿನನಕೀ' ಆಗುತ್ತದೆ ಅವನ ಸ್ಥಿತಿ. ವಸ್ತುತಃ ಆತನ ದೃಷ್ಟಿ ಪಲ್ಲಟವಾಗದು ; ಸಹಜವಾಗಿ ಇರುತ್ತದೆ. ಪ್ರಪಂಚದ ದೃಷ್ಟಿಯೆ ತಿರುಗಿರುತ್ತದೆ. ಆದರೆ ಅದು ಬಹುಸಂಖ್ಯ ಜನರ ದೃಷ್ಟಿಯಾದ್ದರಿಂದ ಅದೇ ಸರಿಯಾದ ದೃಷ್ಟಿಯೆಂದು ತಿಳಿಯಲ್ಪಡುತ್ತದೆ. ಬಹುಸಂಖ್ಯೆಗೇಕೆ ಹೆಸರಿಡಬೇಕೆಂದು ಮೀರಾಬಾಯಿ ತನ್ನ ದೃಷ್ಟಿಯೆ ತಿರುಗಿದೆ ಎಂದಳು. ಮೂಲಜೀವನದೃಷ್ಟಿಗಳಲ್ಲಿಯೆ ಭೇದವಿದ್ದರೆ ಜೀವನದಲ್ಲಿ ಎಲ್ಲ ಕ್ರಿಯೆಗಳಲ್ಲಿಯೂ ಭೇದ ಉಂಟಾಗಿ ತೀರುತ್ತದೆ.

### ೧೨೭. ಉದಾ:—ಆಹಾರ

ಆಹಾರ ಶರೀರಧಾರಣೆಗೆ ಆವಶ್ಯಕ. ಸಾಮಾನ್ಯ ಮನುಷ್ಯ ತಿನ್ನುತ್ತಾನೆ, ಸ್ಥಿತಪ್ರಜ್ಞ ಉಪವಾಸ ಮಾಡುತ್ತಾನೆ ಎಂಬುದೇನು ಇಲ್ಲ. ಸ್ಥಿತಪ್ರಜ್ಞನೂ ಊಟ ಮಾಡುತ್ತಾನೆ. ಇಬ್ಬರ ಬಾಹ್ಯ ಕ್ರಿಯೆಗಳೂ ಸಮಾನ. ಆದರೆ ವೃತ್ತಿ, ವಿಚಾರ, ಭಾವನೆಗಳು ಸಮಾನವಾಗಿರವು. ಸ್ಥಿತಪ್ರಜ್ಞನ ಊಟ ಯಜ್ಞ; ಶರೀರಧಾರಣೆಗೋಸ್ಕರ ತಟಸ್ಥಭಾವದಿಂದ ಮಾಡಬೇಕಾದ ಕ್ರಿಯೆ. ಉಪನಿಷತ್ತುಗಳ, ಶಂಕರಾಚಾರ್ಯರ ಭಾಷೆಯಲ್ಲಿ ಹೇಳುವುದಾದರೆ ಅದೊಂದು 'ಔಷಧ'. ಗಾಂಧಿಯವರ ಭಾಷೆಯಲ್ಲಿ ಹೇಳುವುದಾದರೆ, ನಾವಿರುವ ಮನೆಗೆ ಬಾಡಿಗೆಯನ್ನು ಕೊಡುವಂತೆ ಅದೊಂದು ಬಾಡಿಗೆ. ಅಥವಾ ವೈಜ್ಞಾನಿಕರು ಹೇಳುವಂತೆ ಯಂತ್ರದಿಂದ ಕೆಲಸ ಮಾಡಿಸಿಕೊಳ್ಳುವುದಾದರೆ ಅದಕ್ಕೆ ಎಣ್ಣೆ ಕುಡಿಸಬೇಕು ಎಂಬಂತೆ. ಶರೀರದ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳಲು, ಅದನ್ನು ಕಾರ್ಯಕ್ಷಮಗೊಳಿಸಲು, ಅದಕ್ಕೆ ಆಹಾರವನ್ನು ಕೊಡುತ್ತಾನೆ. ಅದರಲ್ಲಿ ಭೋಗವೃತ್ತಿ ಇರದು. ಉಳಿದವರ ಊಟದಲ್ಲಿ ಭೋಗ, ಆನಂದ, ಉತ್ಸಾಹ ಇರುತ್ತದೆ. ಅದಕ್ಕೋಸ್ಕರ ಎಷ್ಟೊಂದು ಬುದ್ಧಿ, ಕಾಲ, ಶ್ರಮ ವೆಚ್ಚ ಮಾಡುತ್ತಾರೆ. ಎಂಥ ಪ್ರಚಂಡ ಯೋಜನೆ, ಸಂಘಟನೆ ಮಾಡುತ್ತಾರೆ. ಅರ್ಧ ಮಾನವಸಮಾಜ—ಎಲ್ಲ ಸ್ತ್ರೀಯರೂ—ಸಾಧಾರಣವಾಗಿ ಈ ಕೆಲಸದಲ್ಲಿಯೇ ತೊಡಗಿರುತ್ತದೆ.

ಇಷ್ಟು ಬೆಳೆದಿದೆ ಭೋಜನದ ಅಟ್ಟಹಾಸ. ಸ್ಥಿತಪ್ರಜ್ಞನದು ಶಾಸ್ತ್ರೀಯ ಭೋಜನ. ಅದರ ಹಿಂದೆ ಗಂಭೀರವಾದ ಉದ್ದೇಶವಿರುತ್ತದೆ. ಉಳಿದವರದು ಭೋಗವು, ಬಾಲಿಶ.

## ೧೨೮. ನಿದ್ರೆಯ ಮಾತೂ ಹೀಗೆಯೆ

ನಿದ್ರೆಯ ಮಾತೂ ಹೀಗೆಯೆ. ಪ್ರಾಣಿಗಳ ಶರೀರಧಾರಣೆಗೆ ಭೋಜನದಂತೆ ನಿದ್ರೆಯೂ ಆವಶ್ಯಕ ಕ್ರಿಯೆ. ಆದರೆ ಉಳಿದ ಪ್ರಾಣಿಗಳು ಮಲಗುವುದೆಂದರೆ ಆಲಸ್ಯದಲ್ಲಿ ಬಿದ್ದುಕೊಳ್ಳುತ್ತವೆ. ಸ್ವಪ್ನಗಳನ್ನು ಭೋಗಿಸುತ್ತವೆ, ಜ್ಞಾನವನ್ನು ಮರೆತಿರುತ್ತವೆ. ಒಂದೊಂದು ರಾತ್ರಿಯೂ ಜ್ಞಾನಕ್ಷಯಕ್ಕೆ ಕಾರಣವಾಗುತ್ತದೆ. ಸ್ಥಿತಪ್ರಜ್ಞನ ನಿದ್ರೆ ನಿರ್ದೋಷ, ನಿಃಸ್ವಪ್ನ. ಆತ ಒಮ್ಮೆ ನಿದ್ರೆ ಮಾಡಿದರೆ ಅಷ್ಟು ಆತನ ವಿಚಾರ ವಿಕಾಸವಾಗುತ್ತದೆ. ಬೀಜ ಭೂಮಿಯಲ್ಲಿ ಮರೆಯಾಗಿರುತ್ತದೆ. ಆದರೆ ಅದು ಮೊಳೆಯುತ್ತಲೇ ಇರುತ್ತದೆ. ಮೊಳಕೆ ಹೊರಗೆ ಬಂದಾಗ ಕಾಣಿಸುತ್ತದೆ. ಅದರಂತೆಯೆ ಹೊಸ ಹೊಸ ವಿಚಾರಗಳಿಗೆ ಆತನ ನಿದ್ರೆಯಲ್ಲಿ ಪೋಷಣೆ ದೊರೆಯುತ್ತಿರುತ್ತದೆ. ಹೀಗೆ ಇತರ ಪ್ರಾಣಿಗಳ ನಿದ್ರೆಗೂ ಸ್ಥಿತಪ್ರಜ್ಞನ ನಿದ್ರೆಗೂ ಭೇದವಿದೆ. ಇತರ ಪ್ರಾಣಿಗಳ ನಿದ್ರೆಯೆಂದರೆ ತಮೋಗುಣದ ಉತ್ಕರ್ಷ. ಈ ನಿದ್ರೆ ಎಲ್ಲಿ, ಯಾವುದರಲ್ಲಿ ಮೂರು ಗುಣಗಳು ಸಾಮ್ಯವನ್ನು ಮುಟ್ಟುತ್ತವೋ, ಮೂಲ ಪ್ರಕೃತಿಗೆ ಬರುತ್ತವೋ ಆ ನಿದ್ರೆ ಎಲ್ಲಿ? ಎರಡೂ ಒಂದೇ ಆಕಾರದವಾಗಿ ತೋರಿದರೇನಾಯ್ತು?

## ೧೨೯. ಸಾಮಾನ್ಯ ವ್ಯವಹಾರದ ವಿಷಯದಲ್ಲಿಯೂ ಹೀಗೆಯೆ

ಸಾಮಾನ್ಯ ವ್ಯವಹಾರದ ವಿಷಯದಲ್ಲಿಯೂ ಹೀಗೆಯೆ. ಮಾನಾಪಮಾನದ ಕಲ್ಪನೆಯ ಮೇಲೆಯೆ ಬಹುಶಃ ಎಲ್ಲ ಸಮಾಜಶಾಸ್ತ್ರವೂ ನೀತಿಶಾಸ್ತ್ರವೂ ರಚಿಸಲ್ಪಟ್ಟಿದೆ. ಆದರೆ ಸ್ಥಿತಪ್ರಜ್ಞನಿಗೆ ಮಾನಾಪಮಾನ ಗೊತ್ತೇ ಇಲ್ಲ. ಸಹಜತೆಯಿಂದ, ಮುಚ್ಚುಮರೆಯಿಲ್ಲದೆ ಮನುಷ್ಯ ಸಹಸಾ ಎಂದೂ ವರ್ತಿಸುವುದಿಲ್ಲ. ಎಲ್ಲೆಲ್ಲಿಯೂ ಶಿಷ್ಟಾಚಾರದ ಹೆಸರಿನಲ್ಲಿ ಅವನ ವರ್ತನೆ ದಂಭಪರಿವೇಷ್ಟಿತವಾಗಿರುತ್ತದೆ. ಅವನ ಜೀವನ ಯಾವಾಗಲೂ ಕೃತ್ರಿಮತೆಯ ದೋಷವುಳ್ಳದಾಗಿರುತ್ತದೆ. ಎಲ್ಲೆಡೆಯಲ್ಲಿಯೂ ಕೃತ್ರಿಮತೆ ಅಥವಾ ದಂಭ ಬೇಕೇ ಬೇಕು. ಸಭೆಯಲ್ಲಿ ಒಂದು ಬಗೆಯ ದಂಭ, ಸಮಾಜದಲ್ಲಿ

ಇನ್ನೊಂದು ಬಗೆಯ ದಂಭ, ಕುಟುಂಬದಲ್ಲಿ ಮತ್ತೊಂದು ಬಗೆಯ ದಂಭ, ಉತ್ಸವದಲ್ಲಿ ಮಗದೊಂದು ಬಗೆಯ ದಂಭ, ಆಟ ನೋಟಗಳಲ್ಲಿ ಮತ್ತೆ ಬೇರೆ ಬಗೆಯ ದಂಭ. ಹೀಗೆ ಎಲ್ಲೆಡೆಯಲ್ಲೂ ದಂಭ, ಕೃತ್ರಿಮತೆ ಅವನ ಜೀವನದಲ್ಲಿ ಇದೆ. ಸ್ಥಿತಪ್ರಜ್ಞನ ವಿಷಯದಲ್ಲಿ ಎಲ್ಲವೂ ಸ್ವಾಭಾವಿಕ, ಸರಲ, ಮುಚ್ಚುಮರೆಯಿಲ್ಲದುದು. ಹೀಗೆ ಅವನ ಸಾಮಾನ್ಯ ವ್ಯವಹಾರಗಳೂ ಸ್ಪಷ್ಟವಾಗಿ ಉಳಿದವರದರ ವ್ಯತಿರೇಕವಾಗಿರುವುದು ಕಾಣಬರುತ್ತದೆ.

೨

### ೧೩೦. ಇಲ್ಲಿಯ ರೂಪಕದ ಭಾಷೆಯಲ್ಲಿ ಸಾಂಖ್ಯಬುದ್ಧಿ, ಯೋಗ ಬುದ್ಧಿ, ಸ್ಥಿತಪ್ರಜ್ಞನ ಲಕ್ಷಣ. ಈ ಮೂರೂ ಸಂಕಲ್ಪಿತವಾಗಿದೆ

ಗೀತೆಯು ರೂಪಕದ ಭಾಷೆಯಿಂದ ನಾವು ಹೀಗೆ ನಮ್ಮ ವಿಚಾರದಿಂದ ಅರ್ಥ ಹೊರಡಿಸಿದರೂ ಗೀತೆ ತಾನೇ ಏನು ಸೂಚಿಸುತ್ತದೆ? ಅದು ಏನನ್ನೂ ಸೂಚಿಸುವುದಿಲ್ಲವೆಂಬಂತೆ ತೋರಬಹುದು. ಕೇವಲ ರೂಪಕದ ಭಾಷೆಯನ್ನು ನುಡಿದು ಸ್ವಸ್ಥವಾಗಿ ಹಾಗೇ ಇಲ್ಲ. ಸ್ಥಿತಪ್ರಜ್ಞನ ಲಕ್ಷಣದ ತರುವಾಯ ಗೀತೆಯ ಎರಡನೆಯ ಅಧ್ಯಾಯವೂ ಸೂತ್ರರೂಪದಿಂದ ಗೀತೆಯೂ ಮುಗಿಯುತ್ತವೆ. ಆದುದರಿಂದ ಆರಂಭದಿಂದ ವಿಸ್ತಾರವಾಗಿ ಹೇಳಿದ ಎಲ್ಲ ವಿಷಯಗಳ ಸಮಾವೇಶವೂ ಈ ಶ್ಲೋಕದಲ್ಲಿ ಮಾಡಲ್ಪಟ್ಟಿದೆ ಎಂದು ತಿಳಿಯಬೇಕು. ಈವರೆಗೆ ಮೊದಲು ನಿರ್ಗುಣ ಸಾಂಖ್ಯಬುದ್ಧಿ, ತರುವಾಯ ತದುಪಕಾರಕವಾದ ಸಗುಣ ಯೋಗಬುದ್ಧಿ, ಕೊನೆಗೆ ಇವೆರಡರ ಪರಿಣತಿಯಾರಲ್ಲಿ ತೋರುವುದೋ ಆ ಸ್ಥಿತಪ್ರಜ್ಞನ ಲಕ್ಷಣಗಳು, ಹೀಗೆ ಮೂರು ವಿಷಯ ಹೇಳಲ್ಪಟ್ಟಿವೆ ಈ ಮೂರೂ ವಿಷಯಗಳ ಸಾರವನ್ನು ಗೀತೆ ಈ ಶ್ಲೋಕದಲ್ಲಿ ರೂಪಕದಿಂದ ಸೂಚಿಸಿದೆ.

### ೧೩೧. ಸಾಂಖ್ಯಬುದ್ಧಿಯ ಸ್ವರೂಪ :– ಆತ್ಮದ ಅಕರ್ತೃತ್ವ, ತದನುಸಾರವಾಗಿ ಪ್ರಸ್ತುತ ಶ್ಲೋಕದ ಮೊದಲನೆಯ ಅರ್ಥ

(೧) ಸಾಂಖ್ಯ ಬುದ್ಧಿಯೆಂದರೆ ಆತ್ಮನ ಸ್ವರೂಪಜ್ಞಾನ. ಆರಂಭದಲ್ಲಿಯೆ ಈ ಜ್ಞಾನವನ್ನು ಮಾಡಿಕೊಳ್ಳುವ ಪ್ರಯತ್ನವೇಕೆ? ಉತ್ತರ—

"ಆತ್ಮದ ಜ್ಞಾನವೆಂದರೆ ಯಾವುದೋ ಬೇರೆಯದರ ಜ್ಞಾನವಲ್ಲ". ನನಗೆ ಸಂಬಂಧಿಸಿದ ಅನ್ಯವಸ್ತುವಲ್ಲ ಆತ್ಮ. ನಾನೇ ಆತ್ಮ. ಅದರ ಸ್ವರೂಪ ಏನೆಂಬುದನ್ನು ಮೊದಲೇ ತಿಳಿವುದು ಅಗತ್ಯ. "ಆತ್ಮ ಸಾಯದು, ಕೊಲ್ಲದು, ಕೊಲ್ಲಿಸದು" ಎಂದು ಗೀತೆ ಹೇಳುತ್ತದೆ. ಮನುಷ್ಯನಿಗೆ ಕ್ರಿಯೆಯ ಸಂಬಂಧ ಮೂರು ವಿಧ ಕರ್ತರಿ, ಕರ್ಮಣಿ, ಹೇತು–ಕರ್ತರಿ ಅಥವಾ ಪ್ರೇರಕ ಈ ಮೂರೂ ಆತ್ಮಕ್ಕೆ ಅನ್ವಯಿಸವು. ಆತ್ಮವು ಕ್ರಿಯೆಯ ಕರ್ತೃವಲ್ಲ, ಕರ್ಮವಲ್ಲ. ಪ್ರೇರಕವೂ ಅಲ್ಲ. ಇಷ್ಟೊಂದು ವ್ಯಾಪಕವಾದ ಅರ್ಥ ಇಲ್ಲಿ ಸೂಚಿತವಾಗಿದೆ. ಮರಣದ ಕ್ರಿಯೆ ಉದಾಹರಣೆಗೋಸುಗ ಹೇಳಲ್ಪಟ್ಟಿದೆ. ಆತ್ಮ ಎಲ್ಲಾ ಕ್ರಿಯೆಗಳಿಂದ ಎಲ್ಲಾ ಬಗೆಯಿಂದಲೂ ಅಸ್ಪೃಷ್ಟನೆಂಬ ಅರ್ಥ. ಶಾಂಕರ-ಭಾಷ್ಯದಲ್ಲಿ ಆತ್ಮದ ಈ ಅಕರ್ತೃತ್ವ ಕನ್ನಡಿಯಂತೆ ಸ್ವಚ್ಛವಾಗಿ ವಿವರಿಸಲ್ಪಟ್ಟಿದೆ. ಆತ್ಮದ ಅಕರ್ತೃ ಸ್ವರೂಪದ ಜ್ಞಾನವು ಪ್ರಕಾಶ ಎನ್ನಬಹುದು. ಇದರ ವಿರುದ್ಧ, ಆತ್ಮವು ಕರ್ತೃ ಎಂದು ತಿಳಿವುದು–ಕತ್ತಲೆ. ಈ ಕತ್ತಲೆಯಲ್ಲಿ ಎಲ್ಲ ಪ್ರಾಣಿಗಳ ಜೀವನವೂ ಇರುವುದು. ಆದರೆ ಸ್ಥಿತಪ್ರಜ್ಞನ ಜೀವನ ಆತ್ಮದ ಪ್ರಕಾಶದಿಂದ ನಿತ್ಯಪ್ರಕಾಶಮಯ. ಇದು ಈ ಶ್ಲೋಕದ ಮೊದಲನೆಯ ಅರ್ಥ. ನಾನು ಕರ್ಮದ ಕರ್ತೃ, ನನ್ನ ಕರ್ಮಗಳು ಒಳ್ಳೆಯವು, ನಾನು ಇಂಥವನ ಮಗ, ಇಂಥ ಸಂಪತ್ತಿನ ಒಡೆಯ, ನಾನು ಇಂಥ ಆಕಾರದವ, ಈ ವಯಸ್ಸಿನವ. ಇಂತಹ ಜಾತಿಯವ ಎಂಬೀ ಮೊದಲಾದ ಭಾವನೆಗಳ ಜಾಳಿಗೆಗಳನ್ನು ತನ್ನ ಸುತ್ತಲು ಸುತ್ತಿಕೊಂಡು ಮನುಷ್ಯ ಅಸಂಖ್ಯ ಕರ್ಮಗಳನ್ನು ತನ್ನ ಮೇಲೆ ಹೇರಿಕೊಳ್ಳುತ್ತಾನೆ. ಆದರೆ ಸ್ಥಿತಪ್ರಜ್ಞ ಇದೆಲ್ಲವೂ ತನಗೆ ಸಂಬಂಧಿಸಿದುದಲ್ಲವೆಂದು ತಿಳಿದು ಸ್ವರೂಪಾವಸ್ಥಾನವೊಂದನ್ನೇ ಧರ್ಮವಾಗಿ ತಿಳಿಯುತ್ತಾನೆ. ಇಬ್ಬರ ಜೀವನಗಳಲ್ಲಿ ಇಷ್ಟೊಂದು ಭೇದವಿದೆ: ಹೀಗಿರುವಾಗ ಇದಕ್ಕೆ ಬೆಳಕು-ಕತ್ತಲೆ ಅಥವಾ ಹಗಲು-ರಾತ್ರಿ ಎನ್ನದಿದ್ದರೆ ಹೇಳಬೇಕಾದರೂ ಏನು?

## ೧೩.೨. ಯೋಗಬುದ್ಧಿಯ ಸ್ವರೂಪ: ಫಲತ್ಯಾಗ

(೧) ಯೋಗಬುದ್ಧಿ:–ಆತ್ಮ ಅಕರ್ತೃವೆಂದು ದೇಹದಿಂದಲೂ ಕರ್ಮವನ್ನು ಬಿಟ್ಟು ಕುಳಿತರೆ, ನೀನು ತಮೋಗುಣದಲ್ಲಿ ಬೀಳುವೆ. ಕರ್ಮಗಳನ್ನು ಮಾಡಿದರೆ ರಜೋಗುಣದಲ್ಲಿ ಬೀಳುತ್ತೀ. ಹೀಗೂ ಸಂಕಟ, ಹಾಗೂ

ಸಂಕಟ. ಆದುದರಿಂದ ಗೀತೆ ಯುಕ್ತಿಯನ್ನು ಯೋಜಿಸಿತು. ಕರ್ತೃತ್ವ ಎಲ್ಲಿ ಗಡುಸಾಗುತ್ತದೊ ಅಲ್ಲೇ ಅದನ್ನು ಮುರಿದು ಹಾಕು. ಕರ್ತೃತ್ವ ಎಲ್ಲಿ ಜೋರು ತೋರಿಸುತ್ತದೆ? ಫಲದ ವಿಷಯದಲ್ಲಿ. "ನಾನು ಕೆಲಸ ಮಾಡಿದೆ, ಆದುದರಿಂದ ನಾನು ವೇತನಕ್ಕೆ ಅಧಿಕಾರಿ". ಹೀಗೆ ಕರ್ತೃತ್ವದ ಅಧಿಕಾರ ಫಲದ ವಿಷಯದಲ್ಲಿ ನೆಟ್ಟಿರುತ್ತದೆ. ಆದುದರಿಂದ ಫಲದ ಮೇಲಿನ ಅಧಿಕಾರ ವನ್ನು ಬಿಡುವುದೆಂದರೆ ಕರ್ತೃತ್ವವನ್ನು ಬಿಟ್ಟಂತೆ. ಫಲಾಶೆಯ ಕೊನೆಯನ್ನು ಕತ್ತರಿಸಿ ಒಗೆದೊಡನೆ ಕರ್ತೃತ್ವದ ಅಭಿಮಾನ ಕಳಚಿಹೋಗುತ್ತದೆ. "ನೀನು ಆತ್ಮದ ಅಕರ್ತೃತ್ವವನ್ನು ಒಪ್ಪಿಕೊಂಡೆ. ಕರ್ಮವೇ ನಿನ್ನದಲ್ಲದ ಬಳಿಕ ಫಲ ಹೇಗೆ ನಿನ್ನದು?" ಎಂದು ಗೀತೆ ಹೇಳುತ್ತದೆ. 'ನಾನು ದೇಹದಿಂದ ಭಿನ್ನನಾದ ಅಕರ್ತೃ' ಎಂಬೀ ಅಭ್ಯಾಸ ಕರ್ಮವನ್ನು ಬಿಡುವುದರಿಂದ ಆಗುವುದಿಲ್ಲ; ಫಲವನ್ನು ಬಿಡುವುದರಿಂದಲೆ ಆಗುತ್ತದೆ. ಆತ್ಮದ ಅಕರ್ತೃತ್ವದ ಅನುಭೂತಿಯ ಆರಂಭ ಕರ್ಮಚ್ಛೇದದಿಂದ ಆಗದು; ಫಲಚ್ಛೇದದಿಂದ ಆಗುತ್ತದೆ. ಹೀಗೆ "ಶಿಶು ವಿಹಾರ" ಪದ್ಧತಿಯಿಂದ ಅಕರ್ತೃತ್ವದ ಅಭ್ಯಾಸದ ಪದಾರ್ಥ ಪಾಠವನ್ನು ಗೀತೆ ಕೊಟ್ಟಿದೆ. ಫಲಾಧಿಕಾರ ಬಿಡು, ಬಳಿಕ ಕರ್ಮ ಬಿಡುವ ಅವಶ್ಯಕತೆಯಿಲ್ಲ. ಸಮಾಜ-ಶಾಸ್ತ್ರದ, ನೀತಿಶಾಸ್ತ್ರದ ದೃಷ್ಟಿಯಿಂದ ನಿನಗೆ ಫಲದಮೇಲೆ ಅಧಿಕಾರವಿದೆ ಆದರೆ ನೀನು ಗೀತೆಯ ಅನುಯಾಯಿ. ಆ ತಾಯಿಯ ಮಗನಾಗುವ ಭಾಗ್ಯ ನಿನಗೆ ದೊರೆತಿದೆ. ಆದುದರಿಂದ ಆ ತಾಯಿಯ ಮಗನಿಗೆ ಅನುರೂಪನಾದ ಫಲತ್ಯಾಗದ ಐಶ್ವರ್ಯ ನಿನಗೆ ದೊರೆತಿದೆ.

### ೧೩೩. ಆನುಷಂಗಿಕ ಚರ್ಚೆ— 'ಮಾ ಫಲೇಷು' ಎಂದರೆ ಫಲದ ವಿಷಯದಲ್ಲಿ ಅಧಿಕಾರವಿಲ್ಲ, ಈ ಅರ್ಥ ತಪ್ಪು.

ಫಲವನ್ನು ಬಿಡುವ ಯುಕ್ತಿಯನ್ನು ಹೇಳುವ ಗೀತೆಯ ವಾಕ್ಯ ಪ್ರಸಿದ್ಧ ವಾಗಿದೆ. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'. ಆದರೆ ಅದರ ಅರ್ಥ ಸರಿಯಾಗಿ ಮಾಡಲ್ಪಡುವುದಿಲ್ಲ. 'ನಿನಗೆ ಕರ್ಮದ ವಿಷಯ ದಲ್ಲಿ ಅಧಿಕಾರವಿದೆ, ಫಲದ ವಿಷಯದಲ್ಲಿ ಇಲ್ಲ' ಎಂದು ಈ ವಾಕ್ಯದ ಅರ್ಥ ಮಾಡಲ್ಪಡುತ್ತದೆ. "ಕರ್ಮದ ಅಧಿಕಾರವಿದ್ದು ಫಲದ ಅಧಿಕಾರವೇಕಿಲ್ಲ?" ಎಂದು ಕೇಳಿದರೆ "ಫಲ ಕೇವಲ ಮನುಷ್ಯನ ಕೈಯಲ್ಲಿಲ್ಲ, ಅನೇಕ ಬಾಹ್ಯ

ಪರಿಸ್ಥಿತಿಗಳನ್ನು ಅವಲಂಬಿಸಿದೆ" ಎಂದು ಉತ್ತರ ಬರುತ್ತದೆ. ಇದು ದೈವವಾದ. ಇದರಲ್ಲಿ ಸ್ವಲ್ಪವೂ ತಥ್ಯವಿಲ್ಲ ಎಂದಲ್ಲ. ಆದರೆ ಅದರಿಂದ ಇಲ್ಲಿಯ ವಿಚಾರದ ಸಿದ್ಧಿಯಾಗದು. ಏಕೆಂದರೆ, ಯಾವ ಕಾರಣದಿಂದ ಫಲ ಮನುಷ್ಯನ ಕೈಯಲ್ಲಿ ಇಲ್ಲವೋ ಅದೇ ಕಾರಣದಿಂದ ಕರ್ಮವೂ ಮನುಷ್ಯನ ಕೈಯಲ್ಲಿಲ್ಲ. ಬಾಹ್ಯ ಪರಿಸ್ಥಿತಿಯನ್ನು ಎರಡೂ ಕೆಲಮಟ್ಟಿಗೆ ಅವಲಂಬಿಸಿವೆ. ಫಲದ ವಿಷಯದಲ್ಲಿರುವ ಸ್ಥಿತಿಯೇ ಕರ್ಮದ ವಿಷಯದಲ್ಲಿಯೂ. ಕರ್ಮದ ವಿಷಯದಲ್ಲಿ ಅಧಿಕಾರವಿದ್ದರೆ ಫಲದ ವಿಷಯದಲ್ಲಿಯೂ ಇದೆ. ಪರಿಪೂರ್ಣ ವಿರಲಿಕ್ಕಿಲ್ಲ. ಅಂಶವೇ ಇರಲಿ, ಅಂತೂ ಇದೆ. ಫಲದ ವಿಷಯದಲ್ಲಿ ಅಧಿಕಾರ ವಿಲ್ಲವೇ, ಕರ್ಮದ ವಿಷಯದಲ್ಲಿಯೂ ಇಲ್ಲ. ಆದುದರಿಂದ ಈ ಅರ್ಥ ಸರಿಯಲ್ಲ.

## ೧೩೪. ಫಲದ ವಿಷಯದಲ್ಲಿ ಅಧಿಕಾರವುಂಟು, ಆದರೆ ಅದನ್ನು ಬಿಡಬೇಕು

ಆದರೆ ಆ ವಾಕ್ಯದ ಅರ್ಥವಾದರೂ ಏನು? ಇಲ್ಲಿ ಸಂಸ್ಕೃತ-ವ್ಯಾಕರಣವನ್ನು ಸ್ವಲ್ಪ ಗಮನಿಸಬೇಕು. ಇಲ್ಲಿ '**ಮಾ ಫಲೇಷು**' ಎಂದಿದೆ. '**ನ ಫಲೇಷು**' ಎಂದಿಲ್ಲ. ವ್ಯಾಕರಣ ನಿಯಮ ಪ್ರಕಾರ '**ಮಾ**' ಶಬ್ದದ ಮುಂದೆ '**ಅಸ್ತಿ**' ಅಥವಾ '**ಭವತಿ**' ಎಂಬ ವರ್ತಮಾನ ಕ್ರಿಯಾಪದ ಬಾರದು. '**ಅಸ್ತು**' ಅಥವಾ '**ಭವತು**' ಎಂಬ ಕ್ರಿಯಾಪದ ಬರುತ್ತದೆ. ತದನುಸಾರವಾಗಿ '**ಕರ್ಮಣಿ ಏವ ತೇ ಅಧಿಕಾರಃ ಅಸ್ತು, ಫಲೇಷು ಮಾ ಅಸ್ತು**' ಎಂದು ಪೂರ್ಣ ವಾಕ್ಯವಾಗುತ್ತದೆ. "ಕರ್ಮದ ವಿಷಯದಲ್ಲಿಯೆ ನಿನಗೆ ಅಧಿಕಾರವಿರಲಿ, ಫಲದ ವಿಷಯದಲ್ಲಿ ಇಲ್ಲದಿರಲಿ" ಎಂದು ಅರ್ಥವಾಗುತ್ತದೆ. ಆದರೆ ವ್ಯಾಕರಣಾನುಸಾರವಾಗಿ ಹೀಗೆ ಅರ್ಥಶೋಧನ ಮಾಡಿದರೂ ಹೇಳಬೇಕಾದುದೇನು? ಇಷ್ಟೇ – "ನಿನಗೆ ಕರ್ಮದಲ್ಲಿ ಅಧಿಕಾರವಿದೆ, ಆದುದರಿಂದ ಫಲದಲ್ಲಿಯೂ ಇದೆ. ಆದರೆ ಕರ್ಮದ ಅಧಿಕಾರವನ್ನು ಮಾತ್ರ ಇಟ್ಟುಕೊ, ಫಲದ ಅಧಿಕಾರವನ್ನು ಬಿಟ್ಟು ಬಿಡು." ಹೀಗೇನು? 'ನಾನು ಕರ್ತೃವಲ್ಲ' ಎಂದು ನಿನ್ನ ತತ್ವಜ್ಞಾನವೇ ಹೇಳುತ್ತದಲ್ಲ ಎನ್ನುತ್ತದೆ. ನೀನು ನಿನ್ನ ಅಕರ್ತೃತ್ವವನ್ನು ಅನುಭವಿಸಬೇಕಾಗಿದ್ದರೆ ಫಲವನ್ನು ತೆಗೆದುಕೊಳ್ಳಬೇಡ

## ೧೩೪. ನೀತಿ-ಶಾಸ್ತ್ರದ ಭೂಮಿಕೆ :— ಕರ್ಮ ಯಾರದೋ ಫಲ ಅವರದು

ಈ ವಿಷಯದಲ್ಲಿ ಸ್ಥಿತಪ್ರಜ್ಞನ ಭೂಮಿಕೆಗೂ ಇತರರ ಭೂಮಿಕೆಗೂ ಬಹಳ ಅಂತರವಿದೆ. 'ಮಾಡುವುದಾದರೆ ಫಲಕ್ಕೋಸುಗವೇ ಮಾಡಿಯೇನು, ಇಲ್ಲದಿದ್ದರೆ ಕರ್ಮವನ್ನೇ ಬಿಟ್ಟೇನು; ತೆಗೆದುಕೊಂಡರೆ ಫಲ ಸಹಿತ ತೆಗೆದು ತೆಗೆದುಕೊಂಡೇನು, ಬಿಟ್ಟರೆ ಕರ್ಮಸಹಿತ ಬಿಟ್ಟೇನು' ಹೀಗೆ ಜನರ ಭೂಮಿಕೆ. ಇಷ್ಟೇ ಇದ್ದರೆ ಉಪಕಾರ. ಆದರೆ ಎಷ್ಟೋ ಜನರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಲು ಬಯಸುತ್ತಾರೆ. "ಕರ್ಮ ಮಾಡದೆಯೆ ಫಲ ದೊರೆತರೆ ಬಲು ಒಳಿತು; ಹಾಗೆ ದೊರೆಯದಿದ್ದರೆ, ಕರ್ಮ ಅನಿವಾರ್ಯವಾದರೆ ಕರ್ಮ ಮಾಡೋಣ, ಆದರೆ ಏನೇ ಆಗಲಿ, ಫಲವನ್ನು ಮಾತ್ರ ಸರ್ವಥಾ ಬಿಡೆ". ಈ ಹೀನವೃತ್ತಿ ಇಂದು ಅಖಿಲ ಪ್ರಪಂಚವನ್ನು ಆವರಿಸಿದೆ. ತಾವು ಪರಿಶ್ರಮ ಮಾಡದೆ ಎರಡನೆಯವರ ಪರಿಶ್ರಮದ ಲಾಭವನ್ನು ಹೇಗೆ ಪಡೆಯಬಹುದೆಂಬುದರ ಯೋಜನೆಯನ್ನು ನಾಲ್ಕಾರು ಕಂಟಕವ್ಯಕ್ತಿಗಳಷ್ಟೇ ಅಲ್ಲ, ರಾಷ್ಟ್ರರಾಷ್ಟ್ರಗಳೇ ಯೋಜಿಸಿವೆ. ನಾಜೀವಾದ, ಫಾಶೀವಾದ, ಪುಂಜೀವಾದ, ಸಾಮ್ರಾಜ್ಯವಾದ ಮೊದಲಾದ ಅನೇಕ ಬಿಟ್ಟಿಕೋರ ವಾದಗಳು ಈ ಹೀನವೃತ್ತಿಯ ಸಮರ್ಥನೆಗೋಸುಗ ರಚಿಸಲ್ಪಟ್ಟಿವೆ. ಈ ಕಾಲದಲ್ಲಿಯೆ ಇಂತಹ ಸ್ಥಿತಿ ಆಗಿದೆ ಎಂದಲ್ಲ. ಇಂದು ಇದು ವಿಶೇಷವಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಪ್ರಾಯಃ ಇದು ಅವ್ಯಾಹತವಾಗಿ ನಡೆದೇ ಬಂದಿದೆ. ಆದುದರಿಂದ ಗೀತೆ ಇಡಿಯ ಹದಿನಾರನೆಯ ಅಧ್ಯಾಯವನ್ನು ಈ ವೃತ್ತಿಯ ನಿಷೇಧಕ್ಕೋಸುಗ, ಅದಕ್ಕೆ ಆಸುರೀ ವೃತ್ತಿಯೆಂದು ಹೆಸರನ್ನು ಕೊಟ್ಟು, ಉಪಯೋಗಿಸಿದೆ. ಈ ಬಗೆಯಾಗಿ ಒಬ್ಬನು ಕರ್ಮ ಮಾಡಬೇಕು, ಇನ್ನೊಬ್ಬ ಅದರ ಫಲವನ್ನು ಒಯ್ಯಬೇಕು, ಹೀಗೆ ಸಮಾಜದಲ್ಲಿ ಪರಿಸ್ಥಿತಿ ಇರುವುದರಿಂದ, 'ಕರ್ಮ ಯಾರದೋ ಫಲ ಅವರದು' ಇಷ್ಟಾದರೂ ಸ್ಥಿತಿ ಉಂಟಾದರೆ ಎಷ್ಟೋ ಸಾಧಿಸಿದಂತೆ ಎಂಬುದು ನೀತಿ-ಶಾಸ್ತ್ರದ, ಸಮಾಜಶಾಸ್ತ್ರದ ಭೂಮಿಕೆ. ಸಮಾಜದಲ್ಲಿ ಯೋಗ್ಯ ಮನುಷ್ಯನದೇ ಪ್ರತಿಷ್ಠೆ ಇರಲಿ. ಯೋಗ್ಯ ಮನುಷ್ಯನಿಗೇ ಫಲ ದೊರೆಯಲಿ ಎಂದು ಸಮಾಜಶಾಸ್ತ್ರ, ನೀತಿಶಾಸ್ತ್ರಗಳ ಆಗ್ರಹ. ಸಮಾಜದ ರೂಢವೃತ್ತಿ

ಯನ್ನು, ಈ ಎರಡೂ ಶಾಸ್ತ್ರಗಳ ಮರ್ಯಾದಿತ ಕ್ಷೇತ್ರವನ್ನು ಕುರಿತು ವಿಚಾರಮಾಡಿದರೆ, ಅವುಗಳಿಗೆ ಈ ಭೂಮಿಕೆ ಇರುವುದು ಯೋಗ್ಯವೇ ಆಗಿದೆ.

## ೧೩೬. ಯೋಗಬುದ್ಧಿಯ ಭೂಮಿಕೆ ಇದಕ್ಕೂ ಉಚ್ಚವಾಗಿದೆ. ತದನುಸಾರವಾಗಿ ಪ್ರಸ್ತುತ ಶ್ಲೋಕದ ಎರಡನೆಯ ಅರ್ಥ

ಆದರೆ ಗೀತೆಯ ಭೂಮಿಕೆ ಇವಕ್ಕೂ ಮೇಲಿನದು. ಆದರಿಂದ ಅದು ಯಾರಿಗಾದರೂ ನಿರುಪಯೋಗಿಯಾಗಿ ತೋರಿದರೆ ತೋರಲಿ. ಆದರೆ ಅದನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕು. "ಕರ್ತೃತ್ವದ ಅಭಿಮಾನದಿಂದ ಮುಕ್ತನಾಗಲು ಫಲವನ್ನು ಈಶ್ವರನಿಗೆ ಅರ್ಪಿಸು, ಸಮಾಜಕ್ಕೆ ಕೊಡು, ಬೇಕಾದರೆ ಅದು ಶೂನ್ಯದಲ್ಲಿ ಹೋಗಲಿ. ಆದರೆ ನೀನು ತೆಗೆದುಕೊಳ್ಳಬೇಡ. ಇತರರು ಹಾಗೆ ಹೇಳುತ್ತಾರೆಂದಲ್ಲ, ನಿನ್ನ ತತ್ತ್ವಜ್ಞಾನವೇ ನಿನಗೆ ಆ ವಿಷಯದಲ್ಲಿ ಅಡ್ಡವಾಗಿ ನಿಲ್ಲುತ್ತದೆ. ಆತ್ಮಕ್ಕೆ ಯಾವ ಕ್ರಿಯೆಯೊಡನೆಯೂ ಸಂಬಂಧವಿಲ್ಲವೆಂದು ನಿನ್ನ ತತ್ತ್ವಜ್ಞಾನ. ಆತ್ಮಕ್ಕೆ ಕ್ರಿಯೆಯ ಸ್ಪರ್ಶವಾಗದಿರಲು ಯುಕ್ತಿಯೆಂದರೆ ಫಲವನ್ನು ಬಿಡುವುದು" ಎಂದು ಗೀತೆ ಹೇಳುತ್ತದೆ. ಈ ತತ್ತ್ವಜ್ಞಾನವೇ ಗೀತೆಯ ನಿಷ್ಕಾಮ ಕರ್ಮಯೋಗದ ಅಡಿಗಲ್ಲು. ಗೀತೆಯ ಆರಂಭ-ಆರಂಭಕ್ಕೆ ಈ ತತ್ತ್ವಜ್ಞಾನದ ಭಾಗ ನಿಷ್ಕಾರಣವಾಗಿ ಬಂದಿದೆ, ಮೊದಲು ಕರ್ಮಯೋಗವನ್ನು ಹೇಳಿದ್ದರೆ ಚೆನ್ನಾಗಿತ್ತು ಎಂದು ಕೆಲವರ ಅಭಿಪ್ರಾಯ. ಈ ಅಭಿಪ್ರಾಯ ಸರಿಯಲ್ಲ. ಗೀತೆಯ ಕರ್ಮಯೋಗ ಆತ್ಮಜ್ಞಾನದ ಮೇಲೆಯೇ ನಿಲ್ಲಬಲ್ಲದು. ಅದು ಕೇವಲ ಕರ್ಮ ಮಾಡಲು ಹೇಳುವುದಿಲ್ಲ. ಫಲವನ್ನು ಬಿಡಲು ಹೇಳುತ್ತದೆ. ಆತ್ಮಜ್ಞಾನದ ಭಾಗವನ್ನು ಬಿಟ್ಟರೆ; ಫಲತ್ಯಾಗದ ತತ್ತ್ವ ನಿಲ್ಲಲಾರದು. ಕೇವಲ ಕರ್ಮತ್ಯಾಗ ಸಂಭವಿಸದು. ಏಕೆಂದರೆ, ನಾನು ಆತ್ಮಸ್ವರೂಪನಾಗಿದ್ದರೂ ಈಗಿನ ಸ್ಥಿತಿಯಲ್ಲಿ ದೇಹದಿಂದ ಬದ್ಧ. ಅಷ್ಟಲ್ಲದೆ ಫಲಯುಕ್ತ ಕರ್ಮವು ಸರಿಹೋಗದು. ಏಕೆಂದರೆ, 'ನಾನು ಅಕರ್ತೃ' ಎಂಬ ಭಾವನೆ ದೃಢವಾಗಿದೆ. ದೇಹವಿದ್ದುದರಿಂದ ಕರ್ಮ ಬಿಡದು. ನಮ್ಮ ತತ್ತ್ವಜ್ಞಾನಕ್ಕೆ ಫಲಯುಕ್ತ ಕರ್ಮ ಸರಿಹೋಗದು. ಈ ಎರಡು ತರ್ಕ ಈ ಬಗೆಯಾಗಿ ಹೋದುದರಿಂದ ಗೀತೆ ಫಲತ್ಯಾಗ-ಪೂರ್ವಕವಾದ ಕರ್ಮಯೋಗದ ಯುಕ್ತಿಯನ್ನು ಹುಡುಕಿದೆ. ಇದನ್ನು

'ಮುರಾರೇಸ್ ತೃತೀಯಃ ಪಂಥಾಃ' ಎಂದು ನೀವು ಕರೆಯಬಹುದು. ಆದರೆ ಯುಕ್ತಿಯ ಪ್ರಮೇಯದಿಂದ ಉಪಪ್ರಮೇಯ—ಹೊರಡುವಂತೆ ಅದೇ ತರ್ಕಶುದ್ಧ ರೀತಿಯಲ್ಲಿ ಆತ್ಮದ ಅಕರ್ತೃತ್ವದಿಂದ ಫಲತ್ಯಾಗದ ಸಿದ್ಧಾಂತ ಹೊರಡುತ್ತದೆ. ಇಂಥ ಕರ್ಮಯೋಗದ ದೃಷ್ಟಿಯಿಂದ "ಯಾ ನಿಶಾ ಸರ್ವಭೂತಾನಾಂ" ಈ ಶ್ಲೋಕದ ಕಡೆಗೆ ನೋಡಲು ಬರುತ್ತದೆ. ಹಾಗೆ ನೋಡಿದರೆ, "ಇತರ ಜನರು ಫಲದ ವಿಷಯದಲ್ಲಿ ಎಚ್ಚತ್ತಿದ್ದಾರೆ, ಕರ್ತವ್ಯದ ವಿಷಯದಲ್ಲಿ ಮಲಗಿದಾರೆ, ಸ್ಥಿತಪ್ರಜ್ಞ ಫಲದ ವಿಷಯದಲ್ಲಿ ಮಲಗಿದಾನೆ, ಕರ್ತವ್ಯದ ವಿಷಯದಲ್ಲಿ ಎಚ್ಚರಿದಾನೆ" ಎಂದು ಅರ್ಥ ಹೊರಡುತ್ತದೆ. ಇದು ಈ ಶ್ಲೋಕದ ಎರಡನೆಯ ಅಭಿಪ್ರೇತ ಅರ್ಥ.

### ೧೩೭. ಸ್ಥಿತಪ್ರಜ್ಞ ಲಕ್ಷಣಾನುಸಾರವಾಗಿ ಪ್ರಸ್ತುತ ಶ್ಲೋಕದ ಮೂರನೆಯ ಅರ್ಥ

(೩) ಸ್ಥಿತಪ್ರಜ್ಞನ ಲಕ್ಷಣಾನುಸಾರವಾಗಿ ಮೂರನೆಯ ಅರ್ಥವೂ ಒಂದಿದೆ. ವಾಸ್ತವವಾಗಿ ಮೂರೂ ಅರ್ಥಗಳು ಮೂಲದಲ್ಲಿ ಸಮಾನ; ಒಂದೇ. ಆದರೆ ಬೇರೆ ಬೇರೆ ಭೂಮಿಕೆಗಳಂತೆ ಬೇರೆ ಬೇರೆ ಅರ್ಥಗಳಾಗುತ್ತವೆ. ಇಂದ್ರಿಯ-ನಿರೋಧ ಸ್ಥಿತಪ್ರಜ್ಞನ ಲಕ್ಷಣವೆಂದು ಹೇಳುವಾಗ ಭೋಗವಾದದಿಂದ ಬುದ್ಧಿನಾಶವಾಗುತ್ತದೆ, ಬುದ್ಧಿ ಸ್ಥಿರವಾಗಲು ಸಂಯಮ ಆವಶ್ಯಕ ಎಂಬುದನ್ನು ಸಿದ್ಧಮಾಡಿದೆವು. ಅದನ್ನನುಸರಿಸಿ ಇಲ್ಲಿ ಸ್ಥಿತಪ್ರಜ್ಞ ಭೋಗದ ವಿಷಯದಲ್ಲಿ ಮಲಗಿದಾನೆ, ಸಂಯಮದ ವಿಷಯದಲ್ಲಿ ಎಚ್ಚರಿದಾನೆ; ಸಾಮಾನ್ಯ ಮನುಷ್ಯನ ಸಂಯಮದ ವಿಷಯದಲ್ಲಿ ಮಲಗಿದಾನೆ, ಭೋಗದ ವಿಷಯದಲ್ಲಿ ಎಚ್ಚರಿದಾನೆ ಎಂಬ ಅರ್ಥ ಯೋಗ್ಯವಾಗುತ್ತದೆ.

### ೧೩೮. ಮೂರೂ ಅರ್ಥಗಳಿಗೆ ಗೀತೆಯ ಶ್ಲೋಕದಲ್ಲಿಯ ಗುರುತುಗಳು

ಹೀಗೆ ಈ ಮೂರು ಅರ್ಥಗಳು ಗೀತೆಯ ರೂಪಕದಿಂದ ಸೂಚಿತವಾಗಿವೆಯೆಂದು ತಿಳಿಯಬೇಕು. ಈ ಸೂಚನೆಯ ಗಮಕಗಳು ಅಥವಾ ಗುರುತುಗಳು ಏನಾದರೂ ಈ ಶ್ಲೋಕದಲ್ಲಿ ದೊರೆಯಬಹುದೊ ಎಂಬುದನ್ನು ನೋಡಹೋದರೆ, 'ಪಶ್ಯತ್, ಮುನಿ, ಸಂಯಮಿ' ಈ ಮೂರು ಶಬ್ದಗಳು ನಮ್ಮ ಲಕ್ಷ್ಯವನ್ನೆಳೆಯುತ್ತವೆ. 'ಪಶ್ಯತ್' ಶಬ್ದದಿಂದ ಸಾಂಖ್ಯಬುದ್ಧಿ ನಿಶ್ಚನಾದ

ಆತ್ಮಜ್ಞಾನಿ; ಮುನಿ ಶಬ್ದದಿಂದ ಯೋಗಬುದ್ಧಿನಿಷ್ಠನಾದ ಕರ್ಮಯೋಗಿ; ಸಂಯಮಿ ಶಬ್ದದಿಂದ ಉಭಯ ಬುದ್ಧಿಗಳಲ್ಲಿ ನುರಿತ, ಈ ಪ್ರಕರಣದಲ್ಲಿ ವರ್ಣಿಸಲ್ಪಟ್ಟ, ಸ್ಥಿತಪ್ರಜ್ಞ ಎಂಬ ಅರ್ಥಗಳು ಲಕ್ಷ್ಯದಲ್ಲಿ ಬರುತ್ತವೆ. ಈ ಮೂರು ಅರ್ಥಗಳನ್ನು ವಿಶೇಷವಾಗಿ ಇಲ್ಲಿ ಸೂಚಿಸಬೇಕಾಗಿದೆ ಎಂಬ ನಿಷ್ಕರ್ಷವೂ ಹೊರಡುತ್ತದೆ. ಆದರೆ ಸ್ಥಿತ-ಪ್ರಜ್ಞನ, ಸಾಮಾನ್ಯ ಜನರ ದೃಷ್ಟಿಗಳು ತೀರ ಭಿನ್ನವಾಗಿರುತ್ತವೆ ಎಂಬುದು ಈ ರೂಪಕದ ಸಾಮಾನ್ಯ ಅರ್ಥವಾಗಿರುವುದರಿಂದ ಈ ವಿಶಿಷ್ಟವಾದ ಮೂರು ಅರ್ಥಗಳನ್ನೇ ತೆಗೆದುಕೊಳ್ಳದೆ ಎಲ್ಲ ಜೀವನವ್ಯಾಪಿಯಾದ ಅರ್ಥವನ್ನೂ ತೆಗೆದುಕೊಳ್ಳಲು ಬರುತ್ತದೆ. ನಾವು ಅದನ್ನೇ ಮೊದಲು ತೆಗೆದುಕೊಂಡಿದ್ದೇವೆ. ಆಳವಾಗಿ ವಿಚಾರಿಸಿದರೆ, ಈ ವಿಶಿಷ್ಟವಾದ ಮೂರು ಅರ್ಥಗಳೂ ಜೀವನವ್ಯಾಪಿಯಾಗಿವೆ ಎಂಬುದು ನಮಗೆ ಗೊತ್ತಾಗುತ್ತದೆ.

## ೧೪ನೆಯ ವ್ಯಾಖ್ಯಾನ

### ೧

### ೧೪೯. ವಿಕಾಸದ ಗುರ್ತಿನ ಇನ್ನೊಂದು ಶ್ಲೋಕ. ಜ್ಞಾನಿ ಸಮುದ್ರದಂತೆ ಎಲ್ಲ ಕಾಮಗಳನ್ನು ಅರಗಿಸಿಕೊಳ್ಳುತ್ತಾನೆ

ಇಂದಿನ ಶ್ಲೋಕದಲ್ಲಿ ಸ್ಥಿತಪ್ರಜ್ಞನ ವರ್ಣನೆಯನ್ನು ಇನ್ನೊಂದು ಬಗೆಯಾಗಿ ಮಾಡಲಾಗಿದೆ. ಮೊದಲು ಶ್ಲೋಕವನ್ನು ತಿಳಿದುಕೊಳ್ಳುವ. **"ಆಪೂರ್ಯಮಾಣಂ ಅಚಲಪ್ರತಿಷ್ಠಂ ಸಮುದ್ರಂ ಯದ್ವತ್ ಆಪಃ ಪ್ರವಿಶಂತಿ, ತದ್ವತ್ ಸರ್ವೇ ಕಾಮಾಃ ಯಂ ಪ್ರವಿಶಂತಿ ಸಃ ಶಾಂತಿಂ ಆಪ್ನೋತಿ"** ಇದೊಂದು ವಾಕ್ಯ, **"ನ ಕಾಮ ಕಾಮೀ"** ಇದು ಎರಡನೆಯ ವಾಕ್ಯ. **"ಆಪೂರ್ಯಮಾಣಂ"** ಎಂದರೆ ಸುತ್ತಲಿಂದಲೂ ಸತತವೂ ತುಂಬಲ್ಪಡುತ್ತಿರುವ, ಅಷ್ಟಾದರೂ ಮೇರೆ ಮೀರದುದು, ತನ್ನ ಪ್ರತಿಷ್ಠೆಯಿಂದ ಚಲಿತವಾಗದುದು. **"ಆಪೂರ್ಯಮಾಣಂ ಅಪಿ, ಅಚಲಪ್ರತಿಷ್ಠ"** ಇಲ್ಲಿ **"ಅಪಿ"** ಶಬ್ದವನ್ನು ಅಧ್ಯಾಹಾರವಾಗಿ ಗ್ರಹಿಸಬೇಕು. "ಸಮುದ್ರ ಹೇಗೆ ಸುತ್ತಲಿಂದಲೂ ಬರುತ್ತಿರುವ ಎಲ್ಲ ನೀರನ್ನೂ ತನ್ನಲ್ಲಿ ಒಳಗೊಂಡರೂ ತನ್ನ ಮೇರೆಯನ್ನು

ಉಲ್ಲಂಘಿಸದೋ ಹಾಗೆ ಸ್ಥಿತಪ್ರಜ್ಞನೂ ಅನೇಕ ಕಾಮಗಳು ಸುತ್ತಲಿಂದಲೂ ಅವನಲ್ಲಿ ಪ್ರವೇಶಿಸುತ್ತಿದ್ದರೂ ವಿಚಲಿತನಾಗನು. ಆದುದರಿಂದ ಅತನಿಗೆ ಶಾಂತಿ ಲಭಿಸುತ್ತದೆ. ಕಾಮಗಳ ಹಿಂದೆ ಓಡುವವನಿಗೆ ಲಭಿಸದು". ಇದು ಈ ಶ್ಲೋಕದ ಅಕ್ಷರಾರ್ಥ. ಶ್ಲೋಕ ಬಲು ಸೊಗಸಾಗಿದೆ ಆದರೆ ಅರ್ಥವಾಗಲು ಸ್ವಲ್ಪ ಬಿಗಿ.

## ೧೪೦. ಕಾಮ ಶಬ್ದದ ಅರ್ಥದ ವಿಶ್ಲೇಷಣ

ಇಲ್ಲಿ ಕಾಮ ಶಬ್ದದ ಅರ್ಥವನ್ನು ಕುರಿತು ಮೊದಲು ವಿಚಾರ ಮಾಡುವ. ಈ ಕಾಮ ಶಬ್ದ ಸ್ಥಿತ-ಪ್ರಜ್ಞನ ಲಕ್ಷಣದಲ್ಲಿ ಒಂದೆಡೆಯಲ್ಲಿ ಏಕವಚನದಲ್ಲಿ ಬಂದಿದೆ. ಉಳಿದೆಡೆಗಳಲ್ಲಿ ಬಹುವಚನದಲ್ಲಿ ಬಂದಿವೆ "ಸಂಗಾತ್ ಸಂಜಾಯತೇ ಕಾಮಃ" ಎಂಬಲ್ಲಿ ಕಾಮ ಶಬ್ದ ಏಕವಚನದಲ್ಲಿದೆ. ಇಲ್ಲಿ ಕಾಮವೆಂದರೆ ಮೂಲ ವಿಕಾರ. ಈ ಮೂಲ ಕಾಮದಿಂದ ಅವಾಂತರ ಕಾಮನೆಗಳು ಹುಟ್ಟುತ್ತವೆ. ಈ ಏಕವಚನದ ಕಾಮ ಶಬ್ದವನ್ನು ಭಾಷಾಂತರಿಸುವ ಶಬ್ದ ಕನ್ನಡದಲ್ಲಿ ಇನ್ನೊಂದಿಲ್ಲ, ಆದುದರಿಂದ ಆ ಶಬ್ದದಿಂದಲೇ ಆ ಅರ್ಥ ವ್ಯಕ್ತಗೊಳಿಸಲ್ಪಡುತ್ತದೆ. ಬಹುವಚನದ ಕಾಮಶಬ್ದ ಆರಂಭದಲ್ಲಿ "ಪ್ರಜಹಾತಿ ಯದಾ ಕಾಮಾನ್" ಎಂಬಲ್ಲಿ, ಕೊನೆಗೆ "ವಿಹಾಯ ಕಾಮಾನ್ ಯಃ ಸರ್ವಾನ್" ಎಂಬಲ್ಲಿ ಒಂದು ಬಗೆಯಿಂದ ಬಂದಿದೆ. ಈ ಯೆರಡೂ ಸ್ಥಳಗಳಲ್ಲಿ ಅದಕ್ಕೆ ಕಾಮನೆಗಳೆಂದು ಅರ್ಥ. ಈ ಕಾಮನೆಗಳು ಮನೋಗತವಾಗಿರುತ್ತವೆ. ಆದುದರಿಂದ ಅವುಗಳ ತ್ಯಾಗ ಶಕ್ಯ; ಇಷ್ಟ. ಅವನ್ನು ತ್ಯಜಿಸಲೇಬೇಕು. ಸ್ಥಿತ-ಪ್ರಜ್ಞ ಅವನ್ನು ತ್ಯಜಿಸಿದಾನೆಂದು ಹೇಳಲ್ಪಟ್ಟಿದೆ. ಇದರ ಹೊರತು ಬೇರೆ ರೀತಿಯಾಗಿ ಬಹುವಚನದ ಕಾಮ ಶಬ್ದ ಪ್ರಸ್ತುತ ಶ್ಲೋಕದಲ್ಲಿಯೆ ಬಂದಿದೆ. "ಕಾಮಾಃ ಯಂ ಪ್ರವಿಶಂತಿ" ಇಲ್ಲಿ ಕಾಮಗಳೆಂದರೆ ಮನೋಗತವಾದ ಕಾಮನೆಗಳಲ್ಲ. "ಕಾಮ್ಯಂತೇ ಇತಿ ಕಾಮಃ" ಯಾವುದರ ವಿಷಯದಲ್ಲಿ ಕಾಮನೆ ಮಾಡಲ್ಪಡುತ್ತದೆಯೋ ಅದು ಕಾಮ. ಈ ವ್ಯುತ್ಪತ್ತಿಯಿಂದ ಕಾಮ ಶಬ್ದದ ಅರ್ಥ ಇಲ್ಲಿ ಬಾಹ್ಯ ವಿಷಯ, ಉಪಭೋಗ ಪದಾರ್ಥ, ವಿಷಯ ಭೋಗ ಎಂದು ಆಗುತ್ತದೆ. "ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ" ಎಂದರೆ ಯಾವ ಯಾವ ವಿಷಯ ಭೋಗಗಳು ಈ ಪ್ರಪಂಚದಲ್ಲಿ ದುರ್ಲಭವೋ ಅವೆಲ್ಲವನ್ನು ನಾನು ನಿನಗೆ

ಕೊಡುತ್ತೇನೆ ಎಂದು ಯಮ ನಚಿಕೇತನಿಗೆ ಪ್ರಲೋಭನವನ್ನು ತೋರಿ ದಾನೆ. ಆ ವಾಕ್ಯದಲ್ಲಿಯ ಕಾಮ ಶಬ್ದದ ಅರ್ಥ "ಬಾಹ್ಯ ಉಪಯೋಗ ವಿಷಯ". ಹಾಗೆಯೇ ಪ್ರಸ್ತುತ ವಾಕ್ಯದಲ್ಲಿಯೂ. ಈ ಬಗೆಯಾಗಿ ಮೂಲ ವಿಕಾರವಾದ 'ಕಾಮ', ಮನೋಗತ 'ಕಾಮನೆ', ತದಾಧಾರಭೂತವಾದ "ಬಾಹ್ಯ ವಿಷಯಗಳ ಭೋಗ" ಎಂದು ಕಾಮ ಶಬ್ದಕ್ಕೆ ಮೂರು ಮುಖ್ಯ ಅರ್ಥಗಳುಂಟು. ಬಾಹ್ಯ ವಿಷಯಗಳು ಕಾಮನೆಗೆ ಆಧಾರಭೂತವೆಂದು ಹೇಳಲು ಕಾರಣವೇನೆಂದರೆ, ಅವುಗಳ ಆಶ್ರಯದಿಂದ ಮನದಲ್ಲಿ ಕಾಮನೆ ಜಾಗೃತವಾಗುತ್ತದೆ. ಮನದಲ್ಲಿ ಕಾಮನೆಗಳು ಹುಟ್ಟಲು ಈ ವಿಷಯಗಳೇ ಕಾರಣವೆಂದಲ್ಲ. ಅವು ಕಾಮನೆಗಳಿಗೆ ನಿಮಿತ್ತವಾಗುತ್ತವೆ. ಅನೇಕ ಜನ್ಮಗಳ ಪೂರ್ವಕರ್ಮ, ಅನೇಕ ಹಳೆ ಹೊಸ ಅನುಭವಗಳು, ಅವುಗಳಿಂದ ಒದಗುವ ಸಂಸ್ಕಾರಗಳು, ಇವೆಲ್ಲವೂ ಮನದಲ್ಲಿಯ ಕಾಮನೆಗಳಿಗೆ ಮೂಲ ಕಾರಣವಾಗಿವೆ. ಅವುಗಳಿಂದಲೆ ಆ ಬಾಹ್ಯ ಪದಾರ್ಥಗಳಿಗೆ ಉಪಭೋಗ್ಯತ್ವ ಅಥವಾ ವಿಷಯತ್ವ ಉಂಟಾಗುತ್ತದೆ.

## ೧೪೧. ಸ್ಥಿತ-ಪ್ರಜ್ಞ ಎಲ್ಲ ಕಾಮಗಳನ್ನು ಅರಗಿಸಿಕೊಳ್ಳುವನೆಂಬುದು ಆತನ ಜ್ಞಾನದ ಗೌರವ

ಸಮುದ್ರದಲ್ಲಿ ಸುತ್ತಲಿಂದಲೂ ನೀರು ನಿರಂತರವೂ ಬಂದು ತುಂಬುತ್ತಿರುವಂತೆ ವಿಶ್ವದಲ್ಲಿಯ ಅನಂತ ವಿಷಯಗಳೂ ಸ್ಥಿತ-ಪ್ರಜ್ಞನಲ್ಲಿ ಪ್ರವೇಶ ಮಾಡುತ್ತಲೇ ಇರುತ್ತವೆ. ಕಣ್ಣಿನ ಮುಂದೆ ಕಣ್ಣಿನ ವಿಷಯಗಳು, ಕಿವಿಯ ಮುಂದೆ ಕಿವಿಯ ವಿಷಯಗಳು ನಿಂತಿರುತ್ತವೆ. ಆದರೆ ಸಮುದ್ರ ಬಂದ ನೀರನ್ನೆಲ್ಲ ತನ್ನ ಸ್ವರೂಪದಲ್ಲಿ ಅಡಗಿಸಿ ಆತ್ಮಸಾತ್ ಮಾಡಿಕೊಳ್ಳುವಂತೆ ಸ್ಥಿತ-ಪ್ರಜ್ಞ ಎಲ್ಲ ವಿಷಯಭೋಗಗಳನ್ನು ತನ್ನ ಸ್ವರೂಪದಲ್ಲಿ ಅರಗಿಸಿಕೊಳ್ಳುತ್ತಾನೆ. ಕಣ್ಣಿಗೆ ಕಾಣಿಸುವ ರೂಪವನ್ನು, ಕಿವಿಗೆ ಕೇಳಿಸುವ ಶಬ್ದವನ್ನು, ಇತರ ಇಂದ್ರಿಯಗಳಿಗೆ ಉಪಲಬ್ಧವಾಗುವ ಅವುಗಳ ವಿಷಯಗಳನ್ನು ಆತ್ಮಸ್ವರೂಪದಲ್ಲಿ ಅವನು ಅರಗಿಸಿಕೊಳ್ಳುತ್ತಾನೆ. ಮನದ ಮೇಲೆ ಅವುಗಳ ಪರಿಣಾಮವನ್ನು ಸ್ವಲ್ಪವೂ ಆಗಗೊಡುವುದಿಲ್ಲ. ಬಾಹ್ಯ ವಿಷಯಗಳ ಪರಿಣಾಮಗಳು ಅನುಕೂಲ ಮತ್ತು ಪ್ರತಿಕೂಲ ಸಂವೇದನಗಳ ರೂಪದಲ್ಲಿ ಮನದ ಮೇಲೆ ಆಗುತ್ತವೆ. ಇದು ಮನದ ಧರ್ಮವಾಗಿರಬಹುದು,

ವಿಷಯಗಳ ಧರ್ಮವಾಗಿರಬಹುದು, ಅಥವಾ ಮನಸ್ಸು ವಿಷಯಗಳೆರಡೂ ಕೂಡಿ ಆದುದರ ಧರ್ಮವಾಗಿರಬಹುದು ; ಏನೇ ಇರಲಿ, ಈ ಬಾಹ್ಯ ವಿಷಯಗಳನ್ನು ಇಲ್ಲದಂತೆ ಮಾಡುವುದು ಶಕ್ಯವಲ್ಲವೆಂಬ ಮಾತು ಮುಖ್ಯ. ಸಂಯಮಶೀಲನು ಎಲ್ಲ ಬಾಹ್ಯ ವಿಷಯಗಳನ್ನು ಇಲ್ಲದಂತೆ ಮಾಡಲು ನಿರ್ಣಯಿಸಿದರೆ, ಇಡಿಯ ಜಗತ್ತಿನ ಪ್ರಲಯವನ್ನೆ ಕೈಕೊಳ್ಳಬೇಕಾಗುತ್ತದೆ. ಅದು ಶಕ್ಯವಿಲ್ಲ. ಅದರ ಆವಶ್ಯಕತೆಯೂ ಇಲ್ಲ. ಹೊರಗಿನ ವಿಷಯಗಳು ಇಂದ್ರಿಯಗಳ ಮುಖಾಂತರವಾಗಿ ಪ್ರವೇಶ ಮಾಡುತ್ತಿದ್ದರೂ ಸ್ಥಿತ-ಪ್ರಜ್ಞನ ಚಿತ್ತದ ಮೇಲೆ ಅವುಗಳ ಪರಿಣಾಮವಾಗುವುದಿಲ್ಲ. ಆತನ ಸ್ಥಿತಿ ಅಚಲ. ಈ ರೀತಿಯಾಗಿ ಇಲ್ಲಿ ಸ್ಥಿತಪ್ರಜ್ಞನ ವೈಭವ ವರ್ಣಿಸಲ್ಪಟ್ಟಿದೆ. ಅವನು ಬಾಹ್ಯ ವಿಷಯಗಳ ತ್ಯಾಗವನ್ನು ಮಾಡಬೇಕಾದುದಿಲ್ಲ. ಹೃದಯದಲ್ಲಿಯ ಕಾಮನೆಗಳನ್ನು ಇಲ್ಲದಂತೆ ಮಾಡಬೇಕು. ಅವನ್ನು ಅವನು ಇಲ್ಲದಾಗಿ ಮಾಡಿಬಿಟ್ಟಿದಾನೆ. ಯಾವ ವಿಷಯದಿಂದಲೂ ದೂರವಾಗಿ ಇರುವ ಆವಶ್ಯಕತೆ ಅವನಿಗಿಲ್ಲ. ಅವನನ್ನು ಎಲ್ಲ ವಿಷಯಗಳ ಸಂತೆಯಲ್ಲಿ ಕುಳ್ಳಿರಿಸಿದರೂ ಅವನು ತನ್ನ ಸ್ಥಿತಿಯಿಂದ ಚಲಿಸುವುದಿಲ್ಲ. "ಹಾಗಾದರೆ ಅವನ ಗ್ರಾಹ್ಯಾಗ್ರಾಹ್ಯ ವಿವೇಕವಾಗಲಿ ನೀತಿ ವಿಚಾರವಾಗಲಿ ನಷ್ಟವಾಗಿದೆಯೆ" ಎಂದು ನೀತಿಶಾಸ್ತ್ರ ಕೇಳಬಹುದು. ಅದಕ್ಕೆ ಉತ್ತರ — ಯಾವ ವಿಷಯವನ್ನು ತೆಗೆದುಕೊಳ್ಳಬೇಕು, ಯಾವ ವಿಷಯವನ್ನು ಬಿಡಬೇಕು ಎಂಬ ನೀತಿ ಸೂತ್ರವನ್ನು ಹೇಳಲು ಈ ಶ್ಲೋಕವಿಲ್ಲ. ಇಲ್ಲಿ ಜ್ಞಾನದ ಮಹಿಮೆಯನ್ನು ವರ್ಣಿಸಲಾಗಿದೆ. ಜ್ಞಾನಿಯ ಗೌರವವನ್ನು ಹಾಡಲಾಗಿದೆ.

೨

## ೧೪೨. ಜ್ಞಾನದ ಗೌರವ, ಜ್ಞಾನದ ಸ್ವರೂಪ, ಇವುಗಳ ನಡುವೆ ಸ್ಥಿತಪ್ರಜ್ಞನ ನೀತಿಸೂತ್ರವಿದೆ

ಸ್ಥಿತ-ಪ್ರಜ್ಞನ ಅಚಲ ಸ್ಥಿತಿಯನ್ನು ಇಬ್ಬಗೆಯಾಗಿ ವರ್ಣಿಸಬಹುದು. ಒಂದೆಡೆಗೆ ಅವನಲ್ಲಿ ಅತ್ಯಂತ ಪರಿಶುದ್ಧ ಕರ್ಮದ ಅಸಂಭವ; ಇನ್ನೊಂದೆಡೆಗೆ ನಿಷಿದ್ಧ ಕರ್ಮದ ಸಂಭವ ; ಒಂದೆಡೆಗೆ ಎಲ್ಲ ಶುಭಾಶುಭ ಕರ್ಮಗಳ ಸಂನ್ಯಾಸ, ಇನ್ನೊಂದೆಡೆಗೆ ಎಲ್ಲ ಶುಭಾಶುಭ ಕರ್ಮಗಳ ಯೋಗ, ಹೀಗೆ

ಎರಡು ತುದಿಗಳನ್ನು ಹೇಳಿ ಸ್ಥಿತಪ್ರಜ್ಞನ ಸ್ಥಿತಿಯನ್ನು ವರ್ಣಿಸಬಹುದು. ಒಂದು ದೃಷ್ಟಿಯಿಂದ ಜ್ಞಾನಿ ಏನನ್ನೂ ಮಾಡನು. ಕೈಯನ್ನೂ ಅಲುಗಾಡಿಸನು. ಒಳಿತಾದ ಕೆಲಸಗಳನ್ನೂ ಮಾಡ ಎಂದು ಹೇಳಬಹುದು. ಇದಕ್ಕೆ ವಿರುದ್ಧವಾಗಿ ಅವನು ತ್ರಿಭುವನಗಳನ್ನು ಬೆಂಕಿಯಿಕ್ಕಬಲ್ಲ ಎಂದೂ ಹೇಳಬಹುದು. ಹೀಗೆ ಹೇಳಬಹುದಾದರೂ ಈಯೆರಡೂ ಹೇಳಿಕೆಗಳಲ್ಲಿ ವಿರೋಧವಿರದು. ಇದೇ ಆತನ ಭೂಮಿಕೆಯ ಮರ್ಮ. ವಿಚಾರಕರ ಇದಿರು ತರ್ಕದಲ್ಲಿ ಈ ವಿಚಿತ್ರವನ್ನು ಕಾಣಬಹುದು. ಉದಾಹರಣೆಗಾಗಿ ಶಂಕರಾಚಾರ್ಯರು ಪ್ರಸಿದ್ಧ ಮುಕ್ತಿವಾದಿಗಳು. ಆದುದರಿಂದ ಸರ್ವ ಕರ್ಮ—ಸಂನ್ಯಾಸವಾದಿಗಳು. ಜ್ಞಾನನಿಷ್ಠನಲ್ಲಿ ಕರ್ಮ ಸಂಭವಿಸುವುದೇ ಇಲ್ಲವೆಂದು ಅವರ ಹೇಳಿಕೆ. ಆದರೆ ಅವರೇ ತಮ್ಮ ಭಾಷ್ಯದಲ್ಲಿ "ಜ್ಞಾನಿ ಎಲ್ಲ ಕರ್ಮಗಳನ್ನು, ನಿಷಿದ್ಧ ಕರ್ಮಗಳನ್ನು ಮಾಡಿಯೂ ಅಕರ್ತನಾಗಿರುತ್ತಾನೆ. "ಸರ್ವ ಕರ್ಮಾಣ್ಯಪಿ ನಿಷಿದ್ಧಾನ್ಯಪಿ ಕುರ್ವಾಣಃ" ಎಂದು ಹೇಳುತ್ತಾರೆ. ಜ್ಞಾನಿ ನಿಜವಾಗಿಯೂ ನಿಷಿದ್ಧ ಕರ್ಮಗಳನ್ನು ಮಾಡುವನೆ ಎಂದು ನೀತಿಶಾಸ್ತ್ರ ಭಾಷ್ಯಕಾರರನ್ನು ಪ್ರಶ್ನಿಸಿದರೆ 'ನಾನು ಈಗ ನೀತಿ-ಅನೀತಿಗಳನ್ನು ಹೇಳುತ್ತಿಲ್ಲ. ಜ್ಞಾನದ ಗೌರವವನ್ನು ವರ್ಣಿಸುತ್ತಿದ್ದೇನೆ' ಎಂದು ಉತ್ತರ ಬರುತ್ತದೆ. ಜ್ಞಾನಿ ಏನು ಮಾಡುತ್ತಾನೆಂದು ನೀವು ಕೇಳಿದರೆ ನನ್ನ ದೃಷ್ಟಿಯಿಂದ ಒಳಿತಾದ ಇಷ್ಟವಾದ ಶುದ್ಧ ಕರ್ಮಗಳನ್ನು ಸಹ ಅವನು ಮಾಡುವುದಿಲ್ಲ. ಅವನು ಅಲುಗಾಡುವುದೇ ಇಲ್ಲ. ಇಲ್ಲಿ ಪುನಃ ನೀತಿಶಾಸ್ತ್ರ "ನೀವು ಮತ್ತೊಂದು ತುದಿಗೇ ಹೋದಿರಲ್ಲ!" ಎಂದು ಅವರನ್ನು ಕೇಳಬಹುದು. ಇದಕ್ಕೆ ಅವರ ಉತ್ತರ—"ನಾನು ಜ್ಞಾನಿಯ ನೀತಿಸೂತ್ರವನ್ನು ಹೇಳಲಿಲ್ಲ. ಜ್ಞಾನದ ಸ್ವರೂಪವನ್ನು ಹೇಳಿದೆ". ಎಂದರೆ ಒಂದು ರೀತಿಯಿಂದ ಜ್ಞಾನದ ಗೌರವವನ್ನು ಹೇಳಲಾಯ್ತು, ಮತ್ತೊಂದು ರೀತಿಯಿಂದ ಜ್ಞಾನದ ಸ್ವರೂಪವನ್ನು ಹೇಳಲಾಯ್ತು. ಸ್ಥಿತಪ್ರಜ್ಞನು ಯಾವ ಕರ್ಮವನ್ನೂ ಮಾಡುವುದಿಲ್ಲವೆಂಬುದು ಆತನ ಜ್ಞಾನದ ಸ್ವರೂಪ. ಆತನನ್ನು ನಿಷಿದ್ಧಕರ್ಮಗಳು ಬಾಧಿಸವೆಂಬುದು ಜ್ಞಾನದ ಗೌರವ. ಸ್ಥಿತಪ್ರಜ್ಞನ ಜ್ಞಾನದ ಸ್ವರೂಪ, ಆತನ ಜ್ಞಾನದ ಗೌರವ ಇವುಗಳ ನಡುವೆ ಸ್ಥಿತಪ್ರಜ್ಞನ ನೀತಿಸೂತ್ರವಿದೆ.

## ೧೪೩. ನಡುವೆ ಎಂದರೆ ಎಲ್ಲಿ ಎಂಬುದು ಆಯಾ ಕಾಲದ ಸಮಾಜದ ಭೂಮಿಕೆಯನ್ನು ಅವಲಂಬಿಸಿದೆ

ನಡುವೆ ಎಂದರೆ ಎಲ್ಲಿ ಎಂಬುದರ ಉತ್ತರವನ್ನು ಹೇಳುವುದು ಕಠಿಣ. ಸಮಾಜ ಮೇಲೆಮೇಲಿನ ಭೂಮಿಕೆಯನ್ನು ಏರುತ್ತ ಹೋದಂತೆ ಸಮಾಜದಲ್ಲಿಯ ಜ್ಞಾನಿಗಳ ವಿಚಾರಗಳೂ ಹೆಚ್ಚು ಹೆಚ್ಚು ಆಳವಾಗುತ್ತ ಹೋಗುತ್ತವೆ. ಒಟ್ಟಿನಲ್ಲಿ ಸಮಾಜದ ಅನುಭವ ಹೆಚ್ಚುತ್ತ ಹೋದಂತೆ ಸ್ಥಿತಪ್ರಜ್ಞನ ಪ್ರಜ್ಞೆಯೂ ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಎಂದರೆ ಅನಾಸಕ್ತಿಯಲ್ಲಿ, ಅಕ್ಷರಶಃ ಮತ್ತು ವ್ಯವಹಾರದ ಭಾಷೆಯಲ್ಲಿ, ಯಾವ ಯಾವ ಕರ್ಮಗಳು ಅರಗುತ್ತವೆ ಎಂಬುದರ ಪ್ರಮಾಣ ಉತ್ತರೋತ್ತರ ಬೇರೆಯಾಗುತ್ತ ಹೋಗುತ್ತದೆ. ಮೊದಲಿಗಿಂತ ಈಗ ಸಮಾಜದ ಪ್ರಗತಿಯಾಗಿದ್ದರೆ ಮೊದಲಿನ ಸ್ಥಿತಪ್ರಜ್ಞರಿಗಿಂತ ಈಗಿನ ಸ್ಥಿತಪ್ರಜ್ಞರು ಹೆಚ್ಚು ಪ್ರಗತರಾಗಿರುತ್ತಾರೆ. ಹೀಗೆ ಹೇಳುವುದು ಸಾಹಸದ ಮಾತಾಗಿ ತೋರಬಹುದು. ಆದರೆ ಯಥಾರ್ಥ ಎಂಬುದು ವಿಚಾರಾಂತ್ಯದಲ್ಲಿ ತಿಳಿಯಬರುತ್ತದೆ. ಸ್ಥಿತಪ್ರಜ್ಞನ ಪ್ರಗತಿಯ ಈ ಭಾಷೆಯನ್ನು ಸ್ಥೂಲ ಅರ್ಥದಿಂದಲೆ ಗ್ರಹಿಸಬೇಕು. ಅಂದರೆ ಅದು ವ್ಯಾವಹಾರಿಕ, ಆಂತರಿಕವಲ್ಲ. ಎಲ್ಲ ಸ್ಥಿತಪ್ರಜ್ಞರ ಆಂತರಿಕ ಕುರುಹು ಒಂದೇ. ಅವರ ಆತ್ಮಸ್ಥಿತಿ ಎಂದೂ ಭಂಗವಾಗದು, ಯಾವಾಗಲೂ ಅವಿಚಲಿತವಾಗಿರುತ್ತದೆ. ಇದೇ ಆ ಕುರುಹು. ಈ ಕುರುಹು ಚಲಿಸದು. ಹೀಗೆ ಕರ್ಮಗಳನ್ನು ಆಚರಿಸುವುದು ಅವರ ನೀತಿ ಸೂತ್ರವಾಗಿರುತ್ತದೆ. ಅದು ಅವರಿಗೇ ಸ್ವಾನುಭವದಿಂದ ಗೊತ್ತಾಗುತ್ತದೆ. ಅದನ್ನು ಎಲ್ಲ ಜನರಿಗೆ ಗೊತ್ತಾಗುವಂತೆ ಸ್ಪಷ್ಟವಾದ ಭಾಷೆಯಲ್ಲಿ ಎಲ್ಲ ಕಾಲಕ್ಕೋಸುಗ ಹೇಳಲಾಗುವುದಿಲ್ಲ.

## ೧೪೪. ಜ್ಞಾನಿಯ ನೀತಿಸೂತ್ರದ ಗ್ರಾಂಥಿಕ ಕಲ್ಪನೆ ಅನರ್ಥಕಾರಕ

ಅನುಭವದ ಆಧಾರವನ್ನು ಬಿಟ್ಟು ಕಲ್ಪನೆಯಿಂದಲೇ ಕೆಲಸವನ್ನು ಸಾಗಿಸಲೆಳಸಿದರೆ ಯಾವುದೂ ಸ್ಪಷ್ಟವಾಗದೆ ಗೊಂದಲ ಏಳುತ್ತದೆ. ಇದಕ್ಕೆ ಉದಾಹರಣೆ ಎಷ್ಟೋ ಭಕ್ತಿಮಾರ್ಗಿಗಳು, ಕರ್ಮಯೋಗವಾದಿಗಳು ಮಾಡಿದ ವಿವೇಚನೆಯಲ್ಲಿ ಕಾಣಬರುತ್ತದೆ. ಭಕ್ತಿಮಾರ್ಗಿಗಳು ಶ್ರೀಕೃಷ್ಣ ವ್ಯಭಿಚಾರಿಯಾಗಿದ್ದನೆಂದು ಹೇಳುವವರೆಗೂ ಧಾರ್ಷ್ಟ್ಯ ತೋರಿದಾರೆ.

ಆತ ಅಲಿಪ್ತನಾಗಿದ್ದನೆಂದು ಅವರು ಹೇಳಿದುದು ಶ್ರೀಕೃಷ್ಣನಿಗೆ ದೊಡ್ಡದೊಂದು ಉಪಕಾರವೇ ಸರಿ! ಶ್ರೀ ಕೃಷ್ಣನ ಅನಾಸಕ್ತಿಯಲ್ಲಿ ಅವನ ತಥಾಕಥಿತವಾದ ವ್ಯಭಿಚಾರವೂ ಅರಗಿದೆ ಎಂದು ಅವರು ಹೇಳಿದುದರಲ್ಲಿ ಅವರು ತಮ್ಮ ಭಕ್ತಿಭಾವನೆಯ ಉತ್ಕಟತೆಯನ್ನು ವ್ಯಕ್ತಗೊಳಿಸಿದಾರೆಂದು ಬೇಕಾದರೆ ಅನ್ನಬಹುದು. ಅವರಂತೆಯೆ ಕೆಲವರು ಕರ್ಮಯೋಗವಾದಿಗಳು *"ಸರ್ವಭೂತಿಂ ಭಗವದ್ ಭಾವ" ನಿಷ್ಠನಾದ ಸ್ಥಿತಪ್ರಜ್ಞ ಹಿಂಸಾತ್ಮಕ ಯುದ್ಧಗಳಲ್ಲಿಯೂ ತೊಡಗಬಲ್ಲನೆಂದು ಪ್ರತಿಪಾದಿಸುತ್ತಾರೆ. ಇದರಲ್ಲಿಯೂ ಅವರು ಸ್ಥಿತಪ್ರಜ್ಞನ ನೀತಿಸೂತ್ರವನ್ನು ಪ್ರಕಟಗೊಳಿಸದೆ ತಮ್ಮ ಕಲ್ಪನೆಯ ವೈಭವವನ್ನೇ ಪ್ರಕಟಗೊಳಿಸುತ್ತಾರೆ. ಒಬ್ಬನಿಗೆ ಭಾಗವತ ಆಧಾರವಾದರೆ ಇನ್ನೊಬ್ಬನಿಗೆ ಭಾರತ ಆಧಾರ. ಆಧಾರವಿಲ್ಲದೆ ಯಾವನೂ ಮಾತನಾಡುವುದಿಲ್ಲ. ಆದರೆ ಬೇಕಾದುದು ಇಂದಿನ ಸಮಾಜ-ಸ್ಥಿತಿಯಲ್ಲಿ ಈಗಿನ ಕ್ಷಣಕ್ಕೆ ಆಗುತ್ತಿರುವ ಸ್ವಾನುಭವದ ಆಧಾರ. ಈ ಅನುಭವದಿಂದ ಯಾರಾದರೂ ಏನನ್ನಾದರೂ ನುಡಿದರೆ ಅದುವೆ ಯಥಾರ್ಥವೆಂದು ಹೇಳಬಹುದು. ಆದರೆ ಅದಾದರೂ ಈಗಿನ ಕಾಲದ ಮಟ್ಟಿಗಷ್ಟೇ. ಮುಂದಿನ ಕಾಲದಲ್ಲಿ ಅದು ಬಂಧನಕಾರಕವಾಗಲಾರದು. ಆದರೆ ತ್ರಿಕಾಲಕ್ಕೂ ಅನ್ವಯಿಸುವ ಸ್ಥಿತಪ್ರಜ್ಞರ ಆಂತರಿಕ ಲಕ್ಷಣವನ್ನು, ಆತನ ತ್ರೈಕಾಲಿಕ ನೀತಿಸೂಕ್ತವನ್ನು ಹೇಳುವುದಾದರೆ "ಯಾ ನಿಶಾ ಸರ್ವಭೂತಾನಾಂ" ಎಂಬ ಶ್ಲೋಕದಲ್ಲಿಯ ಪ್ರಮಾಣಗಳನ್ನು ಹೇಳಬಹುದು. ಯಥಾರ್ಥ ವಿವೇಕವು ಆತನ ನೀತಿಸೂತ್ರ.

### ೧೪೫. ಪ್ರಸ್ತುತ ಶ್ಲೋಕವನ್ನು ಇನ್ನೊಂದು ದೃಷ್ಟಿಯಿಂದ ನೋಡಬಹುದು. ಸ್ಥಿತಪ್ರಜ್ಞ ಭಾವಾವಸ್ಥೆಯಲ್ಲಿ ಎಲ್ಲ ಶುಭಗಳನ್ನು ಕಾಣುತ್ತಾನೆ

ಪ್ರಸ್ತುತ ಶ್ಲೋಕದ ಅರ್ಥದ ವಿಷಯದಲ್ಲಿ ಅನೇಕರಿಗೆ ಭಯವೆನಿಸುತ್ತದೆ. ಅನೇಕರಿಗೆ ವಿಶೇಷ ಪ್ರೀತಿಯೆನಿಸುತ್ತದೆ. ಈ ಶ್ಲೋಕದಲ್ಲಿ ವಿಲಕ್ಷಣವಾದ ನೀತಿಸೂತ್ರ ಹೇಳಲ್ಪಟ್ಟಿದೆ. ಈ ರೀತಿಯಲ್ಲಿ ಸ್ಥಿತಪ್ರಜ್ಞ ವರ್ತಿಸಿದರೆ ನೀತಿಯೇ ಹಾರಿಹೋಗುತ್ತದೆಂದು ನೀತಿನಿಷ್ಠರಿಗೆ ಅನಿಸುತ್ತದೆ.

---

* ಸರ್ವ ಪ್ರಾಣಿಗಳಲ್ಲಿ ಭಗವಂತನಿರುವನೆಂಬ ನಂಬಿಗೆ

ಒಮ್ಮೆ ಸ್ಥಿತಪ್ರಜ್ಞನಾದರೆ ಸಮುದ್ರದಂತೆ ಬೇಕಾದುದನ್ನು ಅರಗಿಸಿಕೊಳ್ಳಬಹುದು, ನಡತೆ ಅನಿರ್ಬಂಧವಾಗಬಲ್ಲದು ಎಂದು ಎಷ್ಟೋ ಜನರಿಗೆ ಆ ವಿಷಯದಲ್ಲಿ ಪ್ರೀತಿಯೆನಿಸುತ್ತದೆ. ವಸ್ತುತಃ ಆ ಭೀತಿ--ಆ ಪ್ರೀತಿ ಎರಡೂ ಇಲ್ಲಿ ಅನ್ವಯಿಸುವುದಿಲ್ಲ. ಏಕೆಂದರೆ ಸ್ಥಿತಪ್ರಜ್ಞನಲ್ಲಿ ಎಲ್ಲ ವಿಷಯಭೋಗಗಳು ಪ್ರವೇಶ ಮಾಡುತ್ತಿದ್ದರೂ ಆತ ತಟಸ್ಥನಾಗಿರುತ್ತಾನೆ ಎಂಬ ಮಾತಿನಲ್ಲಿ ಸ್ಥಿತಪ್ರಜ್ಞನ ನೀತಿಸೂತ್ರ ಸೂಚಿತವಾಗದೆ ಅದು ಆತನ ಆತ್ಮಸ್ಥಿತಿಯ ಗೌರವವಾಗಿದೆ ಎಂಬುದನ್ನು ನಾವು ಈಗಲೇ ನೋಡಿದೆವು. ಆದರೆ ಬೇರೆ ರೀತಿಯಿಂದಲೂ ಈ ಶ್ಲೋಕದ ಕಡೆಗೆ ನೋಡಬಹುದು. ಹಾಗೆ ನೋಡಬೇಕೆಂಬುದೇ ಇಲ್ಲಿ ಅಭಿಪ್ರೇತವಿದೆ. ಇಲ್ಲಿ ಸ್ಥಿತಪ್ರಜ್ಞನ ನೀತಿಸೂತ್ರವಿರದೆ ಆತನ ಗೌರವವಿದೆ ಎಂಬುದೇನೋ ನಿಜ. ಆದರೆ ಇಲ್ಲಿ ಆತನ ಭಾವ-ದೃಷ್ಟಿ ಮುಖ್ಯವಾಗಿ ವರ್ಣಿಸಲ್ಪಟ್ಟಿದೆ. ಸ್ಥಿತ-ಪ್ರಜ್ಞನೇನೋ ಒಬ್ಬನೇ. ಆತನ ಭೂಮಿಕೆಗಳು ಬೇರೆ ಬೇರೆ. ಒಂದು ಆತನ ಕರ್ಮಯೋಗದ ಭೂಮಿಕೆ, ಇನ್ನೊಂದು ಧ್ಯಾನಭೂಮಿಕೆ. ಕರ್ಮಭೂಮಿಕೆಯ ಆಚಾರ ಸೂತ್ರ "ಯಾ ನಿಶಾ ಸರ್ವಭೂತಾನಾಂ". ಈ ಸೂತ್ರದಲ್ಲಿ ಹೇಳಲ್ಪಟ್ಟಿದೆ. ಅದರಲ್ಲಿ ಆತನ ಜಾಗೃತ ವಿವೇಕ ಶಕ್ತಿಯ ವರ್ಣನೆ ಇದೆ. ಆತನಿಗೆ ಸತ್-ಅಸತ್‌ಗಳ ಅರಿವು ನಿರಂತರವಾಗಿರುತ್ತದೆ. 'ಸತ್ತ'ನ್ನು ಸ್ವೀಕರಿಸಿ 'ಅಸತ್ತ'ನ್ನು ನಿರಾಕರಿಸುವುದು ಆತನ ಕರ್ಮಯೋಗ ಕಾಲದ ಭೂಮಿಕೆ. ಸಮುದ್ರದ ಉಪಮೆಯ ಶ್ಲೋಕದಲ್ಲಿ ಆತನ ಧ್ಯಾನಯೋಗದ ಭೂಮಿಕೆಯ ಭಾವ ಹೇಳಲ್ಪಟ್ಟಿದೆ. ಇಲ್ಲಿ ಆತನ ಭಾವನೆಯ ವ್ಯಾಪಕತೆ, ಭವ್ಯತೆಗಳ ದರ್ಶನ ಇದೆ. ಆತನ ವಿಶಾಲವೂ ಉದಾರವೂ ಆದ ದೃಷ್ಟಿಯ ವಿಸ್ತಾರದಲ್ಲಿ ಎಲ್ಲ ವಿಶ್ವವೂ ಬರುತ್ತದೆ. ಆತನ ದೃಷ್ಟಿಗೆ ಎಲ್ಲವೂ ಶುಭವಾಗಿ, ಎಲ್ಲವೂ ಪಾವನವಾಗಿ, ಎಲ್ಲವೂ ಮಂಗಲವಾಗಿ ತೋರುತ್ತದೆ.

## ೧೪೬. ಶುಭ + ಅಶುಭ = ಶುಭ. ಏಕೆಂದರೆ ಅಶುಭ = ೦

ವಾಸ್ತವವಾಗಿ ಪ್ರಪಂಚದಲ್ಲಿ ಅಶುಭಕ್ಕೆ ಸ್ವತಂತ್ರ ಅಸ್ತಿತ್ವವೆ ಇಲ್ಲ. ಅಶುಭ ಶುಭದ ಪೃಷ್ಠಿಯೊಳಗಿಂದ ಬರುತ್ತದೆ. ಅಶುಭ ಶುಭದ ಛಾಯೆ. ಛಾಯೆಯಿಂದ ವಸ್ತುವಿನ ವಸ್ತುತ್ವ ಇಲ್ಲದಾಗದು. ಅದರಲ್ಲಿ ವ್ಯತ್ಯಾಸವೂ ಆಗದು. ತದ್ವಿಪರೀತ, ವಸ್ತು ಸ್ಪಷ್ಟವಾಗಿ ಒಡೆದು ಕಾಣಿಸುತ್ತದೆ.

ಬಿಳಿಯ ಕಾಗದದ ಮೇಲೆ ಬಣ್ಣವಿಲ್ಲದೆಯೆ ಚಿತ್ರ ಬರೆಯ ಹೋದರೆ, ಚಿತ್ರವೇ ಮೂಡದು. ಬಿಳೀ ಕಾಗದವಾಗಿಯೇ ಇದ್ದೀತು. ಕೇವಲ ಶುಭ ಅವ್ಯಕ್ತ. ಅದಕ್ಕೆ ಆಕಾರ ಬಾರದು. ಈಶ್ವರನ ಯೋಜನೆಯಲ್ಲಿ ಶುಭ ಕಾಣಬರಲಿ ಎಂದು ಅಶುಭ ಬಂದಿತು. ಮನುಷ್ಯನ ಶಿಕ್ಷೆಗೆ ಬೆಲೆಯಿಲ್ಲ. ಈ ಕಾರಾಗೃಹದಲ್ಲಿ ಐವತ್ತು ಮಂದಿ ಕೈದಿಗಳಿದ್ದಾರೆ. ಅವರ ನೆರಳು ಐವತ್ತು, ನೂರು ಅಥವಾ ನೂರೈವತ್ತು ಆಗಬಹುದು. ಹಾಗಾಗುತ್ತದೆಂದು ಕೈದಿಗಳನ್ನು ಎಣಿಸುವಾಗ ನೂರು, ನೂರೈವತ್ತು ನೆರಳನ್ನು ಯಾರೂ ಎಣಿಸರು. ಏಕೆಂದರೆ ಛಾಯೆಗೆ ಸತ್ವ ಇಲ್ಲ. ಇದು ಅಭಾವ. ಕತ್ತಲೆಯನ್ನು ವರ್ಣಿಸುವಾಗ ಅದನ್ನು ಪ್ರಕಾಶದ ಅಭಾವ ಎನ್ನುತ್ತೇವೆ. ಪ್ರಕಾಶವನ್ನು ಕತ್ತಲೆಯ ಅಭಾವವೆನ್ನುವುದಿಲ್ಲ. ಕತ್ತಲೆ ವಸ್ತುವಲ್ಲ, ಪ್ರಕಾಶ ವಸ್ತು. ಪ್ರಕಾಶವನ್ನು ತೋರಿಸಲು ಕತ್ತಲೆ ಉಪಯೋಗವಾಯಿತು. ಶುಭದ ರೂಪವನ್ನು ತೋರಿಸುವುದೇ ಅಶುಭದ ಕಾರ್ಯ. ಆದುದರಿಂದ ಸ್ಥಿತಪ್ರಜ್ಞನಿಗೆ ಅದರ ಭಯವಿರದು. ರಾವಣ ಅವನ ಪ್ರವೃತ್ತಿಯು ರಾಮಾಂಗಲ್ಯ ಕೆಡಲು ರಾವಣನಾ ಶುಭಕ್ಕೆ ಅಶುಭ ಉಪಕಾರ ಮಾಡಿತು. ಅದು ಶುಭವನ್ನು ಪ್ರಕಟಗೊಳಿಸಿತು. ಸ್ಪಷ್ಟವಾಗಿ ತೋರಿಸಿತು ಎಂದೂ ಅವನು ಎನ್ನಬಹುದು. ಈಶನ ಸರ್ವಾಂಗದ ಭಾವನೆ ಶುಭ-ಅಶುಭ ಮಿಶ್ರವು ಸ್ವೀಕಾರಾರ್ಹವಾಗಿದೆ. ತೋರುತ್ತದೆ "ಶುಭ - ಅಶುಭ - ಶುಭ ಏಕೆಂದರೆ, ಅಶುಭ - ೦" ಎಂದು ಗಣಿತದ ಭಾಷೆಯಲ್ಲಿ ಅದರ ದರ್ಶನವನ್ನು ಹೇಳಬಹುದು. ಹೀಗಿದ್ದರೆ ಈ ಶೂನ್ಯದ ಆವಶ್ಯಕತೆಯಾದರೂ ಏನು? ಇದು ಏಕೆ ಬೇಕು? ಏಕೆಂದರೆ ಅದರಿಂದ ಗಣಿತಶಾಸ್ತ್ರ ಉಂಟಾಯಿತು. ಶೂನ್ಯಕ್ಕೆ ಬೆಲೆಯಿಲ್ಲದಿದ್ದರೂ ಒಂದರ ಮುಂದೆ ಶೂನ್ಯವನ್ನಿಟ್ಟರೆ ಹತ್ತಾಗುತ್ತದೆ. ಅದರ ಸಾಂನಿಧ್ಯದಿಂದ ಒಂದರ ಪ್ರಭೆ ಉಜ್ವಲವಾಗುತ್ತದೆ. ಶುಭದ ಶೋಭೆಯನ್ನು ಹೆಚ್ಚಿಸಿ ಅಶುಭವೂ ಸುಶೋಭಿತವಾದಂತೆ ಆಗಿದೆ.

**೧೪೭. 'ಅಶುಭ ಮಿಥ್ಯೆ, ಸಾಧನ ಮಿಥ್ಯೆ, ಅಶುಭದ ಮರಣ ಮಿಥ್ಯೆ; ಶುಭವು ಒಂದೇ ಸತ್ಯ. ಇದಕ್ಕೆ ಜ್ಞಾನಾವಸ್ಥೆಯೆಂದು ಹೆಸರು.'**

ಈ ತತ್ತ್ವಜ್ಞಾನ ಬಹು ಅನುಕೂಲವಾದುದೆಂದು ಬಗೆದು ಅಶುಭವನ್ನು ಮೋಹಿಸಿ ಯಾವನಾದರೂ ಶುಭಾಶುಭ-ಮಿಶ್ರಣವನ್ನು ಸ್ವೀಕರಿಸಿ

ಹರಿ ಅವನು ಆತ್ಮಹತ್ಯೆಯನ್ನೇ ಮಾಡಿಕೊಂಡನೆಂದು ತಿಳಿಯಬೇಕು. ಅಶುಭ-ಮಿಶ್ರಿತ ಶುಭವೂ ಅಶುಭವೇ. ವಿಷಕಲಸಿದ ಅನ್ನವೂ ವಿಷವೇ. ಆದುದರಿಂದ ನೀತಿಶಾಸ್ತ್ರವನ್ನು ಶುಭಾಶುಭದ ಮಿಶ್ರಣದ ಮೇಲೆ ಕಟ್ಟಬೇಕೆಂಬವನು ಆತ್ಮನಾಶದ ಸಿದ್ಧತೆಯನ್ನೇ ಮಾಡಿಕೊಳ್ಳುತ್ತಾನೆ. ಸ್ಥಿತ-ಪ್ರಜ್ಞನ ದೃಷ್ಟಿ ಹಾಗಿರದು. ಅವನು ಅಶುಭವನ್ನು ಅಶುಭವೆಂದು ಸ್ವೀಕರಿಸುವುದಿಲ್ಲ. ಅಶುಭದ ಮೋಹ ಅವನಿಗೆ ಇಲ್ಲ. ಕೃತಿಯನ್ನು ಮಾಡುವಾಗ ಶುಭಾಶುಭ ವಿವೇಕವನ್ನು ಅವನು ಸರ್ವಥಾ ಬಿಡನೆಂಬುದನ್ನು ನಾವು ನೋಡಿಯೆ ಇದೇವೆ. ಆದರೆ ಅವನ ಕೃತಿಗೂ ದೃಷ್ಟಿಗೂ ಅಂತರವಿದೆ. ಅವನು ಪ್ರಪಂಚದ ಕಡೆ ನೋಡುವ ದೃಷ್ಟಿಗೆ ಪ್ರಪಂಚದಲ್ಲಿ ಅಶುಭದ ದರ್ಶನವೇ ಆಗದು. ಅವನು ಒಳ್ಳೆಯವರೊಡನೆ ಕೆಟ್ಟವರಿಗೂ "ನೀವೆಲ್ಲರೂ ಬನ್ನಿ, ಎಲ್ಲರೂ ನನ್ನವರೇ" ಎನ್ನುತ್ತಾನೆ. ಅವರು "ನಾವು ಅಶುಭರು" ಎಂದರೆ "ನೀವು ನಿಮ್ಮನ್ನು ಅಶುಭರೆಂದುಕೊಳ್ಳುತ್ತೀರಿ, ವಸ್ತುತಃ ನೀವು ಅಶುಭರಲ್ಲ" ಎನ್ನುತ್ತಾನೆ. ಆದರೂ "ನಾವು ಅಶುಭರು ನಾವು ಅಶುಭರು" ಎನ್ನುವವರನ್ನು ಅವನು ಪಾವನಗೊಳಿಸುತ್ತಾನೆ. ಅವನ ಪಾವನ-ದೃಷ್ಟಿಯಿಂದ ಅಶುಭಕ್ಕೆ ಶುಭತ್ವ ಬರುತ್ತದೆ. ಅಶುಭವೆಂಬುದು ಬರೀ ಭ್ರಮೆ. ದೆವ್ವ ಭೂತಗಳಂತೆ ಅಶುಭದ ಸ್ಥಿತಿ. ಮಾಸ್ತರರು ಹುಡುಗನಿಗೆ "ಎಲೊ ದೆವ್ವವಿಲ್ಲ, ಭೂತವಿಲ್ಲ" ಎಂದು ಹೇಳುತ್ತಾರೆ. ಆದರೆ ಹುಡುಗನಿಗೆ ನಂಬುಗೆಯಾಗದು. ಅವನು ಮನೆಯಲ್ಲಿ "ಅಗೊ ಅಲ್ಲಿ ನನಗೆ ದೆವ್ವ ಕಾಣಿಸುತ್ತದೆ ಎನ್ನುತ್ತಾನೆ". ಆಗ ತಾಯಿ "ಕಾಣಿಸುತ್ತದೆಯೆ? ನೋಡು, ನಾನು ಮಂತ್ರದಿಂದ ಅದನ್ನು ಕೊಂದು ಬಿಡುತ್ತೇನೆ" ಎನ್ನುತ್ತಾಳೆ. ತಾಯಿ ಮಂತ್ರದಿಂದ ದೆವ್ವವನ್ನು ಕೊಂದುಬಿಟ್ಟಳೆಂದು ಅವನಿಗೆ ಸಮಾಧಾನವಾಗುತ್ತದೆ. ನೀವೆಲ್ಲರು ಶುಭರು, ಶುದ್ಧರು; ನಿಮ್ಮದೇನೂ ತಪ್ಪಿಲ್ಲ. ನಿಮಗೆ ಏನೂ ಆಗಿಲ್ಲ ಎನ್ನುತ್ತಾನೆ ಜ್ಞಾನಿ. ಇಷ್ಟಾದರೂ ನಮ್ಮದೇನೋ ತಪ್ಪು ಇದೆ ಎನ್ನುವವರಿಗೆ ಅವನು "ತಪ್ಪಿದೆ ಎನಿಸಿದರೆ ಬನ್ನಿ, ನಾನು ಮಂತ್ರ ಹೇಳಿಕೊಡುತ್ತೇನೆ. ಸಾಧನವನ್ನು ಹೇಳಿಕೊಡುತ್ತೇನೆ. ಆದರೆ ನಿಮ್ಮ ಮನಸ್ಸಿನ ಭೂತವನ್ನು ಕೊಲ್ಲಲಷ್ಟೇ ಅದರ ಉಪಯೋಗ." ಅಶುಭ ಮಿಥ್ಯೆ, ಸಾಧನೆ ಮಿಥ್ಯೆ, ಅಶುಭದ ಮರಣ ಮಿಥ್ಯೆ. ಶುಭವು

ಒಂದೇ ಸತ್ಯ. ಪ್ರಪಂಚದಲ್ಲಿ ಶುಭವಲ್ಲದೆ ಬೇರೆ ಏನೂ ಇಲ್ಲ ಎಂಬ ದೃಷ್ಟಿ ಯಾರಿಗೆ ಇದೆಯೋ ಅತನಿಗೆ ಶಾಂತಿ ದೊರೆಯುತ್ತದೆಂದು ಬೇರೆ ಮಾತಿನಲ್ಲಿ ಹೇಳಬೇಕೆ?

# ೧೫ ನೆಯ ವ್ಯಾಖ್ಯಾನ

## ೧

**೧೪೮. ಸ್ಥಿತಪ್ರಜ್ಞ ಲಕ್ಷಣಗಳ ಉಪಸಂಹಾರ. ಸ್ಥಿತಪ್ರಜ್ಞನಿಗೆ ಯಾವ ಕಾಮನೆಯೂ ಇರುವುದಿಲ್ಲ, ಜಿಜೀವಿಷೆ ಇರುವುದಿಲ್ಲ**

**ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।**
**ನಿರ್ಮಮೋ ನಿರಹಂಕಾರಃ ಸ ಶಾಂತಿಂ ಅಧಿಗಚ್ಛತಿ ॥**

"ಎಲ್ಲ ಕಾಮನೆಗಳನ್ನು ಬಿಟ್ಟು ಯಾವ ಪುರುಷನು ನಿಃಸ್ಪೃಹನಾಗಿ ಚರಿಸುತ್ತಾನೋ ಯಾರ ಮಮತೆ ಅಹಂಕಾರಗಳು ಹೋಗಿರುತ್ತವೋ ಅತ ಶಾಂತಿಯನ್ನು ಪಡೆಯುತ್ತಾನೆ". ಇದು ಸ್ಥಿತಪ್ರಜ್ಞ ಪ್ರಕರಣದ ಉಪಸಂಹಾರವಾಕ್ಯ. ಸ್ಥಿತ-ಪ್ರಜ್ಞನ ಲಕ್ಷಣ ಕಾಮನಾ ತ್ಯಾಗದಿಂದ ಆರಂಭವಾಯಿತು. ಇಲ್ಲಿ ಅದರ ಉಪಸಂಹಾರವೂ ಕಾಮನಾ ತ್ಯಾಗದಿಂದಲೇ ಮಾಡಲ್ಪಟ್ಟಿದೆ. ಎಲ್ಲ ಕಾಮನೆಗಳನ್ನು ಬಿಟ್ಟು ಯಾರು ನಿಃಸ್ಪೃಹನಾಗುತ್ತಾನೊ ಅತನಿಗೆ ಶಾಂತಿ ದೊರೆವುದೆಂಬುದು ಅಂತಿಮ ವಾಕ್ಯ. ಸ್ಪೃಹೆಯೆಂದರೆ ವಾಸನೆ. ಅಥವಾ ಕಾಮನೆ. ಕಾಮನೆಗಳು ಮೊದಲೆ ಬಿಡಲ್ಪಟ್ಟವೆ. ಮತ್ತೆ 'ನಿಃಸ್ಪೃಹ' ಎಂದು ಹೇಳಲು ಕಾರಣವೇನು? ಎಲ್ಲ ಕಾಮನೆಗಳನ್ನು ಬಿಟ್ಟರೆ ಸ್ಪೃಹೆಯನ್ನೂ ಬಿಟ್ಟಂತಾಯಿತು. ಮತ್ತೆ 'ನಿಃಸ್ಪೃಹ' ಶಬ್ದವೇಕೆ? "ಎಲ್ಲ ಕಾಮನೆಗಳನ್ನೂ ಸ್ಪೃಹೆಯನ್ನೂ ಬಿಟ್ಟವನು" ಎಂದು ಹೇಳುವುದರಲ್ಲಿ ಪುನರುಕ್ತಿಯಿಲ್ಲ. ಸ್ಪೃಹಾ ಶಬ್ದದಿಂದ ಇಲ್ಲಿ ಮೂಲ "ಅಭಿಲಾಷೆ" ಎಂದರೆ ಜೀವಿಸಬೇಕೆಂಬ ಅಭಿಲಾಷೆ ಹೇಳಲ್ಪಟ್ಟಿದೆ. ಅದರ ವಿಶೇಷ ಉಲ್ಲೇಖವನ್ನು ಬ್ರಾಹ್ಮಣ-ಪರಿವ್ರಾಜಕ-ನ್ಯಾಯದಿಂದ ಮಾಡಲಾಗಿದೆ. ಯಜಮಾನ ಬ್ರಾಹ್ಮಣರಿಗೆ ಆಮಂತ್ರಣವಿತ್ತ. ಊಟದ ವೇಳೆಗೆ 'ಎಲ್ಲ ಬ್ರಾಹ್ಮಣರು ಬಂದರೊ?' ಎಂದು ವಿಚಾರಿಸಿದ. 'ಎಲ್ಲರೂ ಬಂದರು' ಎಂದು

ಉತ್ತರ ಬಂದಿತು. 'ಆ ಸಂನ್ಯಾಸಿಗಳು?' 'ಅವರೂ ಬಂದರು'. ಬ್ರಾಹ್ಮಣರಲ್ಲಿ ಸಂನ್ಯಾಸಿಗಳೂ ಬಂದರು. ಆದರೆ ಸಂನ್ಯಾಸಿಗಳ ವಿಷಯ ವಿಶೇಷ ಆಗತ್ಯವೆಂದು ಪ್ರತ್ಯೇಕವಾಗಿ ಕೇಳಲಾಯ್ತು. ಇದಕ್ಕೆ 'ಬ್ರಾಹ್ಮಣ-ಪರಿವ್ರಾಜಕ-ನ್ಯಾಯ'ವೆಂದು ಹೆಸರು. ಆ ನ್ಯಾಯದಿಂದ ಈ ಶಬ್ದ ಇಲ್ಲಿ ಬಂದಿದೆ. ಅವನ ಎಲ್ಲ ಕಾಮನೆಗಳೂ ಹೋಗಿವೆ ಎಂದು ಹೇಳಿದರೆ "ಜೀವನದ ಕಾಮನೆಯೂ ಹೋಗಿದೆಯೆ?" ಎಂದು ನೀವು ಕೇಳಬಹುದು. "ಹೌದು" ಎಂದು ಅದಕ್ಕೆ ಉತ್ತರ. ಹಾಗಾದರೆ ವಿಶೇಷ ಉಲ್ಲೇಖವೇಕೆ? ಏಕೆಂದರೆ ಎಲ್ಲ ಕಾಮನೆಗಳು ಹೋದರೂ ಜೀವಿಸಬೇಕೆಂಬ ವಾಸನೆ ಉಳಿಯಲು ಶಕ್ಯವಿದೆ. ಆದುದರಿಂದ ಅದನ್ನೂ ಅವನು ಬಿಟ್ಟಿದ್ದಾನೆಂದು ಪ್ರತ್ಯೇಕವಾಗಿ ಹೇಳಬೇಕಾಯ್ತು.

೧೪೯. ಮುಮೂರ್ಷೆಯೂ ಇಲ್ಲ, ಮರಣದ ಭೀತಿಯೂ ಇಲ್ಲ

ಜೀವಿಸಬೇಕೆಂಬ ಇಚ್ಛೆಯನ್ನು ಬಿಡುವನೆಂದರೆ ಸಾಯಲು ಇಚ್ಛಿಸುವನೋ? "ಇಲ್ಲ." ಬದುಕಿರಬೇಕೆಂಬ ಇಚ್ಛೆಯೊಡನೆ ಸಾಯುವ ಇಚ್ಛೆಯನ್ನು ಬಿಡುವನೆಂದು ತಿಳಿಯಬೇಕು. ಆದರೆ ಸಾಯಬೇಕೆಂಬ ಇಚ್ಛೆಯಾರಿಗಾದರೂ ಆಗುತ್ತದೆಯೆ ಎಂದು ಕೇಳಿದರೆ ಬಹಳ ಜನಕ್ಕೆ ಆಗುತ್ತದೆ ಎನ್ನಬಹುದು. ಜನರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಾವು ನೋಡುತ್ತೇವೆ. ಸ್ಥಿತಪ್ರಜ್ಞ ಜೀವನಕ್ಕೆ ಬೇಸತ್ತಿದ್ದಾನೆಂದಲ್ಲ, ಜೀವಿಸಬೇಕೆಂಬ ಇಚ್ಛೆಯೊಡನೆ ಸಾಯುವ ಅಭಿಲಾಷೆಯನ್ನು ಅವನು ಬಿಟ್ಟಿದ್ದಾನೆ. ಇದರಿಂದ ಜೀವನದ ವಿಷಯದಲ್ಲಿಯೇ ಅವನಿಗೆ ಔದಾಸೀನ್ಯ ಉಂಟಾಗಿದೆಯೆಂದು ತಿಳಿಯಲಾಗದು. ಕೆಲವರು ಮುದುಕರು 'ಇನ್ನು ನಮ್ಮದೇನು ಉಳಿದಿದ್ದೆ ಏಕೆ ನಾವು ಬದುಕಿರಬೇಕು' ಎನ್ನುವುದನ್ನು ನಾವು ಕೇಳುತ್ತೇವೆ. ಅವರ ಜೀವನದಲ್ಲಿ ರಸ ಇಲ್ಲದಂತಾಗಿರುತ್ತದೆ. ಆದುದರಿಂದ ಅವರು ಉದಾಸೀನರಾಗಿರುತ್ತಾರೆ. ಸ್ಥಿತಪ್ರಜ್ಞನ ಸ್ಥಿತಿ ಇದರ ವಿರುದ್ಧ. ಜೀವನದ ಅಭಿಲಾಷೆ ಹೋಗಿರುವುದರಿಂದ ಅವನಿಗೆ ಮೃತ್ಯುವಿನ ಭಯ ಇಲ್ಲದಂತಾಗಿರುತ್ತದೆ. ಆದುದರಿಂದ ಅವನಿಗೆ ಜೀವನದಲ್ಲಿ ಕೇವಲ ಆನಂದವೂ ಆಟವೂ ಉಳಿಯುತ್ತದೆ. ಅವನ ಜೀವನ ಲೀಲಾಮಯವಾಗುತ್ತದೆ. ಮುಂದೆ ಗೀತೆಯಲ್ಲಿ ಭಕ್ತರ ಲಕ್ಷಣಗಳನ್ನು ಹೇಳುವಾಗ ಹನ್ನೆರಡನೆಯ ಅಧ್ಯಾಯದಲ್ಲಿ "ತುಷ್ಟೋ ಜ

ರಮನ್ತಿ ಚ” ಎಂದು ಹೇಳಲಾಗಿದೆ. ಅವರು ಸಂತುಷ್ಟರಾಗಿ ಕ್ರೀಡಿಸುತ್ತ ಇರುತ್ತಾರೆ. “ಶುಕಾ ವ್ಲಾಣೀ ಮುಕ್ತಿ ಪರಿಣಿಲೀ ನೇವರೀ। ಅತಾಂ ದೀಸ ಚಾರೀ ಖೇಲೀ ಮೇಲೀ”. ಈ ರೀತಿಯಾಗಿ ಅವರದು ಆನಂದದ ಜೀವನವಾಗಿರುತ್ತದೆ.

**೧೫೦. ಜೀವನದ ಅಭಿಲಾಷೆಯು ನಿಜವಾಗಿ ಮರಣದ ಭೀತಿ. ಅದು ಹೋದೊಡನೆ ಜೀವನ ಆನಂದಮಯವಾಗುವುದು**

ಜೀವನದ ಅಭಿಲಾಷೆಯು ನಿಜವಾಗಿ ಮರಣದ ಭೀತಿ. ಅವು ಒಂದೇ ವಸ್ತುವಿನ ಎರಡು ಮಗ್ಗುಲು. ಯುದ್ಧಕ್ಕೆ ಹೋದ ಸೈನಿಕರು ಯಾವಾಗಲೂ ನಗುತ್ತ ಕುಣಿಯುತ್ತ ಆಟ, ತಮಾಷೆಗಳಲ್ಲಿ ಮಗ್ನರಾಗಿರುತ್ತಾರೆ. ಪಾಸ್ಕಲ್ ಹೇಳುತ್ತಾನೆ: “ಇದಕ್ಕೆ ಕಾರಣ ಅವರ ಕಣ್ಣ ಮುಂದೆ ಮರಣ ಪ್ರತಿಕ್ಷಣದಲ್ಲಿಯೂ ನಿಂತಿರುತ್ತದೆ. ಅದನ್ನು ಮರೆಯಲು ಅವರು ಆನಂದದ ಆಭಾಸವನ್ನು ನಿರ್ಮಿಸುತ್ತಾರೆ. ಬೇರೆ ಸಮಯದಲ್ಲಿಯೂ ಜೀವನದಲ್ಲಿ ಇಂತಹ ಅನುಭವವು ಬರುತ್ತದೆ. ಬೇಕಷ್ಟು ನಗುವ, ಕೆಲೆವ ಜನರನ್ನು ನಾವು ನೋಡುತ್ತೇವೆ. ಅವರ ನಿಕಟ ಪರಿಚಯವಿದ್ದವರಿಗೆ ಅವರಲ್ಲಿ ಅನೇಕರು ಒಳಗೊಳಗೆ ದುಃಖಿಗಳಾಗಿರುವುದು ಕಾಣಬರುತ್ತದೆ. ದುಃಖದ ಶಲ್ಯವನ್ನು ಮರೆಯಲು ಬೇಕೆಂತಲೇ ಅವರು ಹಾಸ್ಯ ವಿನೋದದ ವಾತಾವರಣವನ್ನು ನಿರ್ಮಿಸಲಿಚ್ಛಿಸುತ್ತಾರೆ. ಮನಸ್ಸಿನ ಗ್ಲಾನಿಯನ್ನು ಮುಚ್ಚಲು ಮಾಡಿದ ಪ್ರಯತ್ನ ಅದು. ಮನುಷ್ಯನನ್ನು ಚುಚ್ಚುವ ಎಲ್ಲಕ್ಕೂ ದೊಡ್ಡ ಶಲ್ಯವೆಂದರೆ ಜೀವನಾಭಿಲಾಷೆ. ಅದು ಸಾಯುವವರೆಗೆ ಅಳುಕುತ್ತಲೆ ಇರುತ್ತದೆ. ಸತ್ತ ಬಳಿಕೂ ಅದು ಬೆನ್ನು ಬಿಡದು. ಆದುದರಿಂದ ಅದರ ದುಃಖವನ್ನು ಮರೆಯಲು ಅವನು ಬಗೆಬಗೆಯ ಉತ್ಸವಗಳಿಂದ ಕೃತ್ರಿಮ ಆನಂದದ ವಾತಾವರಣವನ್ನು ಉಂಟುಮಾಡಲು ಪ್ರಯತ್ನಿಸುತ್ತಾನೆ. ಆದರೆ ಜೀವಿಸುವ ವಾಸನೆಯನ್ನೆ ಬಿಟ್ಟವನ ದುಃಖವೆಲ್ಲವೂ ತಾನಾಗಿಯೆ ಇಲ್ಲದಾಗುತ್ತದೆ, ಜೀವನದಲ್ಲಿ ಶಲ್ಯವೇ ಇಲ್ಲದಾಗುತ್ತದೆ. ಎಲ್ಲ ಚಿಂತೆ ಹೋಗುತ್ತದೆ, ಜೀವನವು ಶುದ್ಧವೂ ಆನಂದಮಯವೂ ಆಗುತ್ತದೆ.

**೧೫೧. ‘ಚರತಿ’ ಪದವು ಇದನ್ನೇ ಸೂಚಿಸುತ್ತದೆ.**

ಚಿಕ್ಕ ಮಕ್ಕಳ ಜೀವನದಲ್ಲಿ ಕಾಣಬರುವ ಆನಂದಪ್ರರಹಸ್ಯವಾದರೂ

ಇದೇ. ಅವರಿಗೆ ಜೀವನದ ಚಿಂತೆ ಇರುವುದಿಲ್ಲ. ಇದರ ಕಾರಣ ಅಜ್ಞಾನ. ಅವರಿಗೆ ಯಾವ ಚಿಂತೆಯೂ ಇರುವುದಿಲ್ಲ. ಮಗು ಆಟದಲ್ಲಿ ಮಗ್ನವಾಗಿರುತ್ತದೆ. ಅದಕ್ಕೆ ಹಸಿವು ನೀರಡಿಕೆಗಳ ಅರಿವೂ ಸಹ ಉಳಿವುದಿಲ್ಲ. ಆದರ ಹಸಿವು ನೀರಡಿಕೆಗಳ ಚಿಂತೆ ತಾಯಿಗೆ. ಅದು ಯಾವುದನ್ನೂ ಅರಿಯದು. ಚಿಕ್ಕಮಕ್ಕಳ ಅಜ್ಞಾನ ಮೂಲಕವಾದ ಈ ಸ್ಥಿತಿಯೆ ಸ್ಥಿತಪ್ರಜ್ಞನ ಜ್ಞಾನ ಮೂಲಕವಾದ ಸ್ಥಿತಿ. ಅದೇ ಸ್ಥಿತಿ ಇಲ್ಲಿ ವರ್ಣಿಸಲ್ಪಟ್ಟಿದೆ. 'ಚರತಿ' ಶಬ್ದದ 'ಚರತಿ' ಎಂದರೆ ಆಡುತ್ತಾನೆ, ಕೆಲೆಯುತ್ತಾನೆ, ವಿಹಾರಮಾಡುತ್ತಾನೆ. ಆತನ ಜೀವನದಲ್ಲಿ ದುಃಖವೇ ಇಲ್ಲ. ಪ್ರತಿಜ್ಞೆಯು ಪುನರುಚ್ಚಾರ ನಿಗಮನದಲ್ಲಿ ಮಾಡಲ್ಪಟ್ಟಿರುತ್ತದೆ. 'ಪ್ರಜಹಾತಿ ಯದಾ ಕಾಮಾನ್' ಮೊದಲಾದ ಶ್ಲೋಕಗಳಲ್ಲಿಯ ಪ್ರತಿಜ್ಞೆಯ ಸ್ವರೂಪ ಒಕ್ಕೈಯಲ್ಲ. ಮೂಲ ಪ್ರತಿಜ್ಞೆಯಲ್ಲಿ ಎಲ್ಲ ಕಾಮನೆಗಳನ್ನು ಬಿಡುತ್ತಾನೆ ಎಂದು ಇಷ್ಟೇ ಹೇಳಿಲ್ಲ. ಆತ್ಮದಲ್ಲಿಯೆ ಸಂತುಷ್ಟ ಎಂದು ಎರಡನೆಯ ಲಕ್ಷಣವೂ ಅದರ ಜೊತೆಗೆ ಹೇಳಲ್ಪಟ್ಟಿದೆ. ಪ್ರತಿಜ್ಞೆಯಲ್ಲಿಯ ಈ ಉಭಯ ವಿಧ ಅರ್ಥ ನಿಗಮನದಲ್ಲಿಯೂ ಬರಬೇಕು. ಎಲ್ಲ ಕಾಮನೆಗಳನ್ನು ತೊರೆದ ಬಳಿಕ ತನ್ನ ಆತ್ಮದಲ್ಲಿರುವ ಆನಂದದ ಪ್ರವಾಹದಲ್ಲಿ ಅವನು ಮಗ್ನನಾಗುತ್ತಾನೆ. ಆ ಅರ್ಥ ಇಲ್ಲಿ 'ಚರತಿ' ಶಬ್ದದಿಂದ ಸೂಚಿಸಲ್ಪಟ್ಟಿದೆ. ಹೊರಗಿನ ವಾಸನೆಗಳು ಹೋದವು. ಈಗ ಒಳಗಿನ ಶುದ್ಧ ಆನಂದವೇನುಂಟೋ ಅದು ಉಳಿಯಿತು.

### ೧೫೨. 'ಚರತಿ ಎಂದರೆ 'ವಿಷಯಾನ್ ಚರತಿ' ಎಂದಲ್ಲ

'ಚರತಿ' ಶಬ್ದಕ್ಕೆ ಬೇರೊಂದು ಅರ್ಥ ಸೂಚಿಸಲ್ಪಡುತ್ತದೆ. ಟಿಳಕರು ಆ ಅರ್ಥವನ್ನು ಗೀತಾರಹಸ್ಯದಲ್ಲಿ ವಿವರಿಸಿದಾರೆ ಹಿಂದಿನ ಶ್ಲೋಕ ಒಂದರಲ್ಲಿ 'ವಿಷಯಾನ್ ಚರನ್' ಎಂಬ ಪದಗಳು ಬಂದಿವೆ 'ಚರತಿ' ಶಬ್ದಕ್ಕೆ ಆ ಅರ್ಥ ಮಾಡಬೇಕೆಂದು ಅವರ ಅಭಿಪ್ರಾಯ. 'ಚರತಿ' ಎಂದರೆ ಸಂಯಮ ಪೂರ್ವಕವಾಗಿ ಇಂದ್ರಿಯಗಳ ಯುಕ್ತ ವ್ಯಾಪಾರ ಮಾಡುತ್ತಾನೆ. ಎಂದು ಅರ್ಥವಾಯಿತು. ಈ ಅರ್ಥವೂ ಏನೂ ಅನುಚಿತವಲ್ಲ. ಸ್ಥಿತಪ್ರಜ್ಞ ಇಂದ್ರಿಯಗಳ ವ್ಯವಹಾರಗಳನ್ನೇ ಮಾಡುವುದಿಲ್ಲವೆಂದಲ್ಲ. ಕಣ್ಣುಗಳಿಂದ ನೋಡುವುದು, ಕಿವಿಗಳಿಂದ ಕೇಳುವುದು ಮೊದಲಾದುದು ಆತನಿಗೆ ವರ್ಜ್ಯವಲ್ಲ. ಸೇವೆಗೋಸುಗ ಆತ ಇದೆಲ್ಲವನ್ನು ಮಾಡುತ್ತಾನೆ. ಆದರೆ

ಇಲ್ಲಿ ಹಾಗೆ ಅರ್ಥವನ್ನು ಮಾಡಬೇಕಾದ ಆವಶ್ಯಕತೆ ಇಲ್ಲ. ಏಕೆಂದರೆ ಈ ಶ್ಲೋಕದಲ್ಲಿ ಸ್ಥಿತಪ್ರಜ್ಞನ ಪೂರ್ಣ ವ್ಯಾಖ್ಯೆಯು ನಿಗಮನವಿದೆ. ಆದುದರಿಂದ 'ವಿಷಯಾನ ಚರನ್' ಎಂಬಂತಹ ಅರ್ಥ ಇಲ್ಲಿ ಅಪೇಕ್ಷಿತವಿಲ್ಲ. ಇದಲ್ಲದೆ ಅಲ್ಲಿ 'ಚರನ್' ಎಂಬುದು ಸಕರ್ಮಕ ರೂಪ. ಇಲ್ಲಿ 'ಚರತಿ' ಅಕರ್ಮಕ. ಕರ್ಮದ ಅಧ್ಯಾಹಾರವನ್ನು ನಿಷ್ಕಾರಣವಾಗಿ ಕಲ್ಪಿಸುವುದು ಯೋಗ್ಯವಾಗದು.

## ೧೫೪. 'ಚರತಿ' ಎಂದರೆ ಆಶ್ರಮ ಸಂನ್ಯಾಸವಲ್ಲ

ಸ್ಮೃತಿ-ವಾಕ್ಯವನ್ನನುಸರಿಸಿ ಇನ್ನೂ ಒಂದು ಅರ್ಥವನ್ನು ಮಾಡುತ್ತಾರೆ. ಸಂನ್ಯಾಸಿ ಎಲ್ಲ ಸಂಗವನ್ನು ತೊರೆದು ಯಾವಾಗಲೂ ಅಲೆಯುತ್ತಿರಬೇಕೆಂಬ ವಿಧಾನವನ್ನು ಸ್ಮೃತಿ ಮಾಡಿದೆ. 'ಚರತಿ' ಶಬ್ದದಿಂದ ಅದರ ನೆನಪು ಆಗುತ್ತದೆ. ಸ್ಥಿತಪ್ರಜ್ಞನನ್ನು ಕುರಿತು ಏನಾದರೂ ವಿಧಾನವನ್ನು ಮಾಡಬೇಕೆಂದು ಗೀತೆಯ ಪ್ರವೃತ್ತಿ ಇಲ್ಲ. ಏಕೆಂದರೆ ಸ್ಥಿತಪ್ರಜ್ಞನನ್ನು ಕುರಿತು ವಿಧಾನವನ್ನು ಮಾಡಬೇಕೆಂಬ ಸ್ಥಿತಿಯೆ ಅವನವಲ್ಲ. ಸ್ಮೃತಿಯ ವಿಧಾನ ಆಶ್ರಮ-ಸಂನ್ಯಾಸದ ವಿಷಯವು. ಅದು ಸಾಧಕಾವಸ್ಥೆಗನುಸಾರವಾಗಿಯೆ ಇರುತ್ತದೆ. ವಿವಿಧ ಅನುಭವಗಳನ್ನು ಪಡೆದ ಸಾಧಕ ಅನಾಸಕ್ತನಾಗಿರಬೇಕು, ಒಂದೇ ಎಡೆಯಲ್ಲಿ ಉಳಿದು ಆಸಕ್ತಿಯನ್ನು ಅಂಟಿಸಿಕೊಳ್ಳಬಾರದು, ಸತತವೂ ಅಲೆಯುತ್ತಿರಬೇಕು. ಹೀಗಾದರೆ ಪರಿಗ್ರಹ ಅಂಟುವುದಿಲ್ಲ ಹೀಗಿದೆ ಸ್ಮೃತಿ-ವಿಧಾನ. ಸ್ಥಿತಪ್ರಜ್ಞನ ವಿಷಯದಲ್ಲಿ ಇಂತಹ ವಿಧಾನವನ್ನು ಮಾಡುವವರು ಯಾರು? ಆತನಿಗೆ ವಿಧಾನದ ಆವಶ್ಯಕತೆಯಾದರೂ ಏನು? ಅವನು ತನ್ನ ವಿಧಾನವನ್ನು ತಾನೇ ಬಲ್ಲ. ಇನ್ನು ಇದು ವಿಧಾನವಲ್ಲ, ವರ್ಣನೆ ಎಂದರೆ ಜ್ಞಾನಿಯ ಸ್ಥೂಲ ಚರಿತ್ರೆಯನ್ನು ವರ್ಣಿಸುವ ಪ್ರವೃತ್ತಿ ಗೀತೆಯಲ್ಲಿ ಎಲ್ಲಿಯೂ ಇಲ್ಲ. ಇಂಥ ಸ್ಥೂಲ ಚರಿತ್ರೆಯನ್ನು ಗೀತೆ ಕಲ್ಪಿಸಿಯೂ ಇಲ್ಲ. ಹಾಗಿದ್ದರೂ 'ಚರತಿ' ಶಬ್ದದಿಂದ ಸಂನ್ಯಾಸಾಶ್ರಮ ವಿಷಯಕವಾದ ಸ್ಮೃತಿವಚನದ ನೆನಪಾಗುತ್ತದೆಂದು ಯಾರಾದರೂ ಹೇಳಿದರೆ, ಲಿಂಗವೆಂದು ಯಾರಾದರೂ ಅದನ್ನು ಉಪಯೋಗಿಸಿದರೆ, ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಇಲ್ಲಿ ಆ ಶಬ್ದದ ಅಕ್ಷರಾರ್ಥವನ್ನು ನಾವು ಹಾಗೆ ಮಾಡಗೊಡೆವು.

**೧೫೪. 'ಚರತಿ' ಎಂದರೆ ವಿಹಾರ ಮಾಡುತ್ತಾನೆ ಜ್ಞಾನದೇವನ ಭಾಷೆಯಲ್ಲಿ 'ವಿಚರೇ ವಿಶ್ವ ಹೋಉನೀ । ವಿಶ್ವ ಮಾಜೀ ॥'**

ಇಲ್ಲಿಯಂತೆ ಮುಂದೆ ಭಕ್ತನ ಲಕ್ಷಣಗಳನ್ನು ಹೇಳುವಾಗ 'ಅನಿಕೇತಃ ಸ್ಥಿರಮತಿಃ' ಎಂದು ಒಂದು ಲಕ್ಷಣವನ್ನು ಹೇಳಲಾಗಿದೆ. ಅದರ ಅಕ್ಷರಾರ್ಥವು "ಅವನಿಗೆಲ್ಲಿಯೂ ಮನೆ ಇಲ್ಲ" ಎಂದರೆ 'ಅವನು ಯಾವಾಗಲೂ ಅಲೆಯುತ್ತಿರುತ್ತಾನೆ' ಎಂದು ಆಯಿತು. ಆದರೆ ಈ ಅರ್ಥವನ್ನು ಬೇರೆಗಿರಿಸಿಕೊಂಡು ಜ್ಞಾನದೇವನು ಇದರಿಂದ ಹೊಸ ಸರಸವಾದ ನಿಷ್ಪತ್ತಿಯನ್ನು ಮಾಡಿದ್ದಾನೆ. ಅಖಿಲ ವಿಶ್ವವೇ ಆತನ ಮನೆ. ಆತನು ಮನೆಯೊಳಗನಾಗಿರುವನು. ಅಂತಹ ವಿಹಾರ ಶೀಲತೆಯನ್ನು ಜ್ಞಾನದೇವನು ಇಲ್ಲಿಯೂ ವರ್ಣನೆ ಮಾಡುವಾಗ ತೋರಿಸಿದ್ದಾನೆ. 'ಚರತಿ' ಶಬ್ದದ ಅರ್ಥವನ್ನು 'ವಿಚರೇ ವಿಶ್ವ ಹೋಉನೀ। ವಿಶ್ವ ಮಾಜೀ' ಎಂದು ಅವನು ಇಲ್ಲಿ ಮಾಡಿದ್ದಾನೆ. ಅಕ್ಷರಾರ್ಥವನ್ನು ಬಿಡುವಂತಿಲ್ಲ, ಆದರೆ ಔಚಿತ್ಯವನ್ನು ಬಿಟ್ಟುಕೊಡುವಂತಿಲ್ಲ, ಹೀಗೆ ಕುಶಲತೆಯಿಂದ ಟೀಕೆ ಮಾಡುವ ಜ್ಞಾನದೇವನ ನೈಪುಣ್ಯ ಇಲ್ಲಿ ವ್ಯಕ್ತವಾಗುತ್ತದೆ. ಸಂಸ್ಕೃತದಲ್ಲಿ ಜ್ಞಾನಿಗಳ ಸಂಚಾರಕ್ಕೆ ವಿಹಾರವೆಂಬ ಶಬ್ದವುಂಟು. ನಮ್ಮ ದೇಶದಲ್ಲಿ ಕಾಶಿಯ ಪೂರ್ವಕ್ಕೆ ವಿಹಾರ ಅಥವಾ ಬಿಹಾರ ಎಂಬುದೊಂದು ಪ್ರಾಂತವಿದೆ. ಯಾವನೋ ಒಬ್ಬ ಜ್ಞಾನಿಯ ವಿಹಾರದ ಸ್ಮಾರಕಕ್ಕೋಸುಗ ಒಂದು ಪ್ರಾಂತಕ್ಕೇ ಆತನ ಹೆಸರಿಡುವುದು ಅಪರೂಪ. ಬುದ್ಧದೇವನ ವಿಹಾರದ ಸ್ಮರಣಾರ್ಥವಾಗಿ ಆ ಪ್ರಾಂತಕ್ಕೆ ಧರ್ಮಪ್ರಾಣರಾದ ನಮ್ಮ ಪೂರ್ವಿಕರು 'ಬಿಹಾರ'ವೆಂದು ಹೆಸರನ್ನಿತ್ತರು. ವಿಹಾರವೆಂದರೆ ಸಹಜವಾದ ಆನಂದದಿಂದ ಸಂಚರಿಸುವುದು, ಕ್ರೀಡಿಸುವುದು, ಆಡುವುದು. ಈ ಅರ್ಥಗಳೇ ಇಲ್ಲಿ 'ಚರತಿ' ಶಬ್ದದ ಲಕ್ಷ್ಯವಾಗಿವೆ. ಎಲ್ಲ ಕಾಮನೆಗಳ, ಜೀವನಸ್ಪೃಹೆಯು ನಿರಾಸವಾದ ಬಳಿಕ ಜೀವನ ವಿಹಾರವಾಗುತ್ತದೆ, ಕ್ರೀಡೆಯಾಗುತ್ತದೆ.

**೧೫೫ ಕಾಮನೆಗಳೂ ಜೀವನಾಭಿಲಾಷೆಯೂ ಹೋದ ಬಳಿಕ ದೇಹ ಉಳಿವುದು ಉಪಕಾರಕ್ಕೋಸುಗವೇ. ಇದೇ ಮಾತು 'ನಿರ್ಮಮೋ ನಿರಹಂಕಾರಃ' ಈ ಪದಗಳಿಂದ ಸೂಚಿತವಾಗಿದೆ.**

ಆದರೆ ಯಾವನಿಗೆ ಜೀವನಾಭಿಲಾಷೆಯು ಉಳಿದಿಲ್ಲವೋ ಶರೀರ

ಉಳಿದಿದೆಯೋ ಆತನಿಗೆ ಪ್ರಪಂಚದಲ್ಲಿ ಕಾರ್ಯವಾದರೂ ಏನುಳಿದಿದೆ ಎಂಬ ಪ್ರಶ್ನೆ ಹುಟ್ಟುತ್ತದೆ. ತತ್ತ್ವಜ್ಞಾನದಲ್ಲಿ ಈ ಪ್ರಶ್ನೆ ಯಾವಾಗಲೂ ಮುಂದೆ ಬರುತ್ತದೆ. ಏಕೆಂದರೆ ಕಾರ್ಯವಿಲ್ಲದೆ ಯಾವ ವಸ್ತುವೂ ನಿಲ್ಲಲಾರದೆಂದು ಸಿದ್ಧಾಂತ. ಈ ಪ್ರಶ್ನೆಗೆ ಉತ್ತರವನ್ನು ತುಕಾರಾಮನು ಹೇಳಿದಾನೆ. 'ತುಕಾ ಮ್ಹಣೇ ಆತಾ! ಉರಲೋ ಉಪಕಾರ ಪುರತಾ'. "ಈಗ ಉಳಿದುದು ಉಪಕಾರಕ್ಕಾಗಿ". ಸ್ಥಿತ-ಪ್ರಜ್ಞನ ಸ್ಥಿತಿ ವಿಲಕ್ಷಣ. ಆತನು ವಿಶ್ವಮಯ ನಾಗಿದಾನೆ. ನಾನು ನನ್ನದು ಎಂಬ ಭಾಷೆ ಹೋಗಿದೆ. ಆತ "ಈಗ ನಾನಿಲ್ಲ ನನ್ನದಿಲ್ಲ, ಇರುವುದೆಲ್ಲ ನೀವು ನಿಮ್ಮದು. ನೀವು ಅದನ್ನು ಕಾಯ್ದುಕೊಳ್ಳಿ." ಎನ್ನುತ್ತಾನೆ ಲೋಕಕ್ಕೆ. ಇದೇ ಅರ್ಥ ಮುಂದಿನ ಚರಣದಲ್ಲಿ ಬಂದಿದೆ. 'ನಿರ್ಮಮೋ ನಿರಹಂಕಾರಃ'—ಆತ ಎಲ್ಲ ಪ್ರಾಣಿಗಳಿಗೆ ಉಪಕಾರ ಮಾಡ ಲೆಂದೇ ಜೀವಿಸುತ್ತಾನೆ. ಆದರೆ ಆತನ ದೇಹಕ್ಕೆ ಸಾಮಾಜಿಕ ಕಾರ್ಯ ವಿದ್ದರೂ ಆತನಿಗೆ ಸ್ವಂತ ಸಾಮಾಜಿಕ ಕಾಮನೆ ಇರದು. ಆತನ ಸ್ವಂತದ ಕಾಮನೆ ಇಲ್ಲದಾಗಿ ಸಾಮಾಜಿಕ ಕಾಮನೆ ಉಳಿವುದೆಂದು ತಿಳಿಯ ಲಾಗದು. 'ಎಲ್ಲ ಕಾಮನೆಗಳಲ್ಲಿ' ಸಾಮಾಜಿಕ ಕಾಮನೆಗಳೂ ಬಂದುವು. ಅವನ್ನೂ ಆತ ತ್ಯಜಿಸಿದಾನೆ. ಹಾಗಾದರೆ ಆತನಿಂದ ಸಾಮಾಜಿಕ ಕಾರ್ಯ ಸಂಭವಿಸುವುದು ಹೇಗೆ; ಅದು ಆತನ ಸಾಧಕಾವಸ್ಥೆಯ ಓಘ ದಿಂದ. ಸಾಮಾಜಿಕ ಆವಶ್ಯಕತೆಯ ಪ್ರವಾಹದಿಂದ ಆತನಿಂದ ಸಂಭವಿ ಸುತ್ತದೆ. ಸಾಧಕಾವಸ್ಥೆಯ ಪ್ರೇರಣೆ ಸ್ವಭಾವದೊಡನೆ ಸಮರಸವಾಗಿರು ವುದರಿಂದ ಅದು ಆತನ ಅಭ್ಯಾಸವಾಗಿರುತ್ತದೆ. ಸಮಾಜದ ಆವಶ್ಯಕತೆಯ ಪ್ರವಾಹವೂ ವಹಿಸುತ್ತಿರುತ್ತದೆ. ಆತ ಅದರಿಂದ ಕೆಲಸವನ್ನು ಮಾಡಿಸಿ ಕೊಳ್ಳುತ್ತಾನೆ. ಹೀಗೆ ಆತ ಕೇವಲವಾಗಿ ಪ್ರವಾಹ-ಪತಿತನಾಗಿರುತ್ತಾನೆ. ಈ ಸ್ಥಿತಿಯನ್ನು ಪಡೆದವನಿಗೆ ಶಾಂತಿ ಲಭಿಸುವುದೆಂಬುದರಲ್ಲಿ ಆಶ್ಚರ್ಯ ವಿಲ್ಲ. ಶಾಂತಿಯು ಒಡೆತನ ಆತನಿಗೇ ಸಲ್ಲುತ್ತದೆ. ಏಕೆಂದರೆ, ಅಶಾಂತಿಯ ಎಲ್ಲ ಕಾರಣಗಳೂ ಆತನ ಜೀವನದಿಂದ ಹಾರಿ ಹೋಗಿರು ತ್ತವೆ. ಅಹಂತೆ ಮಮತೆ ಹೋಗಿವೆ, ಶುಭಾಶುಭ ಕಾಮನೆ ಹೋಗಿದೆ, ಜೀವನ ಸ್ಪೃಹೆ ಹೋಗಿದೆ. ಇನ್ನು ಅಶಾಂತಿ ಹೇಗೆ ಉಳಿದೀತು? ಆದು ದರಿಂದ ಶಾಂತಿ ಮಾತ್ರವೇ ಉಳಿಯುತ್ತದೆ.

೪

## ೧೫೬. ಈ ಮೊದಲು ಹೇಳಿದ ಭಾವಾವಸ್ಥೆಯಿಂದಲೂ ಕ್ರಿಯಾವಸ್ಥೆಯಿಂದಲೂ ಭಿನ್ನವಾದ ಸ್ಥಿತಪ್ರಜ್ಞನ ಜ್ಞಾನಾವಸ್ಥೆ ಅವರ್ಣನೀಯವಾದುದು

ಹಿಂದಿನ ಶ್ಲೋಕದಲ್ಲಿ ಸ್ಥಿತಪ್ರಜ್ಞನ ಭಾವಾವಸ್ಥೆ ಹೇಳಲ್ಪಟ್ಟಿತು. ಇಲ್ಲಿ ಅವನ ಜ್ಞಾನಾವಸ್ಥೆ ಹೇಳಲ್ಪಟ್ಟಿದೆ. ಇದು ಆ ಭಾವಾವಸ್ಥೆಯ ವರ್ಣನೆಗೆ ತೀರ ವಿರುದ್ಧವಾಗಿದೆಯೊ ಏನೊ ಎಂಬಂತಿದೆ. ಅಲ್ಲಿ ಶುಭಾಶುಭ ಕಾಮನೆಗಳ ಪ್ರವೇಶವಿದೆ. ಇಲ್ಲಿ ಅವೆರಡಕ್ಕೂ ಪ್ರತಿಬಂಧವಿದೆ. ಜ್ಞಾನಾವಸ್ಥೆಯಲ್ಲಿ ಸ್ಥಿತಪ್ರಜ್ಞ ಶುಭಾಶುಭಗಳಾಚೆಗೆ ಹೋಗಿದ್ದಾನೆ. ಅಲ್ಲಿ ಯಾವ ದ್ವಂದ್ವವೂ ಉಳಿದಿರುವುದಿಲ್ಲ. ಅಲ್ಲಿ ಸೃಷ್ಟಿಯಿಲ್ಲ, ದೃಷ್ಟಿಯಿಲ್ಲ. ಅಲ್ಲಿ ಬ್ರಹ್ಮಾಂಡವಿಲ್ಲ. ಪಿಂಡವಿಲ್ಲ. ಅಲ್ಲಿ ಇದೂ ಇಲ್ಲ, ಅದೂ ಇಲ್ಲ. ನಾಮವಿಲ್ಲ, ವಿಶೇಷವಿಲ್ಲ. ಇಂದ್ರಿಯಗಳಿಲ್ಲ, ಮನವಿಲ್ಲ. ಬುದ್ಧಿಯಿಲ್ಲ, ಅಹಂಕಾರವಿಲ್ಲ. ಆದರೆ ಇರುವುದೇನು? ಅದನ್ನು ಹೇಳಲು ಬರುವಂತಿಲ್ಲ. ಏಕೆಂದರೆ ಅಲ್ಲಿ ವಾಣಿಗೆ ಆಸ್ಪದವಿಲ್ಲ. ವಾಣಿಗೆ ಆಸ್ಪದವಿದ್ದಲ್ಲಿ ಈ ಅವಸ್ಥೆಯಿಲ್ಲ. ಅಲ್ಲಿ ಸ್ವಾನುಭೂತಿಯಿದೆ. ಹೀಗೆ ಹೇಳಿದರೂ ಸಮರ್ಪಕವಾಗದು. ಅದಕ್ಕೆ ಶೂನ್ಯವೆಂದೂ ಎನಲಾಗದು; ಅಶೂನ್ಯವೂ ಅದಲ್ಲ. ಆದರೆ ಅದೇನೋ ಇದೆ ಎಂಬುದು ನಿಶ್ಚಿತ. ಅಲ್ಲಿ ಭಾವಾವಸ್ಥೆಯಲ್ಲಿಯ ಭಾವ ನಡೆಯದು. ಕ್ರಿಯಾವಸ್ಥೆಯಲ್ಲಿಯ ಕ್ರಿಯೆ ಲುಪ್ತವಾಗಿದೆ. ಈ ಅವಸ್ಥೆಯನ್ನು ಇನ್ನೂ ಹೆಚ್ಚಾಗಿ ವರ್ಣಿಸುವ ಆವಶ್ಯಕತೆ ಇಲ್ಲ. ಏಕೆಂದರೆ, ಇಷ್ಟೊಂದು ವರ್ಣನೆಯಿಂದಲೂ ಅದರ ಮೇಲೆ ಸ್ವಲ್ಪವಾದರೂ ಪ್ರಕಾಶ ಬೀಳಲಿಲ್ಲ.

## ೧೫೭. ಭಾವಾವಸ್ಥೆಯಲ್ಲಿ ಸಮಗ್ರತೆ ಇರುತ್ತದೆ

ಆದರೆ ಭಾವಾವಸ್ಥೆಯಲ್ಲಿ ಸ್ಥಿತಪ್ರಜ್ಞನ ಭೂಮಿಕೆ ಸಂಪೂರ್ಣ ವಿಶ್ವರೂಪ ಭಗವಂತನನ್ನು ಮಾನ್ಯಮಾಡುವಂಥದು. ಆ ವೇಳೆಯಲ್ಲಿ ಆತನ ಭಾವನೆಯಲ್ಲಿ ಸಮಗ್ರತೆ ಇರುತ್ತದೆ. ಅಲ್ಲಿ ವಿಶ್ಲೇಷಣ ಇರುವುದಿಲ್ಲ. ಸುಂದರವಾದ ಮೂರ್ತಿಯ ಮೂಗನ್ನು ಯಾರಾದರೂ ಮುರಿದು ತಂದು ಇದು ಸುಂದರವಾಗಿದೆಯೆ ಎಂದು ಕೇಳಿದರೆ, ಇಡಿಯ ಮೂರ್ತಿ ಸುಂದರ

ವಾಗಿರುತ್ತದೆಂದು ನಾನು ಹೇಳುತ್ತೇನೆ. ಅದನ್ನು ಒಡೆದು ತುಣುಕು ಮಾಡಿದರೆ ಆ ತುಣುಕುಗಳಲ್ಲಿ ಸುಂದರತೆ ಇರಲಿಕ್ಕಿಲ್ಲ. ಸಮಗ್ರತೆಯಲ್ಲಿ ಸುಂದರತೆ ಇರುತ್ತದೆ. ಈ ಎಲ್ಲ ವಿಶ್ವವು ಶುಭವೂ ಅಶುಭವೂ ಕೂಡಿ ಮಂಗಲವಾಗಿದೆ. ವಿಶ್ವರೂಪದಲ್ಲಿ ಬೆರೆತು ಲೀನವಾಗುವ, ವಿಶ್ವರೂಪವನ್ನು ಆದರಿಸುವ, ಪೂಜಿಸುವ, ಇಡಿಯದನ್ನು ನುಂಗುವ, ಭೂಮಿಕೆ ಅದು. 'ದೇವ ಪೂಜೂನಿ ಪಾಹಿಜೇ'. 'ಮೂರ್ತಿಯನ್ನು ಪೂಜಿಸಿ, ಅದರ ಕಡೆ ನೋಡಬೇಕು' ಆಗ ಅದು ಸುಂದರವಾಗಿ ತೋರುತ್ತದೆ. ಬಿತ್ತದೆಯ ಹೊಲಕ್ಕೆ ಹೋದರೆ, ಅಲ್ಲಿ ಕಳೆಯೇ ಕಾಣಿಸುತ್ತದೆ. ಪ್ರಪಂಚದ ಮೇಲೆ ಪವಿತ್ರ ಭಾವನೆಯ ಹೊದಿಕೆಯನ್ನು ಹರವಿ ಅದರ ಕಡೆ ನೋಡಿದರೆ ಅದು ಪರಮ ಪವಿತ್ರವಾಗಿ ಕಾಣಿಸುತ್ತದೆ. ತಾಯಿ ತನ್ನ ಪ್ರೇಮದಿಂದ ಮಗುವನ್ನು ಸಿಂಗರಿಸುತ್ತಾಳೆ. ಆದುದರಿಂದ ಅದು ಅವಳಿಗೆ ಅಂದವಾಗಿ ಕಾಣುತ್ತದೆ. ಆತ್ಮಭಾವನೆಯಿಂದ ವಿಶ್ವವನ್ನು ಸಿಂಗರಿಸಿ, ಬೆಳಗಿ. ಆ ಬಳಿಕ ಅದರತ್ತ ನೋಡಿ. ಅದು ಆತ್ಮೀಯತೆಯ ಮೂಲಕವಾಗಿ ಸುಂದರವೂ ಪ್ರಿಯವೂ ಆಗಿ ತೋರೀತು.

## ೧೫೮. ಕ್ರಿಯಾವಸ್ಥೆಯಲ್ಲಿ ವಿವೇಕವಿರುತ್ತದೆ

ಇವೆರಡರಿಂದಲೂ ಭಿನ್ನವಾದ, ವಿವೇಕ ಪ್ರಧಾನವಾದ ಕ್ರಿಯಾವಸ್ಥೆ 'ಯಾ ನಿಶಾ ಸರ್ವ ಭೂತಾನಾಂ' ಎಂಬ ಶ್ಲೋಕದಲ್ಲಿ ಸೂಚಿಸಲ್ಪಟ್ಟುದನ್ನು ನಾವು ಈ ಮೊದಲು ಕಂಡಿದೇವೆ. ಇಲ್ಲಿ ಶುಭಾಶುಭಗಳ ನಡುವೆ ಕದನ, ನಿಷ್ಕಾಮತೆಗೂ ಸಕಾಮತೆಗೂ, ಅಕರ್ತೃತ್ವಕ್ಕೂ ಕರ್ತೃತ್ವಕ್ಕೂ, ಸಂಯಮಕ್ಕೂ ಸ್ವಚ್ಛಂದಕ್ಕೂ ಯುದ್ಧ; ಸತ್-ಅಸತ್, ಪ್ರಕಾಶ ಅಂಧಕಾರ ಇವುಗಳಲ್ಲಿ ಕಲಹ.

## ೧೫೯. ಈ ಮೂರೂ ಅವಸ್ಥೆಗಳು ಕೂಡಿ ಸ್ಥಿತಪ್ರಜ್ಞನ ಒಂದೇ ಅಖಂಡ ವೃತ್ತಿ

ಜ್ಞಾನಿಗೆ ಶರೀರದ ಅಪೇಕ್ಷೆಯಂತೆ ಭಿನ್ನಭಿನ್ನ ಕಾಲಗಳಲ್ಲಿ ಈ ಮೂರು ಅವಸ್ಥೆಗಳು ಪ್ರಾಪ್ತವಾಗುತ್ತವೆ. ಆತನ ವೃತ್ತಿಯ ಅಖಂಡತೆಗೆ ಬಾಧೆ ಬರದಂತೆ ಅವು ಬರುತ್ತವೆ, ಹೋಗುತ್ತವೆ. ವಾಸ್ತವವಾಗಿ ಆತನಿಗೆ 'ವೃತ್ತಿ'

ಇರುತ್ತದೆಂಬ ಭಾಷೆಯೇ ಸರಿಯಲ್ಲ. ಆತನಿಗೆ ನಿಜವಾಗಿ ಯಾವ ವೃತ್ತಿಯೂ ಇರುವುದಿಲ್ಲ.

**ಕರಣೇ ಕಾ ನ ಕರಣೇ। ಹೇ ಅಘವೇ ತೋ ಚ ಜಾಣ।**
**ವಿಶ್ವ ಚಲತಸೇ ಜೇಣೇ। ಪರಮಾತ್ಮೇನಿ॥**

ಹೀಗೆ ಆತನ ಸ್ಥಿತಿ. ದೇವನಿಗೆ ಆತನಿಂದ ಎಂಥ ಕಾರ್ಯ ಬೇಕೋ ಸಮಾಜಕ್ಕೆ ಹೇಗೆ ಅವಶ್ಯಕವೋ ಹಾಗೆ ಸಂಭವಿಸುತ್ತದೆ. ಆತನು ಸ್ವಯಂ ಪ್ರವೃತ್ತಿಯಿಂದ ಏನನ್ನೂ ಮಾಡ. ತೋಟಗಾರ ಹರಿಸಿದತ್ತ ನೀರು ಹೋಗುತ್ತದೆ. ಕಬ್ಬಿನತ್ತ ಒಯ್ದರೆ ಅದರ ಸವಿಯನ್ನು ಹೆಚ್ಚಿಸುತ್ತದೆ. ಸಾಸಿವೆಯತ್ತ ಒಯ್ದರೆ ಅದರ ಕಾರವನ್ನು ಹೆಚ್ಚಿಸುತ್ತದೆ. ನೀರುಳ್ಳಿಯತ್ತ ಹರಿಸಿದರೆ ಅದರ ದರ್ಪವನ್ನು ಹೆಚ್ಚಿಸುತ್ತದೆ.

ನೀರು ಸ್ವಂತದ ಅಭಿಮಾನವನ್ನು ಇಟ್ಟುಕೊಳ್ಳುವುದಿಲ್ಲ. ಇಂತಹದನ್ನು ಮಾಡಬೇಕು, ಇಂತಹದನ್ನು ಮಾಡಬಾರದು, ಏನಾದರೂ ಮಾಡಲೇಬೇಕು ಅಥವಾ ಮಾಡಲೇ ಕೂಡದು ಎಂಬ ಆಗ್ರಹ ಸ್ಥಿತಪ್ರಜ್ಞನಿಗೆ ಇರುವುದಿಲ್ಲ. ಅವನಿಂದ ಮಾಡಿಸಬೇಕಾದುದನ್ನು ಈಶ್ವರ ಮಾಡಿಸಬೇಕು. ಅವನ ಸ್ವಂತದ ಪ್ರವೃತ್ತಿಯೆಂಬುದು ಉಳಿಯಲಿಲ್ಲ. ಆದುದರಿಂದ ಆತನ ಸ್ಥಿತಿಗೆ 'ನಿವೃತ್ತಿ' ಶಬ್ದವೇ ಯೋಗ್ಯ. ಆದರೆ 'ವೃತ್ತಿ' ಶಬ್ದವನ್ನು ಉಪಯೋಗಿಸಬೇಕೆಂಬ ಆಗ್ರಹವೇ ಇದ್ದರೆ, ಅದಕ್ಕೆ 'ಅಖಂಡ ವೃತ್ತಿ'ಯೆನ್ನಿ. ಶರೀರದ ದೃಷ್ಟಿಯಿಂದ ಕ್ರಿಯಾವಸ್ಥೆ, ಭಾವಾವಸ್ಥೆ, ಜ್ಞಾನಾವಸ್ಥೆ ಅವನಿಗೆ ಬರುತ್ತವೆ. ಆದರೆ ಈ ಮೂರೂ ಭೂಮಿಕೆಗಳಲ್ಲಿ ವಿರೋಧವಿಲ್ಲ. ಆದುದರಿಂದ ಅವನ ಅಖಂಡ ವೃತ್ತಿಯಲ್ಲಿ ಅಂತರ ಸಂಭವಿಸದು. ಕ್ರಿಯೆಯ ಕಾಲದಲ್ಲಿ ಅವನು ಸಜ್ಜನ ದುರ್ಜನರಲ್ಲಿ ವಿವೇಕವನ್ನು ಮಾಡುತ್ತಾನೆ. ಜ್ಞಾನಾವಸ್ಥೆಯಲ್ಲಿ ಯಾರೂ ನನ್ನವರಲ್ಲವೆಂದು ಹೇಳುತ್ತಾನೆ. ಹೀಗೆ ಆತನವು ವೇಷ. ಈ ಮೂರು ಭೂಮಿಕೆಗಳಿಗೆ ನಾನು ಸ್ಥಿತಪ್ರಜ್ಞನ 'ತ್ರಿಸೂತ್ರಿ' ಎನ್ನುತ್ತೇನೆ. ಈ ತ್ರಿಸೂತ್ರಿಗೆ ಆಧಾರಭೂತವಾದ ಮಹಾಪ್ರಮೇಯದ ಚರ್ಚೆಯನ್ನು ನಾಳೆ ಮಾಡೋಣ.

# ೧೬ ನೆಯ ವ್ಯಾಖ್ಯಾನ

## ೧

## ೧೬೦ ಸ್ಥಿತಪ್ರಜ್ಞನ ತ್ರಿವಿಧ ಅವಸ್ಥೆಯ ಮೂಲದಲ್ಲಿ ಈಶ್ವರನ ತ್ರಿವಿಧ ಸ್ವರೂಪ

ನಾವು ನೋಡಿದ ಸ್ಥಿತ-ಪ್ರಜ್ಞನ ಅವಸ್ಥೆ ಸ್ಥೂಲ ಅರ್ಥದಿಂದ ಈಶ್ವರನದೇ ಎಂದು ತಿಳಿಯಬೇಕು. ಆತನ ಅವಸ್ಥೆ ತ್ರಿವಿಧ; ಏಕೆಂದರೆ ಈಶ್ವರನದು ತ್ರಿವಿಧ ಸ್ವರೂಪ. ಈಶ್ವರನೇ ಸ್ಥಿತ-ಪ್ರಜ್ಞನ ಭೂಮಿಕೆಯ ಆಧಾರ. ಈಶ್ವರನನ್ನು ಯಾರೂ ನೋಡಿಲ್ಲ. ಹಾಗೆ ನೋಡಿದರೆ ಮನುಷ್ಯನನ್ನೂ ಯಾರೂ ನೋಡಿಲ್ಲ. ಮನುಷ್ಯನ ಬಾಹ್ಯರೂಪ ಪ್ರಕಟವಾಗಿದೆ. ಅದರಂತೆಯೆ ಈಶ್ವರನ ಬಾಹ್ಯ ರೂಪವೂ ಪ್ರಕಟ. ಮನುಷ್ಯನ ಅಂತಃಸ್ವರೂಪ ಈಶ್ವರನ ಅಂತಃಸ್ವರೂಪದಂತೆಯೆ ಅಪ್ರಕಟ. ಮನುಷ್ಯನ ಪ್ರಕಟ ರೂಪ ಚಿಕ್ಕದು. ಆದುದರಿಂದ ಅದು ಗೊತ್ತಾಗುವಂತೆ ತೋರುತ್ತದೆ. ಈಶ್ವರನ ಪ್ರಕಟ ರೂಪ ಈ ಅಪರಂಪಾರ ಸೃಷ್ಟಿಯೆ. ಆದುದರಿಂದ ಅದು ಗೊತ್ತಾಗದಂತೆ ತೋರುತ್ತದೆ. ವಸ್ತುತಃ ಮನುಷ್ಯ ಈಶ್ವರ ಇಬ್ಬರೂ ಅಷ್ಟೇ ಪ್ರಕಟರು ಅಥವಾ ಅಪ್ರಕಟರು. ಮನುಷ್ಯನನ್ನು ಅರಿಯಲು ಸಾಧನ ಇದ್ದಂತೆ ಈಶ್ವರನ ಸ್ವರೂಪವನ್ನು ಅರಿಯಲೂ ಸಾಧನ ನಮಗುಂಟು. ಸ್ಥಿತಪ್ರಜ್ಞರೇ ಆ ಸಾಧನ. ಸ್ಥಿತಪ್ರಜ್ಞರು ಎಲ್ಲೆಡೆಯಲ್ಲಿಯೂ ಎಲ್ಲ ಕಾಲದಲ್ಲಿಯೂ ಇರುವವರೆಗೆ ಈಶ್ವರನ ರೂಪವನ್ನೂ ಅರಿಯಲು ಸಾಧನ ನಮ್ಮಲ್ಲಿ ಇದೆ ಎನ್ನಲು ಅಡ್ಡಿಯಿಲ್ಲ. ಆದುದರಿಂದ ಸ್ಥಿತಪ್ರಜ್ಞ ಮೂರ್ತಿಮಂತನಾದ ಚಿಕ್ಕ ಈಶ್ವರನೇ ಎಂದು ತಿಳಿಯಬಹುದು. ಸ್ಥಿತಪ್ರಜ್ಞನ ಮೂರು ಭೂಮಿಕೆಗಳು ಈಶ್ವರನ ಮೂರು ಸ್ವರೂಪವನ್ನನುಸರಿಸಿ ಇರುತ್ತವೆ. ಈ ಮೂರೂ ರೂಪಗಳು ಕೂಡಿ ಅವನ ಪರಿಪೂರ್ಣ ಸ್ವರೂಪ. ಕಲ್ಪನೆಯಲ್ಲಿ ಬರುವುದು ಬಾರದದು ಎಲ್ಲವೂ ಅವನ ಹೊಟ್ಟೆಯಲ್ಲಿ ಬರುತ್ತದೆ.

## ೧೬೧. ಈಶ್ವರನ ಮೊದಲನೆಯ ರೂಪ ಕೇವಲ ಶುಭ

ಈಶ್ವರನ ಮೊದಲನೆಯ ರೂಪ ಕೇವಲ ಶುಭ. ಅದು ಮನುಷ್ಯನ ಆಕಾಂಕ್ಷೆಗಳಲ್ಲಿ ಕಾಣಬರುತ್ತದೆ. ಮನುಷ್ಯನಿಗೆ ಯಾವಾಗಲೂ ಶುಭದ

ಆಕಾಂಕ್ಷೆ. ಅಶುಭಕಾರಿಗೂ ಶುಭದ ಆಕಾಂಕ್ಷೆಯಿದೆ. ತನಗೆ ಯಾರಾದರೂ ಮೋಸ ಮಾಡಬೇಕೆಂದು ಅಸತ್ಯವಾದಿಯೂ ಇಚ್ಛಿಸನು. ಮನುಷ್ಯನ ಹೃದಯದೊಳಗಿನ ಈ ಶುಭದ ಆಕಾಂಕ್ಷೆಯಿಂದಲೇ ಅವನ ನೀತಿಶಾಸ್ತ್ರ ಹುಟ್ಟಿದೆ. ಶುಭವೆಂದರೆ ಏನೆಂಬುದರ ನಿರ್ಣಯವು ಜಡವಾಗಿ ತೋರಬಹುದು. ಆದರೆ ಶುಭವೆಂಬುದೇನೊ ಉಂಟು. ಅದುವೇ ಮನುಷ್ಯನಿಗೆ ಪ್ರಿಯವಾದುದು. ದೈವೀಸಂಪತ್ತಿಯ ಸದ್ಗುಣಗಳನ್ನು ಹೇಳಿ "ಅರ್ಜುನಾ, ನೀನು ಈ ದೈವೀಸಂಪತ್ತಿಯಲ್ಲಿಯೆ ಹುಟ್ಟಿದ್ದೀ" ಎಂದು ಭಗವಂತ ಅರ್ಜುನನಿಗಿತ್ತ ಆಶ್ವಾಸನ ಅರ್ಜುನನ ಮಟ್ಟಿಗೆ ಮಾತ್ರವಲ್ಲ. ಅಖಿಲ ಮಾನವ ಜಾತಿಗೆ ಇತ್ತ ಆಶ್ವಾಸನ. ಮನುಷ್ಯನಲ್ಲಿ ದೋಷಗಳೂ ಕಾಣಬರುವುದು ನಿಜ; ಆದರೆ ಮಾನವನೊಳಗಿನ ಪಶುತ್ವ ಮಾನವತ್ವವಲ್ಲ. ಮಾನವತ್ವ ಶುಭವಾದುದು, ಶುಭಾಕಾಂಕ್ಷಿಯಾದುದು, ಶುಭದತ್ತ ಅಗ್ರೇಸರವಾದುದು. ಅವನ ಹೃದಯ-ಸ್ಥಾನ ಶುಭದಿಂದ ಇದೆ. 'ಹೃದ್ದೇಶೇಽರ್ಜುನ ತಿಷ್ಠತಿ' ಎಂಬುದು ಇದೇ.

## ೧೬೨ ಎರಡನೆಯದು ವಿಶ್ವರೂಪ

ಈಶ್ವರನ ಎರಡನೆಯ ರೂಪ ವಿಶ್ವರೂಪ. ಇದು ಪರಿಪೂರ್ಣವಾದುದು. ಅದರಲ್ಲಿ ಶುಭಾಶುಭವೆಲ್ಲವೂ ಬರುತ್ತದೆ. ಕಿತ್ತಳೆ ಹಣ್ಣಿನಲ್ಲಿ ಬೀಜ, ನಾರು, ಸಿಪ್ಪೆ ಎಲ್ಲವೂ ಇವೆ. ಸಿಹಿ, ಹುಳಿ, ಒಗರು ಈ ಮೂರೂ ರಸಗಳು ಇವೆ. ಇದೆಲ್ಲವೂ ಕೂಡಿ ಕಿತ್ತಳೆಹಣ್ಣು. ಇವೆಲ್ಲವೂ ಕೂಡಿ ಆದ ಹಣ್ಣು ಹೇಗಿದೆ ಎಂದು ಕೇಳಿದರೆ "ಸುಂದರವಾಗಿದೆ, ಮಧುರವಾಗಿದೆ, ರುಚಿಯಾಗಿದೆ" ಎಂದು ಹೇಳುತ್ತೇವೆ. ಕಿತ್ತಳೆ ಬೀಜ, ಸಿಪ್ಪೆ, ತೊಗಟೆಗಳ ಮಹತ್ತ್ವ ತಿನ್ನುವವನಿಗೆ ಇರದು. ಆದರೆ ಇವೆಲ್ಲವೂ ಹಣ್ಣಿನ ರಸಕ್ಕೆ ಪೋಷಕವಾಗಿವೆ. ಇವೆಲ್ಲವೂ ಮನುಷ್ಯನ ದೃಷ್ಟಿಯಿಂದ ಗೌಣವಾದರೂ ಕಿತ್ತಳೆಗೆ ಅದರಿಂದ ವೈಗುಣ್ಯವಿಲ್ಲ. ಫಲದ ದೃಷ್ಟಿಯಿಂದಂತೂ ಬೀಜವೇ ಮುಖ್ಯ. ಆದರೆ ದೃಷ್ಟಾಂತದ ಸಾರವನ್ನಷ್ಟೇ ಗ್ರಹಿಸಬೇಕು. ಇಡಿಯ ಜಗತ್ತು ಶುಭವಾಗಿದೆ. ಕಿತ್ತಳೆಯಂತೆ ಮಧುರವಿದೆ. ಅದರಲ್ಲಿ ಅಶುಭವಾಗಿ ತೋರುವುದು ಶುಭದ ಶೋಭೆಯ ಪೋಷಕ. ಅದು ಶುಭ-ಛಾಯಾರೂಪವಾಗಿದೆ. ಇದೆಲ್ಲವೂ ಕೂಡಿ ಸಂಪೂರ್ಣ ವಿಶ್ವವಾಗಿರುತ್ತದೆ. ಅದು

ಹಲವು ಸಲ ಭಯ ಹುಟ್ಟಿಸುತ್ತದೆ, ಹಲವು ಸಲ ಆಕರ್ಷಕವಾಗಿರುತ್ತದೆ. ಅರ್ಜುನನಿಗೆ ಭಯವಾದುದನ್ನು ಹನ್ನೊಂದನೆಯ ಅಧ್ಯಾಯದಲ್ಲಿ ವರ್ಣಿಸಿದಾರೆ. ಪ್ರಹ್ಲಾದನಿಗೆ ಪ್ರೇಮ ಒದಗಿದುದು ಭಾಗವತದಲ್ಲಿ ವರ್ಣಿಸಲ್ಪಟ್ಟಿದೆ. ಅದು ಸಮುದ್ರದಂತೆ ಹಿಮಾಲಯದಂತೆ ರಮಣೀಯ ಭಯಾನಕವಾಗಿದೆ. ಆಕರ್ಷಕವಾಗಿರುತ್ತದೆ, ವಿಕರ್ಷಕವೂ ಆಗಿರುತ್ತದೆ. ಆದುದರಿಂದ ಶಿವನ ಸ್ವರೂಪ ಎರಡು ವಿಧವಾಗಿ ವರ್ಣಿಸಲ್ಪಡುತ್ತದೆ. 'ಮಂಗಲ-ಘೋರ', 'ಸೌಮ್ಯ-ರುದ್ರ' ಎರಡು ಬಗೆಯ ರೂಪಗಳು ಶಿವನಿಗೆ ಇರುತ್ತವೆ. ಆದರೆ ಅವೆರಡೂ ಕೂಡಿ ಶಿವನೇ ಅಲ್ಲವೆ?

### ೧೩.೩. ಮೂರನೆಯದು ಶುಭಾಶುಭಗಳ ಆಚೆಯದು, ಬ್ರಹ್ಮ ಸಂಜ್ಞಿತ

ಈಶ್ವರನ ಮೂರನೆಯ ರೂಪ ಶುಭಾಶುಭಗಳ ಆಚೆಯದು. ಸೃಷ್ಟಿಯ ಆಚೆಯದು, ಬುದ್ಧಿಯ ಆಚೆಯದು, ಆಕಾಂಕ್ಷೆಗಳ ಆಚೆಯದು. ಆದರೆ ಎಲ್ಲದರ ಆಚೆಯದಿದ್ದರೂ ಅದು ಎಲ್ಲದರ ಆಧಾರ. ಅದರ ವರ್ಣನೆ ಮಾಡಲು ಬರುವುದೇ ಇಲ್ಲ. ಅದು ಶುಭವೂ ಅಲ್ಲ, ಅಶುಭವೂ ಅಲ್ಲ ಎಂಬ ನಕಾರಾತ್ಮಕ ವಿಧಾನ ಅದರ ವಿಷಯದಲ್ಲಿ ಶಕ್ಯ. ಅದು ಇದೆ ಎಂದಿಷ್ಟನ್ನ ಅಸ್ತ್ಯಾತ್ಮಕವಾಗಿ ಹೇಳಲು ಬರುತ್ತದೆ. ಉಳಿದುದೆಲ್ಲವೂ "ನೇತಿ ನೇತಿ". ಅದಕ್ಕೆ ವೇದಾಂತದಲ್ಲಿ ಬ್ರಹ್ಮ ಎಂದು ಸಂಜ್ಞೆಯುಂಟು.

### ೧೩.೪. ಗೀತೆಯ ಪರಿಭಾಷೆಯಲ್ಲಿ 'ಸತ್, ಸದಸತ್, ನಸತ್, ನಾಸತ್'

ಗೀತೆಯಲ್ಲಿ ಈಶ್ವರನ ಈ ತ್ರಿವಿಧ ರೂಪ ಬೇರೆ ಬೇರೆ ಎಡೆಗಳಲ್ಲಿ ವರ್ಣಿಸಲ್ಪಟ್ಟಿರುತ್ತದೆ. ಅವುಗಳಲ್ಲಿ ಮೊದಲನೆಯದು 'ಮಾನವೀ ಆಕಾಂಕ್ಷೆಗಳ ರೂಪ' ಎಂದರೆ ಕೇವಲ ಶುಭ. ಭಕ್ತರು ಇದನ್ನು ಚತುರ್ಭುಜವಾಗಿ ಕಲ್ಪಿಸಿದಾರೆ. ಈ ರೂಪ ಮಾನವೀ ಆಕಾಂಕ್ಷೆಗಳನ್ನು ಅನುಸರಿಸಿರುವುದರಿಂದ ಅದು ಮಾನವ ರೂಪವಾಗಿದೆ. ಆದರೆ ಮಾನವನ ಪ್ರತ್ಯಕ್ಷ ಜೀವನದಲ್ಲಿ ಅದು ಪೂರ್ಣವಾಗಿ ಪ್ರಕಟವಾಗದುದರಿಂದ ಎರಡು ಕೈಗಳನ್ನು ಹೆಚ್ಚಿಸಿ ಚತುರ್ಭುಜವಾಗಿ ಮಾಡಿದಾರೆ. ಸ್ವಚ್ಛ ಶುದ್ಧ, ಶುಭ, ಮಂಗಲ ಆದ ಪರಮೇಶ್ವರನ ರೂಪವನ್ನು ನಮ್ಮ ಹೃದಯದಲ್ಲಿ ಅನುಭವಿಸುವುದು ಚತುರ್ಭುಜ ರೂಪದ ದರ್ಶನ. ಗೀತೆಯಲ್ಲಿ ಇದಕ್ಕೆ 'ಸತ್' ಎಂದು

ಹೆಸರು. 'ಓಂ ತತ್ ಸತ್' ಇವರಲ್ಲಿಯು 'ಸತ್' ಎಂಬುದು ಇದೇ. ಇದರ ಚಿತ್ರ ಚತುರ್ಭುಜ, ಚರಿತ್ರ ನೀತಿಮಂತ. ಹೆಸರು 'ಸತ್'. ಎರಡನೆಯ ವಿಶ್ವರೂಪ ಹನ್ನೊಂದನೆಯ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಿದೆ. ಶುಭಾಶುಭಗಳ ಸಮಾವೇಶ ಅದರಲ್ಲಿ ಇದೆ. ಸಮಗ್ರತೆ ಪರಿಪೂರ್ಣತೆ ಆ ಸ್ವರೂಪದ ವೈಶಿಷ್ಟ್ಯ. ಇದಕ್ಕೆ ಗೀತೆಯಲ್ಲಿ ಶಾಸ್ತ್ರೀಯ ಹೆಸರು 'ಸದಸತ್' ಎಂದಿದೆ. 'ಸದಸತ್ ಚಾಹ ಮರ್ಜುನ' ಎಂಬ ವಾಕ್ಯದಲ್ಲಿ ಈ ವಿಶ್ವರೂಪದ ವರ್ಣನೆಯು ಇದೆ. ಮೂರನೆಯ ರೂಪ ಗುಣಾತೀತ ಅಲ್ಲಿ ಆಕಾರವಿಲ್ಲ, ವಿಕಾರವಿಲ್ಲ. ಆದರೆ ಅದು ಸರ್ವಾಧಾರವಾಗಿದೆ. ಗೀತೆಯಲ್ಲಿ ಅದಕ್ಕೆ ಶಾಸ್ತ್ರೀಯ ಹೆಸರು 'ನ ಸತ್ ತನ್ ನಾಸತ್ (ಉಚ್ಯತೇ)' ಎಂದಿದೆ. ಹದಿಮೂರನೆಯದರಿಂದ ಹದಿನೈದನೆಯ ಅಧ್ಯಾಯದವರೆಗೆ ಗೀತೆ ಅದರ ವಿಸ್ತಾರವನ್ನು ಮಾಡಿದೆ.

### ೧೬೫. ತರ್ಕದಿಂದ 'ಸದಸತ್'ಗಳ ನಾಲ್ಕು ಕೋಟಿಗಳು ಸಂಭವಿಸುತ್ತವೆ. ಅವುಗಳಲ್ಲಿ ಮೂರೇ ಈಶ್ವರನಿಗೆ ಅನ್ವಯಿಸುತ್ತವೆ.

ಈ ಬಗೆಯಾಗಿ ಈಶ್ವರನ ಮೂರು ರೂಪಗಳು. ಅವಕ್ಕನುಸರಿಸಿ ಸ್ಥಿತಪ್ರಜ್ಞನ ಮೂರು ಅವಸ್ಥೆಗಳು ಇವೆ. ತರ್ಕದಿಂದ ವಿಚಾರಿಸಿದರೆ 'ಸದಸತ್'ಗಳ ನಾಲ್ಕು ಕೋಟಿಗಳು ಶಕ್ಯವಿರುತ್ತವೆ. (೧) ಕೇವಲ ಸತ್ (೨) ಕೇವಲ ಅಸತ್ (೩) ಸದಸತ್ (೪) ನ ಸತ್-ನಾಸತ್. ಆದರೆ ತರ್ಕದಿಂದ ನಾಲ್ಕು ಕೋಟಿಗಳು ಸಂಭವಿಸುತ್ತಿದ್ದರೂ ಅವುಗಳಲ್ಲಿ ಈಶ್ವರನಿಗೆ ಅನ್ವಯಿಸುವವು ಮೂರೇ. ಕೇವಲ 'ಅಸತ್' ಕೋಟಿ ಈಶ್ವರನಿಗೆ ಅನ್ವಯಿಸದು. ಅದು ಸೈತಾನನಿಗೆ ಅನ್ವಯಿಸುತ್ತದೆ. ಈಶ್ವರನಿಗೆ ನಾಲ್ಕನೆಯ ಸ್ವರೂಪವಿಲ್ಲ. ಆದುದರಿಂದ ಸ್ಥಿತಪ್ರಜ್ಞನಿಗೂ ನಾಲ್ಕನೆಯ ಸ್ಥಿತಿ ಇಲ್ಲ.

೨

### ೧೬೬. ಈಶ್ವರನ, ತದನುಸಾರವಾಗಿ ಸ್ಥಿತಪ್ರಜ್ಞನ ಜೀವನದ ಈ ತ್ರಿವಿಧ ಸ್ವರೂಪ 'ಜ್ಞಾನ ಯಜ್ಞೇನ ಚಾಪ್ಯನ್ಯೇ' ಎಂಬ ಶ್ಲೋಕದಲ್ಲಿ ಸೂಚಿತವಾಗಿದೆ

ಇದೇ ಅರ್ಥವನ್ನು ಸೂಚಿಸುವ ಒಂದು ಶ್ಲೋಕ ಒಂಬತ್ತನೆಯ

ಅಧ್ಯಾಯದಲ್ಲಿ ಬಂದಿದೆ. 'ಸೂಚಿಸುವ' ಎಂದು ಬೇಕೆಂದೇ ಹೇಳಿದೇನೆ. ಏಕೆಂದರೆ ಆ ಶ್ಲೋಕ ಅರ್ಥಕ್ಕೆ ಸುಲಭವಲ್ಲ. ಮಹಾಭಾರತದಲ್ಲಿ ವ್ಯಾಸರು ತಮ್ಮ ಗುಟ್ಟನ್ನು ಕಾದಿಟ್ಟ ಶ್ಲೋಕಗಳಲ್ಲಿ ಅದು ಒಂದು. ಆದರೂ ಭಾಷ್ಯಕಾರರು ಸಮುಚಿತವಾಗಿ ತೋಚಿದಂತೆ ಅದನ್ನು ಸ್ಪಷ್ಟೀಕರಿಸಿದಾರೆ. ನನ್ನ ದೃಷ್ಟಿಗೆ ಆ ಶ್ಲೋಕದಲ್ಲಿ ನಾವೀಗ ವಿವೇಚಿಸುತ್ತಿರುವ ಆಶಯವೇ ಸೂಚಿಸಲ್ಪಟ್ಟಿದೆ.

ಜ್ಞಾನ ಯಜ್ಞೇನ ಚಾಪ್ಯನ್ಯೇ ಯಜನ್ತೋ ಮಾಮುಪಾಸತೇ |
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋ ಮುಖಂ ||

ಇದು ಆ ಶ್ಲೋಕ. 'ಜ್ಞಾನ-ಯಜ್ಞದಿಂದ ಯಜಿಸುವವರು ನನ್ನ ವ್ಯಾಪಕ ಸ್ವರೂಪವನ್ನು ಏಕತ್ವದಿಂದಲೂ ಪೃಥಕ್ತ್ವದಿಂದಲೂ ಬಹುರೂಪದಿಂದಲೂ ಯಜಿಸುತ್ತಾರೆ' ಎಂದು ಅದರ ಅಕ್ಷರಾರ್ಥ. ಏಕತ್ವದಿಂದ, ಪೃಥಕ್ತ್ವದಿಂದ, ಬಹುರೂಪವಾಗಿ—ಯಜಿಸುವವರು ಮೂವರು ಬೇರೆ ಬೇರೆ ಜ್ಞಾನಿಗಳಲ್ಲ. ಒಬ್ಬ ಜ್ಞಾನಿಯೇ ಮೂರು ಬೇರೆ ಬೇರೆ ಭೂಮಿಕೆಗಳಿಂದ ಮೂರು ಬಗೆಯಲ್ಲಿ ಉಪಾಸನೆ ಮಾಡುತ್ತಾನೆ. 'ನ ಸತ್ ತತ್ ನಾಸದುಚ್ಯತೇ' ಎಂಬ ನಿರ್ಗುಣ ಬ್ರಹ್ಮತತ್ತ್ವದ ಅದ್ವೈತಮಯ ಅನುಭವವೇ ಏಕತ್ವದ ಯಜನ. ಈಶ್ವರ ಕೇವಲ 'ಸತ್' ಆಗಿದಾನೆ 'ಅಸತ್' ಅಲ್ಲ ಎಂಬ ಭೂಮಿಕೆಯ ಉಪಾಸನೆ ಪೃಥಕ್ತ್ವದಿಂದ ಮಾಡಿದ ಯಜನ. 'ಸತ್' 'ಅಸತ್' ಕೂಡಿ ಎಲ್ಲ ಜೀವನವೂ ಒಂದೇ ಎಂಬ ಭೂಮಿಕೆಯಿಂದ ಮಾಡಿದ ಉಪಾಸನೆ ಬಹುಧಾ ಯಜನ.

## ೧೬೭. ಅದರದೇ ಇನ್ನಷ್ಟು ಸ್ವಲ್ಪ ಸ್ಪಷ್ಟೀಕರಣ

ಈ ಮೂರೂ ಭೂಮಿಕೆಗಳು ಒಬ್ಬ ಜ್ಞಾನಿಯವೇ. ಕ್ರಿಯಾವಸ್ಥೆಯಲ್ಲಿ ಅವನು ಈಶ್ವರನನ್ನು ಕೇವಲ ಸತ್-ಸ್ವರೂಪನಾಗಿ ನೋಡುತ್ತಾನೆ. ಆ ವೇಳೆಯಲ್ಲಿ ಅವನ ಭೂಮಿಕೆ ಪೃಥಕ್ತ್ವದ್ದು ಎಂದರೆ ವಿವೇಕದ್ದು. 'ಪೃಥಕ್ತ್ವೇನ' ಎಂಬುದರ ಅರ್ಥವನ್ನು ಹಲವರು "ನಾನೂ ಈಶ್ವರನೂ ಭಿನ್ನರೆಂಬ ಭೂಮಿಕೆಯಿಂದ ಮಾಡಿದ ಉಪಾಸನೆ" ಎಂದು ಮಾಡುತ್ತಾರೆ. ಆದರೆ ಆ ಅರ್ಥ ಸರಿಯಾದುದಲ್ಲ. ಏಕೆಂದರೆ ಇಲ್ಲಿರುವುದು ಸಾಮಾನ್ಯ ಭಕ್ತಿಯ ವರ್ಣನೆ ಅಲ್ಲ. ಜ್ಞಾನಯಜ್ಞದ ವರ್ಣನೆ. ಭಕ್ತಿಯ ವರ್ಣನೆ

ಈ ಮೊದಲೇ "ಸತತಂ ಕೀರ್ತಯನ್ತೋ ಮಾಂ" ಎಂಬ ಶ್ಲೋಕದಲ್ಲಿ ಬಂದಿದೆ. ಅಲ್ಲಿ ಅವಶ್ಯವಿದ್ದಷ್ಟು ದ್ವೈತವನ್ನು ಕಲ್ಪಿಸಲು ಬೇಕಷ್ಟು ಅನುಕೂಲತೆಯಿದೆ. ಇಲ್ಲಿ ದ್ವೈತ ಭಕ್ತಿಯನ್ನು ಕಲ್ಪಿಸುವ ಆವಶ್ಯಕತೆ ಇಲ್ಲ. ಏಕೆಂದರೆ ಇದು ಜ್ಞಾನಯಜ್ಞ. ಇಲ್ಲಿ ಪೃಥಕ್ತ್ವದ ಉಪಾಸನೆಯೆಂದರೆ ಸದಸತ್ತಿನ ವಿವೇಕವೆಂದೇ ಅರ್ಥ ಮಾಡುವುದು ಯುಕ್ತ. 'ಬಹುಧಾ' ಎಂದರೆ ಶುಭ ಅಶುಭ ಈಯೆರಡೂ ಸ್ವರೂಪಗಳಲ್ಲಿ ಅನಂತ ರೂಪಗಳಿಂದ ಈಶ್ವರನು ಯುಕ್ತನಾಗಿದ್ದಾನೆ ಎಂಬೀ ಭೂಮಿಕೆಯ ಉಪಾಸನೆ. ಇದು ಸ್ಥಿತಪ್ರಜ್ಞನ ಭಾವಾವಸ್ಥೆಯಲ್ಲಿಯ ಉಪಾಸನೆ. ಎಲ್ಲದುದರ ವಿಷಯದಲ್ಲಿಯ ಆತನ ಅವಿರೋಧವೃತ್ತಿ ಅದರಲ್ಲಿ ಸೂಚಿಸಲ್ಪಟ್ಟಿದೆ. ಈ ಶ್ಲೋಕದ ಈ ಅರ್ಥ ಗೀತೆಯಲ್ಲಿ ವರ್ಣಿಸಲ್ಪಟ್ಟ ಈಶ್ವರನ ತ್ರಿವಿಧ ಸ್ವರೂಪಕ್ಕೆ ಹೊಂದುತ್ತದೆ.

## ೧೩೮. ಬಾಹ್ಯ ಜೀವನಾಕಾರಗಳಲ್ಲಿ ಭೇದ ತೋರಿದರೂ ಎಲ್ಲ ಸ್ಥಿತಪ್ರಜ್ಞರಿಗೂ ಮೂರು ಅವಸ್ಥೆಗಳ ಅನುಭವ ಇರುತ್ತದೆ

ಎಲ್ಲ ಸ್ಥಿತಪ್ರಜ್ಞರ ಜೀವನದಲ್ಲಿಯೂ ಈ ಮೂರು ಭೂಮಿಕೆಗಳಿರುತ್ತವೆ. ಆದರೆ ಒಬ್ಬನ ಜೀವನದಲ್ಲಿ ಕ್ರಿಯಾವಸ್ಥೆ ಪ್ರಧಾನ, ಒಬ್ಬನಲ್ಲಿ ಭಾವಾವಸ್ಥೆ, ಒಬ್ಬನಲ್ಲಿ ಜ್ಞಾನಾವಸ್ಥೆ. ಅದಕ್ಕನುಸಾರವಾಗಿ ಅವರ ಬಾಹ್ಯ ಜೀವನಾಕಾರದಲ್ಲಿಯೂ ಭೇದ ಕಾಣಬರುತ್ತದೆ. ಆದರೆ ಯಾವ ಸ್ಥಿತಪ್ರಜ್ಞನಿಗೂ ಒಂದೇ ಭೂಮಿಕೆಯ ಅನುಭವ ಇರುವುದಿಲ್ಲ; ಮೂರೂ ಭೂಮಿಕೆಗಳ ಅನುಭವವಿರುತ್ತದೆ. ಮೂರೂ ಅವಸ್ಥೆಗಳಿಗೆ ಸಾಮಾನ್ಯವಾದ ಅಖಂಡ ಅನುಭವವೂ ಒಂದೇ. ಆದರೂ ಪ್ರಾಧಾನ್ಯದ ಮೂಲಕವಾಗಿ ಬಾಹ್ಯ ಜೀವನದಲ್ಲಿ ಭೇದವಿರುತ್ತದೆ. ಅದರಿಂದ ಜನರಿಗೆ ಬೇರೆ ಬೇರೆ ಜ್ಞಾನಿಗಳನ್ನು ಹೋಲಿಸಿ ನೋಡುವ ಮೋಹ ಉಂಟಾಗುತ್ತದೆ. ತಮ್ಮ ತಮ್ಮ ಅಭಿರುಚಿಯಂತೆ ಅವರು ತಮಗೆ ಬೇಕಾದವರನ್ನು ಶ್ರೇಷ್ಠರೆಂದು ಎಣಿಸುತ್ತಾರೆ. ಆದರೆ ವಾಸ್ತವವಾಗಿ ಇದು ಮೋಹವೇ. ಬಾಹ್ಯ ಆಕಾರ ಹೇಗಿದ್ದರೂ ಒಳಗಿನ ಪ್ರಕಾರ ಒಂದೇ ಆಗಿರುವವರೆಗೆ ಭೇದವೆಂಬುದು ಇರದು. ಐದು ರೂಪಾಯಿಗಳ ನೋಟು ಇದ್ದರೇನು, ಐದು ರೂಪಾಯಿಗಳ ನಾಣ್ಯಗಳಿದ್ದರೇನು, ಬೆಲೆ ಒಂದೇ. ಆಕಾರದಲ್ಲಿ ಮಾತ್ರ ಭೇದ.

ಆದರೆ ಯಾವುದೇ ಭೂಮಿಕೆಯ ಪ್ರಧಾನ್ಯವಿದ್ದರೂ ಸ್ಥಿತಪ್ರಜ್ಞನ ಕೈಯಿಂದಾಗುವ ಲೋಕಸಂಗ್ರಹ ಸಮಾನವೇ. ಲೋಕಸಂಗ್ರಹ ಆತನ ಆತ್ಮಜ್ಞಾನದಿಂದಲೇ ಆಗುತ್ತದೆ. ಪ್ರಾಧಾನ್ಯ ಯಾವುದೇ ಅವಸ್ಥೆಯದಾಗಿದ್ದರೂ ಆ ಆತ್ಮಜ್ಞಾನದಲ್ಲಿ ಭೇದವಿರುವುದಿಲ್ಲ.

*

### ೧೬೯. ಈ ಅವಸ್ಥೆಗಳು ಪರಸ್ಪರ ಸಂಬದ್ಧ, ಪರಸ್ಪರೋಪಕಾರಕ

ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಸ್ಥಿತಪ್ರಜ್ಞನ ಈ ಮೂರು ಅವಸ್ಥೆಗಳಲ್ಲಿ ಪರಸ್ಪರ ಸಂಬಂಧ ಇವೆಯೊ ಇಲ್ಲವೊ? ಜಾಗೃತಿ, ಸ್ವಪ್ನ-ಸುಷುಪ್ತಿಗಳೆಂದು ಮನುಷ್ಯನ ಮೂರು ಅವಸ್ಥೆಗಳು ಒಂದರಿಂದೊಂದು ತೀರ ಭಿನ್ನವಾಗಿರುವಂತೆ ಈ ಅವಸ್ಥೆಗಳೂ ತೀರ ಭಿನ್ನವಾಗಿವೆಯೆ? ಮನುಷ್ಯನ ನಿದ್ರೆಯಲ್ಲಿ ಜಾಗೃತಿ ಇರದು, ಜಾಗೃತಿಯಲ್ಲಿ ನಿದ್ರೆ ಇರದು, ಸ್ವಪ್ನದಲ್ಲಿ ಎರಡೂ ಇಲ್ಲ. ಸ್ಥಿತಪ್ರಜ್ಞನ ಕ್ರಿಯಾವಸ್ಥೆಯದು, ಭಾವಾವಸ್ಥೆಯದು, ಜ್ಞಾನಾವಸ್ಥೆಯದು ಇದೇ ಸ್ಥಿತಿಯೋ, ಅಥವಾ ಅವುಗಳಲ್ಲಿ ಪರಸ್ಪರ ಸಂಬಂಧವಿದೆಯೋ? ಇದಕ್ಕೆ ಉತ್ತರ ಹೀಗೆ: ಜಾಗೃತಿ-ಸ್ವಪ್ನ-ಸುಷುಪ್ತಿಗಳ ದೃಷ್ಟಾಂತವನ್ನು ಇಲ್ಲಿ ಅನ್ವಯಿಸಕೂಡದು. ಏಕೆಂದರೆ ಜಾಗೃತಿ-ಮೊದಲಾದುವು ಸಾಮಾನ್ಯ ಮನುಷ್ಯನಂತೆ ಜ್ಞಾನಿಗೂ ಇರುತ್ತವೆ. ನಾವಿಲ್ಲಿ ಯಾರ ಚರ್ಚೆಯನ್ನು ಮಾಡುತ್ತಿದ್ದೇವೋ ಆ ಜ್ಞಾನಿಯ ಜಾಗೃತಿಯುವೇ ಈ ಮೂರು ಅವಸ್ಥೆಗಳು. ಸೂಕ್ಷ್ಮವಾಗಿ ನೋಡಿದರೆ ನಿದ್ರಾದಿ ಅವಸ್ಥೆಗಳೂ ತೀರ ಅಸಂಬದ್ಧವಾಗಿಲ್ಲ. ನಿದ್ರೆಯ ಪರಿಣಾಮ ಜಾಗೃತಿಯ ಮೇಲೆ, ಜಾಗೃತಿಯ ಪರಿಣಾಮ ನಿದ್ರೆಯ ಮೇಲೆ ಬೇಕಾದಷ್ಟು ಆಗುತ್ತದೆ. ನಿದ್ರೆ ಸರಿಯಾಗಿದ್ದರೆ, ಜಾಗೃತಿಯೂ ಸರಿಯಾಗಿರುತ್ತದೆ. ಜಾಗೃತಿಯಲ್ಲಿ ಮೈಯ್ಮುರಿದು ಕೆಲಸಮಾಡಿದ್ದರೆ ನಿದ್ರೆಯೂ ಒಳಿತಾಗಿ ಬರುತ್ತದೆ. ಅದರಂತೆಯೆ ಸ್ವಪ್ನದ ಪರಿಣಾಮ ಜಾಗೃತಿಯ ಮೇಲೆ, ಜಾಗೃತಿಯ ಪರಿಣಾಮ ಸ್ವಪ್ನದ ಮೇಲೆ ಆಗದಿರದು. ಜ್ಞಾನಿಯ ವಿಷಯದಲ್ಲಂತು ಈ ಮೂರು ಅವಸ್ಥೆಗಳು ಜಾಗೃತಿಯುವೇ ಆಗಿವೆ. ಆದುದರಿಂದ ಆ ಮೂರೂ ಅವಸ್ಥೆಗಳ ಪರಿಣಾಮ ಪರಸ್ಪರವಾಗಿ ಆಗಲೇಬೇಕು. ಅವನು ಒಂದು ಅವಸ್ಥೆಯಲ್ಲಿ

ಇರುವಾಗ ಎರಡನೆಯ ಅವಸ್ಥೆಗಳಲ್ಲಿಯ ಭೂಮಿಕೆಯ ಪರಿಣಾಮ ಅವನ ಮೇಲೆ ಏನೂ ಆಗದಿರುವುದು ಅಶಕ್ಯ.

## ೧೩೦. ಈ ವಿಷಯದಲ್ಲಿ ಸನಾತನಿಗಳ ಯುಕ್ತಿವಾದ ತಪ್ಪು ತಿಳಿವಳಿಕೆಯದು

ಇಲ್ಲಿ ಈ ಚರ್ಚೆಯನ್ನು ಕೈಕೊಳ್ಳಲು ಕಾರಣವಿದೆ. "ಬ್ರಾಹ್ಮಣ, ಹಸು, ಆನೆ, ನಾಯಿ, ಚಂಡಾಲ ಪಂಡಿತನಿಗೆ ಸಮಾನರಾಗಿ ತೋರುವರು" ಎಂಬ ಗೀತೆಯ ವಾಕ್ಯದ ವಿಷಯದಲ್ಲಿ ಕೆಲವರು ವೇದಾಂತಿಗಳು ಹೇಳುವುದೇನೆಂದರೆ, "ಈ ವಾಕ್ಯ ಭಾವಾವಸ್ಥೆಯದು. ಕ್ರಿಯಾವಸ್ಥೆಗೆ ಇದರ ಸಂಬಂಧವಿಲ್ಲ. ಭಾವಾವಸ್ಥೆಯಲ್ಲಿ ಎಲ್ಲರನ್ನೂ ಸಮಾನರಾಗಿ ಎಣಿಸಿದರೂ ಕ್ರಿಯಾವಸ್ಥೆಯಲ್ಲಿ ವಿವೇಕವನ್ನು ಮಾಡಬೇಕಾಗುತ್ತದೆ. ಈ ಸ್ಥೂಲ ವಿವೇಕವನ್ನು ಮಾಡಿ ಹಸುವಿನೊಡನೆ ಹಸುವೆಂದು ಮನುಷ್ಯನೊಡನೆ ಮನುಷ್ಯನೆಂದು ನಡೆಯಬೇಕಾಗುತ್ತದೆ. ಸ್ಥಿತಪ್ರಜ್ಞ ಹುಚ್ಚನಂತೂ ಅಲ್ಲ. ಭಾವಾವಸ್ಥೆಯ ಅದ್ವೈತದ ಆಧಾರದಿಂದ ಕ್ರಿಯಾವಸ್ಥೆಯ ಭೇದವನ್ನು ತೊಡೆದು ಹಾಕಬಯಸುವುದು ಆಲದ ಮರ, ಅರಳಿಯ ಮರ ಇವುಗಳಲ್ಲಿಯ ಭೇದವನ್ನು ಕಾಣದಂತೆಯೆ ಸರಿ.' ಈ ಯುಕ್ತಿವಾದವನ್ನು ಆಧಾರವಾಗಿಟ್ಟುಕೊಂಡು ಸನಾತನಿಗಳು "ನಾವು ಬ್ರಾಹ್ಮಣ ಹರಿಜನ ಎಂಬ ಭೇದ ಮಾಡುತ್ತೇವೆಂದು ನೀವು ಹೇಳುತ್ತೀರಿ; ಅದು ಭೇದವಲ್ಲ, ಅದು ವಿವೇಕ. ಅಭೇದಕ್ಕೆ ವಿರೋಧವಿದ್ದೀತು. ವಿವೇಕಕ್ಕೆ ಇರಲಾರದು" ಎನ್ನುತ್ತಾರೆ. ಅವರೆನ್ನುವುದು ವಿಚಾರಾರ್ಹವಾಗಿದೆ. ಆಯಾ ಭೂಮಿಕೆಯ ಮೇಲೆ ಆಯಾ ಅವಸ್ಥೆ ಇರುತ್ತದೆಯೆಂಬುದು ಸಯುಕ್ತಿಕ. ಆದರೆ ಈ ಅವಸ್ಥೆಗಳಲ್ಲಿ ಪರಸ್ಪರ ಸಂಬಂಧವಿಲ್ಲವೆಂದು ಗೃಹೀತವಾಗಿ ತಿಳಿವುದು ಯೋಗ್ಯವಾಗದು. ಭಾವನೆಯ ಪರಿಣಾಮ ಕ್ರಿಯೆಯ ಮೇಲೆ, ಕ್ರಿಯೆಯ ಪರಿಣಾಮ ಭಾವನೆಯ ಮೇಲೆ, ಜ್ಞಾನದ ಪರಿಣಾಮ ಈ ಎರಡರ ಮೇಲೆ ಆಗದೆ ಇರದು. ಜ್ಞಾನವಾಗಲಿ ಭಾವವಾಗಲಿ ಅಕಿಂಚಿತ್ಕರವಲ್ಲ. ಬೆಂಕಿಯ ಪೆಟ್ಟಿಗೆಯಂತೆ ಬೇಕಾದಾಗ ಜೇಬಿನಲ್ಲಿಡಬಹುದು, ಬೇಕಾದಾಗ ಉಪಯೋಗಿಸಬಹುದು ಎಂಬಂತೆ ಅಲ್ಲ. ಅವು ಜೀವನದಲ್ಲಿ ಬೆರೆತಿರುತ್ತವೆ.

## ೧೭೧. ಕ್ರಿಯಾವಸ್ಥೆಯ ಮೇಲೆ ಭಾವಾವಸ್ಥೆಯ ಪರಿಣಾಮ.

### ದೃಷ್ಟಾಂತ: ಬಂಗಾರದಉಂಗುರ-ಸಭೆಯ ಅಧ್ಯಕ್ಷ

ದೃಷ್ಟಾಂತಕ್ಕೋಸುಗ ನಾವು ಮೊದಲು ಕ್ರಿಯಾವಸ್ಥೆ, ಭಾವಾವಸ್ಥೆಗಳನ್ನು ತುಲನೆ ಮಾಡುವ. ಕ್ರಿಯಾವಸ್ಥೆಯ ಮೇಲೆಯೂ, ಆ ಭೂಮಿಕೆಯ ವಿವೇಕವನ್ನು ಇಟ್ಟುಕೊಂಡು, ಭಾವಾವಸ್ಥೆಯ ಪರಿಣಾಮ ಆಗಲೇ ಬೇಕೆಂದು ವಿಚಾರದಿಂದ ಗೊತ್ತಾಗುತ್ತದೆ. ನನಗೆ ಬೆರಳಲ್ಲಿ ಬಂಗಾರವನ್ನು ಇಟ್ಟುಕೊಳ್ಳಬೇಕಾಗಿದೆ. ಅದಕ್ಕೋಸುಗ ಯಾವುದಾದರೂ ಆಕಾರದ ಬಂಗಾರ ನಡೆಯದು. ಅದು ಉಂಗುರದ ಆಕಾರದ್ದಾಗಬೇಕು. ಆ ಆಕಾರವು ಇರದಿದ್ದರೆ ನನಗೆ ಉಪಯೋಗವಾಗದು. ನಾನು ಅದನ್ನು ಸ್ವೀಕರಿಸೆನು. ಆದರೆ ಅದು ಬೇರೆ ಆಕಾರದ್ದೆಂದು ಅದನ್ನು ನಾನು ಒಗೆಯೆ. ಏಕೆಂದರೆ ನಾನು ಬಂಗಾರದ ಬೆಲೆಯನ್ನು ಬಲ್ಲೆ. ಭಾವಾವಸ್ಥೆಯಲ್ಲಿ ನನಗೆ ಈ ದರ್ಶನವಾಗುವದು. ಈ ಎಲ್ಲ ಶುಭ ಅಶುಭ, ಯಚ್ಚಯಾವತ್-ಜಗತ್ತು ಬ್ರಹ್ಮಸ್ವರೂಪ. ಚೊಕ್ಕ ಚಿನ್ನ. ಇನ್ನೊಂದು ಉದಾಹರಣೆ: ಸಜ್ಜನರ ಸಭೆಗೆ ಅಧ್ಯಕ್ಷ ಬೇಕು. ಸ್ಥಿತಪ್ರಜ್ಞ ಒಬ್ಬ ಸಾಧು ಪುರುಷನನ್ನೇ ಅಧ್ಯಕ್ಷನಾಗಿ ಆರಿಸುತ್ತಾನೆ. ದುರ್ಜನನನ್ನು ಆರಿಸ. ಆದರೆ ಹಾಗೆ ಮಾಡುವಾಗ ದುರ್ಜನರ ವಿಷಯದಲ್ಲಿ ತಿರಸ್ಕಾರ ತಳೆಯ. ದುರ್ಜನನೂ ಒಂದು ಆಕಾರದ ಪರಮೇಶ್ವರನೇ. ಸಜ್ಜನನು ಇನ್ನೊಂದು ಆಕಾರದ ಪರಮೇಶ್ವರ. ಸಜ್ಜನರ ಸಭೆಗೋಸುಗ ಸಜ್ಜನಾಕಾರದ ಪರಮೇಶ್ವರನೇ ಉಪಯುಕ್ತನೆಂದು ಅವನು ಸ್ವೀಕೃತನಾದ. ಕ್ರಿಯಾವಸ್ಥೆಯಲ್ಲಿ ಜ್ಞಾನಿ ಹೀಗೆ ವರ್ತಿಸುತ್ತಾನೆ ಎಂದರೆ ಭೇದದಿಂದ ವರ್ತಿಸುವನೆಂದಲ್ಲ. ಒಳಗಿನ ಏಕತೆಯನ್ನು ತಿಳಿದು ಅವನು ಬಾಹ್ಯವರ್ತನದಲ್ಲಿ ವಿವೇಕವನ್ನು ಮಾಡುತ್ತಾನೆ. ಹೊರಗಿನ ವರ್ತನದ ಆಕಾರಗಳಲ್ಲಿ ಅವನು ಭೇದವನ್ನು ಮಾಡುವಾಗ ಒಳಗಿನ ಅಭೇದದ ಭಾವನೆಯು ರಕ್ಷಣೆಯಾಗುವಂತೆ ನೋಡಿಕೊಳ್ಳುತ್ತಾನೆ. ಅವನು ಸಮದೃಷ್ಟಿಯಿಂದ ನೋಡುತ್ತಾನೆ. ಇದರ ಅರ್ಥ, ಅವನ ಪ್ಲೇಗಿಗೂ ಕ್ಷಯಕ್ಕೂ ಒಂದೇ ಔಷಧ ಕೊಡುತ್ತಾನೆಂದಲ್ಲ. ಕ್ರಿಯಾವಸ್ಥೆಯಲ್ಲಿ ಅವನು ಆಕಾರದಂತೆ ವರ್ತಿಸಬೇಕಾಗುತ್ತದೆ. ಆದರೆ ವಿವೇಕವನ್ನು ಮಾಡಿದರೂ ಭಾವಾವಸ್ಥೆಯಲ್ಲಿಯ ಅನುಭವ ಇದೆಲ್ಲವೂ ಬ್ರಹ್ಮರೂಪ

ಇರುತ್ತದೆಂಬುದನ್ನು ಮರೆಯಕೂಡದೆಂದು ಅವನಿಗೆ ಹೇಳುತ್ತದೆ. ಯಾವುದನ್ನೂ ಅವನು ಅನಾದರ ಮಾಡಕೂಡದು. ಎಲ್ಲದರ ವಿಷಯದಲ್ಲಿ ಆದರ ಬೇಕು.

## ೧೭೩. ಭಾವಾವಸ್ಥೆಯ ಮೇಲೆ ಕ್ರಿಯಾವಸ್ಥೆಯ ಪರಿಣಾಮ ದೃಷ್ಟಾಂತ: ಮಹಾ ರೋಗಿ ಸೇವಾ

ಒಂದು ಅವಸ್ಥೆಯಲ್ಲಿಯ ಅನುಭವವನ್ನು ಜ್ಞಾನವನ್ನು ಇನ್ನೊಂದು ಅವಸ್ಥೆಯಲ್ಲಿ ಮರೆಯಲು ಶಕ್ಯವಾಗದು. ವ್ಯವಹಾರದಲ್ಲಿಯೂ ನಾವು ಇದನ್ನು ಕಾಣುತ್ತೇವೆ. ಸಂಪೂರ್ಣವಾಗಿ ಒಂದೇ ಬಗೆಯ ಭೂಮಿಕೆ ಉಳಿವುದು ಶಕ್ಯವಿಲ್ಲ. ವಿನೋದಶೀಲರಾದ ಮಿತ್ರರೊಬ್ಬರು ಒಂದು ನಗೆಯ ಮಾತನ್ನು ಹೇಳುತ್ತಾರೆ. ಗಣಿತದ ಪ್ರೊಫೆಸರರೊಬ್ಬರು ಒಮ್ಮೆ ಹವೆಗೋಸುಗ ಹೊರಟರು. ದಾರಿಯಲ್ಲಿ ಯಾವನೊ ಒಬ್ಬ ಸ್ಟೇಶನು ಯಾವ ದಿಕ್ಕಿನಲ್ಲಿದೆ ಎಂದು ಕೇಳಿದ. ಭೂಗೋಲ ನನ್ನ ವಿಷಯವಲ್ಲವೆಂದು ಪ್ರೊಫೆಸರ ಸಾಹೇಬರು ಉತ್ತರವಿತ್ತರಂತೆ. ಗಣಿತದ ಪ್ರೊಫೆಸರನಿಗೆ ಭೂಗೋಲದ ಜ್ಞಾನದ ಸಂಬಂಧವಿರದು ಎಂದು ಆ ಪ್ರೊಫೆಸರನ ಅಭಿಪ್ರಾಯ. ಭಾವಾವಸ್ಥೆಯಲ್ಲಿಯ ಸರ್ವಭಾವನೆಗಳು ಕ್ರಿಯಾವಸ್ಥೆಗೆ ಸಂಬಂಧಿಸಿರವೆಂಬುದು ನಿಜ. ಆದರೂ ಕ್ರಿಯಾವಸ್ಥೆಯಲ್ಲಿ ಭಾವಾವಸ್ಥೆಯು ತತ್ತ್ವ ಮರೆಯಾಗದು. ಇಷ್ಟೇ ಅಲ್ಲ, ಯಾವನಲ್ಲಿ ಭಾವಾವಸ್ಥೆಯ ಭೂಮಿಕೆ ಪ್ರಧಾನವೋ ಅವನು ಕ್ರಿಯಾವಸ್ಥೆಯಲ್ಲಿಯ ವಿವೇಕವನ್ನು ಉಪೇಕ್ಷಿಸನು. ಇದು ಉಪ್ಪು, ಇದು ಸಕ್ಕರೆ, ಇದು ಕೆಂಪು ಬಣ್ಣ, ಇದು ಹಳದಿ ಬಣ್ಣ, ಇದು ಚತುಷ್ಕೋಣದ ವಸ್ತು, ಇದು ವರ್ತುಲಾಕಾರದ ವಸ್ತು ಎಂಬುದು ಅವನಿಗೆ ಗೊತ್ತೇ ಇರುತ್ತದೆ. ಕೆಲವೊಂದು ಬಾಹ್ಯ ಕಾರಣದಿಂದ ವ್ಯಕ್ತಿಗತ ಅಥವಾ ಸಾಮಾಜಿಕ ಸ್ವಾಸ್ಥ್ಯಕ್ಕೋಸುಗ ಒಬ್ಬ ಮನುಷ್ಯನನ್ನು, ಉದಾಹರಣೆಗಾಗಿ, ಒಬ್ಬ ಮಹಾ ರೋಗಿಯನ್ನು ಮುಟ್ಟದಿರುವುದು ಇಷ್ಟವೆಂದು ಸಿದ್ಧವಾದರೆ, ಅವನೂ ಕ್ರಿಯಾವಸ್ಥೆಯಲ್ಲಿ ಹಾಗೆ ಮಾಡುತ್ತಾನೆ. ಅವನು ಈ ಮಹಾ ರೋಗಿಯ ಸೇವೆಯನ್ನು ಸ್ವತಃ ಮಾಡುತ್ತಾನೆ. ಆದರೆ ಅವನ ರೋಗ ತನಗೆ ಅಂಟದಂತೆ ನೋಡಿಕೊಳ್ಳುತ್ತಾನೆ. ಅವನ ಉದ್ದೇಶ ರೋಗವನ್ನು

ತನಗೆ ಅಂಟಿಸಿಕೊಳ್ಳುವುದಲ್ಲ, ಮಹಾರೋಗಿಯ ರೋಗವನ್ನು ನೀಗಿಸುವುದು. ಅಂಟಿದರೆ ನನಗೆ ಅಂಟಲಿ ಎಂದು ಅವನು ಧೈರ್ಯ ಮಾಡುವುದೇನೋ ನಿಜ. ಆದರೆ ಉಳಿದವರಿಗೆ ಅಂಟಬಾರದೆಂದು ಅವನು ಆ ರೋಗಿಯನ್ನು ಸಮಾಜದಿಂದ ದೂರವಾಗಿಡುತ್ತಾನೆ. ಅವಶ್ಯವೆನಿಸಿದರೆ ತಾನೂ ದೂರವಾಗಿರುತ್ತಾನೆ. ಆದರೆ ನಿಯಮನದಲ್ಲಿ ಅಸ್ಥೆ, ಪ್ರೇಮ, ಆದರಬುದ್ಧಿ ಇರುತ್ತವೆ. ಮಹಾರೋಗಿಯೂ ಈಶ್ವರರೂಪವೆಂಬ ಭಾವನೆಯನ್ನು ಅವನು ಮರೆಯ. ಆದರೆ ಸಮಾಜದ ಸುರಕ್ಷಿತತೆಗೋಸುಗ ಅವನು ಎಚ್ಚರಿಕೆಯಿಂದಿರುತ್ತಾನೆ. ಇದು ವಿವೇಕವಾಯಿತು. ಆದರೆ ಅವನು ಮಹಾರೋಗಿಗಳನ್ನು ಅಪವಿತ್ರರಾಗಿ ಬಗೆದು ಅವರನ್ನು ಬಹಿಷ್ಕರಿಸಿದರೆ, ಅವರ ಸೇವೆಯನ್ನು ಉಪೇಕ್ಷಿಸಿದರೆ, ಅವರನ್ನು ತಿರಸ್ಕರಿಸತೊಡಗಿದರೆ, ಸರ್ವತ್ರವೂ ಈಶ್ವರ ರೂಪವನ್ನು ಕಾಣುವ ಅವನ ಭಾವನೆ ಕೊಲೆಯಾಯಿತು. ಬಳಿಕ ಅವನ ಸ್ಥಿತಪ್ರಜ್ಞತೆ ಎಲ್ಲಿದೆ? ಎಲ್ಲವೂ ಒಂದೇ ಎಂಬುದು ಭಾವಾವಸ್ಥೆ, ಕ್ರಿಯಾವಸ್ಥೆಯಲ್ಲವೆಂದು ಸನಾತನಿಗಳೆಂಬುದು ನಿಜ. ಆದರೆ ಈ ಅವಸ್ಥೆಗಳು ಒಂದರಿಂದೊಂದು ತೀರ ಭಿನ್ನ ಎಂಬ ಅವರ ಅಭಿಪ್ರಾಯ ಸರಿಯಾದುದಲ್ಲ. ಅವು ಒಂದೇ ನಿಷ್ಠೆಯ ಪ್ರಕಾರಗಳು. ಈ ರೀತಿಯಾಗಿ ವಿಚಾರ ಮಾಡಿದರೆ ಸನಾತನಿಗಳ ಮಾತಿನಲ್ಲಿಯ ಸಾರ ಲಕ್ಷ್ಯದಲ್ಲಿ ಬರುತ್ತದೆ. ಅಸಾರವೂ ಗೊತ್ತಾಗುತ್ತದೆ.

# ೧೭ನೆಯ ವ್ಯಾಖ್ಯಾನ

## ೧

## ೧೭೩. ಭಾವ ದ್ವಾರದಿಂದ ಕ್ರಿಯೆಯ ನಿಯಮನವಾಗುತ್ತದೆ. ಹೆಚ್ಚಿನ ವಿವರಣೆ

ಸ್ಥಿತಪ್ರಜ್ಞನ ತ್ರಿವಿಧ ಅವಸ್ಥೆಗಳನ್ನು ನಾವು ವಿವರಿಸುತ್ತಿದೇವೆ. ಜ್ಞಾನ, ಭಾವ, ಕ್ರಿಯೆ, ಈ ಮೂರು ಅವಸ್ಥೆಗಳು ಆಕ್ರಮಣಕಾರಿಗಳಾಗಿರದಿದ್ದರೂ ಅನುಗ್ರಹಕಾರಿಗಳಾಗಿವೆ. ಅರ್ಥಾತ್-ಅವು ಒಂದರ ಮೇಲೊಂದು

ಹತ್ತಿ ಕೊಡುವುದಿಲ್ಲ, ಆದರೂ ಒಂದರ ಮೇಲೊಂದರ ಪ್ರಭಾವವಾಗದಿರದು. ಕಾಮನಬಿಲ್ಲಿನ ಬೇರೆ ಬೇರೆ ಬಣ್ಣಗಳು ತಮ್ಮಷ್ಟಕ್ಕೆ ಭಿನ್ನ ಭಿನ್ನವಾಗಿ ತೋರಿದರೂ ಅವುಗಳ ಛಟಾ ಒಂದರ ಮೇಲೊಂದು ಮೂಡುತ್ತದೆ. ಇವೆಲ್ಲವೂ ಕೂಡಿ ಕಾಮನ ಬಿಲ್ಲಾಗುತ್ತದೆ. ಅದರಂತೆ ಈ ಮೂರು ಅವಸ್ಥೆಗಳು ಕೂಡಿ ಜ್ಞಾನಿಯ ಜೀವನವಾಗುತ್ತದೆ. ಉದಾಹರಣೆಗೆಂದು ಭಾವವಿರುದ್ಧ ಕ್ರಿಯೆ. ಈ ಸ್ಥಿತಿಯಾದರೆ ಏನಾಗುತ್ತದೆಂಬುದನ್ನು ನಾವು ನೋಡಿದೇವೆ. ಕ್ರಿಯಾವಸ್ಥೆಯ ಮೇಲೆ ಭಾವಾವಸ್ಥೆಯ ಅನುಗ್ರಹ ಉಳಿಯದಿದ್ದರೆ ವಿವೇಕವು ಭೇದವಾಗಿ ಪರಿವರ್ತಿತವಾಗುವುದು ಶಕ್ಯವಿದೆ. ಇದಕ್ಕೆ ಹರಿಜನರ ವಿರುದ್ಧ ಸನಾತನಿಗಳ ಯುಕ್ತಿವಾದವು ಉದಾಹರಣೆ. ನಿಜವಾಗಿಯೂ ಈ ಯುಕ್ತಿವಾದ ಉಪಯೋಗವಿಲ್ಲದುದು. ಏಕೆಂದರೆ, ಅದರಲ್ಲಿ ವಿವೇಕವೆಂದು ಹೇಳಿದುದು ವಿವೇಕವಲ್ಲ; ಕೇವಲ ಭೇದ. ಮನುಷ್ಯನು ಮನುಷ್ಯಜನ್ಮ ಪಡೆದ ಇನ್ನೊಬ್ಬನನ್ನು ಜನ್ಮದಿಂದ ಅಸ್ಪೃಶ್ಯನಾಗಿ ಎಣಿಸುವುದರಲ್ಲಿ ವಿವೇಕವೆಲ್ಲಿದೆ? ಅದು ಪರಂಪರಾಗತವಾದ ಮೂಢ ಭೇದವೇ ಸರಿ. ವಿವೇಕ, ಭೇದಗಳು ತೀರ ಭಿನ್ನವಾದ ಭೂಮಿಕೆಗಳ ಮೇಲಿನ ವಸ್ತುಗಳು. ಖಾದ್ಯ ಅಖಾದ್ಯಗಳ ವಿಚಾರವನ್ನು ವಿವೇಕವೆನ್ನಬಹುದು. ವಿವೇಕವನ್ನು ವಿವರಿಸಲು ನಾವು ಮಹಾರೋಗಿಯನ್ನು ಉದಾಹರಿಸಿದೆವು. ಮಹಾರೋಗಿಯನ್ನು ದೂರವಿಡಬೇಕು. ಆದರೆ ಅವನ ವಿಷಯದಲ್ಲಿ ಸಹಾನುಭೂತಿ ಸೇವಾಭಾವ ಆದರ ಇರಬೇಕು. ಬೇರೆಯಾಗಿಡುವುದು ಪ್ರೇಮವೃತ್ತಿಯಿಂದ ಪ್ರೇರಿತವಾಗಿದ್ದರೆ ಅದು ವಿವೇಕ. ಹಾಗಿರದಿದ್ದರೆ ಅದೂ ಭೇದವೇ. ಇನ್ನೊಂದು ನ್ಯಾಯಾಧೀಶನ ಉದಾಹರಣೆ ತೆಗೆದುಕೊಳ್ಳುವ. ನ್ಯಾಯ ಮಾಡುವಾಗ ನ್ಯಾಯಾನ್ಯಾಯ ವಿವೇಕವನ್ನು ಮಾಡಲೇಬೇಕಾಗುತ್ತದೆ. ಹಾಗಿರದಿದ್ದರೆ ನ್ಯಾಯ ಮಾಡುವುದರಲ್ಲಿ ಅರ್ಥವಿಲ್ಲ. ಆದರೆ ಆ ಕ್ರಿಯೆಯ ಮೇಲೆ ಸರ್ವಾತ್ಮಭಾವದ ಮುದ್ರೆ ಮೂಡಬೇಕು. ಇದನ್ನೇ ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ನ್ಯಾಯದಲ್ಲಿ ದಯೆ ಕೂಡಿರಬೇಕು. ಹಾಗಾದರೇನೇ ಅದು ಸಮುಚಿತ ನ್ಯಾಯವಾಗುತ್ತದೆ. ಆತ್ಮೌಪಮ್ಯ ಬುದ್ಧಿ ಇಲ್ಲದಿದ್ದರೆ ನ್ಯಾಯಕ್ಕೆ ಸೇಡಿನ ರೂಪ ಬರುತ್ತದೆ.

## ೧೭೪. ಹಾಗೆಂಯೆ ಜ್ಞಾನದ್ವಾರದಿಂದ. ಅದರಿಂದಲೇ ನಿಷ್ಕಾಮ ಕರ್ಮಯೋಗದ ಜನ್ಮ

ಭಾವ-ದ್ವಾರದಿಂದ ಕ್ರಿಯೆಯ ನಿಯಮನವಾಗಬೇಕಾದಂತೆ ಜ್ಞಾನ ದ್ವಾರದಿಂದಲೂ ಕ್ರಿಯೆಯ ನಿಯಮನವಾಗಬೇಕು. ನಾನು ಶುಭದ ಅಶುಭದ ಆಚೆಗಿದ್ದೇನೆ, ಶುಭ ಅಶುಭ ಎರಡೂ ನನ್ನ ದೃಷ್ಟಿಯಿಂದ ತ್ಯಾಜ್ಯ ವಾದುವೇ ಎಂಬುದು ಜ್ಞಾನಾವಸ್ಥೆಯ ಭೂಮಿಕೆ. ಕ್ರಿಯೆಯಲ್ಲಂತು ಶುಭಾ ಶುಭ ವಿವೇಕ ಅವಶ್ಯ. ಹೀಗೆ ಈ ಎರಡೂ ಭೂಮಿಕೆಗಳು ಪರಸ್ಪರ ವಿರೋಧಿಗಳಾಗಿ ತೋರುತ್ತವೆ. ಆದರೆ ಹಾಗೆ ತೋರಿದರೂ ನಿಜವಾಗಿ ಅವು ಪರಸ್ಪರಾನುಗ್ರಾಹಕವಾಗಿರುತ್ತವೆ. ಜ್ಞಾನಾವಸ್ಥೆ ಕ್ರಿಯಾವಸ್ಥೆ ಭಿನ್ನವಾಗಿದ್ದರೂ ಜ್ಞಾನಿಯ ಕ್ರಿಯೆಯ ಮೇಲೆ ಆತನ ಜ್ಞಾನದ ಪ್ರಭೆ ಪಸರಿಸಿರುತ್ತದೆ. ಆತನ ಜ್ಞಾನದ ಬಣ್ಣ ಆತನ ಕ್ರಿಯೆಗೂ ಬರುತ್ತದೆ. ಆತನ ಕ್ರಿಯೆ ಆತನ ಜ್ಞಾನದಿಂದ ಪ್ರಕಾಶಿತವೂ ಮಂಡಿತವೂ ಆಗಿರುತ್ತದೆ. ಕ್ರಿಯೆಯಲ್ಲಿ ಶುಭಾಶುಭ ವಿವೇಕವಾಗುತ್ತಿದ್ದರೂ ಶುಭಾಶುಭಗಳೆರಡೂ ಮಿಥ್ಯ ಎಂಬುದು ಆತನಿಗೆ ಗೊತ್ತಿರುತ್ತದೆ. ಆದುದರಿಂದ ಕ್ರಿಯಾವಸ್ಥೆ ಯಲ್ಲಿಯೂ ಅವನಲ್ಲಿ ಅಲಿಪ್ತತೆ ನಿರಹಂಕಾರಿತೆ ಇರುತ್ತದೆ. ಕೇವಲ ಜ್ಞಾನಾ ವಸ್ಥೆಯಲ್ಲಿ ಸರ್ವಕರ್ಮ-ಸಂನ್ಯಾಸದ ಭೂಮಿಕೆ. ಕ್ರಿಯಾವಸ್ಥೆಯಲ್ಲಿ ಆತ ಶುಭಾಶುಭ ವಿವೇಕವನ್ನು ಮಾಡುತ್ತಾನೆ. ಆದರೆ ಜ್ಞಾನಾವಸ್ಥೆ ಯಲ್ಲಿಯ ಜ್ಞಾನದ ಮೂಲಕ ಆತನಿಗೆ ಅಹಂಕಾರವಾಗಲಿ ಲಿಪ್ತತೆಯಾಗಲಿ ಬಾರದು. ನಿಷ್ಕಾಮ ಕರ್ಮಯೋಗ ಅದರಿಂದಲೇ ಜನ್ಮಿಸುತ್ತದೆ.

## ೧೭೫. ಸ್ಥಿತಪ್ರಜ್ಞನ ಅವಸ್ಥೆಗಳ ಜ್ಞಾನ ಸಾಧಕನಿಗೂ ಸಮಾಜಕ್ಕೂ ಅವಶ್ಯಕ

ಹೀಗೆ ಈ ಮೂರೂ ಅವಸ್ಥೆಗಳು ಪರಸ್ಪರ-ಸಂಸ್ಪೃಷ್ಟವೂ ಪರಸ್ಪರ-ಸಂಮಿಶ್ರವೂ ಆಗಿವೆ. ಇವು ಮೂರೂ ಕೂಡಿ ಸ್ಥಿತಪ್ರಜ್ಞನ ಒಂದೇ ಪರಿ ಪೂರ್ಣವೂ ಭವ್ಯವೂ ಆದ ಜೀವನವಾಗುತ್ತದೆ. ಆದರೆ ಸ್ಥಿತಪ್ರಜ್ಞನ ಜೀವನದ ಈ ಭವ್ಯ ಲಕ್ಷಣವನ್ನು ತಿಳಿವುದರಿಂದ ನಮಗೇನು ಲಾಭ? ಈ ಪ್ರಶ್ನೆ ಮನಸ್ಸಿನಲ್ಲಿ ಬರಬಹುದು. ಇದಕ್ಕೆ ಜ್ಞಾನದೇವನ ಉತ್ತರ ಹೀಗಿದೆ: **ಮುಕ್ತಾತೇ ನಿರ್ಧಾರಿ ತಾ ಲಾಭೇ ಆಪುಲೀ ಚಿ ಮುಕ್ತತಾ.**

ಮುಕ್ತ ಪುರುಷನ ಜೀವನದ ಚಿಂತನ ಮಾಡುವುದರಿಂದ ನಮಗೆ ನಮ್ಮ ಮುಕ್ತಿಯ ದರ್ಶನವಾಗುತ್ತದೆ. ಮುಕ್ತಿ ಸ್ಥಿತಪ್ರಜ್ಞನ ಸೊತ್ತಲ್ಲ; ಎಲ್ಲರ ನಿಜ ವಸ್ತು. ಮುಕ್ತನ ಚಿಂತನದಿಂದ ಆ ನಮ್ಮ ಕಳೆದ ವಸ್ತುವನ್ನು ಶೋಧಿಸಲು ಮಾರ್ಗ ತಿಳಿಯುತ್ತದೆ. ಆದುದರಿಂದ ಮುಕ್ತರ ಜೀವನಾದರ್ಶವೂ ಜೀವನ-ಸ್ಪರ್ಶವೂ ಸಾಧಕನಿಗೂ ಸಮಾಜಕ್ಕೂ ಉಪಯುಕ್ತ. ಅವನ ಅವಸ್ಥೆಗಳು ಅವನಿಗೆ ಸ್ವಾಭಾವಿಕ ನಮಗೆ ಪ್ರಯತ್ನಪರದಿಂದ ಆದುದರಿಂದ ಅನುಕರಣೀಯ. ನಾವು ಆ ದಿಶೆಯಲ್ಲಿ ಹೋಗಬೇಕಾಗಿದೆ. ಜೀವನವನ್ನು ಅತ್ತ ಹೊರಳಿಸಬೇಕು. ಅವನು ಹಾಕಿಕೊಟ್ಟ ಹೆಜ್ಜೆಗುರುತಿನಂತೆ ನಡೆಯಬೇಕು. ಎಲ್ಲ ಸಮಾಜದ ಐಹಿಕ ಜೀವನದ ಸಾರ್ಥಕತೆಯೂ ಆ ಜೀವನ ಮೋಕ್ಷ-ಪ್ರಮಾಣವಾಗಿರುವುದರಲ್ಲಿ ಇದೆ. ಜೀವನವು ಮುಕ್ತಿಯ ಸಾಧನವಾಗಬಲ್ಲುದೆಂಬುದು ಸ್ಥಿತ-ಪ್ರಜ್ಞನ ಉದಾಹರಣೆಯಿಂದ ಗೊತ್ತಾಗುತ್ತದೆ. ಸ್ಥಿತಪ್ರಜ್ಞನಲ್ಲಿ ಪರಿಪೂರ್ಣವೂ ನಿರ್ದೋಷವೂ ಆದ ಆದರ್ಶ ಕಾಣಬರುತ್ತದೆ. ಉಳಿದವರ ಪ್ರಯತ್ನದಲ್ಲಿ ದೋಷಗಳು ಉಳಿಯಬಹುದು. ಆದರೆ ಆತ್ಮದ ಸ್ವರೂಪ ಎಲ್ಲೆಲ್ಲಿಯೂ ಸಮಾನವಾಗಿರುವುದರಿಂದ ಸ್ಥಿತ-ಪ್ರಜ್ಞನ ಜೀವನದ ಅವಸ್ಥೆಗಳ ಜ್ಞಾನ ಸಾಧಕನಿಗೂ ಸಮಾಜಕ್ಕೂ ಆವಶ್ಯಕ.

೩

## ೧೬೬. ಸ್ಥಿತಪ್ರಜ್ಞನ ತ್ರಿಸೂತ್ರಿ "ಓಂ ತತ್ ಸತ್" ಮಂತ್ರದಿಂದ ಸೂಚಿತ

ಇಲ್ಲಿ ತ್ರಿಸೂತ್ರಿಯಲ್ಲಿ ಹೇಳಿದ ವಿಷಯವನ್ನು ಭಗವದ್ಗೀತೆ ಹದಿನೇಳನೆಯ ಅಧ್ಯಾಯದ ಕೊನೆಯಲ್ಲಿ "ಓಂ ತತ್ ಸತ್" ಈ ಮಂತ್ರದಿಂದ ಹೇಳಿದೆ. ಮಂತ್ರವು ಕೇವಲ ಶಬ್ದಾತ್ಮಕವಾದರೂ ಅದರ ಸಾಮರ್ಥ್ಯ ಮಾತ್ರ ವಿಲಕ್ಷಣ. ಮಂತ್ರ ಜೀವನವನ್ನು ತಿದ್ದುತ್ತದೆ. ಮಂತ್ರದ ಪ್ರಭಾವದಿಂದ ಪ್ರೇರಣೆಯಿಂದ ಮನುಷ್ಯನು ಜೀವನವನ್ನು ತದನುರೂಪವಾಗಿ ಸ್ವೇಚ್ಛೆಯಿಂದ ಮಾರ್ಪಡಿಸಿಕೊಳ್ಳುತ್ತಾನೆ. ಸ್ಥಿತ-ಪ್ರಜ್ಞನ ಜೀವನವನ್ನು ಎಲ್ಲರೂ ಅನುಕರಿಸಬೇಕೆಂದು ಗೀತೆ ಕೃಪಾಪೂರ್ವಕ ಈ ಮಂತ್ರ ಚಿಂತಾ

ಮಣಿಯನ್ನು ನಮಗೆ ಕೊಟ್ಟನು. ಅದು ವೇದೋಪನಿಷತ್ತುಗಳು ಸಾರವೆಂದು ತಿಳಿಯಲ್ಪಡುತ್ತದೆ.

## ೧೭೭. ಮೊದಲನೆಯ ಪದ ಓಂ. ಓಂ ಶಬ್ದ ಭಾವನಾವಸ್ಥೆಯ ಲಬ್ಧಿಗಾಗಿ ಭಾವನೀಯವಾದುದು

ಇದರಲ್ಲಿ ಓಂ ಮೊದಲನೆಯ ಪದ. ಓಂ ಎಂದರೆ ಈಶ್ವರ ತತ್ತ್ವ ವಿರಾಟ್, ವ್ಯಾಪಕ. ವಿಶಾಲ ಎಲ್ಲವುಗಳ ಸಮಾವೇಶ ಮಾಡುವ ಬ್ರಹ್ಮನ ಸಗುಣ ಸ್ವರೂಪ. ಓಂ ಅಕ್ಷರವೂ ಹೌದು, ಶಬ್ದವೂ ಹೌದು. ಶಬ್ದವಾದರೆ ಅದರ ಅರ್ಥ "ಅಹುದು" ಎಂದು. ಓಂ ಈಶ್ವರನ "ಅಹುದು" ರೂಪ

**ತುಕಾ ಮ್ಹಣೇ ಜೇಜೇ ಬೋಲಾ। ತೇತೇ ಸಾಜೇಯಾ ವಿಠ್ಠಲಾ॥**

ಹೀಗೆ ತುಕಾರಾಮನು ಆಸ್ತಿಕ್ಯಾತ್ಮಕನಾಗಿ ಈಶ್ವರನ ವರ್ಣನೆಯನ್ನು ಮಾಡಿದ್ದಾನೆ. ಈಶ್ವರ ಸಾಕಾರನೆ? 'ಅಹುದು'. ಅವನು ನಿರಾಕಾರನೆ? 'ಅಹುದು'. ಅವನು ಶುಭನೆ? 'ಅಹುದು.' ಅವನು ಅಶುಭನೆ? 'ಅಹುದು'. ಅಣುವೆ? 'ಅಹುದು'. ಮಹಾನ್? 'ಅಹುದು.' ಇವೇ ಮೊದಲಾದ ಎಲ್ಲ ಪ್ರಶ್ನೆಗಳಿಗೆ ಉತ್ತರ—'ಅಹುದು.' "ಇದಂ ಮಯಃ ಅದೋ ಮಯಃ" ಅವನು ಇದೂ ಆಗಿದ್ದಾನೆ, ಅದೂ ಆಗಿದ್ದಾನೆ. ಕಲ್ಪನೆಗೆ ಸಿಲುಕುವ, ಸಿಲುಕದಿರುವ ಎಲ್ಲವನ್ನು ತನ್ನ ಹೊಟ್ಟೆಯಲ್ಲಿ ಸೇರಿಸಿಕೊಳ್ಳುವ ವ್ಯಾಪಕವೂ ವಿಶಾಲವೂ ಭವ್ಯವೂ ಆದ ರೂಪದ ವಾಚಕ ಈ ಓಂ ಶಬ್ದ. ಆದುದರಿಂದ ಭಾವನಾವಸ್ಥೆಯ ಲಬ್ಧಿಗೋಸ್ಕರ ಓಂ ಶಬ್ದ ಭಾವನೀಯವಾಗಿದೆ

## ೧೭೮. ಓಂ ಅಕ್ಷರ ಎಲ್ಲ ವರ್ಣಗಳ ಪ್ರತೀಕ

ಓಂ ಅಕ್ಷರ ಎಲ್ಲ ವರ್ಣಗಳ ಪ್ರತೀಕವೆಂದು ತಿಳಿಯಲ್ಪಟ್ಟಿದೆ. ಅದರ ಪ್ರಾರಂಭ 'ಅ' ದಲ್ಲಿ ಮತ್ತು ಕೊನೆ 'ಮ' ದಲ್ಲಿ. ಇವೆರಡನ್ನು 'ಉ' ಹೊಂದಿಸುತ್ತದೆ. ವರ್ಣಮಾಲೆಯ ಆರಂಭ 'ಅ' ದಿಂದ ಆಗಿ 'ಮ' ದಲ್ಲಿ ಅದರ ಸಮಾಪ್ತಿಯಾಗುತ್ತದೆ. ಅವರ್ಣದ ಆದಿ, ಕಂಠದಿಂದ ಹುಟ್ಟುತ್ತದೆ; ವರ್ಣದ ಉಗಮ ಕಂಠದಿಂದ, ಸಮಾಪ್ತಿ ತುದಿಯಲ್ಲಿ ಓಷ್ಠ-ಸ್ಥಾನದಿಂದ ಹುಟ್ಟುವ ಕೊನೆಯ ವರ್ಣ. 'ಮ' ವನ್ನು ಉಚ್ಚರಿಸುವಾಗ ನಾವು ಎರಡು ತುಟಿಗಳನ್ನು ಕೂಡಿಸುತ್ತೇವೆ. ಆಗ ಸ್ವಲ್ಪಮಟ್ಟಿಗೆ ಮೂಗಿನ ಉಪಯೋಗವನ್ನು ಮಾಡಿಕೊಳ್ಳುತ್ತೇವೆ. ಆದುದರಿಂದ 'ಮ'ದ ಆಚೆಗೆ

ವರ್ಣಗಳಿಲ್ಲ. ನಾವು ಯ, ರ, ಲ, ವ ಇತ್ಯಾದಿ ವರ್ಣಗಳನ್ನು 'ಮ'ದ ತರುವಾಯಹೇಳುತ್ತೇವೆ. ಆದರೆ ಅವು ಅಂತರ ಸ್ಥಾನಗಳಿಂದ ಹುಟ್ಟುವ ವರ್ಣಗಳು. ಕಂಠ, ಓಷ್ಠ ಇವುಗಳ ನಡುವಿನ ಸ್ಥಾನಗಳಲ್ಲಿ ಹುಟ್ಟುವ ವರ್ಣಗಳ ಪ್ರತಿನಿಧಿಯಾಗಿ 'ಉ' ಇದೆ. 'ಉ' ಎಂದರೆ ಉಭಯ. ಇತ್ತಲಿನ ಅತ್ತಲಿನ ಬದಿಗಳನ್ನು ಜೋಡಿಸುವ ವರ್ಣ. ಹೀಗೆ ಸರ್ವ ಸಾರಸ್ವತ, ಸರ್ವ ಸಾಹಿತ್ಯ, ಸರ್ವ ಶುಭಾಶುಭ ವಾಙ್ಮಯ 'ಓಂ' ಅಕ್ಷರದಲ್ಲಿ ಬರುತ್ತದೆ. ಈ ಉಪಪತ್ತಿ ಕಾಲ್ಪನಿಕವೇನೊ ನಿಜ, ಆದರೆ ಈ ಬಗೆಯಾಗಿ ಎಲ್ಲ ವರ್ಣಗಳ ಒಂದು ಪ್ರತೀಕವನ್ನು ಕಲ್ಪಿಸುವುದರಿಂದ ವ್ಯಾಪಕವಾದ, ವಿಶ್ವರೂಪವಾದ, ಈಶ್ವರ-ತತ್ತ್ವದ ಚಿಹ್ನವೆಂದು ಅದು ಚಿಂತನಕ್ಕೆ ಉಪಯೋಗವಾಗುತ್ತದೆ.

**೧೭೯. ಓಂ ಇದರ ವ್ಯುತ್ಪತ್ತಿ: ಓಂ ಇದು ಒಂದು ಧಾತು ರೂಪ**

ತೌಲನಿಕ ವ್ಯುತ್ಪತ್ತಿಯನ್ನು ವಿಚಾರಮಾಡಿದರೆ ಓಂ ಇದು ಧಾತು ರೂಪವೆಂದು ನನಗನಿಸುತ್ತದೆ. 'ಸರ್ವತ್ರವೂ ವ್ಯಾಪಿಸಿರು' ಎಂದು ಆ ಧಾತುವಿನ ಅರ್ಥ. ಎಲ್ಲ ಭೂತಗಳಲ್ಲಿ ಅವಿತಿರುವ ಸ್ವರೂಪ ಓಂ. ಓಂವ್ ಎಂಬ ಮರಾಠಿ ಧಾತು ಅತಿ ಪ್ರಾಚೀನ ಎಂದರೆ ಪೂರ್ವ ವೈದಿಕ ಕಾಲದ ವರೆಗೆ ಹೋಗುತ್ತದೆಂಬುದನ್ನು ಶಾಸ್ತ್ರಜ್ಞರು ಈಗ ಮಾನ್ಯ ಮಾಡಿದಂತೆ ಇದೆ. ಕೆಲವರು ಸಂಸ್ಕೃತದಲ್ಲಿಯ ವೇ ಧಾತುವಿನೊಡನೆ ಓಂವ್ ಧಾತುವಿನ ಸಂಬಂಧವಿದೆ ಎಂದು ತಿಳಿಯುತ್ತಾರೆ. ಇದನ್ನು ಒಪ್ಪಿದರೆ ಓಂವ್ ದ ಅನುಸ್ವಾರದ ಉಪಪತ್ತಿ ಹತ್ತದು. ಓವೀ (ಛಂದಸ್ಸು) ಮಹಾರಾಷ್ಟ್ರ ಭಾಷೆಯ ಗಾಯತ್ರಿಯೆ ಆಗಿದೆ. ಅದು ಇದೇ ಓಂ ಧಾತುವಿನ ರೂಪ. ಎಲ್ಲ ವಾಙ್ಮಯವನ್ನು ಯಾವ ಛಂದದಲ್ಲಿ ಸುಲಭವಾಗಿ ಹೆಣೆಯಬಹುದೋ ಅದು ಓವೀ. ಓಂ ಕಾರಕ್ಕೆ ಮೂರುವರೆ ಮಾತ್ರೆ ಕಲ್ಪಿಸಲ್ಪಟ್ಟಿವೆ. ಜ್ಞಾನದೇವನೂ ತನ್ನ ಓವಿಗಳಿಗೆ ಮೂರೂವರೆ ಚರಣಗಳನ್ನು ಯೋಜಿಸಿದಾನೆ. 'ಉಮಾ' ಶಬ್ದದಲ್ಲಿ ಇದೇ ಧಾತು; ವಿಶ್ವವ್ಯಾಪಿನೀ ದೇವಿಯೆಂದು ಅದರ ಅರ್ಥ. ಇದೇ ಧಾತುವಿಗೆ ವಿ ಉಪಸರ್ಗವನ್ನು ಜೋಡಿಸಿ ಪರಮವ್ಯಾಪಕ ಆಕಾಶವನ್ನು ಸೂಚಿಸುವ ವ್ಯೋಮನ್ ಶಬ್ದ ನಿರ್ಮಿಸಲ್ಪಟ್ಟಿದೆ. ಲ್ಯಾಟಿನ್ ಭಾಷೆಯಲ್ಲಿ 'ಆಮ್ನಿಸ್' ಎಂದರೆ ಸರ್ವ ಅಥವಾ ವಿಶ್ವವೆಂದು ಅರ್ಥ. ಈ

'ಆಮ್ನಿಸ್' ಶಬ್ದವೂ ಓಂ ಶಬ್ದದ ವಿಕೃತಿಯೇ ಸರಿ. 'ಆಮ್ನಿಪ್ರೆಸೆಂಟ್' ಮೊದಲಾದ ಇಂಗ್ಲೀಷ್ ಶಬ್ದಗಳಲ್ಲಿ ಈ ಲ್ಯಾಟಿನ್ ವಿಕೃತಿ ಇದೆ. ಈ ರೀತಿಯಾಗಿ ವಿಚಾರಮಾಡಿದರೆ ಸ್ಥಿತಪ್ರಜ್ಞನ ಸಕಲ ವಿಶ್ವವನ್ನು ಆಕಲಿಸುವ ಭಾವಾವಸ್ಥೆಯನ್ನು ಸೂಚಿಸಲು ಓಂ ಎಂಬೀ ಮಂತ್ರಾವಯವ ಅತ್ಯಂತ ಯೋಗ್ಯವಾದುದಾಗಿದೆ.

## ೧೪೦. ಎರಡನೆಯ ಪದ 'ತತ್'. ಜ್ಞಾನಾವಸ್ಥೆಯ ಪ್ರಾಪ್ತಿಗೋಸುಗ ಚಿಂತನೀಯವಾದುದು

ಎರಡನೆಯ ಪದ ತತ್ ಎಂದರೆ ಅದು ಯಾವುದು ಸತ್ ಅಲ್ಲ, ಅಸತ್ ಅಲ್ಲ ಅದು. ಅದು ಎಂದರೆ ಯಾವುದು ಇದು ಅಲ್ಲವೋ, ಯಾವುದು ಸಮೀಪದಲ್ಲಿಲ್ಲವೋ ಅದು, ಎಂದರೆ ಕಲ್ಪನೆಯ ಹೊರಗಿನದು. 'ತತ್' ಇದರ ಚಿಂತನದಿಂದ ಜ್ಞಾನಿಯ ಜ್ಞಾನಾವಸ್ಥೆ ಸಿದ್ಧವಾಗುತ್ತದೆ. "ತತ್ ತ್ವಂ ಅಸಿ" ನೀನು ಅದು ಆಗಿದ್ದೀ ಎಂಬ ವಾಕ್ಯದಲ್ಲಿ ಆ ಅವಸ್ಥೆ ಸೂಚಿಸಲ್ಪಟ್ಟಿದೆ. ಈ ತ್ರಿಗುಣಾತ್ಮಕ ಜಗತ್ತು ಈ ಗೊಂದಲವು ನೀನಲ್ಲ; ನೀನು ಅದರ ಹೊರಗಿನವನು; ನಿನಗೆ ಏತರದೂ ಸ್ಪರ್ಶವಿಲ್ಲ ಎಂಬ ಬೋಧವನ್ನು 'ತತ್ ತ್ವಂ ಅಸಿ' ವಾಕ್ಯ ಹೇಳುತ್ತದೆ. ಅದೇ ಈ 'ತತ್'.

## ೧೪೧. ಮೂರನೆಯ ಪದ 'ಸತ್'. ಕ್ರಿಯಾವಸ್ಥೆಯ ಸಿದ್ಧಿಗೋಸುಗ ಸೇವನೀಯವಾದುದು

ಮೂರನೆಯ ಪದ 'ಸತ್' ಇದು ಸ್ಪಷ್ಟವಾಗಿದೆ. ಶುಭವನ್ನು ತೆಗೆದುಕೊಂಡು ಅಶುಭವನ್ನು ಚೆಲ್ಲುವುದು 'ಸತ್'. 'ಸತ್ಯದ ಆಗ್ರಹ, ಅಸತ್ಯದ ತ್ಯಾಗ, ಈ ಭೂಮಿಕೆಯ ಸೂಚಕ 'ಸತ್'. ಸತ್ ಎಂದರೆ 'ಶುದ್ಧ' ಬ್ರಹ್ಮ.

## ೧೪೨. ಹೀಗೆ 'ಓಂ ತತ್ ಸತ್' ಮಂತ್ರ ವ್ಯಾಪಕ, ಅಲಿಪ್ತ, ಪರಿಶುದ್ಧ ಜೀವನದ ವಾಚಕ. ಯಾವ ಪೂರ್ಣವಿಚಾರದ ಸ್ವರೂಪವಾದರೂ ಅದೇ

ಹೀಗೆ 'ಓಂ' ಪದದಿಂದ ವ್ಯಾಪಕ ಬ್ರಹ್ಮದ, 'ತತ್' ಪದದಿಂದ ನಿರ್ಗುಣ ಬ್ರಹ್ಮದ, 'ಸತ್' ಪದದಿಂದ ಶುದ್ಧ ಬ್ರಹ್ಮದ ಬೋಧವಾಗುತ್ತವೆ. ಈ ಮೂರು ಪದಗಳು ಜ್ಞಾನಿಯ ತ್ರಿವಿಧ ಅವಸ್ಥೆಗಳ ದ್ಯೋತಕವಾಗಿವೆ.

ಈ ಮೂರು ಅವಸ್ಥೆಗಳು ಪೂರ್ಣವಾಗಿ ಭಿನ್ನವಾಗಿರುವುದಿಲ್ಲ. ಮೂರೂ ಅವಸ್ಥೆಗಳು ಕೂಡಿ ಜ್ಞಾನಿಯ ಒಂದೇ ಜೀವನವಾಗುತ್ತದೆಂಬುದನ್ನು ನಾವು ಈ ಮೊದಲೇ ನೋಡಿದೇವೆ. ಕ್ರಿಯಾವಸ್ಥೆಯಲ್ಲಿ 'ಸತ್' ಪ್ರಧಾನ. ಸ್ಥೂಲ ಜೀವನದ ಮುಖ್ಯಭಾಗ ಕ್ರಿಯೆಯೇ. ಮನುಷ್ಯನ ವ್ಯಕ್ತ, ಪ್ರಕಟ ಜೀವನ ಕ್ರಿಯಾತ್ಮಕವೇ ಆಗಿರುತ್ತದೆ. ಮಹಾಪುರುಷರ ಚರಿತ್ರೆಗಳನ್ನು ಬರೆವುದುಂಟು. ಆ ಚರಿತ್ರೆಗಳಲ್ಲಿ ಮುಖ್ಯವಾಗಿ ಅವರು ಮಾಡಿದ ಕಾರ್ಯಗಳದೇ ವರ್ಣನೆಯಿರುತ್ತವೆ. ಏಕೆಂದರೆ ಜೀವನದ ಮುಖ್ಯ ದೃಶ್ಯ ಭಾಗ ಕ್ರಿಯೆಯೇ. ಅದಕ್ಕನುಸಾರವಾಗಿ ಮುಖ್ಯ ಶಬ್ದ 'ಸತ್' ಎಂದರೆ ವ್ಯಾಕರಣದ ಭಾಷೆಯಲ್ಲಿ ಅದು ನಾಮಪದ. 'ಓಂ, ತತ್' ಇವನ್ನು ಅದರ ವಿಶೇಷಣಗಳೆಂದು ತಿಳಿಯಬೇಕು. ಕ್ರಿಯಾವಸ್ಥೆಯನ್ನು ಮುಖ್ಯವಾಗಿ ಮನ್ನಿಸಿ ಅದನ್ನು ಅಲಂಕರಿಸಲು ಉಳಿದೆರಡು ಅವಸ್ಥೆಗಳ ವಿಶೇಷಣಗಳನ್ನು ಅದಕ್ಕೆ ಕೂಡಿಸಬೇಕು. ಉಭಯ-ವಿಶೇಷಣ-ವಿಶಿಷ್ಟವಾದ 'ಸತ್' ಶಬ್ದ, ಎಂದರೆ 'ಓಂ ತತ್ ಸತ್' ಮಂತ್ರ (ಓಂ ಎಂದರೆ) ವ್ಯಾಪಕವಾದ, (ತತ್ ಎಂದರೆ) ಅಲಿಪ್ತವಾದ (ಸತ್ ಎಂದರೆ) ಪರಿಶುದ್ಧವಾದ ಜೀವನದ ದ್ಯೋತಕವಾಗುತ್ತದೆ. ವ್ಯಾಪಕ, ಅಲಿಪ್ತ, ಪರಿಶುದ್ಧ ಅಥವಾ ಸತ್ಯಮಯ ಕೂಡಿ ಪೂರ್ಣ ಜೀವನದ ಸ್ವರೂಪ. ಇದೇ ಯಾವುದೇ ಪೂರ್ಣ ವಿಚಾರದ ಅಥವಾ ಪೂರ್ಣ ಪ್ರಯೋಗದ ಸ್ವರೂಪವಾಗುತ್ತದೆ.

## ೧೮೩. ಉದಾಹರಣೆ–ಸತ್ಯಾಗ್ರಹ

ಉದಾಹರಣೆಗಾಗಿ ನಾವು ಸತ್ಯಾಗ್ರಹದ ಸ್ವರೂಪವನ್ನು ನೋಡುವ. ಸತ್ಯಾಗ್ರಹದಲ್ಲಿ 'ಸತ್' ಇದರ ಆಗ್ರಹವೂ 'ಅಸತ್' ಇದರ ವಿರೋಧವೂ ಸ್ಪಷ್ಟವಾಗಿದೆ. ಆದರೆ ಸತ್ಯದ ಸ್ವೀಕಾರವನ್ನು ಅಸತ್ಯದ ಪ್ರತೀಕಾರವನ್ನು ಮಾಡುವಾಗ ವಿಶ್ವಾತ್ಮಭಾವನೆಯು ಮರೆವು ಆಗಕೂಡದು. ಎದುರಲ್ಲಿರುವ ಮನುಷ್ಯ ನನ್ನದೇ ರೂಪವೆಂಬ ವ್ಯಾಪಕ ಜ್ಞಾನ ಸತತವೂ ಇರಬೇಕು. ನನ್ನ ಕೈಯಲ್ಲಿ ಮುಳ್ಳು ನಟ್ಟಿದ್ದರೆ ನಾನು ಅದನ್ನು ಮೆತ್ತನ್ನ ಮನಸ್ಸಿನಿಂದ ಮೆಲ್ಲಗೆ ತೆಗೆವಂತೆ ಎರಡನೆಯವನ ಜೀವನದ ದೋಷವನ್ನು ತೆಗೆಯಲು ಯತ್ನಿಸುತ್ತೇನೆ. ಆ ಕಾರ್ಯ ಮೇಲೆ ಮೇಲೆ ಅವನ ಸುಧಾರಣೆಯದೆಂದು ತೋರುತ್ತಿದ್ದರೂ ನಿಜವಾಗಿ ನನ್ನ ಸುಧಾರಣೆಯೇ ಇರುವುದೆಂದು ತಿಳಿ;

ಕೋಪಿಸಬೇಡ, ಸಿಡುಕಬೇಡ. ಎಲ್ಲಿ ನಿನಗೆ ಅಶುಭ ಕಾಣಿಸುತ್ತದೋ ಅಲ್ಲಿ ಶುಭವೂ ಇರುತ್ತದೆ. ಅದನ್ನು ನೋಡು. ಆ ಶುಭದ ದ್ವಾರದಿಂದ ಅವನ ಹೃದಯದಲ್ಲಿ ಪ್ರವೇಶ ಮಾಡು. ಹಾಗೆ ಮಾಡಿದರೆ ಯಶಸ್ವಿಯಾಗಿ ಅಶುಭದ ಪ್ರತೀಕಾರ ಮಾಡುವೆ. 'ಓಂ' ಪದ ಇದನ್ನು ಸೂಚಿಸುತ್ತದೆ. ಯಾವುದರ ಪ್ರತೀಕಾರವನ್ನು ನೀನು ಮಾಡಬಯಸುವೆಯೋ ಯಾವುದನ್ನು ಅಶುಭವೆಂದು ತಿಳಿವೆಯೋ ಅದೂ ಈಶ್ವರನದೇ ರೂಪವೆಂಬ ಭಾವನೆಯು ಮುನ್ನೆ ನಿನ್ನ ಪ್ರತೀಕಾರದ ಮೇಲೆ ಮೂಡಲಿ ಎಂದು 'ಓಂ' ಕಾರ ಹೇಳುತ್ತದೆ. ಇದುವೆ ಸತ್ಯಾಗ್ರಹದ ಪ್ರತಿಷ್ಠಾನ ತಳಹದಿ. ಇದೆಲ್ಲವನ್ನು ಮಾಡಿದ ಬಳಿಕ ನಾನು ವಿಜಯಿಯಾದೆ. ಇದನ್ನು ನಾನು ಮಾಡಿದೆ, ಎಂಬ ಭಾಸ ನಿನಗಾಗಕೂಡದು. ವಾಸ್ತವವಾಗಿ ಇದು ಮೃಗಜಲ. ಇವೆಲ್ಲವೂ ಆಟ ಎಂಬುದು ಲಕ್ಷ್ಯದಲ್ಲಿರಲಿ. ನಿನ್ನ ಅವನ ವಾಸ್ತವಿಕ ಸ್ವರೂಪ ಇದೆಲ್ಲ ಬಿಟ್ಟು ಬೇರೆ ಇದೆ. ಆಟದಲ್ಲಿ ಮಗ್ನನಾಗಿ ಮೈಮರೆಯಬೇಡ. ಆಟ ಆಟವಾಗಿಯೆ ಉಳಿಯಬೇಕು. ನಾವು ಬೇರೆಯಾಗಿ ಇದ್ದೇವೆಂಬುದನ್ನು ಯಾವಾಗಲೂ ತಿಳಿದಿರಬೇಕು. ಈ ಅಲಿಪ್ತತೆಯ ತತ್ತ್ವವನ್ನು 'ತತ್' ಪದ ಸೂಚಿಸುತ್ತದೆ.

## ೧೫೪. ಅದೊಂದೇ ಇಡಿಯ ಜೀವನಕ್ಕೆ ಅನ್ವಯಿಸುವಂಥದು

ಸತ್ಯಾಗ್ರಹದ ಉದಾಹರಣೆಯನ್ನು ದೃಷ್ಟಾಂತಕ್ಕೋಸುಗ ಕೊಟ್ಟಿದ್ದಾಯ್ತು. ಮನುಷ್ಯನ ಜೀವನದಲ್ಲಿಯ ಎಲ್ಲ ಬಗೆಯ ಆಚಾರಗಳಿಗೂ ಇದೇ ಸೂತ್ರ. ಮಗ ತಂದೆಯೊಡನೆ, ತಂದೆ ಮಗನೊಡನೆ, ಶಿಷ್ಯ ಗುರುವಿನೊಡನೆ, ಗುರು ಶಿಷ್ಯನೊಡನೆ ಮೊದಲಾದ ಎಲ್ಲ ಸಂಬಂಧಗಳಲ್ಲಿ ಹೇಗೆ ನಡೆಯಬೇಕೆಂಬುದಕ್ಕೆ ಸೂತ್ರ ಈ ಮಂತ್ರದಲ್ಲಿದೆ. ಈ ಮಂತ್ರದ ಮೂರು ಶಬ್ದಗಳು ಕೂಡಿ ಆಗುವ ಭಾವವನ್ನು ಅದರ ಪ್ರತಿಯೊಂದು ಶಬ್ದದಲ್ಲೂ ಗೃಹೀತವಾಗಿ ತೆಗೆದುಕೊಳ್ಳಬೇಕು. ಶುಭಾಶುಭಗಳ ಸಂಗ್ರಹ ಮಾಡುವ ಧ್ಯಾನಾವಸ್ಥೆಯ ತತ್ತ್ವವನ್ನಷ್ಟೆ ಬೇರೆ ಮಾಡಿ ತೆಗೆದುಕೊಂಡರೆ ಜೀವನದ ವ್ಯವಹಾರದಲ್ಲಿ ಅವಶ್ಯವಿದ್ದ ವಿವೇಕವೇ ಹಾರಿಹೋಗುತ್ತದೆ. ಶುಭಾಶುಭಗಳ ಆಚೆಯ ಜ್ಞಾನದ ಭೂಮಿಕೆಯೊಂದನ್ನೆ ಸ್ವೀಕರಿಸಿದರೆ ಕರ್ಮವೆಲ್ಲವೂ ಲುಪ್ತವಾಗುತ್ತದೆ. ಕೇವಲ ಶುಭಾಶುಭ ವಿವೇಕದ ಕ್ರಿಯಾವಸ್ಥೆಯನ್ನಷ್ಟೇ ಎತ್ತಿಕೊಂಡರೆ ವಿವೇಕದ ಹೆಸರಿನಲ್ಲಿ ಜೀವನದೊಳಗೆ ಅಸಂಖ್ಯ ಭೇದಗಳು

ತಲೆದೋರುತ್ತವೆ. ಜೀವನವು ಖಂಡವೂ ಭೇದ ಸಂಕುಲವೂ ಆಗುತ್ತದೆ. ಆದುದರಿಂದ ಮೂರು ರೂಪಗಳನ್ನು ಒಟ್ಟಾಗಿ ವಿಚಾರದಲ್ಲಿ ತೆಗೆದುಕೊಂಡು ಕ್ರಿಯೆಯ ಧೋರಣವನ್ನು ಸ್ವರೂಪವನ್ನು ನಿಶ್ಚಯಿಸಿದರೇನೇ ಅದು ನಿರ್ದೋಷವಾಗುವುದು. ಈ ಮೂರನ್ನು ಲಕ್ಷ್ಯದಲ್ಲಿ ತೆಗೆದುಕೊಂಡೇ ಇಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ವಿವರಿಸಲಾಗಿದೆ.

## ೧೮೫. ಉಪಸಂಹಾರ--ಅರ್ಜುನನ ಪ್ರಶ್ನೆಯ ಆಕಾರ, ತದನುಸಾರವಾಗಿ ಸ್ಥಿತಪ್ರಜ್ಞ ಲಕ್ಷಣಗಳ ಪ್ರವಾಹ

ಸ್ಥಿತಪ್ರಜ್ಞನ ಲಕ್ಷಣಗಳು ಇಲ್ಲಿ ಮುಗಿದುವು. ಆದರೆ ಮತ್ತೊಮ್ಮೆ ಅರ್ಜುನನ ಮೂಲಪ್ರಶ್ನೆಯ ಆಕಾರವನ್ನು ಲಕ್ಷ್ಯದಲ್ಲಿ ತರೋಣ. ಅದರಿಂದ ಸ್ಥಿತಪ್ರಜ್ಞನ ಲಕ್ಷಣಗಳ ಪ್ರವಾಹ ನಮ್ಮ ಧ್ಯಾನದಲ್ಲಿ ಬರುತ್ತದೆ. ಸ್ಥಿತಪ್ರಜ್ಞನ ಭಾಷೆ ಏನು ಎಂದು ಅರ್ಜುನನ ಮೊದಲನೆಯ ಪ್ರಶ್ನೆ. ಭಾಷೆ ಎಂದರೆ ವ್ಯಾಖ್ಯೆ. ಈ ಬಗೆಯಾಗಿ ಒಂದೇ ಶ್ಲೋಕದಲ್ಲಿ ವಿಧಾಯಕವೂ ನಿಷೇಧಕವೂ ಕೂಡಿ ಪರಿಪೂರ್ಣವಾದ ವ್ಯಾಖ್ಯೆಯನ್ನು ಹೇಳಿ ಭಗವಂತ ಆ ಪ್ರಶ್ನೆಗೆ ಉತ್ತರ ಹೇಳಿದ. ಆದರೆ ಅರ್ಜುನ ವ್ಯಾಖ್ಯೆಯನ್ನಷ್ಟೇ ಕೇಳಿ ನಿಲ್ಲಲಿಲ್ಲ. ಅವನು ಸ್ಥಿತಪ್ರಜ್ಞ ಹೇಗೆ ಮಾತಾಡುತ್ತಾನೆ, ಹೇಗೆ ಇರುತ್ತಾನೆ, ಹೇಗೆ ನಡೆಯುತ್ತಾನೆ ಎಂಬುದನ್ನು ಕೇಳಿದಾನೆ. ಇದಕ್ಕೆ ಉತ್ತರವಾಗಿ ಅವನು ಮಧುರವಾಗಿಯೋ ಕಠೋರವಾಗಿಯೊ ಹೀಗೆ ಮಾತಾಡುತ್ತಾನೆ; ಬಡತನದಲ್ಲಿಯೊ ಮಧ್ಯಮ ಸ್ಥಿತಿಯಲ್ಲಿಯೊ ಅವನು ಹೀಗೆ ಇರುತ್ತಾನೆ; ದ್ರುತಗತಿಯಿಂದಲೊ ಮಂದ ಗತಿಯಿಂದಲೊ ಅವನು ಹೀಗೆ ನಡೆಯುತ್ತಾನೆ ಎಂದು ಹೇಳಿಲ್ಲ. ಮೂರೂ ಪ್ರಶ್ನೆಗಳ ಅರ್ಥ ಒಟ್ಟಿನಲ್ಲಿ ಜೀವನದ ಪರವಾಗಿ ಮಾಡಲ್ಪಟ್ಟಿದೆ. ಮಾತಾಡುವುದು ನಡೆವುದು ಇರುವುದು ಎಂದರೆ ಒಟ್ಟಿನಲ್ಲಿ ಜೀವನವೆಂದು ನಾವು ಅರ್ಥ ಮಾಡುತ್ತೇವೆ. ಗೀತೆಯಲ್ಲೂ ಅದೇ ಅರ್ಥದಿಂದ ಉತ್ತರ ಹೇಳಿದೆ. ಆದರೂ ಈ ಉತ್ತರದಲ್ಲಿ ಈ ಮೂರು ಪ್ರಶ್ನೆಗಳ ಅಕ್ಷರಾರ್ಥದ ಗುರ್ತುಗಳು ಅಸ್ಪಷ್ಟವಾಗಿ ದೊರೆಯಬಲ್ಲುವು. ಹೇಗೆ ಮಾತಾಡುತ್ತಾನೆ ಎಂಬ ಪ್ರಶ್ನೆಯನ್ನು ಸ್ಥಿತಪ್ರಜ್ಞನ ವ್ಯಾಖ್ಯೆಯ ಸ್ಥೂಲ ವಿವೇಚನೆಯನ್ನು ಅಥವಾ ಆತನ ಪ್ರತ್ಯಕ್ಷ ಆಚರಣೆಯನ್ನು ಅರಿಯಲು ಕೇಳಿದ ಪ್ರಶ್ನೆಯೆಂದು ತಿಳಿದು ಮೂರು ಶ್ಲೋಕಗಳಲ್ಲಿ ಅದರ

ಉತ್ತರ ಹೇಳಲಾಗಿದೆ. ಅವನ ಪ್ರಶ್ನೆಯ ತೀರಾ ಅಸ್ಪಷ್ಟವಾದ ಗುರುತನ್ನು "ನಾಭಿನಂದತಿ ನದ್ವೇಷ್ಟಿ" ಅವನು ಏನನ್ನೂ ಅಭಿನಂದಿಸುವುದು ಇಲ್ಲ, ಏನನ್ನೂ ದ್ವೇಷಿಸುವುದೂ ಇಲ್ಲ ಎಂಬೀ ಶಬ್ದಗಳಲ್ಲಿ ಸೂಕ್ಷ್ಮದರ್ಶಿಗಳಾದ ಟೀಕಾಕಾರರು ಶೋಧಿಸಿದಾರೆ. ಅವನು ಹೇಗೆ ಇರುತ್ತಾನೆ ಎಂಬ ಶಬ್ದಗಳಿಂದ ಅವನಿಗೆ ಅವನ ಅವಸ್ಥೆ ಹೇಗೆ ಲಭಿಸಿತು, ಆ ಸಾಧನೆಯನ್ನು ಅರಿವ ಜಿಜ್ಞಾಸೆಯೊಂದು ತಿಳಿದು ಅದರ ವರ್ಣನೆಯನ್ನು ಉಪಪತ್ತಿಯೊಡನೆ ಹತ್ತು ಶ್ಲೋಕಗಳಲ್ಲಿ ಮಾಡಲಾಗಿದೆ. "ಕಿಮಾಸೀತ್" ಈ ಪ್ರಶ್ನೆಯ ಚಿಹ್ನೆ "ಆಸೀತ ಮತ್ಪರ." ಎಂಬಲ್ಲಿ ಮೂಡಿದೆ. ಕೊನೆಗೆ "ಕಿಂ ವ್ರಜೇತ್" ಎಂದರೆ ಹೇಗೆ ನಡೆಯುತ್ತಾನೆ ಎಂಬ ಪ್ರಶ್ನೆಯ ಉತ್ತರದಲ್ಲಿ ಸ್ಥಿತಪ್ರಜ್ಞನ ವಿಹಾರವನ್ನು ವರ್ಣಿಸುವ ತ್ರಿಸೂತ್ರಿಯನ್ನು ಹೇಳಲಾಗಿದೆ. "ಪುಮಾಂಶ್ಚರತಿ ನಿಸ್ಪೃಹಃ" ಇಲ್ಲಿಯು ಚರತಿ ಶಬ್ದದಲ್ಲಿ ಆ ಪ್ರಶ್ನೆಯ ಚಿಹ್ನೆಯನ್ನು ಅರಿಯಬೇಕು. ಒಟ್ಟಿನಲ್ಲಿ ಅರ್ಜುನನ ಪ್ರಶ್ನೆ ಹೀಗಿದೆ:—೧) ಸಮಾಧಿಯಲ್ಲಿ ಸ್ಥಿರನಾದ ನಿಮ್ಮ ಸ್ಥಿತಪ್ರಜ್ಞನ ನಿಷೇಧಕ, ವಿಧಾಯಕ ಹೀಗೆ ಉಭಯರೂಪವಾದ ಪರಿಪೂರ್ಣ ವಾಖ್ಯೆ ಏನು? ೨) ಸ್ಥಿತಪ್ರಜ್ಞನ ಪ್ರಕಟವಾದ, ಪ್ರತ್ಯಕ್ಷವಾದ, ಎಲ್ಲರಿಗೂ ತಿಳಿಯಬಹುದಾದ, ಅನುಕರಣ-ಸುಲಭವಾದ ಲಕ್ಷಣ ಏನು? ೩) ಯಾವ ಸಾಧನೆಯಿಂದ, ಯಾವ ಉಪಪತ್ತಿಯಿಂದ ಆ ಲಕ್ಷಣವನ್ನು ಅವನು ತನ್ನಲ್ಲಿ ಬಿಂಬಿಸಿಕೊಂಡಿರಬಹುದು? ೪) ಸ್ಥಿತಪ್ರಜ್ಞನ ಜೀವನಯಾತ್ರೆಯ ಅಥವಾ ಲೀಲೆಯ ಸ್ವರೂಪ ಯಾವ ಭೂಮಿಕೆಯದು? ಅರ್ಜುನನ ಪ್ರಶ್ನೆಗೆ ಹೀಗೆ ವ್ಯಾಪಕವಾದ ಅರ್ಥವನ್ನು ಮಾಡಿದರೆ, ಕೊಟ್ಟ ಉತ್ತರ ಅದರಿಂದ ಸರಿಯಾಗಿ ಫಲಿತವಾದೀತು.

## ೧೮ನೆಯ ವ್ಯಾಖ್ಯಾನ

### ೧

### ೧೮೬. ಸ್ಥಿತಪ್ರಜ್ಞ ಲಕ್ಷಣಗಳ ಅನುಭವಸಿದ್ಧ ಫಲಶ್ರುತಿ

ಸ್ಥಿತಪ್ರಜ್ಞ ಲಕ್ಷಣಗಳು ಮುಗಿದುವು. ಇನ್ನು ಕೊನೆಯ ಶ್ಲೋಕದಲ್ಲಿ ಫಲಶ್ರುತಿ ಹೇಳಲಾಗಿದೆ. ಆದರೆ ಅಂತಿಂತಹ ಅನೇಕ ಧರ್ಮಗ್ರಂಥಗಳಲ್ಲಿ

ಹೇಳಿದ ಫಲಶ್ರುತಿ ನಿರರ್ಥಕವಾದ ಶ್ರುತಿಯಾಗಿರುತ್ತವೆ. ಗೀತೆಯ ಪದ್ಧತಿ ಹಾಗಿಲ್ಲ. ಗೀತೆಯದು ಯಾವಾಗಲೂ ಅನುಭವಸಿದ್ಧವೂ ಸಯುಕ್ತಿಕವೂ ನಿಶ್ಚಿತವೂ ಆದ ಫಲಶ್ರುತಿ. ಇಲ್ಲಿಯೂ ಅಂತಹ ಶಾಸ್ತ್ರೀಯ ಫಲಶ್ರುತಿಯೇ ಹೇಳಲ್ಪಟ್ಟಿದೆ. "ಎಲೈ ಅರ್ಜುನ, ಈ ಸ್ಥಿತಿಗೆ ಬ್ರಾಹ್ಮೀಸ್ಥಿತಿಯೆಂದು ಹೆಸರು ಇದನ್ನು ಪಡೆದವನು ಅದರಿಂದ ಚ್ಯುತನಾಗನು. ಅಂತ ಕಾಲದಲ್ಲಿಯೂ ಈ ಸ್ಥಿತಿ ಹಾಗೇ ಉಳಿಯುತ್ತದೆ. ಅದರಿಂದ ಅವನು ಬ್ರಹ್ಮನಿರ್ವಾಣವನ್ನು ಪಡೆಯುತ್ತಾನೆ" ಎಂಬ ಫಲಶ್ರುತಿಯನ್ನು ಕೊನೆಯ ಶ್ಲೋಕ ಹೇಳುತ್ತವೆ.

## ೧೮೭. ಸ್ಥಿತಿ-ಶಬ್ದದ ಸ್ವಾರಸ್ಯ

ಇಲ್ಲಿಯ 'ಸ್ಥಿತಿ' ಶಬ್ದ ವೃತ್ತಿಯಿಂದ ಬೇರೆಯಾದುದನ್ನು ಸೂಚಿಸುವಂಥದು. ಸ್ಥಿತಪ್ರಜ್ಞ ಶಬ್ದದಲ್ಲಿಯೂ ಈ ಶಬ್ದ ಇದೆ ವೃತ್ತಿ. ಸ್ಥಿತಿ ಇವುಗಳಲ್ಲಿನ ಭೇದ ಅವುಗಳ ಧಾತ್ವರ್ಥವನ್ನು ಲಕ್ಷಿಸಿದರೆ ಹೆಚ್ಚು ಸ್ಪಷ್ಟವಾಗುತ್ತದೆ. ಸ್ಥಿತಿಯಲ್ಲಿ 'ಸ್ಥಾ' ಧಾತುವಿದೆ. 'ಸ್ಥಾ' ಎಂದರೆ ಎದ್ದು ನಿಲ್ಲು. ಅದರಲ್ಲಿ ಸ್ಥಿರತೆಯ, ಅಚಾಂಚಲ್ಯದ ಭಾವವಿದೆ. ವೃತ್ತಿಯಲ್ಲಿ 'ವೃತ್'– ಧಾತುವಿದೆ. ಅದರ ಅರ್ಥ ಗರಗರನೆ ತಿರುಗು, ಭ್ರಮಿಸುತ್ತಿರು ಎಂದು. ವರ್ತುಲ ಶಬ್ದದಲ್ಲಿ ಅದೇ ಧಾತು. ವೃತ್ತಿಯಲ್ಲಿ ಅಸ್ಥಿರತೆಯಭಾವ. ಒಂದೇ ಎಡೆಯಲ್ಲಿ ಗಟ್ಟಿಯಾಗಿ ಉಳಿಯದಿರುವ ಭಾವ. ಮನುಷ್ಯನ ವೃತ್ತಿಗಳು ಗಟ್ಟಿಯಾಗಿ ಉಳಿಯವು. ಅವು ಪಲ್ಲಟಿಸುತ್ತಾ ಇರುತ್ತವೆ ಜಾಗೃತಿಯಿಂದ ಸುಷುಪ್ತಿ, ಸುಷುಪ್ತಿಯಿಂದ ಸ್ವಪ್ನ. ಜಾಗೃತಿಯಲ್ಲಿಯೇ ಕ್ರೋಧ-ವೃತ್ತಿ, ಮೋಹವೃತ್ತಿ, ಉತ್ಸಾಹವೃತ್ತಿ, ನೈರಾಶ್ಯವೃತ್ತಿ, ಹೀಗೆ ಅನೇಕ ವೃತ್ತಿ-ಭೇದಗಳು ಇರುತ್ತವೆ. ವೃತ್ತಿ-ಭೇದಗಳು ಅನೇಕವಾಗಿದ್ದರೂ ಯೋಗಶಾಸ್ತ್ರ ಅವುಗಳಲ್ಲಿ ಐದು ವರ್ಗಗಳನ್ನು ಕಲ್ಪಿಸಿದೆ. ಐದೂ ಬಗೆಯ ವೃತ್ತಿಗಳಿಂದ ಬೇರೆಯಾಗುವುದಕ್ಕೆ 'ಯೋಗ'ವೆಂದು ಹೆಸರು. ಅದಕ್ಕೆ ಸಾಧನಭೂತವಾದ ಎಂಟು ಮೆಟ್ಟಲು ಹೇಳಲ್ಪಟ್ಟಿವೆ. ಅವುಗಳಲ್ಲಿ ಕೊನೆಯ ಮೆಟ್ಟಲು ಸಮಾಧಿ. ಅರ್ಥಾತ್ 'ಧ್ಯಾನ ಸಮಾಧಿ.' ಆದರೆ ಧ್ಯಾನ-ಸಮಾಧಿಯೆಂದರೆ ಯೋಗವಲ್ಲ. ಏಕೆಂದರೆ ಅದೂ ಒಂದು ವೃತ್ತಿಯೇ. ಅದು ಕೊನೆಯ ವೃತ್ತಿಯೇನೊ ಸರಿ, ಆದರೆ ಯೋಗವಲ್ಲ. ಯೋಗವೆಂದರೆ

ಎಲ್ಲ ವೃತ್ತಿಗಳ ಅಭಾವ: ಅಥವಾ ಇನ್ನೂ ಸ್ಪಷ್ಟವಾದ ಭಾಷೆಯಲ್ಲಿ, ಎಲ್ಲ ವೃತ್ತಿಗಳ ಪ್ರಭಾವದ ಅಭಾವ. ಸಮಾಧಿಯೆಂದರೆ ಧ್ಯಾನವೃತ್ತಿಯ ಪರಿಪಾಕ. ಉಳಿದ ಸಮಯದಲ್ಲಿ ಮನಸ್ಸಿನ ವೃತ್ತಿ ವಿಕ್ಷಿಪ್ತವಾಗಿ ಎಂದರೆ ಚಂಚಲವಾಗಿಯಾದರೂ ಇರುತ್ತದೆ ಅಥವಾ ಶೂನ್ಯವಾಗಿಯೂ ಇರುತ್ತದೆ. ಸಮಾಧಿಯಲ್ಲಿ ಅದು ಸ್ಥಿರವಾಗುತ್ತದೆ. ಸ್ಥಿರವೆಂದೊಡನೆ 'ಸ್ಥಾ' ಧಾತು ಬರುತ್ತದೆ. ಆದರೆ ಇದು ಅಷ್ಟರ ಮಟ್ಟಿಗೆ.

## ೧೮೮. ಆತ್ಮಜ್ಞಾನ, ಧ್ಯಾನಸಮಾಧಿಗಳಲ್ಲಿ ಭೇದ. ಧ್ಯಾನ ಇಳಿಯುತ್ತದೆ

ಸಮಾಧಿಯಿಂದಾಗುವ ಮುಖ್ಯ ಲಾಭವೆಂದರೆ ಉಳಿದೆಲ್ಲ ವೃತ್ತಿಗಳು ಇಲ್ಲದಾಗಿ ಇಷ್ಟದೇವತೆಯ ಚಿಂತನೆಯ ವೃತ್ತಿಯೊಂದು ಅದರಲ್ಲಿ ಉಳಿಯುತ್ತದೆ. ಇಷ್ಟದೇವತೆ ಎಲ್ಲ ಮಂಗಳಗುಣ ಪರಿಪೂರ್ಣವಾದುದಾಗಿ ಕಲ್ಪಿಸಲ್ಪಟ್ಟುದರಿಂದ ಅದರ ಚಿಂತನೆಯಿಂದ ಚಿತ್ತದಲ್ಲಿನ ಮಲವನ್ನು ತೊಳೆಯಲು ಬಹು ಸಾಹಾಯ್ಯವಾಗುತ್ತದೆ. ಆದರೆ ಧ್ಯಾನದ ಈ ಸಮಾಧಿ ಕೆಲಕಾಲದ ನಂತರ ಇಳಿಯುತ್ತದೆ. ಧ್ಯಾನಸಮಾಧಿ ರೂಪವಾದ ವೃತ್ತಿಯು ಆಚೆಗೆ ಹೋದರೆ ವೃತ್ತಿಶೂನ್ಯ ಸ್ಥಿರತೆ ಲಭಿಸುತ್ತದೆ. ಇದಕ್ಕೆ ಯೋಗಶಾಸ್ತ್ರದಲ್ಲಿ ಪ್ರಜ್ಞೆಯೆನ್ನುತ್ತಾರೆ. ಆದೇ ಪ್ರಜ್ಞೆ ಸ್ಥಿರವಾದರೆ ಚಿತ್ತ ಸಹಜವಾಗಿಯೇ ನಿರ್ಮಲವೂ ಪ್ರಸನ್ನವೂ ಶಾಂತವೂ ತೃಪ್ತಿಸಿದ್ಧವೂ ಆಗುತ್ತದೆ. ಇದೇ 'ಬ್ರಾಹ್ಮೀ-ಸ್ಥಿತಿ'. ಇದೇ ಸ್ಥಿತಪ್ರಜ್ಞನ ಶಾಶ್ವತವಾದ ಸಹಜಾವಸ್ಥೆ. ಸಮಾಧಿಯು ವೃತ್ತಿಯನ್ನು ತರಬೇಕಾಗುತ್ತದೆ. ಅದರಿಂದ ವ್ಯುತ್ಥಾನವಾಗುತ್ತದೆ. ವ್ಯುತ್ಥಾನವೆಂದರೆ ಚಲನ. ಇಲ್ಲಿ ಆ ವ್ಯುತ್ಥಾನವಿಲ್ಲ. ಇದು ಬ್ರಾಹ್ಮೀ ಸ್ಥಿತಿ. ಧ್ಯಾನಸಮಾಧಿಗಳಲ್ಲಿಯ ಭೇದ. ಇದನ್ನು ನಾವು ಆರಂಭದಲ್ಲಿಯೇ ನೋಡಿದೇವೆ. ಅದನ್ನೇ ಇಲ್ಲಿ ಹೆಚ್ಚು ವಿವರಿಸಲಾಗಿದೆ. ಬ್ರಾಹ್ಮೀಸ್ಥಿತಿ ನಿತ್ಯವಾದುದು. ಅದು ಪ್ರಾಪ್ತವಾದ ಬಳಿಕ ಮತ್ತೆ ಚಲನವಿಲ್ಲ. "ನೈನಾಂ ಪ್ರಾಪ್ಯ ವಿಮುಹ್ಯತಿ" ಮತ್ತೆ ಮೋಹವಿಲ್ಲ ಇತರ ಜ್ಞಾನಗಳಂತೆ ಆತ್ಮಜ್ಞಾನವಲ್ಲಿ ಮತ್ತೆ ಪೂರ್ವಸ್ಥಿತಿ ಬಾರದು.

## ೧೮೯. ಆತ್ಮಜ್ಞಾನಕ್ಕೂ ಇತರ ಜ್ಞಾನಗಳಿಗೂ ಇರುವ ಭೇದ. ಇತರ ಜ್ಞಾನಗಳು ಭಾರರೂಪವಾದುವು

ಜ್ಞಾನ ಧ್ಯಾನ ಇವುಗಳಲ್ಲಂತೂ ಭೇದವಿದೆ. ಆತ್ಮಜ್ಞಾನ ಇತರ ಜ್ಞಾನಗಳಲ್ಲಿಯೂ ಬೇಧವಿದೆ. ಧ್ಯಾನ ಕೃತ್ರಿಮ. ಅದು ಬೇಕೆಂದೇ ಸ್ವೀಕರಿಸಿದ ವೃತ್ತಿ. ಜ್ಞಾನ ಹಾಗೆ ಕೃತ್ರಿಮವಾದುದಲ್ಲ. ಅದು ಬೇಕೆಂದೇ ಸ್ವೀಕರಿಸಲ್ಪಟ್ಟುದಲ್ಲ. ಇದು ಜ್ಞಾನ ಧ್ಯಾನಗಳಲ್ಲಿಯ ಭೇದ. ಆದರೆ ಇತರ ಎಲ್ಲ ಜ್ಞಾನಗಳಿಗೂ ಆತ್ಮಜ್ಞಾನಕ್ಕೂ ಮಹತ್ವದ ಭೇದವಿದೆ. ನಾನು ಭೂಗೋಳವನ್ನು ಅಭ್ಯಾಸಮಾಡಿದೆ. ಪರೀಕ್ಷೆ ಮುಗಿಯಿತು. ಈಗ ಆ ಜ್ಞಾನದ ಅವಶ್ಯಕತೆ ಉಳಿಯಲಿಲ್ಲ. ಅದನ್ನು ಮರೆತೆ. ಕಾಶಿಯಲ್ಲಿ ಇರುವಾಗ ಸಂಯುಕ್ತ ಪ್ರಾಂತದಲ್ಲಿಯ ರೈಲುಗಾಡಿಗಳ ವೇಳಾಪತ್ರಿಕೆ ಲಕ್ಷ್ಯದಲ್ಲಿತ್ತು. ಈಗ ಪ್ರಯೋಜನವಿಲ್ಲ, ಮರೆತೆ. ಈ ಜ್ಞಾನ ಬಾಹ್ಯವಿಷಯಗಳ ಜ್ಞಾನವಾದುದರಿಂದ ಬುದ್ಧಿಗೆ ಅದರಿಂದ ಭಾರವಾಗುತ್ತದೆ. ಅದರ ಉಪಯೋಗವಿರುವವರೆಗೆ ಬುದ್ಧಿ ಆ ಭಾರವನ್ನು ಹೊರುತ್ತದೆ. ಕೆಲಸವಾದೊಡನೆ ಅದನ್ನು ಚೆಲ್ಲಿಬಿಡುತ್ತದೆ. ಇಂತಹ ಅವಾಂತರ ಜ್ಞಾನಗಳ ದೊಡ್ಡ ಭಾರವನ್ನು ಬುದ್ಧಿಯ ಮೇಲೆ ಹೇರುವುದು ದೊಡ್ಡ ವಿದ್ವತ್ತಿಯ ಲಕ್ಷಣವೆಂದು ತಿಳಿಯಲ್ಪಡುತ್ತದೆ. ದೊಡ್ಡ ವಿದ್ವತ್ತೆಯೆಂದರೆ ಬುದ್ಧಿಯ ಮೇಲೆ ದೊಡ್ಡ ಭಾರವನ್ನು ಹೇರಿ ಅದನ್ನು ದುರ್ಬಲವಾಗಿಸುವುದು. ಇಂತಹ ದೊಡ್ಡ ವಿದ್ವತ್ತೆಯಿಂದ ಬುದ್ಧಿಗೆ ಜಡತೆಯೂ ದಪ್ಪತನವೂ ಬರುತ್ತದೆ. ಪರಮೇಶ್ವರನ ಕೃಪೆಯಿಂದ ಇಂತಹ 'ತೋರ' ವಿದ್ವತ್ತೆ ಯಾರಿಗೂ ಲಭಿಸದಿರಲಿ! ಆತ್ಮಜ್ಞಾನ ಹೀಗಲ್ಲ. ಆತ್ಮಜ್ಞಾನ ಭಾರವಲ್ಲ.

## ೧೯೦. ಆತ್ಮಜ್ಞಾನ ಧ್ಯಾನ ಇತರ ಜ್ಞಾನಗಳ ಇನ್ನಷ್ಟು ವಿವರಣೆ

ಧ್ಯಾನದ ಮಾತು ತೀರ ಬೇರೆಯೆ. ನಾವು ಉಪಮೆಗಳನ್ನು ಕೊಡುತ್ತೇವೆ. ದೃಷ್ಟಾಂತಗಳಿಂದ ವಿಷಯವನ್ನು ಸ್ಪಷ್ಟಗೊಳಿಸುತ್ತೇವೆ. ರೂಪಕವನ್ನು ಉಪಯೋಗಿಸುತ್ತೇವೆ. ಚಿತ್ರ ಬರೆಯುತ್ತೇವೆ. ಇವೆಲ್ಲವೂ ಧ್ಯಾನದ ಪ್ರಕಾರಗಳೇ. ಒಂದು ವಸ್ತುವಿನ ಮೇಲೆ ಇನ್ನೊಂದು ವಸ್ತುವಿನ ಆರೋಪವನ್ನು ಮಾಡುವುದು ಧ್ಯಾನ. ಸಂಕೇತವನ್ನು ವಸ್ತುವಿನ ಪ್ರತಿನಿಧಿಯೆಂದು ತಿಳಿವುದು ಧ್ಯಾನದ ತತ್ವ. ಈ ರೀತಿಯಾಗಿ ಧ್ಯಾನ ಕೃತ್ರಿಮವಾಗಿರುತ್ತದೆ

ಕಾಗದದ ಮೇಲೆ ಪೆಟ್ಟಿಗೆ ಎಂದು ಅಕ್ಷರಗಳನ್ನು ಬರೆದು ಪೆಟ್ಟಿಗೆಯ ಆರೋಪವನ್ನು ಆ ಅಕ್ಷರಗಳ ಮೇಲೆ ಮಾಡುತ್ತೇವೆ. ಇದು ಧ್ಯಾನ. ಆದರಿಂದ ಜ್ಞಾನ ಬೆಳೆವುದಿಲ್ಲ. ವಾಙ್ಮಯದ ಹೊರಗೆ ಅದರ ಸ್ವತಂತ್ರ ಉಪಯೋಗವೂ ಇಲ್ಲ. ಆ ಅಕ್ಷರದ ಪೆಟ್ಟಿಗೆಯಲ್ಲಿ ತುಪ್ಪದ ಭರಣಿಯನ್ನು ಇಡಲಾರೆವು. ಅದು ಕೇವಲ ಒಂದು ವಸ್ತುವಿನ ಚಿತ್ರ ಅಥವಾ ಪ್ರತೀಕ. ಬೇರೆ ಬೇರೆ ಭಾಷೆಗಳಲ್ಲಿ ಒಂದೇ ವಸ್ತುವಿಗೆ ಈ ಬಗೆಯಾದ ಬೇರೆ ಬೇರೆ ಪ್ರತೀಕಗಳು ಇರಬಹುದು. ಆದರೆ ಸಂಕೇತಕ್ಕೆ ವಸ್ತುವಿನ ಪ್ರತಿನಿಧಿತ್ವವನ್ನು ಕೊಡುವುದು ಒಟ್ಟಿನಲ್ಲಿ ಕೃತ್ರಿಮವೇ ಸರಿ. ಧ್ಯಾನದಂತೆ ಬಾಹ್ಯವಸ್ತುಗಳ ಜ್ಞಾನ ಕೃತ್ರಿಮವಾಗದಿದ್ದರೂ ಆತ್ಮದ ಹೊರಗಿನದಾದುದರಿಂದ ಅದು ಬುದ್ಧಿಗೆ ಭಾರವಾಗುತ್ತದೆ. ಇದೊಂದು ವನಸ್ಪತಿ: ಅದರ ಗುಣಧರ್ಮ ಇಂಥವು. ಅವನ್ನೇನೂ ನಾನು ಅದರ ಮೇಲೆ ಹೇರಲಿಲ್ಲ. ಇದು ನಿಜ. ಅರ್ಥಾತ್ ಅದು ವಸ್ತುಜ್ಞಾನ. ಆದರೆ ಹೊರಗಿನ ಜ್ಞಾನ ಅದನ್ನು ಇನ್ನು ಮೇಲೆ ನಾನು ಲಕ್ಷ್ಯದಲ್ಲಿಡಬೇಕಾದೀತು. ಆತ್ಮಜ್ಞಾನ ಹಾಗಲ್ಲ. ಅದು ಕೃತ್ರಿಮವಲ್ಲ, ಹೊರಗಿನದೂ ಅಲ್ಲ. ಆದುದರಿಂದ ಅದು ಒಮ್ಮೆ ಲಭಿಸಿದರೆ ಶಾಶ್ವತವಾಗಿ ಲಭಿಸಿತೇ. ಬಳಿಕ ಅದು ಇಲ್ಲದಾಗುವ ಅಥವಾ ಮಲಿನವಾಗುವ ಸಂಭವವಿಲ್ಲ ಅರ್ಥಾತ್ ಆ ಜ್ಞಾನ ಬೌದ್ಧಿಕವಲ್ಲ, ಆತ್ಮಗತ. ಆತ್ಮದಲ್ಲಿ ಬೆರೆತದ್ದು ಯಾವ ಉಪಾಯದಿಂದಲೂ ಇಳಿದುಹೋಗದು. ಇದೇ "ನೈನಾಂ ಪ್ರಾಪ್ಯ ವಿಮುಹ್ಯತಿ".

## ೧೯೯. ಬ್ರಾಹ್ಮೀಸ್ಥಿತಿ ಅಂತಕಾಲದಲ್ಲಿಯೂ ಉಳಿಯುತ್ತದೆ

"ಸ್ಥಿತ್ವಾಸ್ಯಾಂ ಅಂತಕಾಲೇಽಪಿ". 'ಅಂತಕಾಲದಲ್ಲಿಯೂ ಈ ಸ್ಥಿತಿಯಲ್ಲಿ ಉಳಿದು ಈ ಶಬ್ದಗಳ ಅರ್ಥವೇನು? 'ಕೊನೆಯ ಕಾಲದಲ್ಲಿಯೂ ಬ್ರಾಹ್ಮೀಸ್ಥಿತಿ'ಯನ್ನು ಉಳಿಸಬೇಕು ಎಂದು ಕೆಲವರು ಅರ್ಥಮಾಡುತ್ತಾರೆ. ಮನುಷ್ಯನ ಅಂತ್ಯಕಾಲ ಕಠಿಣವಾದುದೆಂದು ಮನ್ನಿಸಲ್ಪಟ್ಟಿದೆ ಆ ಕಾಲದಲ್ಲಿ ತನ್ನ ಸ್ಥಿತಿಯನ್ನು ಉಳಿಸಿಕೊಳ್ಳುವುದು ಸುಲಭವಲ್ಲ. ಆದುದರಿಂದ ಇಷ್ಟೊಂದು ಪ್ರಯಾಸದಿಂದ ಸಂಪಾದಿಸಿದ ಸ್ಥಿತಿ ಸರಿಯಾದ ಸಮಯದಲ್ಲಿ ಎಂದರೆ ಕೊನೆಯ ವೇಳೆಯಲ್ಲಿ ಉಳಿಯದಿದ್ದರೆ ಎಲ್ಲವೂ ವ್ಯರ್ಥವೇ ಸೈ. ಕೊನೆಯ ಕಾಲದಲ್ಲಿ ಬಂಡಿ ಒಗ್ಗಾಲಿಯಾದರೆ, ದೇವರೇ ಗತಿ! ಆದುದರಿಂದ ಆಮರಣ

ವಾಗಿಯೂ ಮರಣದ ವೇಳೆಯಲ್ಲಿಯೂ ಆ ಸ್ಥಿತಿಯನ್ನು ಉಳಿಸಿಕೊಳ್ಳಲು ಯತ್ನಿಸಬೇಕು ಎಂಬ ಸೂಚನೆಯನ್ನು ಈ ವಾಕ್ಯದಿಂದ ತೆಗೆದುಕೊಳ್ಳುವುದುಂಟು. ಆದರೆ ಈ ಅರ್ಥ ಸರಿಯಾದುದಲ್ಲ. ಅಂತಕಾಲವು ಮಹತ್ತ್ವವುಳ್ಳದ್ದೆಂಬುದೇನೋ ನಿಜ. ಅದಕ್ಕೋಸುಗ ಸಾಧಕ ಕೊನೆಯವರೆಗೂ ಎಚ್ಚರಿಕೆಯಿಂದಿರಬೇಕೆಂಬುದೂ ನಿಜ. ಆದುದರಿಂದ ಗೀತೆ ಎಂಟನೆಯ ಅಧ್ಯಾಯದಲ್ಲಿ ಪ್ರಯಾಣಕಾಲೀನ ಸಾಧನೆಯನ್ನು ಸವಿಸ್ತರವಾಗಿ ವರ್ಣಿಸಿದೆ. ಈ ಪ್ರಯಾಣಕಾಲೀನ ಸಾಧನೆ ಶಕ್ಯವಾಗಲು ಜನ್ಮದಲ್ಲೆಲ್ಲ ಹಾಗೆ ಅಭ್ಯಾಸ ಮಾಡುತ್ತ ಇರಬೇಕೆಂದೂ ಸೂಚಿಸಿದೆ. ಆದರೆ ಇವೆಲ್ಲವೂ ಸಾಧಕಾವಸ್ಥೆಗೆ ಸಂಬಂಧಿಸಿದ ಮಾತು. ಬ್ರಾಹ್ಮೀಸ್ಥಿತಿಗೆ ಇದು ಅನ್ವಯಿಸದು. ಬ್ರಾಹ್ಮೀಸ್ಥಿತಿಯು ಅನುಭವ ಕ್ಷಣದೊತ್ತು ಆಗಿ ಮತ್ತೆ ಅಳಿದುಹೋಗುವಂಥದು, ಅದನ್ನು ಉಳಿಸಿಕೊಳ್ಳಲು ಸತತವೂ ಪ್ರಯತ್ನಿಸಬೇಕು ಎಂಬ ಪರಿಸ್ಥಿತಿ ಇರದು. ಬ್ರಾಹ್ಮೀ-ಸ್ಥಿತಿ ವೃತ್ತಿಯಲ್ಲ. ಇದು ನಿರಂತರವಾಗಿ ಉಳಿವ ಅವಸ್ಥೆ. ಅದನ್ನು ಉಳಿಸಲು ಪ್ರಯತ್ನಿಸುವ ಆವಶ್ಯಕತೆಯಿಲ್ಲ. ಅದು ಶಾಶ್ವತವಾಗಿ ಉಳಿವ ಅವಸ್ಥೆ. ಮರಣ ಕಾಲದಂಥ ಇಕ್ಕಟ್ಟಿನಲ್ಲೂ ಅದಕ್ಕೆ ತಳಮಳವಿಲ್ಲ. 'ಅಂತಕಾಲೇಽಪಿ'ಯ ಅರ್ಥ ಹೀಗೆ. 'ಸ್ಥಿತಿ' ಶಬ್ದದಲ್ಲಿ ಸೂಚಿಸಲ್ಪಟ್ಟ ಅರ್ಥವನ್ನು "ನೈನಾಂ ಪ್ರಾಪ್ಯ ವಿಮುಹ್ಯತಿ" ವಾಕ್ಯ ವಿವರಿಸಿದೆ. ಅದನ್ನೇ ಮತ್ತೆ "ಸ್ಥಿತ್ವಾಸ್ಯಾಮ್ ಅಂತ ಕಾಲೇಽಪಿ' ಈ ವಾಕ್ಯಖಂಡ ವಿಶದಗೊಳಿಸುತ್ತದೆ.

## ೧೫೩. ಬ್ರಾಹ್ಮೀ-ಸ್ಥಿತಿಯಲ್ಲಿ 'ರೆ' ಗೆ ಅವಕಾಶವಿಲ್ಲ

ಬ್ರಾಹ್ಮೀಸ್ಥಿತಿ ಯಾವಾಗಲೂ ಉಳಿದೇ ತೀರುತ್ತದೆ. ಆಪತ್ಕಾಲದಲ್ಲಿಯೂ ಉಳಿಯುತ್ತದೆ. ಮರಣ ಕಾಲದಲ್ಲಿಯೂ ಉಳಿಯುತ್ತದೆ. ಇತರ ಜ್ಞಾನಗಳಂತೆ ಇದು ಮರೆವುದಿಲ್ಲ. ಒಮ್ಮೆ ಒಬ್ಬ ಮನುಷ್ಯನಿಗೆ ರೋಗ ಬಂದಿತು. ಅವನು ಎಷ್ಟೋ ಇಂಗ್ಲಿಷ್ ಪರೀಕ್ಷೆಗಳನ್ನು ಪಾಸುಮಾಡಿದ್ದ. ದೀರ್ಘಕಾಲೀನವಾದ ಈ ತೀವ್ರ ರೋಗದಲ್ಲಿ ಅವನ ಇಂಗ್ಲಿಷ್ ಜ್ಞಾನವೆಲ್ಲವೂ ಮರೆತುಹೋಯ್ತು. ಏಕೆಂದರೆ ಆ ಎಲ್ಲ ಜ್ಞಾನ ಆತ್ಮದ ತಲೆಯ ಮೇಲೆ ಬಲವಂತವಾಗಿ ಹೇರಿದ ಹೊರೆಯಾಗಿತ್ತು. ರೋಗದಿಂದ ದುರ್ಬಲವಾದ ಬುದ್ಧಿ ಆ ಹೊರೆಯನ್ನು ತಳ್ಳಿ ಹಾಕಿದುದು ಒಳಿತೆ ಆಯ್ತು. ಆತ್ಮ

ಜ್ಞಾನದ ಸ್ಥಿತಿ ಸಾಗಲ್ಲ. ಜನ್ಮಾಂತರದ ಜನ್ಮಗಳ ಪ್ರಯತ್ನಗಳಿಂದಲೂ ಅದು ಬಾರದಿರಬಹುದು. ಆದರೆ ಒಮ್ಮೆ ಬಂದಿತೆಂದರೆ ಜಾರದು. ಬಂದ ಜ್ಞಾನ ಅಂತಕಾಲದಲ್ಲಿಯೂ ಉಳಿದ'ರೆ' ಬ್ರಹ್ಮನಿರ್ವಾಣ ಪ್ರಾಪ್ತವಾಗುತ್ತದೆ ಎಂದು 'ರೆ' ಗೆ ಇಲ್ಲಿ ಕೆಲಸ ಇಲ್ಲ. 'ರೆ'ಗೆ ಇಲ್ಲಿ ಅವಕಾಶವಿಲ್ಲ. ಇದನ್ನು ಹೇಳುವುದಕ್ಕೇ ಪ್ರಸ್ತುತ ಈ ಶ್ಲೋಕ ಇರುವುದು.

## ೧೯೩. ಶಂಕರಾಚಾರ್ಯರ ವಿಶೇಷ ಅರ್ಥ ಉಪಯುಕ್ತವಾದರೂ ಅನಾವಶ್ಯಕ

ಶಂಕರಾಚಾರ್ಯರ ಲಕ್ಷ್ಯದಲ್ಲಿ ಈ ಮಾತು ಬಾರದಿರಲಿಲ್ಲ. ಆದುದರಿಂದ ಈ 'ರೆ'ಯನ್ನು ತಪ್ಪಿಸಲು ಅವರು ಬೇರೆ ರೀತಿಯಾಗಿ ಭಾಷ್ಯ ಮಾಡಿದ್ದಾರೆ. ಅಂತ ಕಾಲದಲ್ಲಿ ಎಂದರೆ ಕೊನೆಯ ಕ್ಷಣದಲ್ಲಿಯೂ ಈ ಸ್ಥಿತಿ ಪ್ರಾಪ್ತವಾದರೂ ಮನುಷ್ಯ ಬ್ರಹ್ಮ ನಿರ್ವಾಣವನ್ನು ಪಡೆಯುತ್ತಾನೆ ಎಂದು ಅವರು ಅರ್ಥಮಾಡಿದ್ದಾರೆ. ಆಚಾರ್ಯರು ಹೇಳಿದ ಈ ಮಾತು ಸತ್ಯ. ಆದರೆ ಈ ಶ್ಲೋಕದ ಶಬ್ದಗಳಿಂದ ಹಾಗೆ ಅರ್ಥ ಹೊರಡಿಸುವ ಅವಶ್ಯಕತೆ ತೋರದು. "ಸ್ಥಿತ್ವಾಸ್ಯಾಂ ಅಂತ ಕಾಲೇಽಪಿ" ಈ ಶಬ್ದಗಳ ಸ್ವಾರಸ್ಯ ಅದರಲ್ಲಿ ಇರದು. ಈ ಅವಸ್ಥೆ ಅತ್ಯಂತ ದೃಢವೂ ಅಚಲವೂ ಆಗಿದೆ, ಬಲು ಬಿಕ್ಕಟ್ಟಿನದಾದ ಅಂತ ಕಾಲಕ್ಕೂ ಅದು ಸೊಪ್ಪು ಹಾಕದು. ಆಗಲೂ ಇದು ಕಂಪಿಸದು ಎಂದು ಈ ಶ್ಲೋಕ ಸೂಚಿಸುತ್ತದೆ. ಆಚಾರ್ಯರ ಅರ್ಥ ಅನರ್ಥವಾಗಿಲ್ಲ. ಆದರೆ ದೂರಾರ್ಥ. ಬ್ರಾಹ್ಮೀಸ್ಥಿತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಅವಶ್ಯಕತೆಯನ್ನು ಸೂಚಿಸುವ ಅರ್ಥ ಮಾತ್ರ ಕೇವಲ ಅರ್ಥವಾದವೆಂದು ಹೇಳಬೇಕಾಗುತ್ತದೆ.

೨

## ೧೯೪. ಗೀತೆಯ ಪರಮಲಕ್ಷ್ಯ ಬ್ರಹ್ಮನಿರ್ವಾಣ ಅದೇ ಜೀವಿತ ಸಾಫಲ್ಯ

ಕೊನೆಯಲ್ಲಿ 'ಬ್ರಹ್ಮ ನಿರ್ವಾಣಂ ಇಚ್ಛತಿ' ಈ ವಾಕ್ಯ ಫಲಶ್ರುತಿಯನ್ನು ಹೇಳುತ್ತದೆ. ಸ್ಥಿತಪ್ರಜ್ಞ ಶಬ್ದದಂತೆ 'ಬ್ರಹ್ಮನಿರ್ವಾಣ, ಶಬ್ದವೂ ಗೀತೆಯ ವಿಶಿಷ್ಟ ಶಬ್ದ. ಬ್ರಹ್ಮನಿರ್ವಾಣವೆಂದರೆ ಬ್ರಹ್ಮದಲ್ಲಿ ಕೂಡುವುದು.

ಕರಗುವುದು, ಲೀನವಾಗುವುದು. ಬ್ರಹ್ಮನಿರ್ವಾಣಕ್ಕೆ ಹೋಗುತ್ತಾನೆ ಎಂದರೆ ಬ್ರಹ್ಮವು ಎಲ್ಲಿಯೋ ಬೇರೆಡೆಯಲ್ಲಿದೆ, ಅದರಲ್ಲಿ ಲೀನವಾಗಲು ಎಲ್ಲಿಗೋ ಹೋಗಬೇಕು ಎಂದರ್ಥವಲ್ಲ. ನನಗೂ ಬ್ರಹ್ಮಕ್ಕೂ ನಡುವೆ ದೇಹಾಭಿಮಾನದ ತೆರೆಯಿದ್ದುದು ಹೊರಗಡೆ ತೋರುತ್ತದೆ. ಆ ತೆರೆ ಇಲ್ಲದಾಗುವುದೆಂದರೆ ಬ್ರಹ್ಮದಲ್ಲಿ ಲೀನವಾಗುವುದು. ನಾವು ಮೊದಲಿನಿಂದಲೂ ಬ್ರಹ್ಮವೇ. ದೇಹಾಭಿಮಾನದ ತೆರೆಯನ್ನು ದೂರ ಸರಿಸಿ ಬ್ರಹ್ಮದಲ್ಲಿ ಲೀನವಾಗುವುದೇ ಅದರಲ್ಲಿ ಬೆರೆತು ಹೋಗುವುದೇ ಮನುಷ್ಯನ ಜೀವಿತ ಸಾಫಲ್ಯ ಎಂಬುದನ್ನು ಬ್ರಹ್ಮನಿರ್ವಾಣ ಶಬ್ದ ಸೂಚಿಸುತ್ತದೆ. ಒಟ್ಟಿನಲ್ಲಿ ಸಂಪೂರ್ಣ ಜೀವಿತವನ್ನು, ವ್ಯಕ್ತಿಗತ ಸಂಸಾರವನ್ನು, ಸಮಾಜಸೇವೆಯನ್ನು, ಜ್ಞಾನ ಸಂಪಾದನೆಯನ್ನು, ಧ್ಯಾನ ಮುಂತಾದ ಸಾಧನೆಗಳನ್ನು ಈ ಉದ್ದೇಶದಿಂದ ಮಾಡಬೇಕೆಂದು ಗೀತೆ ಈ ಶಬ್ದಗಳಿಂದ ಸೂಚಿಸಬೇಕಾಗಿದೆ.

## ೧೯೫. ಬ್ರಹ್ಮನಿರ್ವಾಣವೆಂದರೆ ದೇಹವನ್ನು ಚೆಲ್ಲಿ ವ್ಯಾಪಕತಮವಾಗುವುದು

ಬ್ರಹ್ಮವೆಂದರೆ ವಿಶಾಲ, ವ್ಯಾಪಕ. ಸಂಕುಚಿತ ಜೀವನವನ್ನು ಬಿಟ್ಟು ಬ್ರಹ್ಮರೂಪನಾಗುವುದು ಧ್ಯೇಯ. ಒಂದು ಜೀವ ಇನ್ನೊಂದರ ಅಳತೆಗೆ ದೊಡ್ಡದು. ಆ ಮಾನದಿಂದ ಮೂರನೆಯದು ಮತ್ತೂ ದೊಡ್ಡದು. ಹೀಗೆ ಜೀವ ಜೀವಗಳಲ್ಲಿ ತರತಮ ಭಾವವಿರುತ್ತದೆ. ಆದರೆ ಜೀವವು ಬ್ರಹ್ಮದ ತುಲನೆಯಿಂದ ಅತ್ಯಲ್ಪವೇ. ಏನೇ ಆದರೂ ಜೀವ ಪರಿಮಿತ. ಒಂದು ಮೇರೆಯಲ್ಲಿ ಬಂಧಿಸಲ್ಪಟ್ಟದ್ದು. ಈ ಬದ್ಧ ಭಾವವನ್ನು ಬಿಟ್ಟು ಮುಕ್ತ ಭಾವವನ್ನು ಪಡೆವುದು, ವ್ಯಾಪಕವಾಗುವುದು, ಇದೇ ಜೀವನ ಧ್ಯೇಯ. ಅತ್ತ ಪ್ರಗತಿ ಮಾಡುತ್ತ ನಡೆವುದು, ಉತ್ತರೋತ್ತರ ವ್ಯಾಪಕತರವಾಗುತ್ತ ಹೋಗುವುದು, ಇದು ಸಾಧನೆಯ ದಿಶೆ. ವ್ಯಾಪಕತಮ ಸ್ಥಿತಿ ಪ್ರಾಪ್ತವಾಗುವುದೆಂದರೇನೇ ಬ್ರಹ್ಮನಿರ್ವಾಣ. ಅಲ್ಲಿ ದೇಹದ ತೆರೆ ಇಲ್ಲದಾಗುತ್ತದೆ. ಹಾಗೆ ನೋಡಿದರೆ ದೇಹ ಸಾಧಕನಿಗೆ ಸಾಧನ. ಕೆಲವು ಸಮಯ ಸಾಧನೆಗೆ ಅದರ ಉಪಯೋಗವಾಗುತ್ತದೆ. ಮುಂದೆ ಮನುಷ್ಯನ ಸ್ಥಿತಿ ವ್ಯಾಪಕವಾಗುತ್ತ ಹೋದಂತೆ ಅವನು ದೇಹವನ್ನು ಹಿಂದೆ ಹಿಂದೆ ಬಿಡುತ್ತ ಹೋಗುತ್ತಾನೆ. ಈ ವ್ಯಾಪಕತೆಯು ಅಭ್ಯಾಸಕ್ಕೇ ಪ್ರಾರಂಭದ ಅವಸ್ಥೆಯಲ್ಲಿ

ದೇಹ ಸಾಧನೀಭೂತವಾಗುತ್ತದೆ. ಆದರೆ ಮುಂದೆ ಪ್ರಗತ ಸ್ಥಿತಿಯಲ್ಲಿ ಅದು ವಿಘ್ನ ರೂಪವಾಗುತ್ತದೆ. ಜ್ಞಾನ, ಧ್ಯಾನ, ಉಪಾಸನೆ, ಕರ್ಮಯೋಗ ಇವೆಲ್ಲವುಗಳಿಗೆ ಆರಂಭದಲ್ಲಿ ದೇಹ ಉಪಕಾರಕವಾಗಿರುತ್ತದೆ. ಆದರೆ ಮುಂದೆ ಈಯೆಲ್ಲ ಸಾಧನೆಯ ಪರಿಪಾಕ ವಿಶ್ವವ್ಯಾಪಿ ಸಾಕ್ಷಾತ್ಕಾರದಲ್ಲಿ ಆದ ಬಳಿಕ ಎಲ್ಲವೂ ಆತ್ಮಮಯವಾಗಿ ಕಾಣತೊಡಗುತ್ತದೆ. ಈ ಅನುಭೂತಿಯ ತರುವಾಯ ದೇಹ ನಿರುಪಯೋಗಿಯಾಗತೊಡಗುತ್ತದೆ.

**೧೯೬. ಆ ಸ್ಥಿತಿಯಲ್ಲಿಯೇ ಲೋಕಸಂಗ್ರಹ ಪರಿಪೂರ್ಣವಾಗುವುದು**

ಆ ಸ್ಥಿತಿಯಲ್ಲಿಯೂ, ಹೆಚ್ಚೇನು, ಆ ಸ್ಥಿತಿಯಲ್ಲಿಯೇ. ಪೂರ್ಣವಾಗಿ ಅದರ ಮುಖಾಂತರ ಲೋಕಸಂಗ್ರಹವಾಗುವುದು ಕಾಣಬರುತ್ತದೆ. ಜನರ ದೃಷ್ಟಿಯಿಂದ ಆ ಲೋಕಸಂಗ್ರಹ ದೊಡ್ಡದಾಗಿ ತೋರುತ್ತದೆ. ಆದರೆ ಜ್ಞಾನಿಯ ದೃಷ್ಟಿಗೆ ಅದು ಅಲ್ಪವಾಗಿರುತ್ತದೆ. ಜ್ಞಾನಿಯೊಬ್ಬನು ಸತ್ತರೆ ದೊಡ್ಡ ಹಾನಿಯಾಯ್ತು, ಇಂತಹ ದೊಡ್ಡ ದೊಡ್ಡ ಲೋಕ-ಸಂಗ್ರಹಕ್ಕೆ ನಾವು ಎರವಾದೆವು ಎಂದು ನಮಗೆ ಅನಿಸುತ್ತದೆ. ಆದರೇನು? ಆತನ ಮೃತ್ಯುತಿಥಿಯನ್ನು ಪುಣ್ಯತಿಥಿನ್ನುತ್ತೇವೆ. ನಮಗೆ ಅದು ಪುಣ್ಯ ದಿವಸ ಎನಿಸುವುದಿಲ್ಲ. ತತ್ತ್ವಜ್ಞರಾದ ಸಂತರು ಆ ಶಬ್ದವನ್ನು ನಮ್ಮ ಮೇಲೆ ಹೇರಿದಾರೆ: ನಾವು ಬಾಯ್ಮುಚ್ಚಿಕೊಂಡು ಸ್ವೀಕರಿಸಿದೇವೆ. ಆದರೆ ಆ ಶಬ್ದದಲ್ಲಿ ಅರ್ಥ ತುಂಬಿದೆ. ಅದು ನಿಜವಾಗಿಯೂ ಪುಣ್ಯತಿಥಿ. ಜ್ಞಾನಿಯ ನಿಜವಾದ ಲೋಕಸಂಗ್ರಹ ಅಂದಿನಿಂದ ಪ್ರಾರಂಭವಾಗುತ್ತದೆ. ಅದಕ್ಕೆ ಮೊದಲು ಆಗುತ್ತಿರುವ ಲೋಕಸಂಗ್ರಹ ಅತಿ ಅಲ್ಪ. ಜ್ಞಾನಿಯದೂ ಇಷ್ಟೇ ದೇಹ! ಅದರಿಂದ ಎಷ್ಟು ಲೋಕಸಂಗ್ರಹವಾದೀತು? ಆದರೆ ಆ ಲೋಕ ಸಂಗ್ರಹ ಶರೀರದಿಂದ ಆಗುತ್ತದಾದುದರಿಂದ ಪ್ರಕಟವಾಗಿರುತ್ತದೆ, ಕಾಣಿಸುತ್ತದೆ. ಈ ದರ್ಶನ ಮೋಹದಿಂದ ಜ್ಞಾನಿಯ ದೇಹ ಬಿದ್ದೊಡನೆ ದೊಡ್ಡ ಹಾನಿಯಾಯ್ತೆಂದು ನಮಗೆ ಅನಿಸುತ್ತದೆ. ಆದರೆ ವಸ್ತುಸ್ಥಿತಿ ಬೇರೆ. ಸರ್ವಭೂತಗಳ ಸೇವೆಯಲ್ಲಿ ಜೊತೆಗೆ ಶರೀರ ಅಡ್ಡ ಬರುತ್ತಿರುತ್ತದೆ.

**೧೯೬. ಅಲ್ಲಿ ದೇಹವಿಲ್ಲ. ಏಕೆಂದರೆ ದೇಹದ ಆವಶ್ಯಕತೆ ಇಲ್ಲ**

ಶರೀರದ ತೆರೆಯನ್ನು ಇಟ್ಟುಕೊಂಡು ಎಲ್ಲ ಪ್ರಾಣಿಗಳೊಡನೆ ಪೂರ್ಣವಾಗಿ ಸಮರಸವಾಗುವುದು ಶಕ್ಯವಿಲ್ಲ. ಶರೀರವಿದ್ದುದರಿಂದ ಎಲ್ಲರ ಹೃದಯ

ದಲ್ಲಿ ಪ್ರವೇಶ ಮಾಡಲು ಅಡ್ಡಿಯಾಗುತ್ತದೆ. ಎಲ್ಲಿಯವರೆಗೆ ತನಗೊಂದು ಹೃದಯವಿರುವುದರಿಂದಲೆ ಹೆರರ ಹೃದಯವನ್ನು ತಿಳಿಯಲು ಬರುತ್ತದೊ, ಅಲ್ಲಿಯವರೆಗೆ ಶರೀರದ ಉಪಯೋಗ. ನನಗೆ ನನ್ನ ಹಸಿವು ನೀರಡಿಕೆ, ಸುಖದುಃಖ ಮೊದಲಾದವುಗಳ ಅನುಭವದಿಂದ ಹೆರರ ಸ್ಥಿತಿ ಗೊತ್ತಾಗುತ್ತಾದುದರಿಂದ, ಆತ್ಮೌಪಮ್ಯದ ಸಾಧನೆಯನ್ನು ತಿಳಿಯಲು ನನ್ನ ಹೃದಯವು ಸಾಧನವಾಗಿರುವವರೆಗೆ ಶರೀರದ ಕೆಲಸ. ಆದರೆ ಸರ್ವಭೂತ ಹೃದಯದ ಸಾಕ್ಷಾತ್ಕಾರವಾದ ಬಳಿಕ, ತಾದಾತ್ಮ್ಯದ ಅನುಭೂತಿ ಉಂಟಾದ ಬಳಿಕ, ವಿಶಿಷ್ಟ ದೇಹ, ವಿಶಿಷ್ಟ, ಇಂದ್ರಿಯಗಳು, ವಿಶಿಷ್ಟ ಮನ, ವಿಶಿಷ್ಟ ಬುದ್ಧಿ ವಿಶಿಷ್ಟ ಹೃದಯ ಈ ಎಲ್ಲ ವಿಶಿಷ್ಟಗಳು ಬಾಧಕವಾಗುತ್ತವೆ, ಉಪಾಧಿಗಳಾಗುತ್ತವೆ. ಆದುದರಿಂದ ಈ ಎಲ್ಲ ಉಪಾಧಿಗಳನ್ನು ಕಡಿದು, ದೇಹಭಾವವನ್ನು ಒಡೆದು, ಸರ್ವ ಭೂತ ಹೃದಯದೊಡನೆ ತಾದಾತ್ಮ್ಯ ಪಡೆವುದು, ಅನಂತದಲ್ಲಿ ಲೀನವಾಗುವುದು, ಬ್ರಹ್ಮದಲ್ಲಿ ಕರಗುವುದು ಇದೇ ಅಂತಿಮ ಧ್ಯೇಯವಾಗುತ್ತದೆ. ಇದೇ ಬ್ರಹ್ಮ ನಿರ್ವಾಣ.

೩

## ೧೪೮. ಬೌದ್ಧರು ನಿರ್ವಾಣವೆಂಬ ನಿಷೇಧಕ ಶಬ್ದವನ್ನು ಸ್ವೀಕರಿಸಿದರು

ಬೌದ್ಧರು ಇದರಲ್ಲಿಯ 'ಬ್ರಹ್ಮ' ಶಬ್ದವನ್ನು ತೆಗೆದು 'ನಿರ್ವಾಣ' ಶಬ್ದವನ್ನಷ್ಟೇ ಸ್ವೀಕರಿಸಿದರು. ಬೌದ್ಧರಿಗೆ ನಿಷೇಧಕ ಭಾಷೆ ಸೇರಿತು, ಇಷ್ಟೇ ಇದರ ಅರ್ಥ. ಮನುಷ್ಯ ತನ್ನತನವನ್ನು ಬಿಡಬೇಕು, ಅಹಂತೆಯ ಮಡಕೆಯನ್ನು ಒಡೆದೊಗೆಯಬೇಕು, ಇಷ್ಟರ ಸೂಚಕ ಈ ನಿರ್ವಾಣ ಶಬ್ದ. ಮನುಷ್ಯ ಮಡಿದ ಬಳಿಕ ನಾವು ಅವನ ಹೆಸರಿನಲ್ಲಿ ಮಡಕೆಯನ್ನು ಒಡೆಯುತ್ತೇವೆ. ಈ ವಿಧಿಯನ್ನು ಹಿಂದೂ ಧರ್ಮಶಾಸ್ತ್ರ ಹೇಳುತ್ತದೆ. ಅದರ ಮೂಲದಲ್ಲಿ ಇರುವ ಕಲ್ಪನೆ ಇದು : ಇವನೇನೊ ಸತ್ತನೆಂದು ಹೇಳುತ್ತೇವೆ, ಆದರೆ ಅವನು ನಿಜವಾಗಿಯೂ ಸಾಯಲಿ. ಅವನ ವಾಸನೆಗಳ ಮಡಕೆ ಒಡೆಯಲಿ, ಅವನ ಅಹಂತೆ ನಾಶವಾಗಲಿ. ಶರೀರವನ್ನು ಸುಟ್ಟು ಬೂದಿ ಮಾಡುವುದರ ಉದ್ದೇಶವಾದರೂ ಇದೇ. ಅಪ್ಪ ಸತ್ತ, ಅವನನ್ನು ಹೂಗಿದೆವು,

ಗೋರಿಯ ಮೇಲೆ ಮಾವಿನ ಮರ ನೆಟ್ಟೆವು. ಮರಕ್ಕೆ ಹಣ್ಣು ಆದವು. ನನ್ನ ತಂದೆಯ ಗೋರಿಯ ಮೇಲಿನವು ಈ ಹಣ್ಣುಗಳು! ತಾಯಿಯನ್ನು ಹೊಲದಲ್ಲಿ ಹುಗಿದೆವು. ಬೇವಿನ ಮರ ನೆಟ್ಟೆವು. ಈ ಬೇವಿನ ಮರಕ್ಕೆ ನನ್ನ ತಾಯಿಯ ಎಲಬುಗಳ ಗೊಬ್ಬರ ದೊರೆತಿದೆ! ಈ ಮೋಹದಿಂದ ಬಿಡಿಸಲು ದಹನದ ಕ್ರಿಯೆ. ಈ ದಹನ ಕ್ರಿಯೆ ಒಂದು ದೊಡ್ಡ ವಿಚಾರದ ಚಿಹ್ನೆ. ಸತ್ತ ಮನುಷ್ಯ ಯಾವುದಾದರೂ ಒಂದು ರೂಪದಲ್ಲಿ ನನಗೆ ಅಂಟಿಕೊಂಡಿರಲೆಂಬ ಮೋಹವೇಕೆ ಬೇಕು? ನಾನೇನು ಅಂತಹ ಪುರುಷ? ನನಗೆ ಅಂಟಿಕೊಂಡಿರುವುದರಿಂದ ಆ ಜೀವವೇನಾದರೂ ಧನ್ಯವಾಗಬಲ್ಲುದೆ? ಸತ್ತ ಮೇಲೂ ಮನುಷ್ಯ ಒಂದಿಲ್ಲೊಂದು ರೂಪದಿಂದ ಇರಬೇಕೆಂಬ ಬುದ್ಧಿಯಿಂದ ಅವನನ್ನು ಹುಗಿದು ಮೇಲೆ ಗೋರಿ ಕಟ್ಟಿ, ಇಲ್ಲವೆ ಒಂದು ಗಿಡವನ್ನಾದರೂ ನೆಡುವುದೆಂದರೆ, ಸತ್ತ ಬಳಿಕ ಮತ್ತೆ ಅವನನ್ನು ಹಿಡಿದಿಡಲು ಪ್ರಯತ್ನಿಸುವಂತೆಯೆ ಸರಿ. ಆದುದರಿಂದ ದಹನದ ಪದ್ಧತಿ ಉಂಟಾಯಿತು. ಆದರೂ ಸ್ಮಾರಕಗಳು ಆಗುತ್ತಲೇ ಇರುತ್ತವೆ. ಸುಟ್ಟು ಬಿಡು ಎಂದರೆ ಸಂಪೂರ್ಣವಾಗಿ ಹೋಗುತ್ತಾನೆ ಎಂಬ ನಿಷೇಧಕ ಭಾವದ ದ್ಯೋತಕವಾಗಿ ಬೌದ್ಧರು ನಿಷೇಧಕ ಶಬ್ದವನ್ನು ತೆಗೆದುಕೊಂಡರು. ಮನುಷ್ಯನ ಮೋಹ ಆ ದೇಹದೊಡನೆ ನಷ್ಟವಾಗಬೇಕು, ಅದು ಶೂನ್ಯವಾಗಬೇಕು ಎಂದು ಬೌದ್ಧರು ನಿರ್ವಾಣ ಶಬ್ದವನ್ನಷ್ಟೇ ಇಟ್ಟುಕೊಂಡರು.

### ೧೯೯. ವೈದಿಕರಿಗೆ ಬ್ರಹ್ಮನಿರ್ವಾಣವೆಂಬ ವಿಧಾಯಕ ಭಾಷೆ ಸರಿಯೆನಿಸಿತು

ವೈದಿಕರು ಬ್ರಹ್ಮನಿರ್ವಾಣವೆಂಬ ಶಬ್ದವನ್ನು ಇಟ್ಟುಕೊಂಡರು. ವೈದಿಕರಿಗೆ ವಿಧಾಯಕ ಭಾಷೆ ಮೆಚ್ಚಿನದಾಯಿತು. ಏಕೆ ಮೆಚ್ಚಿನದಾಯಿತೆಂಬುದನ್ನು ನೋಡಿ. ಆಗ ಎರಡೂ ಪಕ್ಷಗಳ ಭಾಷೆಯಲ್ಲಿ ಮಾಧುರ್ಯವೂ ಮರ್ಯಾದೆಯೂ ಗೊತ್ತಾಗುತ್ತದೆ. ಭಾಷೆಯೆಂಬುದು ಸಂಪೂರ್ಣವಾಗಿ ನಿರ್ದೋಷವಾಗಿರುವುದು ಶಕ್ಯವಿಲ್ಲ. ಭಾಷೆಯ ಸ್ವರೂಪವೇ ವಿಲಕ್ಷಣ. ಇತ್ತ ಅರ್ಥವನ್ನು ತಿಳಿಸುತ್ತಿದ್ದರೂ ಅತ್ತ ತಪ್ಪು ತಿಳಿವಳಿಕೆ ಹುಟ್ಟಿಸುತ್ತದೆ. ವಿಧಾಯಕ ನಿಷೇಧಕ ಎರಡೂ ಭಾಷೆಗಳ ಭಾವಗಳನ್ನು ಲಕ್ಷಿಸಿ ಬೇಕಾದುದನ್ನು ಸ್ವೀಕರಿಸಿ. ಮೋಕ್ಷವು ಅಭಾವ ರೂಪವೆನ್ನುವುದಕ್ಕಿಂತ

ಭಾವ ರೂಪವೆನ್ನುವುದು ವೈದಿಕರಿಗೆ ಯೋಗ್ಯವಾಗಿ ತೋರಿತು. ನಾವೆ ಇಲ್ಲದಾದೆವು, ಶೂನ್ಯವಾದೆವು ಎನ್ನುವುದಕ್ಕಿಂತ ನಾವು ವ್ಯಾಪಕರಾದೆವು, ಅನಂತರಾದೆವು ಎನ್ನುವುದು ಯೋಗ್ಯವೆಂದು ವೈದಿಕರಿಗೆ ಅನಿಸಿತು. ಆದರೆ ಬೌದ್ಧನ ಮಾತು ಹೀಗೆ: ನಾವು ಇಲ್ಲದಾದೆವು ಎನ್ನಲು ಹೆದರುವಿರೇಕೆ? ಸ್ವಲ್ಪ ಧೈರ್ಯಗೊಳ್ಳಿ. ಶೂನ್ಯರಾಗಿ. ಇಲ್ಲದಾಗುವ ಭೀತಿಯನ್ನು ಬಿಡಿ. ನಾನು ಅನಂತನಾಗುವೆ, ವ್ಯಾಪಕನಾಗುವೆ, ಸರ್ವಮಯನಾಗುವೆ ಎನ್ನುವ ದರಲ್ಲಿ ಇರುವ ಅಸ್ತಿತ್ವದ ಮೋಹವನ್ನು ಬಿಡಿ. ಇದಕ್ಕೆ ವೈದಿಕರು-- "ಇಲ್ಲಿ ಭೀತಿಯು, ಮೋಹದ ಮಾತಲ್ಲ. ಅನುಭೂತಿಯ ನಿರುಪ್ಯವಾಗಿ ಹೇಗೆ ಕಲ್ಪನೆಮಾಡುವುದು. ಈ ಪರಿಗೆ ಬಗೆಬಗೆಯ ಸಾಧನೆಗಳನ್ನು ಮಾಡಿ ಎಲ್ಲ ವನ್ನು ಬಿಟ್ಟೆ, ಆತ್ಮನಿಷ್ಠನಾದೆ. ಜನ್ಮಮೃತ್ಯುಗಳನ್ನು ಒಂದೆ ಬಿಟ್ಟು ನನ್ನ ನಿಜವಾದ ಸ್ವರೂಪವನ್ನು ಪಡೆದೆ. ಧರ್ಮದಿಂದ ಅಧರ್ಮವನ್ನು ತಳ್ಳಿದೆ, ಫಲತ್ಯಾಗದಿಂದ ಧರ್ಮವನ್ನು ಜೀರ್ಣಿಸಿದೆ, ಈಶ್ವರಾರ್ಪಣದಿಂದ ಫಲತ್ಯಾಗವನ್ನು ಹಾರಿಸಿದೆ. ಕೊನೆಗೆ ಅದ್ವೈತಾನುಭೂತಿಯಿಂದ ಈಶ್ವರನನ್ನು ನನ್ನಲ್ಲಿ ಸಮಾವೇಶಮಾಡಿಕೊಂಡೆ. ಈಯೆಲ್ಲ ಅನುಭೂತಿಯುಳ್ಳ ನಾನೆ ಇಲ್ಲದಾಗುತ್ತೇನೆಂದು ಹೇಗೆ ನಂಬಲಿ? ಎಲ್ಲ ಅವಸ್ತುಗಳ ನಿರಾಕರಣೆ ಮಾಡಿದಮೇಲೆ ಉಳಿದಿರುವ ನಾನೇ ವ್ಯಾಪಕನಾದೆ, ಬ್ರಹ್ಮಮಯನಾದೆ ಎಂಬುದೇ ಯೋಗ್ಯ" ಎನ್ನುತ್ತಾರೆ.

## ೭೦. ವಸ್ತುತಃ ಎರಡೂ ಒಂದೇ

ಆದರೆ ಮೋಕ್ಷವು ಭಾವರೂಪವೆಂದು ಹೇಳಿದರೂ ಅದರಲ್ಲಿ ಹೆಚ್ಚಿನ ದೇನನ್ನಾದರೂ ಕೂಡಿಸುತ್ತಿದೆ ಎಂದು ವೈದಿಕರೂ ಹೇಳುವುದಿಲ್ಲ. ಬೌದ್ಧ ರಾದರೂ ಆತ್ಮದ ಅಸ್ತಿತ್ವವನ್ನು ನಿರಾಕರಿಸುವರೆಂದು ಯಾರಾದರೂ ತಿಳಿದರೆ ಅದು ತಪ್ಪು ತಿಳಿವಳಿಕೆಯೆಂದು ನನ್ನ ಅಭಿಪ್ರಾಯ. ಹೀಗೆ ಅನೇಕರ ತಪ್ಪುತಿಳಿವಳಿಕೆಯಾಗಿದೆ. ಬಲು ದೊಡ್ಡವರದೂ ಆಗಿದೆ. ಆದರೂ ಅದು ತಪ್ಪುತಿಳಿವಳಿಕೆಯೆ. ಬೌದ್ಧರಿಗೆ 'ನಾನು' ಎಂಬ ಭಾಷೆ ಬೇಡ. 'ನಾನು' ಹೋದ ಬಳಿಕ ಏನು ಉಳಿವುದೂ ಉಳಿಯಲಿ. ಆದುದರಿಂದ ಈ ಭಾಷಾಭೇದ ಮುಖ್ಯವಾಗಿ ರುಚಿಭೇದದಿಂದ ಒದಗಿದ್ದೆಂದು ತಿಳಿಯು ಬೇಕು. ಅದರಲ್ಲಿ ಅರ್ಥದ ದೃಷ್ಟಿಯಿಂದ ನನಗಂತೂ ವಿಶೇಷ ಭೇದ

ವೇನೂ ತೋರುವುದಿಲ್ಲ. ಬೌದ್ಧರಿಗೆ 'ನಾನು' ಎಂಬುದರಲ್ಲಿ ಬೇಸರ. ಒಳಿತೇ. ಅನೇಕ ಹೀನ ಅನುಭವಗಳಿಂದ ಮಲಿನವಾದ 'ನಾನು' ಬೇಕೇಕೆ? ಅಲ್ಲದೆ ಬ್ರಹ್ಮನಿರ್ವಾಣ ಶಬ್ದದಲ್ಲಿ ಅದಕ್ಕೆ ಸ್ಥಾನವಾದರೂ ಎಲ್ಲಿದೆ? ಸೂಕ್ಷ್ಮವಾಗಿ ನೋಡಿದರೆ, ಬ್ರಹ್ಮನಿರ್ವಾಣ ಶಬ್ದ ಕೇವಲ ವಿಧಾಯಕವಲ್ಲ. ಅದು ಉಭಯ ಅರ್ಥಗಳ ಸಂಗ್ರಾಹಕವಾಗಿಯೆ ಗೀತೆಯಲ್ಲಿ ಉಪಯೋಗಿಸಲ್ಪಟ್ಟಿದೆ. ಬ್ರಹ್ಮನಿರ್ವಾಣವೆಂದ ಬಳಿಕ 'ನಾನು' ಹೋಯ್ತು, ಬ್ರಹ್ಮ ಉಳಿಯಿತು. ಇಲ್ಲಿ ಹೆದರುವಂತಹದೇನೂ ಇಲ್ಲ. ಎಲ್ಲಿ ಶಬ್ದಗಳೇ ಕುಂಠಿತವಾಗುತ್ತವೆಯೋ ಅಲ್ಲಿ ಶಬ್ದಕ್ಕೋಸುಗ ವಾದವೇಕೆ? ಗೀತೆಯ ಭಾಷೆಯಲ್ಲಿ ನಾನಾದರೆ ಹೀಗೆಂದೇನು, "ಏಕಂ ಬ್ರಹ್ಮಂ ಚ ಶೂನ್ಯಂ ಚ, ಯಃ ಪಶ್ಯತಿ ಸಪಶ್ಯತಿ". ಯಾರು ಬ್ರಹ್ಮವನ್ನು ಶೂನ್ಯವನ್ನು ಒಂದೇ ಆಗಿ ನೋಡುತ್ತಾನೋ ಅವನೇ ನೋಡುತ್ತಾನೆ. ಆದುದರಿಂದ ಬ್ರಹ್ಮನಿರ್ವಾಣ ಶಬ್ದ ಎಲ್ಲ ವಾದವನ್ನೇ ಮುಗಿಸಿ ಬಿಟ್ಟಿದೆ.

ಇಲ್ಲಿಗೆ ಸ್ಥಿತಪ್ರಜ್ಞನ ದರ್ಶನ ಪರಿಪೂರ್ಣವಾಯ್ತು.

ಓಂ ತತ್ ಸತ್ ಬ್ರಹ್ಮಾರ್ಪಣಮಸ್ತು